ಕೊಳ್ಳೇಗಾಲ ತಾಲ್ಲೂಕು:ಒಂದು ಸಾಂಸ್ಕೃತಿಕ ಅಧ್ಯಯನ

(ಇತಿಹಾಸ ಎಂ.ಫಿಲ್ ಪದವಿಗಾಗಿ)
ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಎಂ.ಫಿಲ್.ನಿಬಂಧ

ಸಂಶೋಧಕರು:

ಶ್ರೀಮತಿ. ಸಲೋಮಿಚಿತ್ರಾ.ಎಲ್
ನೋಂದಣಿ ಸಂಖ್ಯೆ:KRSMH00368

ಮಾರ್ಗದರ್ಶಕರು
ಡಾ.ರಾಚಯ್ಯ
ಇತಿಹಾಸ ಪ್ರಾಧ್ಯಾಪಕರು,
ಮಹಾರಾಜ ಕಾಲೇಜು(ಪದವಿ)
ಮೈಸೂರು

ಎಂ.ಎಲ್.ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ
ಕರ್ನಾಟಕ ಸಂಘ (ರಿ) ಮಂಡ್ಯ
(ಕನ್ನಡ ವಿ.ವಿ. ಹಂಪಿ ಮಾನ್ಯತೆ ಪಡೆದಿದೆ)
2008–2009

ಕೊಳ್ಳೇಗಾಲ ತಾಲ್ಲೂಕು:ಒಂದು ಸಾಂಸ್ಕೃತಿಕ ಅಧ್ಯಯನ

(ಇತಿಹಾಸ ಎಂ.ಫಿಲ್ ಪದವಿಗಾಗಿ)

ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಎಂ.ಫಿಲ್.ನಿಬಂಧ

ಸಂಶೋಧಕರು:

ಶ್ರೀಮತಿ. ಸಲೋಮಿಚಿತ್ರಾ.ಎಲ್

ನೋಂದಣಿ ಸಂಖ್ಯೆ:KRSMH00368

ಮಾರ್ಗದರ್ಶಕರು

ಡಾ.ರಾಚಯ್ಯ

ಇತಿಹಾಸ ಪ್ರಾಧ್ಯಾಪಕರು,

ಮಹಾರಾಜ ಕಾಲೇಜು(ಪದವಿ)

ಮೈಸೂರು

ಎಂ.ಎಲ್.ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ

ಕರ್ನಾಟಕ ಸಂಘ (ರಿ) ಮಂಡ್ಯ

(ಕನ್ನಡ ವಿ.ವಿ. ಹಂಪಿ ಮಾನ್ಯತೆ ಪಡೆದಿದೆ)

2008–2009

ಮಾರ್ಗದರ್ಶಕರ ದೃಢೀಕರಣ ಪತ್ರ

"ಕೊಳ್ಳೇಗಾಲ ತಾಲ್ಲೂಕು:ಒಂದು ಸಾಂಸ್ಕೃತಿಕ ಅಧ್ಯಯನ**"** ಎಂಬ ನಿಬಂಧವನ್ನು ಕನ್ನಡ ವಿಶ್ವವಿದ್ಯಾನಿಲಯದ ಎಂ.ಫಿಲ್. ಪದವಿಗಾಗಿ ಶ್ರೀಮತಿ ಸಲೋಮಿಚಿತ್ರಾ.ಎಲ್ ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ನಿಬಂಧದ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಸ್ಥಳ : ಮೈಸೂರು
ದಿನಾಂಕ : 15/07/09

(ಡಾ.ರಾಚಯ್ಯ)
ಇತಿಹಾಸ ಪ್ರಾಧ್ಯಾಪಕರು,
ಮಹಾರಾಜ ಕಾಲೇಜು (ಪದವಿ)
ಮೈಸೂರು.

ಸಂಶೋಧಕರ ಪ್ರಮಾಣ ಪತ್ರ

ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಮಾನ್ಯತೆ ಪಡೆದಿರುವ ಮಂಡ್ಯದ ಕರ್ನಾಟಕ ಸಂಘವು ನಡೆಸುತ್ತಿರುವ ಎಂ.ಎಲ್.ಶ್ರೀಕಂಠೇಗೌಡ ಸಂಶೋಧನಾ ಕೇಂದ್ರದಲ್ಲಿ 2008-09ನೇ ಸಾಲಿಗೆ ಚರಿತ್ರೆ ಎಂ.ಫಿಲ್ ಅಭ್ಯರ್ಥಿಯಾಗಿ ನಾನು ಪ್ರವೇಶ ಪಡೆದಿರುತ್ತೇನೆ. ನನ್ನ ಎಂ.ಫಿಲ್ ಅಧ್ಯಯನದ ಅಂಗವಾಗಿ ಸಂಶೋಧನಾ ನಿಬಂಧ ರಚಿಸಲು "ಕೊಳ್ಳೇಗಾಲ ತಾಲ್ಲೂಕು ಒಂದು ಸಾಂಸ್ಕೃತಿಕ ಅಧ್ಯಯನ" ವಿಷಯವನ್ನು ಆಯ್ಕೆ ಮಾಡಿಕೊಂಡು ಡಾ.ರಾಚಯ್ಯರವರ ಮಾರ್ಗದರ್ಶನದಲ್ಲಿ ಸಂಶೋಧನೆ ನಡೆಸಿ ಈ ನಿಬಂಧವನ್ನು ರಚಿಸಿರುತ್ತೇನೆ.

ಈ ನಿಬಂಧವನ್ನಾಗಲಿ ನಿಬಂಧದ ಅಧ್ಯಾಯಗಳನ್ನಾಗಲಿ ಬೇರೆ ಯಾವ ಗ್ರಂಥಗಳು ಹಾಗೂ ನಿಯತ ಕಾಲಿಕೆಗಳಲ್ಲಿ ಪ್ರಕಟಿಸಿರುವುದಿಲ್ಲ ಮತ್ತು ಕನ್ನಡ ವಿಶ್ವ ವಿದ್ಯಾಲಯವು ನೀಡುವ ಎಂ.ಫಿಲ್.ಪದವಿಗಾಗಿ ಈ ನಿಬಂಧವನ್ನು ಒಪ್ಪಿಸುತ್ತಿದ್ದೇನೆ.

ಸ್ಥಳ : ಮಂಡ್ಯ
ದಿನಾಂಕ : ೧೫/೦೯/೨೦೦೯

(ಶ್ರೀಮತಿ.ಸಲೋಮಿಚಿತ್ರಾ.ಎಲ್)
ಸಂಶೋಧಕ, ಚರಿತ್ರೆ ವಿಭಾಗ
ಎಂ.ಎಲ್.ಶ್ರೀಕಂಠೇಗೌಡ ಸಂಶೋಧನಾ ಕೇಂದ್ರ
ಕರ್ನಾಟಕ ಸಂಘ (ರಿ) ಮಂಡ್ಯ
(ಕನ್ನಡ ವಿ.ವಿ. ಹಂಪಿ–ಮಾನ್ಯತೆ ಪಡೆದಿದೆ)

ಕೊಳ್ಳೇಗಾಲ ತಾಲ್ಲೂಕು ಒಂದು ಸಾಂಸ್ಕೃತಿಕ ಅಧ್ಯಯನ

ಪರಿವಿಡಿ

ಕೊಳ್ಳೇಗಾಲ ತಾಲ್ಲೂಕು ಒಂದು ಸಾಂಸ್ಕೃತಿಕ ಅಧ್ಯಯನ

ಅಧ್ಯಾಯ – 1

ಪೀಠಿಕೆ:

ಕರ್ನಾಟಕ ರಾಜ್ಯದ ಚಾಮರಾಜನಗರ ಜಿಲ್ಲೆಯ ತಾಲ್ಲೂಕುಗಳಲ್ಲಿ ಕೊಳ್ಳೇಗಾಲವು ಅತಿ ದೊಡ್ಡ ತಾಲ್ಲೂಕಾಗಿದೆ. ಚಾಮರಾಜನಗರ ಜಿಲ್ಲೆಯ ರಚನೆಯವರೆವಿಗೂ ಅಂದರೆ ಆಗಸ್ಟ್ 15–1997ರವರೆವಿಗೂ ಇದು ತನ್ನದೇ ಆದ ವಿಷಯವನ್ನು ಹೊಂದಿದೆ. ಈ ಪ್ರದೇಶದಲ್ಲಿ ವಿಭಿನ್ನ ರೀತಿಯ ಜನಾಂಗ ಅದಕ್ಕೆ ತಕ್ಕಂತೆ ವಿಭಿನ್ನ ಭಾಷಿಕರು ಇದರ ಪರಂಪರೆಗೆ ಹೊಂದಿಕೊಂಡಂತಹ ಸಾಂಸ್ಕೃತಿಕ ನೆಲೆಗಟ್ಟು ಇವೆ. ಹಲವಾರು ಕಾಲ ಘಟ್ಟಗಳ ವೈಶಿಷ್ಟ್ಯಗಳು ಸಹ ಕಂಡು ಬರುತ್ತವೆ. ಕೊಳ್ಳೇಗಾಲದ ಒಟ್ಟು ಹೆಕ್ಟೇರ್ಸ್ ಭೂ ಪ್ರದೇಶವನ್ನು ಹೊಂದಿಕೊಂಡಿದ್ದು ಅದರಲ್ಲಿ 87 ಕಂದಾಯದ ಗ್ರಾಮಗಳು ಹಾಗೂ 63 ದಾಖಲೆ ಗ್ರಾಮಗಳು ಒಟ್ಟು 140 ಗ್ರಾಮಗಳಲ್ಲಿ ಸರಾಸರಿ ಆರು ಲಕ್ಷದಷ್ಟು ಜನರು ವಾಸವಾಗಿರುತ್ತಾರೆ. ಕೊಳ್ಳೇಗಾಲದ ಗಡಿಪ್ರದೇಶವು ಪೂರ್ವದಲ್ಲಿ ವಿಶಾಲವಾದ ಬೆಟ್ಟಗುಡ್ಡಗಳಿಂದ ಆವೃತವಾಗಿದ್ದು ಒಟ್ಟು 1,83,259 ಹೆಕ್ಟೇರ್ಸ್‌ನಷ್ಟು ಸಂಪತ್ತನ್ನು ಹೊಂದಿಕೊಂಡಿದೆ. ನೀರಿನ ಅವಶ್ಯಕತೆಯ ಹಿನ್ನೆಲೆಯಿಂದ ಬೆಟ್ಟಗುಡ್ಡಗಳಿಂದ ಆವೃತವಾಗಿದ್ದು ಒಟ್ಟು 1.83, 259 ಹೆಕ್ಟೇರ್ಸ್‌ನಷ್ಟು ಸಂಪತ್ತನ್ನು ಹೊಂದಿಕೊಂಡಿದೆ. ನೀರಿನ ಅವಶ್ಯಕತೆಯ ಹಿನ್ನೆಲೆಯಿಂದ ಬೆಟ್ಟಗುಡ್ಡಗಳಿಂದ ಹರಿದು ಬರುವ ಮಳೆಯ ನೀರಿಗೆ ಅಣೆಕಟ್ಟೆಯನ್ನು ಕಟ್ಟಿ ಗುಂಡಾಲ್ ಜಲಾಶಯವನ್ನು ನಿರ್ಮಿಸಿದ್ದಾರೆ. ಈ ಜಲಾಶಯದ ಮೂರು ಕಡೆಗಳಲ್ಲಿಯೂ ಬೆಟ್ಟದ ತಪ್ಪಲುಗಳು ಆವರಿಸಿಕೊಂಡಿದ್ದು ಒಂದು ಭಾಗದಲ್ಲಿ ಮಾತ್ರ ಅಣೆಕಟ್ಟೆಯ ಕಾಮಗಾರಿ ನಡೆದಿದೆ. ಈ ಒಂದು ಜಲಾಶಯದಲ್ಲಿ ಬೇಸಿಗೆಯಲ್ಲಿಯೂ ನೀರು ನಿಲ್ಲುವುದರಿಂದ ಕಾಡು ಪ್ರಾಣಿಗಳಿಗೂ ಹೆಚ್ಚಾಗಿ ಮಳೆಯ ನೀರನ್ನೇ ಆಶ್ರಯಿಸಿರುವುದರಿಂದ ಮಳೆಗಾಲದಲ್ಲಿ ಅತಿ ಹೆಚ್ಚಾಗಿ ತುಂಬಿರುತ್ತಿದ್ದು ಬೇಸಿಗೆಯ ಕಾಲಕ್ಕೆ ನೀರಿನ ಪ್ರಮಾಣವು ಕಡಿಮೆಯಾಗುತ್ತದೆ. ಹೀಗಿದ್ದರೂ ಸಹ ಜಲಾಶಯದ ಸುತ್ತಲಿನ ಪ್ರದೇಶದಲ್ಲಿ ದಟ್ಟವಾದ ಹಸಿರು ತುಂಬಿದ ಅರಣ್ಯದಿಂದ ಕೂಡಿದೆ. ಗುಂಡಾಲ್‌ಜಲಾಶಯದಿಂದ ಪ್ರಾರಂಭವಾಗುವ ಬೆಟ್ಟಗುಡ್ಡಗಳನ್ನೊಳಗೊಂಡ ಅರಣ್ಯದ ಸಾಲುಗಳು ಪೂರ್ವದಲ್ಲಿ ತಮಿಳುನಾಡಿನ ಗರಿಕೆಕಂಡಿಯವರೆವಿಗೂ ಉತ್ತರದಲ್ಲಿ ಐತಿಹಾಸಿಕ ವಿದ್ಯುಚ್ಛಕ್ತಿ ಕೇಂದ್ರವಾದ ಶಿವನಸಮುದ್ರವರೆವಿಗೂ ಹಾಗೆಯೇ ದಕ್ಷಿಣದಲ್ಲಿ ಬಿಳಿಗಿರಿರಂಗನಬೆಟ್ಟದ ಸಾಲುಗಳನ್ನು ಹಾಯ್ದುಕೊಂಡ ನೀಲಗಿರಿಯನ್ನು ಸೇರುತ್ತದೆ.

ಈ ತಾಲ್ಲೂಕು ಮೇಲೆ ಹೇಳಿದಂತೆ ಮೈಸೂರು ಜಿಲ್ಲೆ ಪ್ರಾಂತ್ಯಕ್ಕೆ ಸೇರಿತ್ತು ನಂತರ ಚಾಮರಾಜನಗರ ಜಿಲ್ಲೆಯಾಗಿ ಗುಂಡ್ಲುಪೇಟೆ, ಯಳಂದೂರು, ಚಾಮರಾಜನಗರ, ಮತ್ತು ಕೊಳ್ಳೇಗಾಲ ತಾಲ್ಲೂಕುಗಳಾಗಿ ಬೇರ್ಪಡಿಸಿದೆ. ಹೀಗೆ ಬೇರ್ಪಟ್ಟ ಚಾಮರಾಜನಗರಕ್ಕೆ ನಾಲ್ಕು ತಾಲ್ಲೂಕುಗಳನ್ನು ಸೇರಿಸಲಾಗಿದೆ. ಆ ತಾಲ್ಲೂಕುಗಳಲ್ಲಿ ಕೊಳ್ಳೇಗಾಲದ ಪ್ರಮುಖ ನೆಲೆಯನ್ನು ನನ್ನ ಸಂಶೋಧನಾ ಕ್ಷೇತ್ರ ಕಾರ್ಯಕ್ಕೆ ಅಳವಡಿಸಿಕೊಂಡಿದ್ದೇನೆ. ಈ ಕೊಳ್ಳೇಗಾಲ ಪ್ರಾಂತ್ಯವನ್ನು ಪ್ರಮುಖವಾಗಿ ಆರು ಹೋಬಳಿ ಕೇಂದ್ರವಾಗಿ ರಚಿಸಲಾಗಿದೆ. ಅವುಗಳು ಕೊಳ್ಳೇಗಾಲ ಕ.ಸ.ಬ, ಸತ್ತೇಗಾಲ, ಪಾಳ್ಯ, ಹನೂರು, ರಾಮಪುರ, ಲೊಕ್ಕನ ಹಳ್ಳಿಗಳು. ಇವುಗಳ ಕೆಲವೇ ಕೆಲವು ಪ್ರಾಂತ್ಯಗಳಲ್ಲಿ ಕಾವೇರಿ ನದಿ ಹರಿಯುತ್ತದೆ. ಮೇಲೆ ಹೇಳಿದಂತೆ ವಿಶಾಲವಾದ ಪ್ರದೇಶ. ಅರಣ್ಯ, ಬೆಟ್ಟಗುಡ್ಡಗಳು, ನದಿಗಳು ಮುಂತಾದ ನೈಸರ್ಗಿಕ ಸಂಪತ್ತುಳ್ಳ ನಾಡು ಕೊಳ್ಳೇಗಾಲ. ಐತಿಹಾಸಿಕವಾಗಿಯೂ ಬಹಳ ಮಹತ್ತರವಾದ ನಾಡು ಆದಿಮಾನವನ ಕಾಲದಿಂದ ಇಂದಿನವರೆಗೂ ಮಾನವನ ನೆಲೆಯಾಗಿರುವ ಈ ನಾಡಲ್ಲಿ ಶಿಲಾಯುಧಗಳು ಶಾಸನಗಳು, ವಾಸ್ತುಶಿಲ್ಪ ಅಲ್ಲದೆ ತಾಳೆಗರಿಗಳು ಹಲವು ಸಂಖ್ಯೆಯಲ್ಲಿ ದೊರೆತಿವೆ ಇನ್ನೂ ಹೊಸದಾಗಿ ಹೊಸ ಹೊಸ ಶಾಸನಗಳು ದೊರೆಯುತ್ತಿವೆ. ಚಾರಿತ್ರಿಕ ಸಮೃದ್ಧತೆಯುಳ್ಳ ಈ ನಾಡಿನಲ್ಲಿ ತಲಕಾಡಿನ ಗಂಗರು, ಚೋಳರು, ಹೊಯ್ಸಳರು, ವಿಜಯನಗರದ ಅರಸರು, ಮೈಸೂರು ಒಡೆಯರು ಹಾಗೂ ಇನ್ನಿತರ ಸಾಮಂತರು ರಾಜಪ್ರತಿನಿಧಿಗಳು ರಾಜ್ಯವಾಳಿದ್ದಾರೆ. ಈ ಎಲ್ಲಾ ರಾಜವಂಶಗಳು ನಿರ್ಮಿಸಿದ ವಾಸ್ತುಶಿಲ್ಪ, ರೂಪಗಳು, ಹೊರಡಿಸಿದ ಶಾಸನಗಳು ಅಸಂಖ್ಯಾತ ಇವುಗಳ ಅಧ್ಯಯನ ಮತ್ತು ಪ್ರಕಟಣೆ ಸ್ವಲ್ಪ ಮಾತ್ರ ನಡೆದಿದೆ ಅದು ಸ್ವಾತಂತ್ರ್ಯ ಪೂರ್ವ ಕಾಲದಲ್ಲಿ ನಡೆದಿದ್ದೆ ಹೆಚ್ಚು ಸ್ವಾತಂತ್ರ್ಯದ ನಂತರ ಕಾಲದಲ್ಲಿ ನಡೆದ ಸಂಶೋಧನೆಗಳು ಅಲ್ಪ ಮಾತ್ರ, ಈ ತಾಲ್ಲೂಕು ಕರ್ನಾಟಕ ಏಕೀಕರಣಕ್ಕೆ ಮುಂಚೆ ಮದರಾಸು ಪ್ರಾಂತ್ಯದಲ್ಲಿದ್ದುದರಿಂದ ಈ ತಾಲ್ಲೂಕಿನ ಪ್ರಾಚ್ಯವಸ್ತು ಮತ್ತು ಸ್ಥಳೀಯ ಸಾಂಸ್ಕೃತಿಕ ಅಧ್ಯಯನ ನಡೆದಿಲ್ಲ ಎಂಬುದು ದುರಂತವೇ ಸರಿ. ಹೀಗಾಗಿ ಕೊಳ್ಳೇಗಾಲ ತಾಲ್ಲೂಕಿನ ಸಂಪೂರ್ಣವಾದ ಪುರಾತತ್ವ ಶೋಧನೆ ನಡೆಯಬೇಕಾಗಿದೆ. ಕೆಲವು ಪ್ರದೇಶಗಳಲ್ಲಿ ವಾರ್ಷಿಕ ವರದಿಯಲ್ಲಿ ಕೆಲವೊಂದು ವಿಚಾರಗಳು ಕಂಡು ಬಂದರೂ ಇನ್ನೂ ಕೆಲವು ವಿಚಾರಗಳು ಪ್ರಕಟವಾಗಿಲ್ಲ ಅಂತಹ ವಿಷಯಗಳನ್ನು ಸಹ ಈ ಒಂದು ಸಂಶೋಧನಾ ವರದಿಯಲ್ಲಿ ಸೇರಿಸಲಾಗಿದೆ. ಈ ನೆಲೆಯ ಸಂಸ್ಕೃತಿ ಆಶ್ಚರ್ಯದಾಯಕವಾಗಿದೆ, ತಲ್ಲಣಗೊಳಿಸುವಷ್ಟು ವಿಸ್ಮಯದಾಯಕವೂ ಆಗಿದೆ. ಕೊಳ್ಳೇಗಾಲ ಭಾರತ ಖಂಡದ ಜನಾಂಗಿಕ, ಸಾಂಸ್ಕೃತಿಕ ಹಾಗೂ ಸಾಮಾಜಿಕ ಇತಿಹಾಸ ಬಹುಮುಖಿಯಾಗಿದ್ದು ಸ್ಥಳೀಯ ಇತಿಹಾಸ ವೈವಿಧ್ಯತೆಯಿಂದ ಕೂಡಿದೆ. ಅಲ್ಲದೆ ಬೌದ್ಧ, ಜೈನ, ಶೈವ, ವೈಷ್ಣವ ಸಂಸ್ಕೃತಿಗಳ ಪಳೆಯುಳಿಕೆಗಳು

ಹೊಸತನ್ನು ಕಾಣಲು ಪ್ರೇರೇಪಿಸುತ್ತವೆ. ಇಲ್ಲಿಯ ಬಹುಸಾಲು ಬರಹಗಳು ದೇವಾಲಯಗಳ ಹಿನ್ನೆಲೆ ವಿಶೇಷತೆ ವಾಸ್ತು ಇಂತಹವುಗಳನ್ನು ಕುರಿತು ಹೇಳುತ್ತವೆ. ಕುತೂಹಲವೆಂದರೆ ದಕ್ಷಿಣ ಕರ್ನಾಟಕದ ಶ್ರಮ ಸಂಸ್ಕೃತಿ ಹಿನ್ನೆಲೆಯ ದಲಿತ ಶೂದ್ರ ಸಮುದಾಯಗಳು ಆರಾಧಿಸಿಕೊಂಡು ಬಂದಿರುವ ಶಿಲ್ಪಗಳನ್ನು ಐತಿಹಾಸಿಕ ಮಹತ್ವದ ಆಸಕ್ತಿಯನ್ನು ತಿಳಿಸುತ್ತದೆ. ಇತ್ತೀಚಿನ ಇತಿಹಾಸದ ಕಡೆಗೆ ನೋಡಿದರೆ ಒಡೆಯರ ಪಾಳ್ಯದಲ್ಲಿ ಬೌದ್ಧನೆಲೆಯನ್ನ ಕಾಣುತ್ತೇವೆ ಟಿಬೇಟಿಯನ್ನರು ಈ ಕೊಳ್ಳೇಗಾಲ ಪ್ರಾಂತ್ಯಕ್ಕೆ ಆಶ್ರಯತಾಣವಾಗಿರುವುದು ಎಲ್ಲರಿಗೂ ತಿಳಿದ ವಿಷಯವೇ ಆಗಿದೆ. ಇಂತಹ ಸಂಪತ್ಭರಿತ ಕೊಳ್ಳೇಗಾಲ ಪ್ರಾಂತ್ಯದ ಇತಿಹಾಸ ಮತ್ತು ಸ್ವಾಭಾವಿಕವಾಗಿಯೇ ಶ್ರೀಮಂತವಾಗಿದೆ. ಕೊಳ್ಳೇಗಾಲ ಚಾರಿತ್ರಿಕವಾಗಿ ಬಹಳ ಪ್ರಾಚೀನವಾದ ಸೀಮೆ. ಈ ಸೀಮೆ ಗಂಗವಾಡಿ 96,000 ಎಂಬ ವಿಶಾಲ ಪ್ರಾಂತ್ರ್ಯದ ಕೇಂದ್ರ ಭಾಗವಾಗಿತ್ತು. ತಲಕಾಡು ಗಂಗರ ಇತಿಹಾಸ ಅಧ್ಯಯನ ನಡೆಸಿದ ಡಾ: ಎಂ. ವಿ. ಕೃಷ್ಣರಾವ್‌ರವರ 'ದಿ ಗಂಗಾಸ್ ಆಫ್ ತಲಕಾಡು' ಗಂಗರ ಇತಿಹಾಸ ಅಧ್ಯಯನಕ್ಕೆ ಹಾಗೂ ಗಂಗವಾಡಿ ರಾಜ್ಯದ ಇತಿಹಾಸಕ್ಕೆ ಅನುಕೂಲ ಆಕರ ಗ್ರಂಥ. ತಲಕಾಡಿನ ಗಂಗರ ನಂತರ ಚೋಳರ ಕ್ರಿ.ಶ 10ನೇ ಶತಮಾನದ ಅಂತ್ಯದ ವೇಳೆಗೆ ಕರ್ನಾಟಕದ ಆಗ್ನೇಯ ಭಾಗಗಳನ್ನು ಅಕ್ರಮಿಸಿಕೊಂಡು ಸುಮಾರು 130 ವರ್ಷಗಳ ಕಾಲ ಆಳ್ವಿಕೆ ನಡೆಸಿದರು. ಇದರಿಂದ ಈ ಭಾಗದಲ್ಲೂ ತಮಿಳುಭಾಷೆ, ತಮಿಳುಸಂಸ್ಕೃತಿ ಆಳವಾಗಿ ಬೇರೂರಿದೆ. ಕ್ರಿ.ಶ. 12ನೇ ಶತಮಾನದ ಆದಿ ಭಾಗದಲ್ಲಿ ಚೋಳರನ್ನು ಗಂಗವಾಡಿ, ನೊಳಂಬವಾಡಿಗಳಿಂದ ಹೊಡೆದೋಡಿಸಿ ಆಗ್ನೇಯ ಕರ್ನಾಟಕವನ್ನು ತಮಿಳರ ಪ್ರಾಬಲ್ಯದಿಂದ ಬಿಡಿಸಿದ ಕೀರ್ತಿ ಹೊಯ್ಸಳ ವಿಷ್ಣುವರ್ಧನನಿಗೆ ಸಲ್ಲುತ್ತದೆ. ಇದರಿಂದಾಗಿ ಈ ಭಾಗವು ಸಹ ಹೊಯ್ಸಳರ ರಾಜಕೀಯ ಪ್ರಾಬಲ್ಯಕ್ಕೆ ಒಳಗಾಯಿತು. ಒಟ್ಟಿನಲ್ಲಿ ಹೇಳುವುದಾದರೆ ಕೊಳ್ಳೇಗಾಲದಲ್ಲಿ ಪುರಾತಾತ್ವಿಕವಾಗಿ, ಐತಿಹಾಸಿಕವಾಗಿ ಆಗಬೇಕಾದ ಕೆಲಸ ಸಾಕಷ್ಟಿದೆ. ಈಗ ಉಳಿದಿರುವ ಸಾಂಸ್ಕೃತಿಕ ಪರಂಪರೆಯನ್ನು ಮುಂದಿನ ಪೀಳಿಗೆಗೆ ಉಳಿಸಿಕೊಳ್ಳುವಷ್ಟು ಶ್ರಮ ವಹಿಸಿದರೆ ಈ ಇತಿಹಾಸ ಪ್ರಸ್ತುತವೆನಿಸುತ್ತದೆ.

1.1 ಅಧ್ಯಯನದ ಉದ್ದೇಶ – ವ್ಯಾಪ್ತಿ – ಮತ್ತು ವಿಧಾನ

ಒಂದು ನಾಡಿನ ಇತಿಹಾಸವೆಂದರೆ ಈ ನಾಡನ್ನು ಕಾಲದಿಂದ ಕಾಲಕ್ಕೆ ಆಳ್ವಿಕೆ ಮಾಡಿದ ರಾಜ–ಮಹಾರಾಜರುಗಳ ಇತಿಹಾಸವೆಂಬುದು ಬಹು ಪ್ರಧಾನವಾಗಿ ಕಂಡು ಬರುತ್ತದೆ. ಕೊಳ್ಳೇಗಾಲ ತಾಲ್ಲೂಕಿನಲ್ಲಿ ಬದುಕಿದ ಜನರ ಒಂದು ಗಣನೀಯವಾದ ಪ್ರಾಚೀನ ನೆಲೆಗಳು ಸಹಕಂಡು ಬರುತ್ತದೆ. ಈ ಪ್ರದೇಶವನ್ನಾಳಿದ ರಾಜ ಸಮೂಹ, ಒಂದು ದೇಶದ ನಿಜವಾದ ಇತಿಹಾಸವೆಂದರೆ ಆ ಜನತೆಯ ಇತಿಹಾಸವೆಂದೇ ಹೇಳಬಹುದು ಜನತೆ ಬದುಕಿದರೀತಿ, ಅನುಸರಿಸಿದ ಧರ್ಮ ಕಟ್ಟಡ, ದೇವಾಲಯಗಳು, ಕಲೆ–ವಾಸ್ತುಶಿಲ್ಪ ಜೀವನದ ಅಮೂಲ್ಯಗಳು, ಜಾನಪದೀಯವಾಗಿ ಹಬ್ಬ ಆಚರಣೆಗಳು, ರಾವಳೇಶ್ವರ–ರಾಕಸಮ್ಮನ ಸಂಸ್ಕೃತಿ, ಇತ್ಯಾದಿ ವಿಷಯಗಳ ಮೇಲೆ ವಿವರಗಳ ಮೂಲಕ ಹೊಸ–ಹೊಸ ವಿಷಯಗಳನ್ನು ಕೊಳ್ಳೇಗಾಲ ತಾಲ್ಲೂಕಿನ ವಿಷಯಕ್ಕೆ ಸೇರಿಸುವುದು ಈ ಅಧ್ಯಯನದ ಮುಖ್ಯ ಉದ್ದೇಶವಾಗಿದೆ.

ಕೊಳ್ಳೇಗಾಲ ತಾಲ್ಲೂಕಿನ ದಕ್ಷಿಣಭಾಗದಲ್ಲಿ ವ್ಯಾಪಿಸಿರುವ ಕರ್ನಾಟಕದ ಇತಿಹಾಸ ಪ್ರಾಗೈತಿಹಾಸಿಕ ಕಾಲದಿಂದ ಸಾಂಸ್ಕೃತಿಕ ಬೆಳವಣಿಗೆಯ ಎಲ್ಲಾ ಘಟ್ಟಗಳನ್ನು ಒಳಗೊಂಡಿರುವುದು ಕಂಡುಬರುತ್ತದೆ. ಈ ಹಿನ್ನೆಲೆಯಿಂದ ಕೊಳ್ಳೇಗಾಲ ತಾಲ್ಲೂಕಿನ ಸಾಂಸ್ಕೃತಿಕ ಇತಿಹಾಸವನ್ನು ಸಮಗ್ರವಾಗಿ ಪುನರ್‌ರಚಿಸುವಲ್ಲಿ ಇಲ್ಲಿಯ ಪ್ರಾಚ್ಯಾವಶೇಷಗಳು ಬಹು ಪ್ರಮುಖವಾಗಿದೆ. ಇಂತಹ ಪ್ರಾಚ್ಯಾವಶೇಷಗಳ ಸಂಗ್ರಹಣೆ ಒಂದು ನಾಡಿನ ಒಂದು ಪ್ರಾಂತ್ಯದ ಒಂದು ಊರಿನಲ್ಲಿ ಪ್ರಾರಂಭಿಸಿದಾಗ ಮಾತ್ರ ಸಾಂಸ್ಕೃತಿಕ ಇತಿಹಾಸವನ್ನು ವಸ್ತು ನಿಷ್ಠವಾಗಿ ರಚಿಸಬಹುದು ಮತ್ತು ಇತಿಹಾಸವನ್ನು ಪುನರ್‌ರಚಿಸಿದಾಗ ಕಳೆದು ಹೋಗಿರುವಂತಹ ಅಥವಾ ಬಿಟ್ಟು ಹೋಗಿರುವಂತಹ ಭಾಗಗಳನ್ನು ಪುನಃ ತಂದು ಕೊಳ್ಳಬಹುದಾಗಿದೆ ಅಥವಾ ಯಾರು ವಸ್ತು ವಿಷಯದ ಮೇಲೆ ಶೋಧನೆ ಮಾಡಲಿಲ್ಲ ಆದರೆ ಅಂತಹ ಕಾರ್ಯಗಳನ್ನು ಈ ಶೋಧನೆಯಿಂದ ಅಂದರೆ ನನ್ನ ಕ್ಷೇತ್ರಕಾರ್ಯದಿಂದ ಕೊಳ್ಳೇಗಾಲ ತಾಲ್ಲೂಕು ಪ್ರಾಂತ್ಯದಲ್ಲಿ ಕಂಡುಬರುವ ಪ್ರಾಚ್ಯಾವಶೇಷಗಳನ್ನು ಮುಖ್ಯವಾಗಿಟ್ಟುಕೊಂಡು ಪ್ರಬಂಧ ರಚಿಸಬೇಕಾಗುತ್ತದೆ.

ಇತಿಹಾಸ ಪುನರ್‌ರಚನೆಯಲ್ಲಿ ಮಹತ್ವದ ಪಾತ್ರವಹಿಸಿರುವ ಪುರಾತತ್ವ ಅವಶೇಷಗಳನ್ನು ವಿವಿಧ ಶಾಖೆಗಳಿಂದ ಅಧ್ಯಯನ ಮಾಡಲಾಗುತ್ತದೆ. ಪ್ರಾಚೀನ ಭಾರತದಲ್ಲಿ ಅದರಲ್ಲೂ ಕ್ರಿ.ಶ.ದ ಈಚೀನ ಶತಮಾನಗಳಲ್ಲಿ ರಾಜರಿಗಿದ್ದ ಸ್ಥಾನ–ಮಾನವನ್ನು ನೋಡಿದರೆ ರಾಜಾಧಿರಾಜರುಗಳ ಇತಿಹಾಸ ಒಂದು ರೀತಿಯಲ್ಲಿ ನಮ್ಮ ನಾಡಿನ ಇತಿಹಾಸವೂ ಆಗಬಹುದೋ ಏನೋ ಅಲ್ಲದೆ ಎಲ್ಲಾ ದೇಶಗಳಂತೆ ನಮ್ಮಲ್ಲಿಯೂ ನಾಡಿನ ಇತಿಹಾಸವನ್ನು ಅನುಕೂಲಕರವಾಗಿ ಆಯಾ

ಘಟ್ಟಗಳಾಗಿ ವಿಭಜಿಸಲು ರಾಜರುಗಳು ರಾಜವಂಶಗಳು ನಮಗೆ ತುಂಬಾ ಸಹಕಾರಿಯಾಗಿದೆ. ಉದಾಹರಣೆಗೆ ಕನ್ನಡನಾಡಿನ ಇತಿಹಾಸದಲ್ಲಿ ಅದರಲ್ಲೂ ಕೊಳ್ಳೇಗಾಲ ತಾಲ್ಲೂಕಿನಲ್ಲಿ ಗಂಗ, ಚೋಳರು, ಹೊಯ್ಸಳ, ವಿಜಯನಗರದ ಅರಸರು, ಮೈಸೂರು ಒಡೆಯರು, ಹೈದರ್‌ಟಿಪ್ಪುರವರ ಆಳ್ವಿಕೆ, ಇತ್ಯಾದಿ ಪ್ರಮುಖ ರಾಜರುಗಳ ಕಾಲ ಘಟ್ಟಗಳನ್ನು ಗುರುತಿಸಬಹುದು. ಕೊಳ್ಳೇಗಾಲ, ತಾಲ್ಲೂಕು ಪುರಾತತ್ವ ದೃಷ್ಠಿಯಿಂದಲೂ ದೇವಾಲಯಗಳ ಮತ್ತು ಶಾಸನಗಳ ಸಂಸ್ಕೃತಿಗಳ ಹೊಸ ನೆಲೆಗಳ ಶೋಧನೆ ಅಧ್ಯಯನ ದೃಷ್ಠಿಯಿಂದಲೂ ಕುಂಠಿತವಾಗಿದೆ. ಈ ಹಿನ್ನೆಲೆಯಿಂದ ಅವುಗಳ ಸಮಗ್ರ ಅಧ್ಯಯನ ಸಮಂಜಸವಾಗಿ ಆಗಿಲ್ಲ. ಇವುಗಳನ್ನು ಒಂದೆಡೆ ಕ್ರೂಢೀಕರಿಸುವುದೇ ಪ್ರಸ್ತುತ ಪ್ರಬಂಧದ ಉದ್ದೇಶವಾಗಿದೆ.

ಅಧ್ಯಯನದ ವ್ಯಾಪ್ತಿ:– ಪ್ರಸ್ತುತ ಈ ಪ್ರಬಂಧದ ಅಧ್ಯಯನ ವ್ಯಾಪ್ತಿಯು ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ ತಾಲ್ಲೂಕಿನ ಒಟ್ಟಾರೆ ಪ್ರಾಂತ್ಯದಲ್ಲಿ ಕಂಡುಬರುವ ಪ್ರಾಗೈತಿಹಾಸಿಕ ಮಾನವ ನೆಲೆಗಳಿಂದ ಹಿಡಿದು ಕ್ರಿ.ಶ ಸುಮಾರು 18–19ನೇ ಶತಮಾನದ ಪ್ರಮುಖ ಊರುಗಳ ದೇವಾಲಯಗಳು, ಶಾಸನಗಳು, ಮೂರ್ತಿ–ಶಿಲ್ಪಗಳು, ಸ್ಮಾರಕಶಿಲ್ಪಗಳು, ಲೌಕಿಕ ವಾಸ್ತು ರಚನೆ ಸ್ಥಳೀಯ ಪ್ರಮುಖ ಜಾನಪದೀಯ ಹಬ್ಬಗಳು ಪ್ರಾಚ್ಯಾವಶೇಷಗಳ ಸಮಗ್ರ ವಿವರಣೆಗಳನ್ನು ಒಳಗೊಂಡಿರುತ್ತದೆ.

ಅಧ್ಯಯನದ ವಿಧಾನ:– ಕೊಳ್ಳೇಗಾಲ ತಾಲ್ಲೂಕು ಪ್ರಾಂತ್ಯದಲ್ಲಿ ಈ ಸಂಶೋಧನಾ ಪ್ರಬಂಧವನ್ನು ತಯಾರಿಸಲು ಈ ಕೆಳಕಂಡ ರೀತಿ ವಿಧಾನಗಳನ್ನು ಅನುಸರಿಸಲಾಗಿದೆ. ಪ್ರಸ್ತುತ ಈ ಪ್ರಬಂಧದ ರಚನೆಯಲ್ಲಿ ಕೆಲವು ಹೊಸ ಹೊಸ ಪ್ರಯೋಗಗಳನ್ನು ವಿಧಾನಗಳನ್ನು ಅನುಸರಿಸಲಾಗಿದೆ, ಈ ಪ್ರಾಂತ್ಯದಲ್ಲಿ ಆಳ್ವಿಕೆ ಮಾಡಿದ ರಾಜರುಗಳ ರಾಜಕೀಯ ಇತಿಹಾಸವನ್ನು ಸೇರಿಸಲಾಗಿದೆ. ಅಲ್ಲದೆ ಪ್ರಮುಖ ಧರ್ಮಗಳ ಬೆಳವಣಿಗೆ, ಪ್ರಮುಖ ಜಾನಪದೀಯ ಹಬ್ಬಗಳು, ಪ್ರಮುಖ ಊರುಗಳಲ್ಲಿ ಕಂಡುಬರುವ ಪ್ರಾಚೀನ ದೇವಾಲಯಗಳ ವಾಸ್ತು–ಶಿಲ್ಪ ರಚನೆ ನೋಟವನ್ನು ತಿಳಿಸಲಾಗಿದೆ. ಹೊಸದಾಗಿ ನನ್ನ ಕ್ಷೇತ್ರಕಾರ್ಯದಲ್ಲಿ ಪತ್ತೆಯಾದ ರಾವಳೇಶ್ವರ ಮತ್ತು ರಾಕಸಮ್ಮನ ಸಂಸ್ಕೃತಿ ಕೊಳ್ಳೇಗಾಲ ಪ್ರಾಂತ್ಯದಲ್ಲಿ ಯಾವ ರೀತಿ ಬೆಳೆದಿದೆ ಎಂಬುದನ್ನು ಅಧ್ಯಯನ ಮಾಡಲಾಗಿದೆ. ಕೊಳ್ಳೇಗಾಲದ ಬಗ್ಗೆ ಕೆಲವೊಂದು ಬಿಡಿಲೇಖನಗಳು ಮಾತ್ರ ಕಂಡುಬರುತ್ತದೆ. ಈಗಾಗಲೇ ಪ್ರಕಟವಾಗಿರುವ ಕೃತಿಗಳು, ಮತ್ತು ಲೇಖನಗಳನ್ನು ವ್ಯವಸ್ಥಿತವಾಗಿ ಸಂಗ್ರಹಿಸಿ ಅದರೊಂದಿಗೆ ಆಕರ ಗ್ರಂಥಗಳ ಪಟ್ಟಿಯನ್ನು ತಯಾರಿಸಿಕೊಂಡು ಸಮಗ್ರ ಕೊಳ್ಳೇಗಾಲ ತಾಲ್ಲೂಕಿನ ಕ್ಷೇತ್ರಕಾರ್ಯದಲ್ಲಿ ಅಧ್ಯಯನ ಕೈಗೊಂಡು. ಅವುಗಳ ಸನ್ನಿವೇಶಕ್ಕೆ ಸಂದರ್ಭಕ್ಕೆ ತಕ್ಕಂತೆ

ವಿವರಪೂರ್ಣವಾದ ಛಾಯಚಿತ್ರಗಳನ್ನು ದಾಖಲೆಗಳನ್ನು ದಾಖಲಿಸಿಕೊಳ್ಳುವುದು. ಕೊಳ್ಳೇಗಾಲ ತಾಲ್ಲೂಕಿನಲ್ಲಿ ಕಂಡುಬರುವ ದೇವಾಲಯಗಳ ವ್ಯವಸ್ಥಿತ ಅಧ್ಯಯನ ಪ್ರಚಲಿತವಿದ್ದ ವಿವಿಧ ಬಗೆಯ ದೇವಾಲಯಗಳ ಮಾದರಿ ಗುರುತಿಸಿ ಅವುಗಳ ಗುಣ-ಲಕ್ಷಣಗಳನ್ನು ಕಂಡುಕೊಳ್ಳುವುದು. ಅವುಗಳ ವಿವರಣೆ ನೀಡುವಾಗ ಮೊದಲು ದೇವಾಲಯದ ಒಳಭಾಗವನ್ನು ಅಂದರೆ ಗರ್ಭಗೃಹದಿಂದ ಮುಖ ಮಂಟಪದವರೆಗೆ ನಂತರ ಹೊರಭಾಗವನ್ನು ಅಂದರೆ ಅಧಿಷ್ಠಾನದಿಂದ ಕೆಲಸದವರಿಗೆ ಕಂಡು ಬರುವ ವಿವಿಧ ಭಾಗಗಳ ವಾಸ್ತು ವಿವರಣೆಯನ್ನು ನೀಡಲಾಗಿದೆ. ಹಾಗೂ ದೇವಾಲಯಗಳಲ್ಲಿ ಮತ್ತು ಅವುಗಳ ಸುತ್ತ-ಮುತ್ತಲಿನ ಪರಿಸರದಲ್ಲಿ ಕಂಡು ಬರುವ ಶಿಲ್ಪಗಳನ್ನು ವ್ಯವಸ್ಥಿತವಾಗಿ ಅಧ್ಯಯನ ಮಾಡಿ ಅವುಗಳ ಶೈಲಿ, ಕಾಲಮಾನ ಮತ್ತು ಪ್ರತಿಮಾ ಲಕ್ಷಣದ ದೃಷ್ಟಿಕೋನದಿಂದ ಪರಿಶೀಲಿಸುವುದು ಶಿಲ್ಪಗಳನ್ನು ಗಣನೆಗೆ ತೆಗೆದುಕೊಂಡು ಅವುಗಳ ವಿವಿಧ ಬಗೆಯಲ್ಲಿ ವಿಂಗಡಿಸಿ ಅವುಗಳ ವಿವರಗಳೊಂದಿಗೆ ವಿವರಿಸಲಾಗಿದೆ. ಜಾನಪದೀಯ ಹಿನ್ನೆಲೆಯಿಂದ ಕೊಳ್ಳೇಗಾಲ ತಾಲ್ಲೂಕು ಪ್ರಾಚೀನ ಪರಂಪರೆಗೆ ಪೂರಕವಾಗಿಯೇ ಕರ್ನಾಟಕದಲ್ಲಿಯೇ ಹೆಸರು ಪಡೆದಿರುವ ಕ್ಷೇತ್ರವಾಗಿದೆ. ಉದಾಹರಣೆಗೆ ಕುರುಬನಕಟ್ಟೆ, ಚಿಕ್ಕಲ್ಲೂರು, ಬೂದುಬಾಳು, ಮಹದೇಶ್ವರನ ಬೆಟ್ಟ ಪ್ರಮುಖ ನೆಲೆಗಳಾಗಿವೆ ಜಾನಪದೀಯವಾಗಿ ಈ ಭಾಗದಲ್ಲಿ ರಾವಳೇಶ್ವರನ ಸಂಸ್ಕೃತಿ ಮತ್ತು ರಾಕಸಮ್ಮನ ಪರಂಪರೆ ಇಲ್ಲಿ ಇರಬೇಕಾದರೆ ಇದು ಯಾವ ಪ್ರಾಂತ್ಯದಿಂದ ಯಾವ ಯಾವ ಕಾಲದಲ್ಲಿ ಈ ಸಂಸ್ಕೃತಿ ಪ್ರಚಲಿತದಲ್ಲಿತ್ತು ಈಗ ಈ ಸಂಸ್ಕೃತಿ ಗಂಗವಾಡಿ 96,000 ಪ್ರಾಂತ್ಯದಲ್ಲಿ ಯಾವ ಭಾಗದಲ್ಲಿ ಪ್ರಚಲಿತದಲ್ಲಿದೆ ಎಂಬುದನ್ನು ಸಹ ತಿಳಿಸಲಾಗಿದೆ. ಒಟ್ಟಾರೆಯಾಗಿ ಈ ಅಧ್ಯಯನದ ಮೂಲ ಉದ್ದೇಶವೇನೆಂದರೆ ಕೊಳ್ಳೇಗಾಲ ತಾಲ್ಲೂಕು ಪ್ರಾಂತ್ಯ ಅಧ್ಯಯನದ ಮೂಲ ಅಂಶವಾಗಿದ್ದರೂ ಸಹ ರಾಜರುಗಳ ಕಾಲದ ಆಳ್ವಿಕೆಯನ್ನು ಈ ಭಾಗದಲ್ಲಿ ಅಲ್ಲದೆ ಮಹಿಷಮಂಡಲ ಪ್ರಾಂತ್ಯವಾದ ಚಾಮರಾಜನಗರ ಜಿಲ್ಲೆಯು ಒಳಪಟ್ಟಿತ್ತು.

ಈ ಹಿನ್ನೆಲೆಯಿಂದ ಹಲವಾರು ದೃಷ್ಟಿಕೋನಗಳಿಂದ ವಿಶೇಷ ಮಾಹಿತಿಯನ್ನು ಕ್ರೂಢೀಕರಿಸಿ ಎಲ್ಲಾ ಆಕರಗಳನ್ನು ವಿಶ್ಲೇಷಿಸಿ ವರದಿಯನ್ನು ತಯಾರಿಸಲಾಗಿದೆ. ವಿವರಗಳಿಗೆ ಪೂರಕವಾಗಿ ಆಧಾರ ಗ್ರಂಥಗಳ ಪಟ್ಟಿಯನ್ನು ನೀಡಲಾಗಿದೆ ಮತ್ತು ಕೆಲವು ವಿಷಯಗಳಿಗೆ ಸ್ಥಳೀಯ ವ್ಯಕ್ತಿಗಳಿಂದ ಮಾಹಿತಿ ಸಂಗ್ರಹಿಸಲಾಗಿದೆ ಮತ್ತು ಕೆಲವೊಂದು ಛಾಯಾಚಿತ್ರಗಳನ್ನು ಸೇರ್ಪಡಿಸಲಾಗಿದೆ. ಕ್ಷೇತ್ರ ಕಾರ್ಯದಲ್ಲಿ ನಮ್ಮ ಗಮನಕ್ಕೆ ಬಂದಿರುವ ಪ್ರಾಚ್ಯವಸ್ತುಗಳು ಹಾಗೂ ಆಕರಗಳನ್ನು ಅವಲಂಬಿಸಿ ಪ್ರಸ್ತುತ ಈ ಒಂದು ಸಂಶೋಧನ ವರದಿಯನ್ನು ತಯಾರಿಸಲಾಗಿದೆ.

1.2 ಪ್ರಾಕೃತಿಕ ಹಿನ್ನೆಲೆ:

ಒಂದು ಪ್ರದೇಶದ ಇತಿಹಾಸ ಮತ್ತು ಸಂಸ್ಕೃತಿಗಳ ಬೆಳವಣಿಗೆಯಲ್ಲಿ ಇಲ್ಲಿನ ಭೌಗೋಳಿಕ ಪರಿಸರ ಮತ್ತು ಅನುಕೂಲತೆಗಾಗಿ ಅನೇಕ ವಿಭಾಗಗಳನ್ನಾಗಿ ವಿಂಗಡಿಸಿ ಆ ಕಾಲದಲ್ಲಿ ಪ್ರಾಚೀನತೆಯಿಂದ ಆಧುನಿಕತೆಯವರೆಗೂ ನೈಸರ್ಗಿಕ ಅಂಶಗಳನ್ನು ಅವಲಂಬಿಸಿರುವುದು ಕಂಡು ಬರುತ್ತದೆ. ಆದುದರಿಂದ ಭೌಗೋಳಿಕ ಪರಿಸರವು ಇತಿಹಾಸದೊಂದಿಗೆ ಹತ್ತಿರದ ಸಂಬಂಧವನ್ನು ಹೊಂದಿರುವುದು ತಿಳಿದು ಬರುತ್ತದೆ. ಭೌಗೋಳಿಕ ವೈಶಿಷ್ಟ್ಯತೆಯನ್ನು ಮರೆತು ಇತಿಹಾಸ ರಚಿಸಲು ಪ್ರಾರಂಭಿಸಿದವರೆ ಇತಿಹಾಸ ರಚನೆಯ ಒಂದು ಪ್ರಮುಖ ಅಂಶವನ್ನು ಮರೆತಂತಾಗುತ್ತದೆ.[1] ಕರ್ನಾಟಕ ರಾಜ್ಯದ ಪ್ರಮುಖ ಜಿಲ್ಲೆಗಳಲ್ಲಿ ಒಂದಾದ ಚಾಮರಾಜನಗರ ಜಿಲ್ಲೆಯು ನಾಲ್ಕು ತಾಲ್ಲೂಕುಗಳನ್ನು ಒಳಗೊಂಡಿದೆ. ಇವುಗಳಲ್ಲಿ ಕೊಳ್ಳೇಗಾಲ ತಾಲ್ಲೂಕು ಒಂದು ಕೊಳ್ಳೇಗಾಲದ ಭೌಗೋಳಿಕ ವಿಸ್ತೀರ್ಣವು 2,787.82 ಚದರ ಕಿಲೋಮೀಟರ್ ವಿಸ್ತೀರ್ಣವನ್ನು ಹೊಂದಿದೆ. ಕೊಳ್ಳೇಗಾಲದ ಸುತ್ತಲಿನ ಜನಸಂಖ್ಯೆ 3,36,832 ಸಾಕ್ಷರತೆ 1,58,412 (ಶೇ. 53.9) ಮೇರೆಗಳು.[2] ಪಶ್ಚಿಮಕ್ಕೆ ತಿ.ನರಸೀಪುರ ತಾಲ್ಲೂಕು, ಪೂರ್ವಕ್ಕೆ ತಮಿಳುನಾಡು, ದಕ್ಷಿಣಕ್ಕೆ ಚಾಮರಾಜನಗರ, ಉತ್ತರಕ್ಕೆ ಕನಕಪುರ ತಾಲ್ಲೂಕುಗಳನ್ನು ಹೊಂದಿದೆ.[3] ತಾಲ್ಲೂಕಿನಲ್ಲಿ ಒಟ್ಟು 123 ಗ್ರಾಮಗಳಿವೆ.[4] ಕೊಳ್ಳೇಗಾಲ ತಾಲ್ಲೂಕು 1956ರ ವರೆಗೆ ಮದರಾಸು ಪ್ರಾಂತ್ಯದ ಕೊಯಮತ್ತೂರು ಜಿಲ್ಲೆಗೆ ಸೇರಿತ್ತು. ಆ ಸಂದರ್ಭದಲ್ಲಿ ಮಹಿಷಮಂಡಲ ಪ್ರಾಂತ್ಯವಾದ ಮೈಸೂರು ಜಿಲ್ಲೆಗೆ ಸೇರಿತು.[5] ಸಾಂಸ್ಕೃತಿಕವಾಗಿ ನೋಡಿದರೆ ಕೊಳ್ಳೇಗಾಲ ಪ್ರಸ್ಥಭೂಮಿಯ ಒಂದು ಭಾಗ ಪೂರ್ವ ಮತ್ತು ದಕ್ಷಿಣಕ್ಕೆ ಬೆಟ್ಟಗಳ ಸಾಲುಗಳಿವೆ. ಪೂರ್ವದಲ್ಲಿರುವ ಬೆಟ್ಟಗಳಲ್ಲಿ ಮಲೈ ಮಹದೇಶ್ವರ ಬೆಟ್ಟ ಶ್ರೇಣಿ ಪ್ರಖ್ಯಾತಿ ಪಡೆದಿದೆ. ಉತ್ತರ ಮತ್ತು ಪೂರ್ವದ ಅಂಚುಗಳಲ್ಲಿ ಕಾವೇರಿ ನದಿ ಹರಿಯುತ್ತದೆ. ಇದೇ ಆ ಭಾಗದ ಗಡಿ ರೇಖೆ ಸಹ ಇದೆ. ಕಾವೇರಿ ನದಿಯ ಗಗನಚುಕ್ಕಿ, ಭರಚುಕ್ಕಿ ಜಲಪಾತಗಳು ಈ ತಾಲ್ಲೂಕಿನ ವಾಯುವ್ಯ ಭಾಗದಲ್ಲಿದೆ. ಆಗ್ನೇಯದ ಗಡಿಯುಲ್ಲಿ ಪಾಲಾರ್ ಎಂಬ ಚಿಕ್ಕ ನದಿಯಿದೆ. ಚಾಮರಾಜನಗರ ಮತ್ತು ಯಳಂದೂರು ತಾಲ್ಲೂಕಿನಿಂದ ಬರುವ ಸುವರ್ಣಾವತಿ ನದಿ ಕೊಳ್ಳೇಗಾಲದಿಂದ ಪಶ್ಚಿಮದಲ್ಲಿ ಸ್ವಲ್ಪ ದೂರ ಹರಿದು ಕಾವೇರಿ ನದಿಯನ್ನು ಸೇರುತ್ತದೆ. ಇಲ್ಲಿನ ಜನರ ಮುಖ ಕಸಬು ಕೃಷಿ ಅಲ್ಲಲ್ಲಿ ನಿರ್ಮಿಸಿರುವ ಕೆರೆಗಳು ಅಲ್ಪ ಪ್ರಮಾಣದಲ್ಲಿ ನೀರಾವರಿ ಸೌಲಭ್ಯವನ್ನು ಒದಗಿಸುತ್ತದೆ. ಭತ್ತ, ರಾಗಿ, ಜೋಳ, ಮುಖ್ಯ ಬೆಳೆಗಳು, ಸ್ವಲ್ಪ ಮಟ್ಟಿಗೆ ತೋಟದ ಬೆಳೆ ಸಹ ಇದೆ. ರೇಷ್ಮೆ ವ್ಯವಸಾಯ ಮತ್ತು ಕೈಗಾರಿಕೆ ಕೆಲವು ಭಾಗಗಳಲ್ಲಿದೆ. ಕೊಳ್ಳೇಗಾಲ ಹೆಚ್ಚಾಗಿ ಬೆಟ್ಟಗುಡ್ಡ ಪ್ರವೇಶಗಳನ್ನು ಒಳಗೊಂಡಿದೆ. ಈಗ ಕೊಳ್ಳೇಗಾಲ ಬಿಟ್ಟರೆ ಹೆಚ್ಚಿನ ಪ್ರದೇಶಗಳಿಗೆ ರಸ್ತೆ ಸಂಪರ್ಕ ಉತ್ತಮವಾದ ರೀತಿಯಲ್ಲಿ ಇಲ್ಲ.

ಕೊಳ್ಳೇಗಾಲದಿಂದ ಲೊಕ್ಕನಹಳ್ಳಿ ಮೂಲಕ ಸಾಗುವ ಸತ್ಯಮಂಗಲ ರಸ್ತೆ, ಹನೂರು, ಅಜ್ಜೀಪುರ ಮೂಲಕ ಹೋಗುವ ಭವಾನಿ ರಸ್ತೆ ಮುಖ್ಯರಸ್ತೆಯಾಗಿದೆ, ಆದರೆ ಇತ್ತೀಚಿನ ದಿನಗಳಲ್ಲಿ ಕೊಳ್ಳೇಗಾಲದಿಂದ ಮಹದೇಶ್ವರ ಬೆಟ್ಟಕ್ಕೆ ಉತ್ತಮ ರಸ್ತೆ ಮಾರ್ಗವನ್ನು ಮಾಡಲಾಗಿದೆ.[6] ಮುಳ್ಳೂರು, ಸತ್ತೇಗಾಲ, ಸಿಂಗಾನಲ್ಲೂರು, ಹನೂರು, ಅಜ್ಜೀಪುರ, ಲೊಕ್ಕನಹಳ್ಳಿ, ಕೌದಳ್ಳಿ, ಬಂಡಳ್ಳಿ, ತೆಳ್ಳನೂರು ಕೆಲವು ಮುಖ್ಯ ಸ್ಥಳಗಳು.

ಸಿಂಗಾನಲ್ಲೂರು, ಕೊಳ್ಳೇಗಾಲ ಸತ್ತೇಗಾಲ, ಮುಡಿಗುಂಡ, ಶಿವನಸಮುದ್ರ ಮೊದಲಾದ ಕಡೆ ಪ್ರಮುಖ ದೇವಾಲಯಗಳಿವೆ.[7]

ವಾಯುಗುಣ: – ಕೊಳ್ಳೇಗಾಲ ತಾಲ್ಲೂಕು ಪ್ರದೇಶವು ಉಷ್ಣವಲಯ ಪ್ರದೇಶವಾಗಿದ್ದು ವರ್ಷದ ಋತುಮಾನದ ಆಧಾರದ ಮೇಲೆ ವಾಯುಗುಣವು ನಿರ್ಧಾರವಾಗುತ್ತದೆ. ಈ ಪ್ರದೇಶವು ನೈರುತ್ಯ ಮಾನ್ಸೂನ್ ಮಾರುತಗಳ ಪ್ರಭಾವವನ್ನು ಒಳಗೊಂಡಂತೆ ಮಾರುತಗಳ ಆಧಾರದ ಮೇಲೆ ಮಳೆ ಪ್ರಮಾಣವನ್ನು ಹಾಗು ಉಷ್ಣಾಂಶದ ಹಂಚಿಕೆಯನ್ನು ಪಡೆದುಕೊಳ್ಳುತ್ತದೆ. ಈ ಪ್ರದೇಶವು ಅರಬ್ಬೀ ಸಮುದ್ರದಿಂದ ಬೀಸಿ ಬರುವಂತಹ ಮಾರುತಗಳನ್ನು ಆಧರಿಸಿ ಮಳೆಯನ್ನು ಪಡೆಯುತ್ತದೆ. ಈ ಪಟ್ಟಣದ ಆಗ್ನೇಯ ಹಾಗೂ ದಕ್ಷಿಣ ಭಾಗದಲ್ಲಿ ದಟ್ಟ ಅರಣ್ಯಗಳು ಕಂಡು ಬರುತ್ತವೆ. ಆದ್ದರಿಂದ ಸಾಕಷ್ಟು ಮಳೆಯನ್ನು ಪಡೆಯುತ್ತದೆ. ಸ್ವಲ್ಪ ಮಟ್ಟಿಗೆ ಈಶಾನ್ಯ ದಿಕ್ಕಿನಿಂದ ಹಾದು ಬರುವಂತಹ ಮಾರುತಗಳಿಂದಲೂ ಮಳೆಯನ್ನು ಪಡೆಯುತ್ತದೆ. ಈ ಪಟ್ಟಣವು ಉಷ್ಣವಲಯ ಪ್ರದೇಶವಾಗಿರುವುದರಿಂದ ಕೆಲವು ಭಾಗಗಳಲ್ಲಿ ಮಳೆಯ ಪ್ರಮಾಣ ಕಡಿಮೆಯಾಗಿರುವುದನ್ನು ಕಾಣಬಹುದು.[8]

ಕೊಳ್ಳೇಗಾಲ ತಾಲ್ಲೂಕು ಪ್ರದೇಶದಲ್ಲಿ ಮಳೆಯ ಹಂಚಿಕೆಯು ಸಾಧಾರಣವಾಗಿ ಹಂಚಿಕೆಯಾಗಿದೆ. ಈ ಪ್ರದೇಶದಲ್ಲಿ ಅಂಶಗಳ ಪ್ರಕಾರ 634.4 ಮಿಲಿ ಮೀಟರ್‌ಗಳಷ್ಟು ಮಳೆಯಾಗಿತ್ತು ಎಂದು ಅಂದಾಜು ಮಾಡಲಾಗಿದೆ. ಕೊಳ್ಳೇಗಾಲ ತಾಲ್ಲೂಕು ಪ್ರಾಂತ್ಯಗಳಾದ ತಗರಪುರದಿಂದ ಹಿಡಿದು ದೊಡ್ಡಿಂದುವಾಡಿ ಪ್ರಾಂತ್ಯದವರೆಗೆ ನೀರಾವರಿಯನ್ನು ಹೊಂದಿದೆ ಈ ಪ್ರದೇಶಗಳಲ್ಲಿ ಹೆಚ್ಚಾಗಿ ನೀರಾವರಿಯ ಆಧಾರದ ಮೇಲೆ ಕೃಷಿಯನ್ನು ಅಭಿವೃದ್ಧಿ ಪಡಿಸಿಕೊಳ್ಳಲಾಗಿದೆ.[9] ಹನೂರು, ರಾಮಾಪುರ, ಮಾರ್ಟಳ್ಳಿ ಪ್ರದೇಶಗಳಲ್ಲಿ ನೀರಾವರಿಯ ಹಂಚಿಕೆ ಹಾಗೂ ಮಳೆಯನ್ನೇ ಸಾಕಷ್ಟು ಪ್ರಮಾಣದಲ್ಲಿ ಒಳಗೊಂಡಿದೆ.

ಉಷ್ಣಾಂಶದ ಪ್ರಮಾಣ: – ಉಷ್ಣಾಂಶವು ಈ ಪ್ರದೇಶದ ಭೌಗೋಳಿಕಾಂಶದ ಆಧಾರದ ಮೇಲೆ ನಿರ್ಧಾರವಾಗಿದ್ದು ಪ್ರದೇಶದಿಂದ ಭಿನ್ನತೆಯಿಂದ ಕೂಡಿರುತ್ತದೆ. ಕೊಳ್ಳೇಗಾಲ ಪ್ರದೇಶದಲ್ಲಿ 21.8 ಸೆಂಟಿಗ್ರೇಡ್, ಉಷ್ಣಾಂಶವು ವಾರ್ಷಿಕವಾಗಿ ಒಳಗೊಂಡಿದೆ. ಈ ಪ್ರದೇಶದ ಕನಿಷ್ಠ ಉಷ್ಣಾಂಶವು 31.4 ಸೆಂಟಿಗ್ರೇಡ್‌ಗಳಿಂದ 16.2 ಸೆಂಟಿಗ್ರೇಡ್‌ಗಳಷ್ಟು ಉಷ್ಣಾಂಶದ ಪ್ರಮಾಣವನ್ನು ಇಲ್ಲಿ ತಿಳಿಯಬಹುದಾಗಿದೆ.

ಮಣ್ಣುಗಳು: – ಈ ಪ್ರದೇಶದಲ್ಲಿ ಹಲವಾರು ವಿವಿಧ ರೀತಿಯ ವಿವಿಧ ಮಣ್ಣುಗಳು ಹಂಚಿಕೆಯಾಗಿದೆ. ಈ ಪ್ರದೇಶದ ಕೃಷಿಯ ಅಭಿವೃದ್ಧಿಯ ಆಧಾರದ ಮೇಲೆ ಮಣ್ಣಿನ ಪಾತ್ರಗಳು ಮಹತ್ವದ ಸ್ಥಾನವನ್ನು ಪಡೆದು ಕೊಂಡಿದೆ ಈ ಪ್ರದೇಶದಲ್ಲಿ ಕಂಡು ಬರುವಂತಹ ಮಣ್ಣುಗಳೆಂದರೆ ಕೆಂಪು ಮಣ್ಣು, ಕಪ್ಪುಮಣ್ಣು, ಮರಳು ಮಿಶ್ರಿತ ಮಣ್ಣು, ಜೇಡಿ ಮಣ್ಣು ಹಾಗೂ ಕೆಲವು ಸ್ಥಳಗಳಲ್ಲಿ ಮೆಕ್ಕಲು ಮಣ್ಣು ಸಹ ಸಾಧಾರಣವಾಗಿ ಹಂಚಿಕೆಯಾಗಿದೆ. ಈ ಪ್ರದೇಶದ ದಕ್ಷಿಣ ಭಾಗದಲ್ಲಿ ತಾಳಬೆಟ್ಟ, ಮಹದೇಶ್ವರ ಬೆಟ್ಟ ಹಾಗೂ ಪೊನ್ನಾಚಿಗಳಲ್ಲಿ ಅರಣ್ಯ ಬೆಟ್ಟಗಳಿರುವುದನ್ನು ಸಹ ಕಾಣಬಹುದಾಗಿದೆ. ಈ ಮಣ್ಣಿನ ಹಂಚಿಕೆಯ ಆಧಾರದ ಮೇಲೆ ರಾಗಿ, ಜೋಳ, ಕಂಬು, ಭತ್ತ, ಹಾಗೂ ಕಬ್ಬು, ಅರಶಿನ ಮೊದಲಾದ ಬೆಳೆಗಳನ್ನು ಬೆಳೆಯಲಾಗುತ್ತಿದೆ.

ಸಸ್ಯವರ್ಗ: – ಕೊಳ್ಳೇಗಾಲ ಪ್ರದೇಶದ ದಕ್ಷಿಣ ಹಾಗೂ ಪೂರ್ವ ಭಾಗಗಳಲ್ಲಿ ದಟ್ಟವಾದ ಅರಣ್ಯ ಪ್ರದೇಶಗಳು ಸಸ್ಯವರ್ಗಗಳು ಕಂಡು ಬಂದಿದ್ದು ಇಲ್ಲಿನ ಪ್ರಮುಖ ಸಸ್ಯವರ್ಗಗಳಿವೆ.

1. ದಟ್ಟವಾದ ಸಸ್ಯವರ್ಗಗಳು
2. ಎಲೆ ಉದುರುವ ಕಾಡುಗಳು
3. ಕುರುಚಲ ಸಸ್ಯವರ್ಗಗಳು
4. ಇತರೆ ಸಸ್ಯವರ್ಗಗಳು

ಈ ಮೇಲಿನ ಹಲವಾರು ಸಸ್ಯವರ್ಗಗಳನ್ನು ಕಾಣಬಹುದಾಗಿದೆ. ಮುಖ್ಯವಾಗಿ ಈ ಸಸ್ಯವರ್ಗಗಳು ಸ್ವಾಭಾವಿಕವಾಗಿ ನಿರ್ಮಾಣಗೊಂಡಿದ್ದು ಮಹದೇಶ್ವರ ಬೆಟ್ಟ ಹಾಗೂ ಬಿಳಿಗಿರಿರಂಗನ ಬೆಟ್ಟ ಪ್ರದೇಶಗಳಲ್ಲಿ ದಟ್ಟವಾದ ಅರಣ್ಯ ಪ್ರದೇಶಗಳು ನಿರ್ಮಾಣವನ್ನು ಹೊಂದಿದೆ ಪ್ರದೇಶದಲ್ಲಿ 120.4ರಷ್ಟು ಹೆಕ್ಟರ್ ಪ್ರದೇಶಗಳಲ್ಲಿ ಈ ರೀತಿಯ ಅರಣ್ಯ ಪ್ರದೇಶಗಳು ಅಥವಾ ಸಸ್ಯವರ್ಗಗಳು ಹಂಚಿಕೆಯಾಗಿರುವುದನ್ನು ಕಾಣಬಹುದಾಗಿದೆ. ಈ ಪ್ರದೇಶದ ಕಾಡುಗಳಲ್ಲಿ ಪ್ರಮುಖವಾಗಿ ಹೊನ್ನೆ, ಬೀಟೆ, ಆಲ, ಶ್ರೀಗಂಧದ ಮರಗಳು ಬಿದಿರು, ತೇಗ, ಮುಂತಾದ ಕಾಡು ಜಾತಿಯ ಮರಗಳು ಹಂಚಿಕೆಯಾಗಿರುವುದನ್ನು ಕಾಣಬಹುದಾಗಿದೆ. ಹಲವಾರು ರೀತಿಯಲ್ಲಿ

ಉಪಯೋಗಿಸುತ್ತಿರುವುದನ್ನು ಗಮನಿಸಬಹುದಾಗಿದೆ. ಆನೆ, ಜಿಂಕೆ, ಕರಡಿ, ತೋಳ, ಮುಂತಾದ ಕಾಡು ಪ್ರಾಣಿಗಳಿಗೆ ಆಶ್ರಯದ ಸ್ಥಾನ-ಮಾನವನ್ನು ಕಲ್ಪಿಸಿಕೊಟ್ಟಿದೆ.[10]

ಪಶು ಪಾಲನೆ: – ಈ ಪ್ರದೇಶದ ಪಶು ಪಾಲನೆಯು ಪ್ರಮುಖವಾಗಿದೆ. ಪ್ರಮುಖವಾಗಿ ಈ ಪ್ರದೇಶಗಳಲ್ಲಿ ದನಗಳು, ಎಮ್ಮೆಗಳು, ಕುರಿಗಳು, ಆಡುಗಳು, ಕೋಳಿಗಳು, ಹಾಗೂ ಹಂದಿಗಳನ್ನು ಸಾಕುತ್ತಿರುವಂತಹ ಕ್ರಮಗಳನ್ನು ತಿಳಿದುಕೊಳ್ಳಬಹುದು. ಈ ಪ್ರದೇಶದ ಆರ್ಥಿಕ ಮಟ್ಟವು ಹೆಚ್ಚಳವಾಗಲು ಪ್ರಾಣಿಗಳ ಸಾಕಾಣಿಕೆಯು ಸಹ ಪೂರಕವಾಗಿದ್ದು ಇದು ಅಭಿವೃದ್ಧಿಯ ಹಂತವನ್ನು ಕಂಡುಕೊಂಡಿದೆ.

ಈ ಮೇಲಿನ ಸಂಖ್ಯೆಯ ಆಯಾಮ ಪ್ರಾಣಿಗಳ ಸಂಖ್ಯೆಗಳಾಗಿದ್ದು ಪ್ರಸ್ತುತದಲ್ಲಿ ಇತರ ಬೆಳವಣಿಗೆಯು ಮತ್ತಷ್ಟು ಉಲ್ಬಣಗೊಂಡಿದೆ.[11]

ಆರ್ಥಿಕ ಪರಿಸ್ಥಿತಿ: – ಇಲ್ಲಿನ ಆರ್ಥಿಕ ಪರಿಸ್ಥಿತಿಯು ಪ್ರಸ್ತುತದಲ್ಲಿ ಬಹಳಷ್ಟು ಸುಧಾರಣೆಯ ಹಂತವನ್ನು ಪಡೆದುಕೊಂಡಿದೆ. ಅದರೆ ಕೆಲವು ಕಡೆ ಆರ್ಥಿಕ ಪರಿಸ್ಥಿತಿಯು ಅಸ್ಥವ್ಯಸ್ತದಿಂದ ಕೂಡಿದುದಾಗಿದೆ. ಇಲ್ಲಿಯ ಮಳೆಯ ಪ್ರಮಾಣ ತೀರಾ ಕಡಿಮೆ ಇರುವುದರಿಂದ ಕೃಷಿಯಿಂದ ಬರುವಂತಹ ಆದಾಯವು ತುಂಬಾ ಕಡಿಮೆಯಾಗಿದೆ. ಪ್ರಸ್ತುತದಲ್ಲಿ ವ್ಯಾಪಾರ ಹಾಗೂ ವಾಣಿಜ್ಯದ ವ್ಯವಹಾರಗಳು ಅಭಿವೃದ್ಧಿಯನ್ನು ಸಾಧಿಸಿರುವುದರಿಂದಾಗಿ ಆರ್ಥಿಕ ಪರಿಸ್ಥಿತಿಯಲ್ಲಿ ಅಭಿವೃದ್ಧಿಯ ಹಂತಗಳನ್ನು ಹೊಂದಲು ಸಹಾಯಕವಾಗಿದೆ. ಈ ಪ್ರದೇಶದಲ್ಲಿ ರೈತರಿಗೆ ಸಾಲ ನೀಡಲು ಹಲವಾರು ಬ್ಯಾಂಕುಗಳು, ಸಹಕಾರಿ ಸಂಘ ಸಂಸ್ಥೆಗಳು ಸ್ಥಾಪನೆಯಾಗಿದ್ದು ಅಲ್ಪಾವಧಿ ಹಾಗೂ ಮಧ್ಯಮಾವಧಿ ಸಾಲವನ್ನು ನೀಡಲಾಗುತ್ತಿದೆ.

ಈ ಪ್ರದೇಶದಲ್ಲಿ ಮೈರಾಡ ಎಂಬ ಸ್ವಸಹಾಯ ಸಂಸ್ಥೆ ಸ್ಥಾಪನೆಯಾಗಿದ್ದು ಸ್ತ್ರೀಯರ ಕಲ್ಯಾಣ ಅಭಿವೃದ್ಧಿಗೆ ಹಾಗೂ ಅವರ ಆರ್ಥಿಕ ಬೆಳವಣಿಗೆಯು ಉತ್ತಮಗೊಳ್ಳಲು ಸಹಾಯ ಹಸ್ತವನ್ನು ನೀಡಿದೆ. ಈ ಸಂಸ್ಥೆಯ ಸ್ಥಾಪನೆಯಿಂದಾಗಿ ಹಲವಾರು ಸ್ತ್ರೀಯರು ಸ್ವಾವಲಂಬಿಯಾಗಲು ಅನುವು ಮಾಡಿಕೊಟ್ಟಿದ್ದು ಗೃಹಉದ್ಯಮಗಳಾದ ಹೊಲಿಗೆ ಯಂತ್ರಗಳ ಮೂಲ್ಕ ಹೊಲಿಗೆ ಕಾರ್ಯ ಅಂಗಡಿ ಮುಂಗಟ್ಟುಗ್ಗಳ ಸ್ಥಾಪನೆಗೆ ಮೈರಾಡ ಸಂಸ್ಥೆಯು ಸಹಾಯ ಧನಗಳು ಹಾಗೂ ಸಾಲ ಸೌಲಭ್ಯಗಳನ್ನು ನೀಡುವುದರ ಮೂಲಕ ಮಹಿಳೆಯರು ಉದ್ಯೋಗದಲ್ಲಿ ನಿರತರವಾಗಿ ಸ್ವಾವಲಂಬಿಯಾಗಲು ಪ್ರಮುಖ ಪಾತ್ರವನ್ನು ವಹಿಸಿದೆ. ಕೆಲವು ರೈತ ವರ್ಗದವರಿಗೆ

ಶ್ರೀಮಂತ ವರ್ಗದವರು ಸಾಲದ ಸೌಲಭ್ಯವನ್ನು ನೀಡಿ ಕೃಷಿ ಅಭಿವೃದ್ಧಿ ಪಡಿಸುವಲ್ಲಿ ಸಹಾಯಕವಾಗಿದ್ದು ಆರ್ಥಿಕವಾಗಿ ಕೆಲಮಟ್ಟಿಗೆ ಸುಧಾರಣೆಯನ್ನು ಪಡೆದು ಕೊಂಡಿದೆ.

ವ್ಯಾಪಾರ ಹಾಗೂ ವಾಣಿಜ್ಯದ ವ್ಯವಹಾರಗಳ ಬೆಳವಣಿಗೆಯು ಈ ಪ್ರದೇಶದ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಿ ಈ ಪ್ರದೇಶದ ಸುತ್ತಮುತ್ತಲ ಮೀಣ್ಯ, ಹೂಗ್ಯ, ಕೂಡಲೂರು, ಮಾರ್ಟಳ್ಳಿ, ಗರಿಕೆಕಂಡಿ, ಪ್ರದೇಶಗಳಲ್ಲಿ ಆರ್ಥಿಕ ಪರಿಸ್ಥಿತಿಯು ಹಿನ್ನೆಡೆಯನ್ನು ಹೊಂದಿದ್ದು ಅಭಿವೃದ್ಧಿಗೆ ಕೆಲವು ಮಾರ್ಗಗಳನ್ನು ತಿಳಿಯುವುದು ಅವಶ್ಯಕವಾಗಿದೆ.

ಆಮದುಗಳು: – ಪ್ರಸ್ತುತ ಕೊಳ್ಳೇಗಾಲ ತಾಲ್ಲೂಕು ಪ್ರದೇಶದಲ್ಲಿ ರೇಷ್ಮೆಯನ್ನು ತಯಾರಿಸುವ ಉದ್ದೇಶಗಳನ್ನು ಹೊಂದಿದ್ದು ರೇಷ್ಮೆಯ ಅಭಿವೃದ್ಧಿಗಾಗಿ ಮಹದೇಶ್ವರ ಬೆಟ್ಟ ಮುಂತಾದ ಭಾಗಗಳಿಂದ ರೇಷ್ಮೆ ನೂಲು ಹಾಗೂ ರೇಷ್ಮೆ ಗೂಡುಗಳನ್ನು ಆಮದು ಮಾಡಿಕೊಂಡು ಅಭಿವೃದ್ಧಿಯ ಹಂತಕ್ಕೆ ತಲುಪಲು ನೆರವಾಗಿದೆ.

ಇಲ್ಲಿ ಕೈಮಗ್ಗ ಹಾಗೂ ನೂಲುವ ನೇಯ್ಗೆಯ ಹಾಗೂ ಕಸೂತಿ, ಕುಸುರಿ ಕೆಲಸಗಳ ಅಭಿವೃದ್ಧಿ ಹೊಂದಿದ್ದು ಹಗ್ಗಗಳನ್ನು ಅತಿಯಾಗಿ ತಯಾರಿಸಲಾಗುತ್ತಿದೆ. ಇದರಿಂದ ಕೆಲವು ಪ್ರದೇಶಗಳು ಹಾಗೂ ಹಳ್ಳಿಗಳಿಗೆ ಹಗ್ಗವನ್ನು ರಫ್ತು ಮಾಡಲಾಗುತ್ತದೆ. ಇದರಿಂದ ಕೆಲವು ಪ್ರದೇಶಗಳು ಹಾಗೂ ಕೆಲವು ಕೈಗಾರಿಕೆಗಳು ರಾಜಕೀಯ ಸಂಸ್ಥೆಗಳು ಸ್ಥಾಪನೆಯಾಗಿರುವ ಕಾರಣದಿಂದ ಈ ಪ್ರದೇಶವನ್ನು ತಾಲ್ಲೂಕು ಪ್ರದೇಶವನ್ನಾಗಿ ಮಾಡಬೇಕೆಂದು ಪ್ರಸ್ತುತ ವಿಚಾರದಲ್ಲಿ ತಿಳಿಸಲಾಗಿದ್ದು ಕೆಲವು ಬೇಡಿಕೆಗಳನ್ನು ಸಲ್ಲಿಸಲಾಗಿದೆ ಎಂಬಂತಹ ವಿಚಾರಗಳು ತಿಳಿದುಬರುತ್ತದೆ.

ಅನುಕೂಲತೆಗಳು:– ಕೊಳ್ಳೇಗಾಲ ತಾಲ್ಲೂಕು ಕೆಲವು ಪ್ರದೇಶಗಳಲ್ಲಿ ಅನುಕೂಲತೆಗಳು ಕಂಡುಬರುತ್ತದೆ. ಈ ಪಟ್ಟಣದಲ್ಲಿ ಸ್ಥೂಲ ಚಿತ್ರಣವನ್ನು ಗಮನಿಸಿದಾಗ ಈ ಪ್ರದೇಶದಲ್ಲಿ ಹಲವಾರು ಅನುಕೂಲಗಳು ಕಂಡು ಬಂದಿರುವುದನ್ನು ಗಮನಿಸಬಹುದು.

1. ನಗರ ಪ್ರದೇಶ ಅಥವಾ ಪಟ್ಟಣ ಪಂಚಾಯಿತಿ ಪ್ರದೇಶಗಳಲ್ಲಿ ಮತ್ತು ಹೋಬಳಿ ಪ್ರದೇಶಗಳಲ್ಲಿ ಆರ್ಥಿಕ ಮಟ್ಟ ವ್ಯವಸ್ಥಿತವಾಗಿದ್ದು ಹಲವಾರು ಶಿಕ್ಷಣ ಕೇಂದ್ರಗಳನ್ನು ಒಳಗೊಂಡಿದ್ದು ನಾಗರೀಕತೆ ಬೆಳೆಯಲು ಪೂರಕವಾಗಿದೆ.

2. ಪ್ರಸ್ತುತದಲ್ಲಿ ಜನತೆ ನಾಗರಿಕತೆಯನ್ನು ಹೊಂದಿದ್ದು ನೈರ್ಮಲೀಕರಣ ಹಾಗೂ ಸ್ವಚ್ಛತೆಯನ್ನು ಕಾಪಾಡಿಕೊಂಡು ಬರುತ್ತಿದ್ದಾರೆ.

3. ಇಲ್ಲಿ ಬಹುಪಾಲು ಮಹಿಳೆಯರಿಗೆ ಸಂಬಂಧಿಸಿದ ಸಹಕಾರಿ ಸಂಘಸಂಸ್ಥೆಗಳು ತೆರೆದಿದ್ದು ಅವರು ಉದ್ಯೋಗದಲ್ಲಿ ತೊಡಗಲು ಸಹಾಯಕವಾಗಿದೆ.

4. ಇಂದು ಕೆಲವು ಕಡೆ ಉನ್ನತ ವ್ಯಾಸಂಗದ ಕಾಲೇಜು ಶಿಕ್ಷಣ ಸಂಸ್ಥೆಗಳು ತೆರೆದಿದ್ದು ಇದರಿಂದ ಅಯಾ ಪ್ರದೇಶದ ವಿದ್ಯಾರ್ಥಿಗಳಿಗೆ ಅನುಕೂಲವಾಗಿದೆ.

5. ಕೆಲವು ಪಶು ಸಂಗೋಪನೆ ಉತ್ತಮವಾಗಿದ್ದು ಪಶು ಚಿಕಿತ್ಸಾಲಯ ಹಾಗೂ ಪ್ರಾಥಮಿಕ ಚಿಕಿತ್ಸಾಲಯ ಕೇಂದ್ರಗಳು ಸ್ಥಾಪನೆಯಾಗಿದ್ದು ಈಗ ಇನ್ನೂ ಕೆಲವು ಪ್ರದೇಶಗಳಲ್ಲಿ ಹಲವಾರು ಆಸ್ಪತ್ರೆ ಕೇಂದ್ರಗಳು ನಿರ್ಮಾಣದ ಹಂತದಲ್ಲಿದೆ.

6. ಸಾರಿಗೆ ಅಂಚೆ ಕಛೇರಿಗಳು ತಂತಿ ವ್ಯವಸ್ಥೆ ಟೆಲಿಫೋನ್ ವ್ಯವಸ್ಥೆಗಳು ಸಾಕಷ್ಟು ಅಭಿವೃದ್ಧಿಯ ಹಂತವನ್ನು ಪಡೆದುಕೊಂಡಿದೆ.

7. ಕೆಲವು ರಕ್ಷಣಾ ದೃಷ್ಟಿಯಿಂದ ಪೋಲಿಸ್ ವ್ಯವಸ್ಥೆಗಳನ್ನು ಕೊಳ್ಳೇಗಾಲ ತಾಲ್ಲೂಕು ಸಹ ಒಳಗೊಂಡಿದೆ ಎಂದು ಹೇಳಬಹುದು.

ಅನಾನುಕೂಲಗಳು: – ಕೊಳ್ಳೇಗಾಲ ತಾಲ್ಲೂಕು ಪ್ರದೇಶ ಕೆಲವು ಭಾಗಗಳಲ್ಲಿ ಅನಾನುಕೂಲತೆಗಳನ್ನು ಸಹ ಕಾಣಬಹುದಾಗಿದೆ.

1. ಇಲ್ಲಿನ ರಸ್ತೆ ಮಾರ್ಗಗಳು ದುರಸ್ಥಿಯಾಗದಿರುವುದು ಇದರ ದೋಷವಾಗಿದೆ.

2. ಬಸ್ ನಿಲ್ದಾಣಗಳನ್ನು ಸೂಕ್ತ ಸ್ಥಳಗಳಲ್ಲಿ ನಿರ್ಮಿಸದ ಕಾರಣ ಜನತೆಗೆ ತುಂಬಾ ತೊಂದರೆಯಾಗಿರುವುದು ಇಲ್ಲಿನ ಅನಾನುಕೂಲ ಪರಿಸ್ಥಿತಿಯಾಗಿದೆ.

3. ಕೆಲವು ಸರ್ಕಾರಿ ಆಸ್ಪತ್ರೆಗಳಲ್ಲಿ ವೈದ್ಯರ ಕೊರತೆಯಿದ್ದು ಆರೋಗ್ಯದ ವ್ಯವಸ್ಥೆಯು ಸ್ವಲ್ಪ ಮಟ್ಟಿಗೆ ಸುಧಾರಿಸಬೇಕಾಗಿದೆ.

ಈ ಎಲ್ಲಾ ಆಧಾರಗಳ ಹಿನ್ನೆಲೆಯಿಂದ ಭೌಗೋಳಿಕ ಹಿನ್ನೆಲೆಯನ್ನು ನೋಡಿದಾಗ ಹಲವಾರು ಸಮಸ್ಯೆಗಳನ್ನು ಕಾಣಬಹುದಾಗಿದೆ. ಕೊಳ್ಳೇಗಾಲ ತಾಲ್ಲೂಕಿನ ಭೌಗೋಳಿಕ ಸ್ಥೂಲ ಚಿತ್ರಣದ ಅಂಶಗಳನ್ನು ಗಮನಿಸಿ ಕೊನೆಯ ಹಂತದಲ್ಲಿ ಅವುಗಳ ಗುಣ, ದೋಷಗಳನ್ನು ತಿಳಿಸಿ ಭೌಗೋಳಿಕ ಹಿನ್ನೆಲೆಯನ್ನು ನಿರೂಪಿಸಲಾಗಿದೆ.[12],[13],[14],[15]

ಅಡಿ ಟಿಪ್ಪಣಿಗಳು

---

[1] ಮೈಸೂರು ಸ್ಟೇಟ್ ಗೆಜೆಟಿಯರ್, ಮೈಸೂರು ಡಿಸ್ಟ್ರಿಕ್

[2] ಕನ್ನಡ ವಿಷಯ ವಿಶ್ವಕೋಶ. ವೈ.ವಿ.ವಿ. ಪುಟ – 414

[3] ಕರ್ನಾಟಕದ ಭೌಗೋಳಿಕ ನಕ್ಷೆಯ ಆಧಾರದ ಉಲ್ಲೇಖ

[4] ತಾಲ್ಲೂಕು ಕಛೇರಿಯ ದಾಖಲೆಗಳ ಆಧಾರದಿಂದ

[5] ಕನ್ನಡ ವಿಷಯ ವಿಶ್ವಕೋಶ, ಮೈಸೂರು. ವಿ. ವಿ. ಪುಟ – 414

[6] ಮೈಸೂರು ಸ್ಟೇಟ್ ಗೆಜೆಟಿಯರ್, ಮೈಸೂರು ಡಿಸ್ಟ್ರಿಕ್

[7] ಅದೇ

[8] 1999-2000 ವರ್ಷಗಳ ಅಂಕಿ ಅಂಶಗಳ ಪ್ರಕಾರ

[9] ಕಬಿನಿ ಇಲಾಖೆಯ ವರದಿಯ ಪ್ರಕಾರ

[10] ಮೈಸೂರು ಸ್ಟೇಟ್ ಗೆಜೆಟಿಯರ್, ಮೈಸೂರು ಡಿಸ್ಟ್ರಿಕ್

[11] 1997-98ರ ಚಾಮರಾಜನಗರ ಜಿಲ್ಲಾ ಅಂಕಿ ಅಂಶಗಳ ನೋಟ

[12] ಕನ್ನಡದ ವಿಶ್ವ ವಿಷಯಕೋಶ ಮೈಸೂರು. ವಿ.ವಿ.ಮೈಸೂರು, ಕೊಳ್ಳೇಗಾಲದ ವರದಿ.

[13] 1991ರ ಜನಗಣತಿ ಆಧಾರದ ಹೇಳಿಕೆ.

[14] 1997-1998ರ ಚಾಮರಾಜನಗರ ಜಿಲ್ಲಾ ಅಂಕಿ ಅಂಶಗಳ ನೋಟ.

[15] ಭಾರತ, ಕರ್ನಾಟಕ, ಪ್ರಾದೇಶಿಕ ಭೂಗೋಳ ಶಾಸ್ತ್ರ ನಕ್ಷೆಯ ಆಧಾರದಿಂದ

1.3 ಕೊಳ್ಳೇಗಾಲ ತಾಲ್ಲೂಕಿನ ರಾಜಕೀಯ ಚರಿತ್ರೆ

ಪ್ರಸ್ತುತ ಅಧ್ಯಯನಕ್ಕೆ ಪೂರಕವಾಗಿ ಚಾಮರಾಜನಗರ ಜಿಲ್ಲೆ ಕೊಳ್ಳೇಗಾಲದ ರಾಜಕೀಯ ತಲಕಾಡಿನ ಗಂಗರ ಕಾಲದಿಂದ ಪ್ರಾರಂಭವಾಗುತ್ತದೆ. ಕೊಳ್ಳೇಗಾಲ ಪ್ರಾಂತ್ಯದಲ್ಲಿ ಗಂಗದೊರೆ ಶ್ರೀಪುರುಷನ ನಂತರ ಆಳ್ವಿಕೆ ನಡೆಸಿದ ನೀತಿಮಾರ್ಗ ಪೆರ್ಮಾನಡಿ ನಂತರ ಈಭಾಗದ ರಾಜಕೀಯ ಪ್ರಾರಂಭವಾಗುತ್ತದೆ.[1] ಮಹಿಷಮಂಡಲ ಪ್ರಾಂತ್ಯವಾದ ಚಾಮರಾಜನಗರ ಕೊಳ್ಳೇಗಾಲ ದಕ್ಷಿಣ ಕರ್ನಾಟಕದ ಆಗ್ನೇಯ ಭಾಗದ ಕೊನೆಯ ಭಾಗ ಪ್ರಮುಖವಾಗಿ ಚಾಮರಾಜನಗರ ಜಿಲ್ಲೆಗೆ ಮೈಸೂರು, ಮಂಡ್ಯ, ಬೆಂಗಳೂರು, ತಮಿಳುನಾಡು ಸುತ್ತುವರಿದಿದೆ ಇವು ಸಾಂಸ್ಕೃತಿಕವಾಗಿ ಸಂಪದ್ಭರಿತವಾದ ಭೂಭಾಗಗಳು ಪ್ರಸ್ತುತ ಅಧ್ಯಯನಕ್ಕೆ ಅನುಸರಿಸಿಕೊಂಡಿದ್ದರೂ ಈ ಪ್ರದೇಶಕ್ಕೆ ಹೆಚ್ಚಿನ ಸಾಂಸ್ಕೃತಿಕ ಸಂಬಂಧಗಳು ಇದ್ದು ಕೇವಲ ಉತ್ತರಭಾಗದಿಂದ ಮಾತ್ರ ಕಾರಣವೇನೆಂದರೆ ನೈರುತ್ಯ, ದಕ್ಷಿಣ ಮತ್ತು ಆಗ್ನೇಯದ ಭಾಗಗಳು ದಟ್ಟವಾದ ಅರಣ್ಯ ಮತ್ತು ಬೆಟ್ಟಗುಡ್ಡಗಳಿಂದ ಕೂಡಿರುವುದರಿಂದ ದಕ್ಷಿಣ ಕರ್ನಾಟಕದ ಈ ತುದಿಯ ಭಾಗಕ್ಕೆ ಈ ಮೂರು ದಿಕ್ಕುಗಳಿಂದ ಶತ್ರುವಿನ ಕಾಟ ಇರಲಿಲ್ಲ ಹೀಗಾಗಿ ಕೊಳ್ಳೇಗಾಲ ಭಾಗಕ್ಕೆ ಸಾಂಸ್ಕೃತಿಕ ಸಂಪರ್ಕಗಳು, ವ್ಯವಹಾರ, ವಹಿವಾಟುಗಳು ಪ್ರಧಾನವಾಗಿ ಉತ್ತರ ಭಾಗಗಳಿಂದಲೇ ನಡೆಯುತ್ತಿತ್ತು. ಈ ಒಂದು ವಿಚಾರದಲ್ಲಿ ದಕ್ಷಿಣ ಕರ್ನಾಟಕ ಸುಭದ್ರವಾಗಿದ್ದರೂ ಸಾಂಸ್ಕೃತಿಕವಾಗಿ ಇದು ಕೆಲವು ಶತಮಾನಗಳ ಕಾಲ ಅಡಚಣೆಗಳಿಗೂ ಕಾರಣವಾಯಿತು. ಯಾವುದೇ ಒಂದು ಸಾಂಸ್ಕೃತಿಕ ಸಂಬಂಧ ವ್ಯಾಪಾರ ಸಂಬಂಧ ಕೇವಲ ಉತ್ತರದಿಂದಲೇ ನಡೆಯಬೇಕಾಗಿರುವುದರಿಂದ ಚಾಮರಾಜನಗರ ಜಿಲ್ಲೆ ಕರ್ನಾಟಕದ ಕೊನೆಯ ಭಾಗವಾಗಿರುವುದರಿಂದ ರಾಜಕೀಯವಾಗಿ ಈ ಭಾಗವು ಪ್ರಬಲ ರಾಜಕೀಯ ಶಕ್ತಿಗಳು ಅಂದರೆ ಚಾಲುಕ್ಯ, ರಾಷ್ಟ್ರಕೂಟ ಮುಂತಾದವರ ಪ್ರಭಾವದಿಂದ ಸ್ವಲ್ಪ ಅಂತರದಲ್ಲಿಯೇ ಉಳಿಯಬೇಕಾಯಿತು. ಈ ಕಾರಣದಿಂದಾಗಿ ದಕ್ಷಿಣ ಕರ್ನಾಟಕದ ದಕ್ಷಿಣ ಭಾಗವು ಸಣ್ಣ ಪುಟ್ಟ ರಾಜಕೀಯ ಬಣ್ಣಗಳ ಕೇಂದ್ರ ಸ್ಥಾನವಾಯಿತು. ಹೀಗಾಗಿ ಪ್ರಾಕೃತಿಕವಾಗಿ ಸಂರಕ್ಷಿಸಲ್ಪಟ್ಟ ದಕ್ಷಿಣ ಕರ್ನಾಟಕದ ತಲಕಾಡು ಗಂಗರ ಕಾಲಕ್ಕೆ ಸುಭದ್ರವಾದ ನಾಡಾಗಿ ಬೆಳೆಯಿತು.

ಚಾಮರಾಜನಗರ ಜಿಲ್ಲೆಯ ಕೆಲವು ಭಾಗಗಳಲ್ಲಿ ಶಿಲಾಯುಗದ ಕಾಲದಿಂದಲೂ ಜನವಸತಿ ಇತ್ತು ಎಂಬುದಕ್ಕೆ ಸಾಕಷ್ಟು ಪ್ರಾಕ್ತನ ಆಧಾರಗಳು ದೊರೆತಿವೆ.[2]

ಶಿಲಾಯುಗದ ನಂತರ ತಾಮ್ರಯುಗ, ಬೃಹತ್ ಶಿಲಾಯುಗ, ಆದಿಚಾರಿತ್ರಿಕ ಯುಗಗಳು ಈ ಭಾಗದಲ್ಲಿ ವಿಕಸಿತಗೊಂಡು ಪ್ರವರ್ಧಮಾನವಾಗಿ ಸಾಂಸ್ಕೃತಿಕ ನೆಲೆಗಳನ್ನು ಹೊಂದಿದ್ದವು.

ಚಾರಿತ್ರಿಕಯುಗ ಈ ಭಾಗಗಳಲ್ಲಿ ಪ್ರಕಟವಾಗುತ್ತಿದ್ದು ಕೇವಲ ಗಂಗರ ಕಾಲದಿಂದ ತಿ.ನರಸೀಪುರ ತಾಲ್ಲೂಕು ಉತ್ಖನ್ನಗಳಿಂದ ಕಾವೇರಿ ನದಿಯ ಉತ್ತರ ದಂಡೆಯ ಮೇಲೆ ಸಮೃದ್ಧವಾದ ಸಾಂಸ್ಕೃತಿಕ ನೆಲೆಗಳು ಬೆಳಕಿಗೆ ಬಂದಿವೆ.[3] ತಲಕಾಡಿನ ಉತ್ಖನನದಲ್ಲಿ ಉತ್ತರ ಕರ್ನಾಟಕದಲ್ಲಿ ಆದಿಚಾರಿತ್ರಿಕ ಕಾಲಕ್ಕೆ ಸಂಬಂಧಿಸಿದ ಮಡಿಕೆ, ಕುಡಿಕೆಗಳು ದೊರೆಯುವ ರೀತಿಯಲ್ಲೇ ತಲಕಾಡಿನಲ್ಲೂ ಸಹ ದೊರೆತಿದೆ. ಇದರಿಂದಾಗಿ ಸಾಂಸ್ಕೃತಿಕವಾಗಿ ಉತ್ತರ ಮತ್ತು ದಕ್ಷಿಣ ಕರ್ನಾಟಕದ ಸಂಸ್ಕೃತಿಯಲ್ಲಿ ಹೆಚ್ಚು ಭೇದಭಾವವಿರಲಿಲ್ಲ ಎಂಬುದು ತಿಳಿದುಬರುತ್ತದೆ. ಚಾಮರಾಜನಗರ ಜಿಲ್ಲೆಯ ಭಾಗದಲ್ಲಿ ಯಾವುದೇ ರಾಜಕೀಯ ಶಕ್ತಿ ಈ ಸ್ಥಳವನ್ನು ಆಳುತ್ತಿತ್ತು ಎಂಬುದಕ್ಕೆ ಆಧಾರಗಳು ದೊರೆತಿಲ್ಲ ಈ ಕಾಲಕ್ಕೆ ಉತ್ತರ ಕರ್ನಾಟಕದಲ್ಲಿ ಶಾತವಾಹನರ ಮತ್ತು ಅವರ ಸಾಮಂತರ ನಾಣ್ಯಗಳು ದೊರೆತರೆ ಅದೇ ಕಾಲಕ್ಕೆ ಸೇರಿದ ರೋಮನ್ ನಾಣ್ಯದ ಮುದ್ರೆಯೊಂದು ಕುಲುಮೆಯ ಬಳಿ ಇದ್ದದ್ದು ತಲಕಾಡಿನ ಉತ್ಖನನದಿಂದ ತಿಳಿದುಬರುತ್ತದೆ.[4] ಈ ಹಿನ್ನೆಲೆಯಿಂದ ಶಾತವಾಹನರ ನಾಣ್ಯಕ್ಕೆ ಬದಲಾಗಿ ಆದಿಚಾರಿತ್ರಿಕ ಕಾಲದಲ್ಲಿ ಚಾಮರಾಜನಗರ ಜಿಲ್ಲೆಯ ಭಾಗಗಳಲ್ಲಿ ರೋಮನ್‌ನಾಣ್ಯಗಳು ಬಳಕೆಯಲ್ಲಿದ್ದಿರಬೇಕು. ಈ ಕಾಲದಲ್ಲಿ ರೋಮನ್ ನಾಣ್ಯಗಳು ಹೆಚ್ಚು-ಹೆಚ್ಚು ಸಂಖ್ಯೆಯಲ್ಲಿ ಬಳಕೆಯಲ್ಲಿದ್ದುದು ಕಂಡು ಬಂದಿರುವುದು ತಮಿಳುನಾಡಿನಲ್ಲಿ. ತಮಿಳುನಾಡು, ಕೇರಳ ಮತ್ತು ಕರ್ನಾಟಕದ ಸಂಗಮ ಸ್ಥಾನವಾದ ಕರೂರು ಊರಿನಲ್ಲಿ ಸಹಸ್ರಾರು ಸಂಖ್ಯೆಯಲ್ಲಿ ರೋಮನ್ ನಾಣ್ಯಗಳು ದೊರೆತಿರುವುದಕ್ಕೆ ದಾಖಲೆಗಳಿವೆ ಇದರಿಂದಾಗಿ ಇದೇ ನಾಣ್ಯಗಳು ದಕ್ಷಿಣ ಕರ್ನಾಟಕದ ದಕ್ಷಿಣ ಭಾಗದಲ್ಲಿ ಬಳಕೆಯಲ್ಲಿದ್ದಿರಬಹುದೆಂದು ಊಹಿಸಬಹುದು. ಈ ರೀತಿ ಸಾಂಸ್ಕೃತಿಕವಾಗಿ ಸಂಪದ್ಭರಿತವಾಗಿ, ರಾಜಕೀಯವಾಗಿ, ಪ್ರಖ್ಯಾತಿ ಇಲ್ಲದಿದ್ದರೂ ದೂರದ ಒಂದು ಅನಿರ್ಧಾರಿತ ಆಡಳಿತ ಶಕ್ತಿಯಿಂದ ನಿಯಂತ್ರಿಸಲ್ಪಡುತ್ತಿದ್ದ ಈ ಭಾಗವು ಇದೇ ಸ್ಥಿತಿಯಲ್ಲಿ ಸುಮಾರು ಕ್ರಿ.ಶ 5ನೇ ಶತಮಾನದವರೆಗೆ ಮುಂದುವರೆದಂತೆ ಕಾಣುತ್ತದೆ. ಈ ಪ್ರದೇಶಕ್ಕೆ ಸಂಬಂಧಪಟ್ಟ ಉಲ್ಲೇಖವಿರುವ ಪ್ರಪ್ರಥಮವಾದ ಶಾಸನವೆಂದರೆ ಮಡಿಕೇರಿಯ ತಾಮ್ರಶಾಸನ.[5] ಈ ತಾಮ್ರಪಟದಲ್ಲಿ ಗಂಗ ಅವಿನೀತನ ಕಾಲದಲ್ಲಿ ತಲಕಾಡಿನಲ್ಲಿ ಇದ್ದ ಬಸದಿಯೊಂದಕ್ಕೆ ದಾನ ನೀಡಿದ ವಿವರವಿದೆ ಇದಾದ ನಂತರ ಕ್ರಿ.ಶ 7-8ನೇ ಶತಮಾನದ ಗಂಗ ಶ್ರೀಪುರುಷನ ಶಾಸನಗಳು ಮೈಸೂರು ಚಾಮರಾಜನಗರ ಜಿಲ್ಲೆಗಳಲ್ಲಿ ದೊರೆತಿವೆ.[6] ಆದ್ದರಿಂದ ಗಂಗರು ತಲಕಾಡು ಪಟ್ಟಣವನ್ನು ಕ್ರಿ.ಶ. 4-5ನೇಯ ಶತಮಾನಗಳಿಂದಲೇ ಆಳುತ್ತಿದ್ದಿರಬೇಕು. ಕ್ರಮೇಣ ಕ್ರಿ.ಶ. 8ನೇಯ ಶತಮಾನದಲ್ಲಿ ರಾಜಕೀಯ ಉದ್ದೇಶಗಳಿಗಾಗಿ ತಲಕಾಡನ್ನು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡಿರಬೇಕು. ತಲಕಾಡಿನ ಗಂಗರು ರಾಜಕೀಯ ಪ್ರಾಬಲ್ಯವನ್ನು ಪಡೆದ ಮೇಲೆ ದಕ್ಷಿಣ ಕರ್ನಾಟಕದ ರಾಜಕೀಯ

ಇತಿಹಾಸವು ಬದಲಾದಂತೆ ತೋರುತ್ತದೆ. ಸಾಂಸ್ಕೃತಿಕವಾಗಿ, ಧಾರ್ಮಿಕವಾಗಿಯೂ ಈ ಸ್ಥಳ ಪ್ರವರ್ಧಮಾನಕ್ಕೆ ಬಂದಿತು. ಜೈನ ನೆಲೆಗಳು, ಜೈನ ಬಸದಿಗಳು ಮುಂತಾದವು ಸಾಕಷ್ಟು ಸಂಖ್ಯೆಯಲ್ಲಿ ನಿರ್ಮಾಣಗೊಂಡವು. ತಲಕಾಡಿನ ಜೈನ ಬಸದಿ, ಕೊಳ್ಳೇಗಾಲದ ಬಳಿಯಿರುವ ಬಸ್ತೀಪುರದ ಅವಶೇಷಗಳು ಈ ಅಂಶವನ್ನು ರುಜುವಾತುಪಡಿಸುತ್ತವೆ. ಗಂಗರು ಕೋಲಾರದಿಂದ ತಮ್ಮ ರಾಜಧಾನಿಯನ್ನು ರಾಜಕೀಯ ಉದ್ದೇಶಗಳಿಂದ ತಲಕಾಡಿಗೆ ಬದಲಾಯಿಸಿಕೊಂಡ ವಿಚಾರ ಸರ್ವವಿಧಿತ ಕ್ರಿ.ಶ. 9ನೇಯ ಶತಮಾನದ ಮಧ್ಯಭಾಗದಲ್ಲಿ ಈ ಬದಲಾವಣೆ ನಡೆದಿರಬೇಕು. ತದನಂತರ ದಕ್ಷಿಣ ಕರ್ನಾಟಕದ ಹಾಗೂ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳು ರಾಜಕೀಯವಾಗಿ ಬೆಳೆಯಿತು. ಆದರೆ ಕೊಳ್ಳೇಗಾಲದಲ್ಲಿ ತಲಕಾಡಿನ ರಾಜಕೀಯ ಬೆಳವಣಿಗೆಯಾದರೂ ಇವರ ಶಾಸನ ಮಾತ್ರ ಹೆಚ್ಚಾಗಿ ಕಂಡುಬಂದಿಲ್ಲ. ತದನಂತರ ತಂಜಾವೂರಿನ ಚೋಳರು ದಕ್ಷಿಣ ಕರ್ನಾಟಕದ ಭಾಗಗಳನ್ನು ಆಕ್ರಮಿಸಿಕೊಂಡರು ಕ್ರಿ.ಶ. 10ನೆಯ ಶತಮಾನದ ಮಧ್ಯಭಾಗದಲ್ಲಿ ರಾಷ್ಟ್ರಕೂಟ ವಂಶದ ಮೂರನೆ ಕೃಷ್ಣನು ಇಡೀ ದಕ್ಷಿಣ ಭಾರತದಲ್ಲೇ ಅತ್ಯಂತ ಪ್ರಬಲವಾದ ಸಾರ್ವಭೌಮನಾಗಿದ್ದನು.[7] ಈತನ ರಾಜ್ಯ ಮಧ್ಯ ಪ್ರದೇಶದ "ಜೂರಾ" ಎಂಬ ಪ್ರದೇಶದಿಂದ ಹಿಡಿದು ದಕ್ಷಿಣದಲ್ಲಿ ರಾಮೇಶ್ವರದವರೆಗೂ ಬೆಳೆದಿತ್ತು. ಕ್ರಿ.ಶ. 949ರಲ್ಲಿ ತಕ್ಕೋಲಂ ಕದನದಲ್ಲಿ ರಾಷ್ಟ್ರಕೂಟ ಕೃಷ್ಣನು ಒಂದನೇ ಪರಾಂತಕನನ್ನು ಸೋಲಿಸಿ ಆತನ ಮಗ ರಾಜಾದಿತ್ಯನನ್ನು ಭೀಕರ ಯುದ್ಧದಲ್ಲಿ ಕೊಂದನು. ನಂತರ ರಾಮೇಶ್ವರದ ತನಕ ಈತನ ಸೈನ್ಯವನ್ನು ತೆಗೆದುಕೊಂಡು ಹೋಗಿ ಅಲ್ಲಿ ವಿಜಯಸ್ತಂಭವನ್ನು ಸ್ಥಾಪಿಸಿದನೆಂದು ರಾಷ್ಟ್ರಕೂಟ ಶಾಸನದಲ್ಲಿ ಕಂಡುಬರುತ್ತದೆ.[8] ರಾಷ್ಟ್ರಕೂಟರ ಈ ಜಯದಿಂದಾಗಿ ಚೋಳರ ರಾಜಕೀಯ ಶಕ್ತಿ ಕ್ಷೀಣವಾಯಿತು. ರಾಷ್ಟ್ರಕೂಟ ಕೃಷ್ಣನಿಗೆ ಚೋಳರ ಮೇಲಿನ ದಂಡೆಯಾತ್ರೆಗೆ ದಕ್ಷಿಣ ಕರ್ನಾಟಕದ ಗಂಗವಾಡಿ ತೊಂಬತ್ತಾರುಸಾವಿರ ಪ್ರಾಂತ್ಯವನ್ನು ಆಳುತ್ತಿದ್ದ ಎರಡನೆಯ ಗಂಗಭೂತಗನು ಬಲಗೈ ಬಂಟನಂತೆ ಸಹಾಯ ಮಾಡಿದನು. ಇದರಿಂದ ಸುಪ್ರೀತಗೊಂಡ ರಾಷ್ಟ್ರಕೂಟ ಕೃಷ್ಣನು ಗಂಗಬೂತುಗನಿಗೆ ಬನವಾಸಿ ಹನ್ನೆರಡು ಸಾವಿರ ಪ್ರಾಂತ್ಯವನ್ನು ಬಳುವಳಿಯನ್ನಾಗಿ ಕೊಟ್ಟನೆಂದು ತಿಳಿದು ಬರುತ್ತದೆ. ಕ್ರಿ.ಶ. 10ನೇ ಶತಮಾನದ ಮಧ್ಯಭಾಗ ಕರ್ನಾಟಕದ ರಾಜಕೀಯ ಬಣಗಳ ಪರ್ವಕಾಲ ಇಡೀ ದಕ್ಷಿಣ ಭಾರತದಲ್ಲೇ ರಾಷ್ಟ್ರಕೂಟರು ಮತ್ತು ಅವರ ಸಾಮಂತರಾದ ತಲಕಾಡಿನ ಗಂಗರು ಪ್ರಬಲರಾಗಿ ಮೆರೆದರು. ಕ್ರಿ.ಶ. 966ರಲ್ಲಿ ರಾಷ್ಟ್ರಕೂಟ ಮೂರನೇ ಕೃಷ್ಣನು ದೈವಾಧೀನನಾದನು. ತದನಂತರ ಬಂದಂತಹ ಕೊಟ್ಟಿಗ, ಕರ್ಕ ಮುಂತಾದವರು ಪ್ರಬಲರಾದ ದೊರೆಗಳಾಗಿರಲಿಲ್ಲ. ಇದೇ ಸಮಯಕ್ಕೆ ಹೆಚ್ಚು ಕಡಿಮೆ ಗಂಗವಾಡಿಯಲ್ಲಿ ಗಂಗ ಬೂತಗನು ಸಹ ಮರಣ ಹೊಂದಿ ಆತನ ಮಗ ಎರಡನೇ

ಮಾರಸಿಂಹನು ಪಟ್ಟಕ್ಕೆ ಬಂದಿದ್ದನು. ಎರಡನೇ ಮಾರಸಿಂಹ ರಾಷ್ಟ್ರಕೂಟ ವಂಶದ ಪ್ರಬಲಮಿತ್ರ ಈತನು ರಾಷ್ಟ್ರಕೂಟ ದೊರೆಗಳಿಗೆ ಸಹಾಯಕನಾಗಿ ನಿಂತು ರಾಷ್ಟ್ರಕೂಟ ಅವನತಿಯನ್ನು ಸಾಕಷ್ಟು ಕಾಲ ತಡೆದನು.

ಗಂಗ ಮಾರಸಿಂಹನಿಗೆ ಅವರ ರಾಜ್ಯದ ಮಗ್ಗುಲಲ್ಲೇ ಆಳುತ್ತಿದ್ದ ನೊಳಂಬರ ಬಗ್ಗೆ ದ್ವೇಷವಿತ್ತು. ನೊಳಂಬರು ಸಹ ರಾಷ್ಟ್ರಕೂಟ ಕೃಷ್ಣನ ಸಾಮಂತರಾಗಿ ಆತನಿಗೆ ಚೋಳನಾಡಿನ ಆಕ್ರಮಣದಲ್ಲಿ ಸಹಾಯವೆಸಗಿ ರಾಷ್ಟ್ರಕೂಟ ಕೃಷ್ಣನ ಕೃಪೆಯಿಂದ ತಮ್ಮ ರಾಜ್ಯವನ್ನು ವಿಸ್ತರಿಸಿಕೊಂಡು ಸಾಕಷ್ಟು ಪ್ರಬಲರಾಗಿದ್ದರು ತಲಕಾಡು ಗಂಗರ ಇತಿಹಾಸದಲ್ಲಿ ಅತ್ಯಂತ ಶ್ರೇಷ್ಠವಾದ ಕಾಲ ಮಾರಸಿಂಹ ಪ್ರಬಲ ದಂಡನಾಯಕ ಚಾವುಂಡರಾಯ, ಈತನು ಮಹಾ ಜೈನ ಧರ್ಮ ಅನುಯಾಯಿ. ಈತನ ಧರ್ಮ ನಿಷ್ಠೆಯಿಂದಾಗಿ ಶ್ರವಣ-ಬೆಳಗೊಳದ ಮೇಲಿರುವ ವಿಶ್ವವಿಖ್ಯಾತವಾದ ಬೃಹತ್ ಗೊಮ್ಮಟೇಶ್ವರಮೂರ್ತಿಯು ನಿರ್ಮಾಣವಾಯಿತು. ಗಂಗರಾಜ್ಯದಲ್ಲಿ ಪಂಪ ಮುಂತಾದ ಅನೇಕ ಶ್ರೇಷ್ಠ ಕವಿಗಳು ಈ ಕಾಲದಲ್ಲಿ ಬಾಳಿ ಬದುಕಿದರು. ಕರ್ನಾಟಕದ ಸಾಂಸ್ಕೃತಿಕ ಮತ್ತು ಧಾರ್ಮಿಕ ಯುಗದ ಪ್ರವರ್ಧಮಾನದ ಕಾಲವಿದು.[9]

ಗಂಗಮಾರಸಿಂಹನು ಕ್ರಿ.ಶ. 972ರಲ್ಲಿ ಮರಣ ಹೊಂದಿದನು. ಈತನ ನಂತರ ರಾಜ್ಯವಾಳಿದ ನಾಲ್ಕನೆಯ ರಾಚಮಲ್ಲ ಬಹಳ ನಿಶಕ್ತನಾದ ದೊರೆ. ಆದರೂ ಸಹ ಪ್ರಬಲವಾಗಿದ್ದ ಚಾವುಂಡರಾಯನ ಬೆಂಬಲದಿಂದಾಗಿ ಗಂಗರಾಜ್ಯ ಇನ್ನೂ ಹಲವು ವರ್ಷಗಳು ಅಳಿಯದೆ ಉಳಿದಿತ್ತು. ಗಂಗಮಾರಸಿಂಹನ ಮರಣದಿಂದಾಗಿ ನೊಳಂಬರು ಸ್ವಾತಂತ್ರ್ಯವನ್ನು ಘೋಷಿಸಿ ಎರಡನೇ ಮಹೇಂದ್ರನ ನೇತೃತ್ವದಲ್ಲಿ ತಮ್ಮ ರಾಜ್ಯವನ್ನು ವಶಪಡಿಸಿಕೊಂಡು ಆಳತೊಡಗಿದನು. ಅತ್ತ ರಾಷ್ಟ್ರಕೂಟ ವಂಶದಲ್ಲಿ ಕರ್ಕನು ನಿಶಕ್ತನಾದ ದೊರೆಯಾಗಿದ್ದನು. ಮಾರಸಿಂಹನ ಮರಣದಿಂದಾಗಿ ಗಂಗರ ರಾಜಕೀಯ ಸಹಾಯ ರಾಷ್ಟ್ರಕೂಟರಿಗೆ ದೊರೆಯಲಿಲ್ಲ. ಇಡೀ ಕರ್ನಾಟಕದಲ್ಲಿ ರಾಜಕೀಯ ಅಶಾಂತಿ ತಲೆದೋರಿತು. ನೊಳಂಬರು ಸ್ವಾತಂತ್ರ್ಯವನ್ನು ಘೋಷಿಸಿಕೊಂಡಿದ್ದರು. ಆಗ ಉತ್ತರಕರ್ನಾಟಕದಲ್ಲಿ ರಾಜಕೀಯ ಪ್ರಾಬಲ್ಯಕ್ಕೆ ಹವಣಿಸುತ್ತಿದ್ದ ಇಮ್ಮಡಿ ತೈಲಪನು ಕ್ರಿ.ಶ. 976ರಲ್ಲಿ ಸ್ವತಂತ್ರವಾಗಿ ರಾಜ್ಯವಾಳತೊಡಗಿದನು. ಆಗ ದಕ್ಷಿಣ ಕರ್ನಾಟಕದಲ್ಲಿ ಗಂಗರು ಅವನತಿ ಹೊಂದಿದ್ದರು ಕರ್ನಾಟಕದ ರಾಜಕೀಯ ನಿಶ್ಯಕ್ತತೆಯನ್ನು ಗಮನಿಸುತ್ತಿದ್ದ ಚೋಳಕುಲದ ಮೊದಲನೆಯ ರಾಜರಾಜ ಚೋಳನು ಈ ಸಂದರ್ಭವನ್ನು

ಸದುಪಯೋಗ ಪಡಿಸಿಕೊಂಡು ದಕ್ಷಿಣ ಕರ್ನಾಟಕವನ್ನು ಆಕ್ರಮಿಸಿಕೊಂಡನು. ನೊಳಂಬವಾಡಿ ಮತ್ತು ಗಂಗವಾಡಿಯ ಆಳ್ವಿಕೆಯ ಭಾಗಗಳು ರಾಜರಾಜನ ವಶವಾಯಿತು.

ಕೋಲಾರ, ಬೆಂಗಳೂರು, ಮಂಡ್ಯ, ಮೈಸೂರು, ಚಾಮರಾಜನಗರ ಜಿಲ್ಲೆಗಳು ಚೋಳ ಆಳ್ವಿಕೆಯ ನೇರ ಪ್ರಭಾವಕ್ಕೆ ಒಳಗಾದವು. ಈ ಘಟನೆ ಕ್ರಿ.ಶ. ಸುಮಾರು 990–1000ದ ಸಮಯದಲ್ಲಿ ನಡೆಯಿತು.[10] ಅಂದಿನಿಂದ ಕ್ರಿ.ಶ. 1117ರವರೆಗೆ ಚೋಳರು ನಿರಂತರವಾಗಿ ಸುಮಾರು 130 ವರ್ಷಗಳ ಕಾಲ ದಕ್ಷಿಣ ಕರ್ನಾಟಕದ ಆಗ್ನೇಯ ಭಾಗಗಳನ್ನು ಆಳಿದರು. ಕ್ರಿ.ಶ. 1117ರಲ್ಲಿ ಹೊಯ್ಸಳ ವಿಷ್ಣುವರ್ಧನನು ಚೋಳರನ್ನು ಕರ್ನಾಟಕದಿಂದ ಓಡಿಸಿ ನೊಳಂಬವಾಡಿಗೊಂಡ ಗಂಗವಾಡಿಗೊಂಡ, ತಲಕಾಡುಗೊಂಡ ಮುಂತಾದ ಬಿರುದುಗಳನ್ನು ಧರಿಸಿದನು.[11] ಹೀಗೆ ಈ ಪ್ರಾಂತ್ಯದಲ್ಲಿ ಚೋಳರ ನಂತರ ಹೊಯ್ಸಳರು ಆಳ್ವಿಕೆ ನಡೆಸಿದರು. ವಿಷ್ಣುವರ್ಧನನ ನಂತರ ನರಸಿಂಹ, ಜಗದೇಕಮಲ್ಲ, ಎರಡನೆ ಬಲ್ಲಾಳ, ಸೋಮೇಶ್ವರ, ಎರಡನೆಯ ನರಸಿಂಹ, ಮತ್ತು ಮೂರನೆಯ ನರಸಿಂಹ, ಮೂರನೇ ಬಲ್ಲಾಳ, ನಾಲ್ಕನೆ ಬಲ್ಲಾಳ ಇವರುಗಳು, ಕೊಳ್ಳೇಗಾಲದಲ್ಲಿ ಆಳ್ವಿಕೆ ನಡೆಸಿದರು ಈ ಭಾಗದಲ್ಲಿ ಇವರ ಕಾಲದ ಸುಮಾರು 25 ಶಾಸನಗಳು ಕಂಡುಬರುತ್ತವೆ. ಈ ಶಾಸನಗಳಲ್ಲಿ ಇವರ ಆಳ್ವಿಕೆ, ದಾನ–ಧರ್ಮ ಕೆರೆ–ಕಟ್ಟೆಗಳ ನಿರ್ಮಾಣಗಳ ಬಗ್ಗೆ ತಿಳಿಸುತ್ತವೆ. ತದನಂತರ ವಿಜಯನಗರದ ಅರಸರು ದಕ್ಷಿಣಭಾರತದ ಕೇರಳ, ತಮಿಳುನಾಡು, ಆಂಧ್ರಪ್ರದೇಶ, ಮತ್ತು ಶ್ರೀಲಂಕಾದವರೆಗೂ ಆಳ್ವಿಕೆ ನಡೆಸಿರುವುದು ತಿಳಿದುಬರುತ್ತದೆ. ಈ ಹಿನ್ನೆಲೆಯಿಂದ ವಿಜಯನಗರದ ಅರಸರು ಏಳು ಜನ ರಾಜರು ಅಲ್ಲದೆ ಈ ಭಾಗದಲ್ಲಿ ಸಾಮಂತ ರಾಜರುಗಳು ಸಹ ಆಳ್ವಿಕೆ ನಡೆಸಿರುತ್ತಾರೆ. ಉದಾಹರಣೆಗೆ ಒಂದನೆಯ ಬುಕ್ಕರಾಯ, ಎರಡನೆಯ ಹರಿಹರ, ಒಂದನೆಯ ದೇವರಾಯ, ಕೃಷ್ಣದೇವರಾಯ, ಅಚ್ಯುತರಾಯ ಸದಾಶಿವರಾಯ, ಎರಡನೆಯ ಶ್ರೀರಂಗರಾಯ ಇವರುಗಳು ಆಳ್ವಿಕೆ ನಡೆಸಿರುತ್ತಾರೆ. ವಿಜಯನಗರದ ಅರಸರು ಕೊಳ್ಳೇಗಾಲ ಭಾಗದಲ್ಲಿ ಕ್ರಿ.ಶ. 1354ರಿಂದ ಕ್ರಿ.ಶ. 1604ರ ತನಕ ಆಳ್ವಿಕೆ ನಡೆಸಿರುತ್ತಾರೆ[12] ವಿಜಯನಗರ ಅರಸರ ಕಾಲದಲ್ಲಿ ಕೆಲವು ಭಾಗಗಳನ್ನು ದತ್ತಿ ಬಿಟ್ಟಿರುವುದು ಕಂಡುಬರುತ್ತದೆ. ಅಲ್ಲದೆ ಸ್ಥಳೀಯ ಮಹಾಪ್ರಧಾನರ ಬಗ್ಗೆ ತಿಳಿದು ಬರುತ್ತದೆ[13] ಮತ್ತು ಸ್ಥಳೀಯ ಜನರು ರಾಜನನ್ನು ನೋಡುವುದಕ್ಕೆ ಕೊಳ್ಳೇಗಾಲದಿಂದ ವಿಜಯನಗರದ ಸಾಮ್ರಾಜ್ಯಕ್ಕೆ ಹೋಗಿದ್ದರು ಎಂಬುದು ತಿಳಿದು ಬರುತ್ತದೆ.[14] ಈ ಹಿನ್ನೆಲೆಯಲ್ಲಿ ರಾಜಕೀಯವನ್ನು ನೋಡಿದರೆ ಯಾವುದೇ ರಾಜಕೀಯ ವ್ಯಕ್ತಿಯನ್ನು ನೋಡಬೇಕಾದರೆ ರಾಜಧಾನಿ ಬೆಂಗಳೂರು ಅಥವಾ ದೆಹಲಿಗೆ ಹೋಗಬೇಕು. ಆದರೆ ಅಂದು. ಇಲ್ಲಿಯ ಸ್ಥಳೀಯರು ವಿಜಯನಗರಕ್ಕೆ ಹೋಗಿರುವುದು

ಒಂದು ದೊಡ್ಡಸಾಧನೆ ಮತ್ತು ರಾಜಕೀಯ ಪರಿಸ್ಥಿತಿಯನ್ನು ಸಹ ತಿಳಿಸುತ್ತದೆ. ವಿಜಯನಗರ ಅರಸರ ನಂತರ ಮಹಿಷಮಂಡಲ ಪ್ರಾಂತ್ಯದ ದೊರೆಗಳಾದ ಮೈಸೂರು ಒಡೆಯರು ಸಹ ಕೊಳ್ಳೇಗಾಲ ಪ್ರಾಂತ್ಯದಲ್ಲಿ ಆಳ್ವಿಕೆ ಪ್ರಾರಂಭಿಸಿದ್ದಾರೆ. ಉದಾಹರಣೆಗೆ ಕೊಳ್ಳೇಗಾಲದ ಸಿಂಗಾನಲ್ಲೂರು ಶಾಸನದಿಂದ ದೇವರಾಜ ಒಡೆಯನು ಆಳುತ್ತಿದ್ದನೆಂದು ತಿಳಿದುಬರುತ್ತದೆ[15] ಮತ್ತು ದೊಡ್ಡ ಕೃಷ್ಣರಾಜ ಒಡೆಯನ ಆಳ್ವಿಕೆಯು ಕಂಡುಬರುತ್ತದೆ.[16] ಕೊಳ್ಳೇಗಾಲದಲ್ಲಿ ಉಮ್ಮತ್ತೂರಿನ ಪಾಳೇಗಾರರು ಮತ್ತು ನಂದ್ಯಾಲರು ಸಹ ಆಳ್ವಿಕೆ ನಡೆಸಿರುತ್ತಾರೆ. ಉಮ್ಮತ್ತೂರಿನ ಪಾಳೇಗಾರರು ಮೈಸೂರು ಒಡೆಯರ ಹೆಸರುಗಳನ್ನೇ ಹೊಂದಿದ್ದರು ಎಂದು ಉಲ್ಲೇಖಗಳು ಇವೆ.[17] ಈ ಎಲ್ಲಾ ಶಾಸನಗಳ ಉಲ್ಲೇಖಗಳಿಂದ ಕೊಳ್ಳೇಗಾಲ ಪ್ರಾಂತ್ಯವು ರಾಜಕೀಯವಾಗಿ ತಲಕಾಡಿನ ಗಂಗರ ನಂತರ ಬೆಳೆದು ನಿಂತಿದೆ ಎಂದು ಹೇಳಬಹುದು. ಆಯಾ ರಾಜ ಸಂತತಿಯ ಬೆಳವಣಿಗೆಯಿಂದ ಹಂತ ಹಂತವಾಗಿ ಬೆಳೆದು ಈ ಭಾಗದಲ್ಲಿ ದ್ರಾವಿಡ ವಾಸ್ತುವಿನ ನಿಯಮ. ರೂಢಿಸಂಪ್ರದಾಯ ಲಕ್ಷಣ ಮುಂತಾದವುಗಳನ್ನು ತಮ್ಮಲ್ಲಿ ಸಾಕಷ್ಟು ಸಮೃದ್ಧವಾಗಿ ಕೊಳ್ಳೇಗಾಲ ಹೊಂದಿದೆ. ರಾಜಕೀಯವಾಗಿ ಬೆಳೆದ ಕೊಳ್ಳೇಗಾಲದಲ್ಲಿ ಎಷ್ಟೋ ದೇವಾಲಯಗಳು ನಾಶವಾಗಿದೆ, ಎಷ್ಟೋ ನೆಲೆಗಳು ಕಣ್ಮರೆಯಾಗಿವೆ ಶಾಸನಗಳು ಇದ್ದರೆ ದೇವಾಲಯಗಳಿಲ್ಲ, ದೇವಾಲಯಗಳು ಇದ್ದರೆ ಶಾಸನಗಳು ಇಲ್ಲ ಮತ್ತೆ ಎಷ್ಟೋ ದೇವಾಲಯಗಳು ಹೊಸದಾಗಿ ನಿರ್ಮಾಣಗೊಂಡಿದೆ. ಈ ಎಲ್ಲಾ ಆಧಾರಗಳಿಂದ ಸಾಂಸ್ಕೃತಿಕವಾಗಿ ಕೊಳ್ಳೇಗಾಲ ಪ್ರಾಂತ್ಯ ರಾಜರುಗಳ ಕಾಲದಲ್ಲಿ ಅನೇಕ ಅಭಿವೃದ್ಧಿಯನ್ನು ಪಡೆದು ಉಳಿದುಕೊಂಡು ಬಂದಿದೆ.

ಅಡಿ ಟಿಪ್ಪಣಿಗಳು

---

[1] ಎಪಿಗ್ರಾಫಿಯ ಸಂಪುಟ. 4. ಕೊಳ್ಳೇಗಾಲ ಶಾಸನ ಸಂಖ್ಯೆ 10

[2] ಮೈಸೂರು ಜಿಲ್ಲೆಯಲ್ಲಿ ಹಲವಾರು ಉತ್ಖನನಗಳು ಈ ಹಿಂದೆಯೇ ನಡೆದಿವೆ. ತೀ.ನರಸೀಪುರ ಹೆಮ್ಮಿಗೆ, ಕೊಪ್ಪ, ಇವುಗಳು ಶಿಲಾ ಮತ್ತು ಬೃಹತ್ ಶಿಲಾಯುಗದ ಸಂಸ್ಕೃತಿಗಳನ್ನು ಹೊಂದಿದ್ದವು ಎಂದು ಇಲ್ಲಿನ ಅವಶೇಷಗಳಿಂದ ಕಂಡು ಬರುತ್ತದೆ.

[3] ಎಂ. ಎಸ್. ಕೃಷ್ಣಮೂರ್ತಿ ಆರ್ಕಿಯಾಲಾಜಿಕಲ್ ಎಕ್ಸವೇಷನ್ ಆರ್ಟ್ಸ್ ತಲಕಾಡು – 1996

[4] ಎಂ. ಎಸ್. ಕೃಷ್ಣಮೂರ್ತಿ ಆರ್ಕಿಯಾಲಾಜಿಕಲ್ ಎಕ್ಸವೇಷನ್ ಆರ್ಟ್ಸ್ ತಲಕಾಡು – 1996

[5] ಮದಕೇರಿ ತಾಮ್ರಶಾಸನ, ಎ.ಕ.ಸಂಪುಟ 1. ಶಾಸನ ಸಂಖ್ಯೆ 1

[6] ರಮೇಶ. ಕೆ.ವಿ., ದಿ ಇನ್ಸ್ಕ್ರಿಪ್ಟ್ಸ್ ಆಫ್ ದಿ ವೆಸ್ಟ್ರನ್ ಗಂಗಾಸ್ 1983–84. ಇದರಲ್ಲಿ ಗಂಗರ ಬಹುತೇಕ ಎಲ್ಲಾ ಶಾಸನಗಳ ಆ ಮೂಲಾಗ್ರವಾದ ಶಾಸನ ಪಾಠ ಮೂಲ ಮತ್ತು ಚರ್ಚೆ ಇದೆ.

[7] ಆಲ್ಟೇಕರ್. ಎ.ಎಸ್. 'ದಿ ರಾಷ್ಟ್ರಕೂಟಾಸ್', 1954

[8] ಆಕ್ಕೂರಿನ (ಚನ್ನ ಪಟ್ಟಣ ತಾಲ್ಲೂಕು) ರಾಷ್ಟ್ರಕೂಟರ ಶಾಸನ ಮತ್ತು ಎಸ್.ಶ್ರೀಕಂಠಶಾಸ್ತ್ರಿ, ಸೂರ್ಯನಾಥಕಾಮತ್, ಕರ್ನಾಟಕ ಪರಂಪರೆ ಸಂಪುಟ–1 ಪುಟ ಸಂಖ್ಯೆ 375–380.

[9] ಷೇಕ್ ಆಲಿ. ಬಿ. ಹಿಸ್ಟರಿ ಆಫ್ ದಿ ವೆಸ್ಟ್ರನ್ ಗಂಗಾಸ್. 1974–76.

[10] ಮೊದಲನೆ ರಾಜರಾಜ ಚೋಳನು ತಲಕಾಡನ್ನು ಆಕ್ರಮಿಸಿಕೊಂಡಕಾಲದ ಬಗ್ಗೆ ಸ್ಪಷ್ಟವಾದ ದಾಖಲೆಗಳಿಲ್ಲ ಅವನು ಕ್ರಿ.ಶ. 1004 ರಲ್ಲಿಯೇ ಈ ಭಾಗದ ಮೇಲೆ ಸಂಪೂರ್ಣ ಹತೋಟಿಯನ್ನು ಹೊಂದಿರುವುದು ತಡಿ ಮಾಲಂಗಿ ಶಾಸನದಿಂದ ಸ್ಪಷ್ಟವಾಗಿದೆ ವಿದ್ವಾಂಸರ ಪ್ರಕಾರ ಕ್ರಿ.ಶ. 990–995ರ ಸಮಯಕ್ಕೆ ದಕ್ಷಿಣ ಕರ್ನಾಟಕದ ದಂಡಯಾತ್ರೆಯನ್ನು ಕೈಗೊಂಡಿದ್ದು ಆ ಸಂದರ್ಭದಲ್ಲಿ ತಲಕಾಡನ್ನು ಮತ್ತು ನೊಳಂಬವಾಡಿಯನ್ನು ಆಕ್ರಮಿಸಿಕೊಂಡಿರುವ ವಿಷಯ ಸರ್ವವಿಧಿತವಾಗಿದೆ.

[11] ಎ.ಕ. ಸಂಪುಟ – 5, ಕಲಿಯೂರು, ಶಾಸನ ಸಂಖ್ಯೆ 230, ಪುಟ 602–603,

[12] ಎ.ಕ. ಸಂಪುಟ – 4, ಕೊಳ್ಳೇಗಾಲದ ಹೊಯ್ಸಳದ ಕಾಲದ ಶಾಸನಗಳು

[13] ಎ.ಕ. ಸಂಪುಟ – 4, ಕೊಳ್ಳೇಗಾಲದ ಹೊಯ್ಸಳದ ಕಾಲದ ಶಾಸನಗಳು

[14] ಎ.ಕ. ಸಂಪುಟ – 4, ತಗರಪುರ ಶಾಸನ, ಸಂಖ್ಯೆ (ಕೊ.ಗಾ. . .11)

[15] ಎ.ಕ. ಸಂಪುಟ – 4, ಕೊಳ್ಳೇಗಾಲ ಶಾಸನ ಸಂಖ್ಯೆ 83.

[16] ಸಿ. ಹಯವದನರಾವ್, ಮೈಸೂರು ಗೆಜೆಟಿಯರ್, ಭಾಗ II ಪಿ.ಎ. IV ಪುಟ ಸಂಖ್ಯೆ–2466.

[17] ಎ.ಕ. ಸಂಪುಟ. 4 ಕೊಳ್ಳೇಗಾಲ ಶಾಸನ ಸಂಖ್ಯೆ – 7 ಮತ್ತು 34

ಅಧ್ಯಾಯ – 2

ಕೊಳ್ಳೇಗಾಲ ತಾಲ್ಲೂಕಿನ ಪ್ರಮುಖ ಧರ್ಮದ ಬೆಳವಣಿಗೆ

ಪ್ರಾಚೀನ ಕಾಲದಿಂದಲೂ ಆಯಾ ಧರ್ಮದ ಬೆಳವಣಿಗೆಯನ್ನು ಕಾಣುತ್ತೇವೆ. ಬೇರೆ, ಬೇರೆ ಕಾಲ ಘಟ್ಟಗಳಲ್ಲಿ ಬೆಳೆದು ಬಂದ ಹಾಗೂ ಆಯಾ ಧರ್ಮಕ್ಕೆ ಸಂಬಂಧಿಸಿದ ಪ್ರತಿಮೆಗಳನ್ನು ಮೂರ್ತಿಶಿಲ್ಪಿಗಳನ್ನು, ದೇವಾಲಯಗಳನ್ನು ಅವುಗಳ ಲಕ್ಷಣಗಳ ಮೂಲಕ ಗುರುತಿಸಬಹುದು ಹಾಗೂ ಪ್ರತಿಮಾ ಶಾಸ್ತ್ರದ ಹಿನ್ನೆಲೆಯಲ್ಲಿ ಸ್ಥೂಲವಾಗಿ ಸಮೀಕ್ಷಿಸುವುದು ಈ ಅಧ್ಯಾಯನದ ಆಶಯವಾಗಿದೆ. ಸರ್ವ-ಧರ್ಮ ಸಮನ್ವಯವಾದ ಈ ನಮ್ಮ ನಾಡಿನಲ್ಲಿ ಹಲವಾರು ಧರ್ಮಗಳಿಗನುವಾಗಿ ಹಲವಾರು ದೇವತೆಗಳನ್ನು ನಾನಾ ರೀತಿಯ ರೂಪದಲ್ಲಿ ಶಿಲ್ಪಿಗಳು ಹಲವಾರು ಭಾವ ಭಂಗಿಯಲ್ಲಿ ಶಿಲ್ಪಿಸಿದ್ದು ಇವುಗಳ ಆಧಾರದ ಮೇಲೆ ಹಲವಾರು ಲೀಲೆಗಳನ್ನು ಧರ್ಮಗಳನ್ನು ಗುರುತಿಸಬಹುದು.

ಶೈವಧರ್ಮ:- ಪ್ರಾಚೀನ ಧರ್ಮಗಳಲ್ಲಿ ಶೈವ ಧರ್ಮವು ಒಂದು ವೇದ ಪೂರ್ವಕಾಲದ ಸಿಂಧುಬಯಲು ನಾಗರೀಕತೆ, ಹರಪ್ಪ ನಾಗರೀಕತೆ, ಮೊಹೆಂಜೊದಾರೋ ಸಂಸ್ಕೃತಿಗಳು ಧರ್ಮವನ್ನು ಬಿಂಬಿಸಿವೆ ಪ್ರಪಂಚದಲ್ಲಿಯೇ ಅತ್ಯಂತ ಪ್ರಾಚೀನ ಧರ್ಮವೆಂದು ಕರೆದಿದ್ದಾರೆ. ಶೈವ ಧರ್ಮಕ್ಕೆ ಪಾಶುಪತ ಧರ್ಮವೆಂದು ಸಹ ಕರೆಯುತ್ತಾರೆ. ಇದರ ಉಲ್ಲೇಖ ಮಹಾಭಾರತದಷ್ಟು ಪ್ರಾಚೀನ ಎಂದು ಹೇಳಬಹುದಾಗಿದೆ.[1] ಶೈವಧರ್ಮಕ್ಕೆ ಲಾಕುಲಿಶ ಎಂದು ಮತ್ತೊಂದು ಹೆಸರು ಸಹ ಇದೆ. ಈ ಹೆಸರು ಬಹುಶಃ ಪ್ರಾಚೀನವಾದುದು. 'ಇದು ಲಕುಲಿಶ ಎಂಬ ಒಬ್ಬ ವ್ಯಕ್ತಿಯನ್ನು ಸೂಚಿಸುವುದರಿಂದ ಇದರ ಸ್ಥಾನದಲ್ಲಿ ಪಶುಪತ ಎಂಬ ಭಗವಂತನ ಹೆಸರನಿಟ್ಟು ಪಾಶುಪತ ಎಂದು ನಂತರದ ಕಾಲದವರು ಮಾಡಿಕೊಂಡಿರಬೇಕೆಂದು' ಆರ್.ಜಿ ಭಂಡಾರ್‌ಕರ್‌ರವರು ಹೇಳುತ್ತಾರೆ. ತದನಂತರ ಲಾಕುಳ ಅಥವಾ ಪಾಶುಪತರಿಗೆ ಕಾಳಮುಖರೆಂದು ಹೆಸರಿದ್ದು ಕಾಳಮುಖರೂ ಮತ್ತು ಕಾಪಾಲಿಕರೂ ಒಂದೇ ಎಂದು ಹೇಳುತ್ತಾರೆ.[2] ಶೈವ ದೇವಾಲಯಗಳಲ್ಲಿ ಶಿವನನ್ನು ಅತ್ಯಂತ ಶ್ರೇಷ್ಠದೇವರೆಂದು ಒಪ್ಪಿರುತ್ತಾರೆ. ಶಿವನು ಹಲವು ನಾಮಾಂಕಿತಗಳಿಂದ ಗುರುತಿಸಲ್ಪಟ್ಟಿದ್ದಾನೆ. ಅಮರಕೋಶವು ಶಿವನ 48 ಹೆಸರುಗಳನ್ನು ಹೇಳಿದರೆ ವಾಜಸೇನೆಯ ಸಂಹತವು ಸಹ ಶಿವನನ್ನು ಅಗ್ನಿ, ಅವನಿ, ಪಶುಪತಿ, ಭವ, ಸರ್ವ, ಈಶಾನ್ಯ, ಮಹಾದೇವ, ಉಗ್ರದೇವ, ಅರ್ಕೇಶ್ವರ, ದೇಸೇಶ್ವರ, ಮಲ್ಲಿಕಾರ್ಜುನ, ನೀಲಕಂಠ, ಸೋಮೇಶ್ವರ, ಗಂಗಾಧರ, ಕಾವಿಬಸವೇಶ್ವರ, ಅಂಕಾಳೇಶ್ವರ ಇನ್ನೂ ಮೊದಲಾದ ಹೆಸರುಗಳಿಂದ ಕರೆಯುತ್ತಾರೆ.[3] ಈ ಹಿನ್ನೆಲೆಯಿಂದ ಕೊಳ್ಳೇಗಾಲ ತಾಲ್ಲೂಕಿನಲ್ಲೂ ಸಹ ಪ್ರಾಚೀನ ಕಾಲಕ್ಕೆ ಪೂರಕವಾಗಿ ಹಲವಾರು

ಶೈವ ದೇವಾಲಯಗಳನ್ನು ಕಾಣಬಹುದು.[4] ಈ ಕೊಳ್ಳೇಗಾಲ ತಾಲ್ಲೂಕು ಪ್ರಾಂತ್ಯದಲ್ಲಿ ಕಂಡುಬರುವ ಶೈವ ದೇವಾಲಯಗಳು ಗಂಗರ ಕಾಲದಿಂದ ಪ್ರಾರಂಭವಾಗಿವೆ ಎಂದು ಹೇಳಲಾದರೂ ಚೋಳರ ಕಾಲದಲ್ಲಿ ಸಾಕಷ್ಟು ಶೈವ ದೇವಾಲಯಗಳು ನಿರ್ಮಾಣವಾದವು ಎಂದು ಹೇಳಬಹುದು.[5] ಕೊಳ್ಳೇಗಾಲದಲ್ಲಿರುವ ಈಶ್ವರ ದೇವಾಲಯವು ಕ್ರಿ.ಶ. 9ನೇ ಶತಮಾನಕ್ಕೆ ಸೇರಿದೆ ಎಂದು ಹೇಳಬಹುದಾಗಿದೆ. ಆನಂತರ ಚೋಳರ ಕಾಲದಲ್ಲಿಯೂ ವಿಶಾಲವಾಗಿ ಬೆಳೆದು, ಇನ್ನಿತರ ಕಾಲದಲ್ಲಿಯೂ ಅನೇಕ ಸೇರ್ಪಡೆಗಳು ಆಗಿರುವುದನ್ನು ಕಾಣಬಹುದಾಗಿದೆ. ಕೊಳ್ಳೇಗಾಲದ ಪ್ರಾಂತ್ಯದಲ್ಲಿ ಚಿಲಕವಾಡಿ, ಕುಂತೂರು, ಕುಂತೂರು ಬೆಟ್ಟ, ಮುಡಿಗುಂಡ, ಸತ್ತೇಗಾಲ, ಶಿವನಸಮುದ್ರ, ಮರಡಿಗುಡ್ಡ, ಮಹದೇಶ್ವರನ ಬೆಟ್ಟ ಮೊದಲಾದ ಕಡೆ ಶಿವನ ಅಂದರೆ ಶೈವ ಪರಂಪರೆ ದೇವಾಲಯಗಳನ್ನು ಕಾಣಬಹುದಾಗಿದೆ.[6]

ವೈಷ್ಣವ ಧರ್ಮ:– ಹಿಂದೂ ಧರ್ಮದಲ್ಲಿ ಕವಲಾದ ವೈಷ್ಣವ ಧರ್ಮವು ಪ್ರಾಚೀನ ಭಾರತದ ಧರ್ಮ ಪಂಗಡಗಳಲ್ಲಿ ಇದು ಸಹ ಒಂದು ವೈಷ್ಣವ ಧರ್ಮದ ಮೂಲ ಪುರುಷ ವಿಷ್ಣುವಾಗಿದ್ದು ಇವನು ದೇವಕಾಲದ ದೇವತೆಯೆಂದು ಒಪ್ಪಿಕೊಳ್ಳಲಾಗಿದೆ ವಿಷ್ಣು ಎನ್ನುವ ಮಾತಿಗೆ ಹರಡಿಕೊಳ್ಳುವ್ಯದು, ಆವರಿಸಿಕೊಳ್ಳುವುದು ಎಂದರ್ಥ ಹೀಗಾಗಿ ಹರಡಿಕೊಳ್ಳುವುದೇ ವಿಷ್ಣುವಿನ ವೈಶಿಷ್ಟ್ಯ, ವಿಷ್ಣುವು ತನ್ನ ಮೂರು ಹೆಜ್ಜೆಗಳಿಂದ ಮೂರು ಲೋಕಗಳನ್ನು ಆವರಿಸಿಕೊಂಡ ಎಂಬ ವಿಷಯವು ಋಗ್ವೇದದಲ್ಲಿ ಕಂಡು ಬರುತ್ತದೆ. ಋಗ್ವೇದದಲ್ಲಿ ವಿಷ್ಣುವಿನ ಉಲ್ಲೇಖ ಸ್ಪಷ್ಠ ಸಿಗುತ್ತದೆ. ಆಗಲೇ ವಿಷ್ಣು ಒಬ್ಬ ದೇವನೆಂದು ಒಪ್ಪಿಕೊಂಡಿರುವುದು ಸ್ಪಷ್ಟವಾಗುತ್ತದೆ.[7] ಹಾಸನ ಜಿಲ್ಲೆ ಹಲ್ಮಿಡಿ ಎಂಬ ಗ್ರಾಮದಲ್ಲಿ ಕನ್ನಡ ಭಾಷೆಯ ಅತ್ಯಂತ ಪ್ರಾಚೀನ ಹಲ್ಮಿಡಿ ಶಾಸನವು ಕ್ರಿ.ಶ. 450ರ ವಿಷ್ಣುವಿನ ಪ್ರಾರ್ಥನೆಯೊಂದಿಗೆ ಪ್ರಾರಂಭವಾಗುತ್ತದೆ. 'ಜಯತಿ ಶ್ರೀ ಪರಿಷ್ವಜ್ಗ ಶ್ಯಾರ್ಜ್ಗ (ಮಾನ್ಯತೆ) ರಚ್ಚುತಃ ದಾನವಾಕ್ಷೋಯುಗಾನ್ತಾಗ್ನೀ (ಶಿಷ್ಟಾನಾಸ್ತು) ಸುದರ್ಶನ.'[8] ವೈಷ್ಣವ ಧರ್ಮವು ದಕ್ಷಿಣ ಭಾರತವನ್ನು ಕ್ರಿಸ್ತ ಪೂರ್ವದಲ್ಲಿಯೇ ಪ್ರವೇಶಿಸಿತು ಎಂದು ನಾನ್ ಘಾಟ ಶಾಸನದಿಂದ ತಿಳಿದು ಬರುತ್ತದೆ. ಶಿವನಿಗೆ ಒಂದು ಪೌರಾಣಿಕತೆ ಇರುವಂತೆ ಹಿಂದೂ ಧರ್ಮದಲ್ಲಿ ವಿಷ್ಣುವಿಗೂ ಒಂದು ಪೌರಾಣಿಕ ಇತಿಹಾಸವುಂಟು ವಿಷ್ಣುವಿನಲ್ಲಿರುವ ಅಚಲವಾದ ಭಕ್ತಿಯೇ ಭವಸಾಗರದಿಂದ ಭಕ್ತನನ್ನು ಮುಕ್ತ ಮಾಡುತ್ತವೆ ಎಂದು ವೈಷ್ಣವ ಧರ್ಮ ಹೇಳುತ್ತದೆ. ಈ ಧರ್ಮದಲ್ಲಿ ಯಜ್ಞಕ್ಕೆ. ಅಗ್ರಸ್ಥಾನವಿದ್ದು ಏಕದೇವೋಪಾಸನ ಮತ್ತು ಅಚಲವಾದ ಭಕ್ತಿ ಇವೆರಡು ಈ ಧರ್ಮದ ವೈಶಿಷ್ಟ್ಯಗಳು ಈ ಧರ್ಮವು ಅಭಿವೃದ್ಧಿ ಹೊಂದುತ್ತಾ ಹೋದಂತೆ ನಾರಾಯಣ ಎಂಬ ಕಲ್ಪನೆಯನ್ನು ಮೈಗೂಡಿಸಿಕೊಂಡಿದೆ.[9]

ಕರ್ನಾಟಕದಲ್ಲಿ ಆಳ್ವಿಕೆ ನಡೆಸಿಹೋದ ಅನೇಕ ರಾಜ-ಅರಸು ಮನೆತನಗಳು ವೈಷ್ಣವ ಧರ್ಮಾವಲಂಬಿಗಳಾಗಿದ್ದು ಬಾದಾಮಿ ಚಾಲುಕ್ಯರ ದೊರೆ ಮಂಗಳೇಶನು ಬಾದಾಮಿಯಲ್ಲಿ ಸುಪ್ರಸಿದ್ಧವಾದ ಗುಹಾಂತರ ದೇವಾಲಯವನ್ನು ಕೊರೆಸಿದನೆಂದು ಕ್ರಿ.ಶ. 578ರ ಶಾಸನದಿಂದ ತಿಳಿದುಬರುತ್ತದೆ.[10] ಕರ್ನಾಟಕದ ಆಗ್ನೇಯ ಭಾಗದಲ್ಲಿ ರಾಮಾನುಜಾಚಾರ್ಯರ ಅವಧಿಯಲ್ಲಿ ನೂರಾರು ವೈಷ್ಣವ ದೇವಾಲಯಗಳು ನಿರ್ಮಾಣಗೊಂಡವು. ಅದೇ ಸಮಯದಲ್ಲಿ ಕೊಳ್ಳೇಗಾಲ ತಾಲ್ಲೂಕು ಪ್ರಾಂತ್ಯದಲ್ಲೂ ಹಲವಾರು ವೈಷ್ಣವ ದೇವಾಲಯಗಳು ನಿರ್ಮಾಣಗೊಂಡಿವೆ ಉದಾಹರಣೆಗೆ ಕೊಳ್ಳೇಗಾಲ, ಮುಡಿಗುಂಡ, ಸಿಂಗನಲ್ಲೂರು, ಸತ್ತೇಗಾಲ, ಶಿವನಸಮುದ್ರ ಮೊದಲಾದ ಕಡೆ ಕಾಣಬಹುದಾಗಿದೆ.[11]

ಜೈನ ಧರ್ಮ:- ದಕ್ಷಿಣ ಭಾರತದ ಜೈನ ಧರ್ಮದ ಇತಿಹಾಸವೆಂದರೆ ಕರ್ನಾಟಕದ ಜೈನ ಧರ್ಮದ ಇತಿಹಾಸವೇ ಆಗಿದೆ ಎಂಬ ವಿದ್ವಾಂಸರ ಹೇಳಿಕೆಗಳನ್ನು ಪ್ರಾಯಶಃ ಎಲ್ಲಾ ವಿದ್ವಾಂಸರು ಒಪ್ಪಿಕೊಳ್ಳುತ್ತಾರೆ. ದಕ್ಷಿಣ ಭಾರತದ ಜೈನ ಧರ್ಮವು ಕರ್ನಾಟಕದ ಇತಿಹಾಸದೊಂದಿಗೆ ಬೆಳೆಯುತ್ತಾ ತನ್ನದೇ ಆದ ಇತಿಹಾಸವನ್ನು ನಿರ್ಮಿಸಿದ್ದನ್ನು ಇತಿಹಾಸದ ಪುಟಗಳಿಂದ ತಿಳಿದುಬರುತ್ತದೆ.[12] ಕರ್ನಾಟಕದಲ್ಲಿ ನೂರಾರು ಶಾಸನಗಳು, ಗ್ರಂಥಗಳು ಇತರ ಸಾಂಸ್ಕೃತಿಕ ಆಕರಗಳು ಜೈನಧರ್ಮ ಕರ್ನಾಟಕದ ಸಾಂಸ್ಕೃತಿಕ ಕ್ಷೇತ್ರಕ್ಕೆ ಕೊಟ್ಟಕೊಡುಗೆಗಳನ್ನು ದಾಖಲಿಸಿದೆ. ಈ ಹಿನ್ನೆಲೆಯಿಂದ ಕರ್ನಾಟಕದ ರಾಜಕೀಯ ಧಾರ್ಮಿಕ, ಆರ್ಥಿಕ, ಸಾಮಾಜಿಕ, ಕ್ಷೇತ್ರಗಳಲ್ಲಿ ಜೈನ ಧರ್ಮದ ಪಾತ್ರ ಅಪಾರವಾದದ್ದು.[13] ಜೈನ ಧರ್ಮವು ಕ್ರಿಸ್ತ ಪೂರ್ವದಲ್ಲಿ ಉತ್ತರಭಾರತದಿಂದ ಕರ್ನಾಟಕಕ್ಕೆ ಬಂದು ಒಂದು ಹೊಸ ಪಂಥವನ್ನು ನಿರ್ಮಿಸಿತು ಮತ್ತು ಕ್ರಮ ಕ್ರಮವಾಗಿ ಬೆಳೆದು ಸುಮಾರು ಒಂದು ಸಾವಿರ ವರ್ಷಗಳವರೆಗೆ ಒಂದು ಪ್ರಬಲ ಪಂಥವಾಗಿ ನೆಲೆಸಿತು. ಅದು ಕರ್ನಾಟಕದ ಅತ್ಯಂತ ಪ್ರತಿಷ್ಠಿತ ರಾಜ ಮನೆತನಗಳ ಮಾರ್ಗದರ್ಶಿಯಾಗಿ ನಿಂತಿತು ಜೈನ ಆಚಾರ್ಯರು ಗಂಗ=ಹೊಯ್ಸಳ ಸಾಮ್ರಾಟರನ್ನು ಆಶೀರ್ವದಿಸಿ ಅನುಗ್ರಹ ಪೂರ್ವಕ ಉತ್ತೇಜನವಿತ್ತರು.[14] ಈ ಹಿನ್ನೆಲೆಯಲ್ಲಿ ಜೈನ ಧರ್ಮ, ಜೈನಾಚಾರ್ಯರು ಮತ್ತು ಕರ್ನಾಟಕದ ಅರಸು ಮನೆತನಗಳ ಸಂಬಂಧ ಅರ್ಥಪೂರ್ಣವಾಗಿಯೇ ಬೆಸೆದುಕೊಂಡಂತೆ ಕಂಡುಬರುತ್ತದೆ. ಕರ್ನಾಟಕದ ಪ್ರಬಲ ಮತ್ತು ಪ್ರಮುಖ ಅರಸು ಮನೆತನಗಳು ಜೈನ ಧರ್ಮಕ್ಕೆ ಹೆಚ್ಚಿನ ಪ್ರೋತ್ಸಾಹವನ್ನು ಕೊಟ್ಟಿದ್ದಾರೆ. ಅದರಲ್ಲಿ ಕದಂಬರು, ಗಂಗರು, ರಾಷ್ಟ್ರಕೂಟರು, ಹೊಯ್ಸಳರು, ವಿಜಯನಗರದ ಅರಸರು, ಮೈಸೂರು ಒಡೆಯರು ಸಹ ಜೈನಧರ್ಮಕ್ಕೆ ಪ್ರೋತ್ಸಾಹ ನೀಡಿರುತ್ತಾರೆ. ಅದೇ ರೀತಿ ಸಾಳ್ವರು, ಚೆಂಗಾಳ್ವರು, ಕೊಂಗಾಳ್ವರು, ಸೌದತ್ತಿಯ

ರಟ್ಟರು, ಶಿಲಾಹಾರರು, ಕಾರ್ಕಳದ ಭೈರವರಸರು, ಸಾಂತರರದಲ್ಲಿಯೂ ಮತ್ತು ತಂಜಾವೂರಿನ ಚೋಳರು ಸಹ ಜೈನಧರ್ಮದ ಬೆಳವಣಿಗೆಗೆ ಪ್ರೋತ್ಸಾಹ ನೀಡಿರುತ್ತಾರೆ. ಗಂಗವಾಡಿ 96,000 ಪ್ರಾಂತ್ಯದಲ್ಲಿ ಅಂದರೆ ಮೈಸೂರು ನಾಡಿನಲ್ಲಿ ಗಂಗರಾಜ್ಯದ ಇತಿಹಾಸ ಜೈನಾಚಾರ್ಯರಾದ ಸಿಂಹಣಂದಿಗಳಿಂದ (ಸಿಂಹನಂದಿ) ಪ್ರಾರಂಭವಾಯಿತ್ತೆಂದು ಕರ್ನಾಟಕದ ಅನೇಕ ಶಾಸನಗಳು ಮತ್ತು ಸಾಹಿತ್ಯಾಧಾರಗಳಿಂದ ತಿಳಿದುಬರುತ್ತದೆ. ಗಂಗರ ಆಳ್ವಿಕೆ ಜೈನರ ಸುವರ್ಣಯುಗವೆನ್ನಬಹುದು. ಗಂಗರ ಕಾಲಕ್ಕೆ ರಾಷ್ಟ್ರಧರ್ಮವಾಗಿ ಮೆರೆದ ಜೈನಧರ್ಮವನ್ನು ಕುರಿತಂತೆ ಎಲ್ಲಿ ಜಿನನ ಪೂಜೆಯಾಗುತ್ತದೆಯೋ ಆಪ್ರಾಂತ್ಯ, ದೇಶ ವೃದ್ಧಿಯಾಗುತ್ತದೆ, ನಗರಗಳು ನಿರ್ಭಯವಾತರುತ್ತದೆ, ರಾಜನು ಊರ್ಜಿತನಾಗುತ್ತಾನೆ ಎಂಬ ಧೋರಣೆ ಬೆಳೆಯಿತು. ಹೀಗೆ ಗಂಗರ ಕಾಲಕ್ಕೆ ಅತ್ಯುನ್ನತೆಗೇರಿದ ಜೈನಧರ್ಮ ತದನಂತರ ಈ ಮನೆತನದ ಪತನದೊಂದಿಗೆ ಬರಿದಾಯಿತೆಂದೂ ಹೇಳಬಹುದು. ಒಟ್ಟಾರೆಯಾಗಿ ಪ್ರಾಚೀನ ಕರ್ನಾಟಕದಲ್ಲಿ ಜೈನಧರ್ಮ ಸಾಕಷ್ಟು ಪ್ರಬಲ ಧರ್ಮವಾಗಿತ್ತು. ಜೈನ ಧರ್ಮದ ಪ್ರಾಚೀನತೆಯನ್ನು ವೇದಗಳ ಕಾಲದಷ್ಟು ಹಿಂದಕ್ಕೆ ಹೋಗುತ್ತದೆ ಎಂದು ಜೈನರು ಭಾವಿಸುತ್ತಾರೆ. ಭಾಗವತ ಪುರಾಣದಲ್ಲಿ ಮೊದಲನೆ ತೀರ್ಥಂಕರನಾದ ವೃಷಭ ದೇವನ ಉಲ್ಲೇಖವಿದೆ. ಕ್ರಿ.ಪೂ. 3ನೇ ಶತಮಾನದಲ್ಲಿ ಮೌರ್ಯರ ವಂಶದ ಚಕ್ರವರ್ತಿ, ಚಂದ್ರಗುಪ್ತ ಮತ್ತು ಆತನ ಗುರು ಭದ್ರಬಾಹು ಹಾಗೂ ಹನ್ನೆರಡು ಸಾವಿರ ಜೈನ ಮುನಿಗಳು ಉತ್ತರಭಾರತದಲ್ಲಿ ಕ್ಷಾಮ ತಲೆ ದೋರಿದಾಗ ದಕ್ಷಿಣ ಕರ್ನಾಟಕಕ್ಕೆ ಆಗಮಿಸಿ ಈಗಿನ ಶ್ರವಣಬೆಳಗೊಳದಲ್ಲಿ ತಪಸ್ಸು ಮಾಡಿದರೆಂದು ತಿಳಿದುಬರುತ್ತದೆ. ಅಂದಿನಿಂದ ಕರ್ನಾಟಕದಲ್ಲಿ ಜೈನಧರ್ಮವು ಈ ನಾಡನ್ನಾಳಿದ ಅರಸರ ರಾಜಾಶ್ರಯ ಮತ್ತು ಪ್ರೋತ್ಸಾಹದಿಂದಾಗಿ ಅಂದಿನ ಕಾಲದ ಅನ್ಯಧರ್ಮಗಳಿಗಿಂತ ಪ್ರಬಲ ಧರ್ಮವಾಗಿ ಬೆಳೆದು ಬಂದಿತೆಂದು ಹೇಳಬಹುದು. 24ನೇ ತೀರ್ಥಂಕರನ ಮರಣಾನಂತರ ಈ ಧರ್ಮದಲ್ಲಿ ಎರಡು ಪಂಗಡಗಳಾದವು. ಅವುಗಳೆಂದರೆ ಶ್ವೇತಾಂಬರ ಮತ್ತು ದಿಗಂಬರ. ಕರ್ನಾಟಕದಲ್ಲೂ ದಿಗಂಬರ ಪಂಥವೇ ಪ್ರಬಲವಾಯಿತು. ಈ ಹಿನ್ನೆಲೆಯನ್ನು ಗಮನಿಸಿದಾಗ ಮೈಸೂರು ಜಿಲ್ಲೆ ಮತ್ತು ಚಾಮರಾಜನಗರ ಜಿಲ್ಲೆಗಳನ್ನೊಳಗೊಂಡಂತೆ ಕೊಳ್ಳೇಗಾಲ ತಾಲ್ಲೂಕಿನಲ್ಲಿ ಬೆಳೆಯಿತು. ಈ ಪಂಥಕ್ಕೆ ಸೇರಿದ ಆದಿನಾಥ ಬಸದಿ ಕೊಳ್ಳೇಗಾಲ ಬಳಿ ಬಸ್ತೀಪುರದಲ್ಲಿತ್ತು. ಇಲ್ಲಿರುವ ಜೈನ ಕಂಚಿನ ಶಿಲ್ಪವನ್ನು ಮದ್ರಾಸ್ ವಸ್ತು ಸಂಗ್ರಹಾಲಯದಲ್ಲಿ ಕಾಣಬಹುದು.[15] [16] [17]. ಮತ್ತೆ ಲೊಕ್ಕನಹಳ್ಳಿ ಹೊಲದಲ್ಲಿ ಸಿಕ್ಕಿರುವ ಶಾಸನದ ಪ್ರಕಾರ ಜೈನ ಧರ್ಮದ ಬಗ್ಗೆ ಉಲ್ಲೇಖವಿದೆ.[18] ಕೊಳ್ಳೇಗಾಲದ ಉತ್ತರದಿಕ್ಕಿಗೆ ಇರುವ ಧನಗೆರೆಯಲ್ಲಿಯೂ ಬಸದಿಯ ಅವಶೇಷಗಳು ಮತ್ತು ಜೈನ ವಿಗ್ರಹಗಳು ದೊರೆತಿವೆ. ಈ ಭಾಗದಲ್ಲಿ ಸಿಕ್ಕಿರುವ ಶಿಲ್ಪವನ್ನು ಶ್ರೀರಂಗಪಟ್ಟಣದ ವಸ್ತುಸಂಗ್ರಹಾಲಯದಲ್ಲಿ

ಕಾಣಬಹುದು.[19] ಜೈನಕವಿ ದೇವಚಂದ್ರ ಕ್ರಿ.ಶ. 1838 ಬರೆದಿರುವ ರಾಜಾವಳಿ ಕಥೆಯಲ್ಲಿ ಕೊಳ್ಳೇಗಾಲದ ಪೂರ್ವಕ್ಕೆ ಇರುವ ಮಣಗಳ್ಳಿ ಎಂಬ ಪ್ರದೇಶದಲ್ಲಿ ಸಮುಂತಭದ್ರರೆಂಬ ಜೈನಾಚಾರ್ಯರು ಇದ್ದರೆಂದು ತಿಳಿದು ಬರುತ್ತದೆ.[20] ಈ ಎಲ್ಲಾ ಆಧಾರಗಳಿಂದ ಕೊಳ್ಳೇಗಾಲ ತಾಲ್ಲೂಕು ಜೈನಧರ್ಮದ ಪ್ರಭಾವಕ್ಕೆ ಒಳಗಾಗಿತ್ತೆಂದು ಹೇಳಬಹುದಾಗಿದೆ. ಕೊಳ್ಳೇಗಾಲದಲ್ಲೂ ರಾಘವೇಂದ್ರ ದೇವಾಲಯದ ಪಕ್ಕ ಜಿನ ಶಿಲ್ಪವನ್ನು ಗುರುತಿಸಲಾಗಿದೆ.

ಬೌದ್ದ ಧರ್ಮ:– ಕ್ರಿ.ಶ. 6ನೇ ಶತಮಾನದಲ್ಲಿ ಜನ್ಮ ತಾಳಿದ ಪ್ರಮುಖ ಧರ್ಮಗಳಲ್ಲಿ ಬೌದ್ಧಧರ್ಮವು ಒಂದಾಗಿದೆ ಈ ಧರ್ಮದ ಸ್ಥಾಪಕ ಸಿದ್ಧಾರ್ಥ ಅಥವಾ ಗೌತಮಬುದ್ಧ. ಈತನು ತನ್ನ 32ನೆಯ ವಯಸ್ಸಿನಲ್ಲಿ ಒಂದು ದಿನ ರಾತ್ರಿ ತನ್ನ ಹೆಂಡತಿ ಮಗ ನಿದ್ರೆಯಲ್ಲಿದ್ದಾಗ ಅವರನ್ನು ತ್ಯಜಿಸಿ ಬ್ರಾಹ್ಮಣ ಪಂಡಿತರ ಹತ್ತಿರಹೋಗಿ ಜೀವನದ ರಹಸ್ಯವನ್ನು ಮೋಕ್ಷ ಸಾಧನೆಗೆ ಮಾರ್ಗಗಳನ್ನು ತಿಳಿಯಲು ಅನೇಕ ರೀತಿಯ ಪ್ರಯೋಗಗಳನ್ನು ಮಾಡತೊಡಗಿದನು. ಆದರೆ ಇದರಿಂದ ಆತನಿಗೆ ಯಾವ ರೀತಿಯ ಪ್ರಯೋಜನವಾಗಲಿಲ್ಲ ಅನಂತರ ಕಾಡಿಗೆ ಹೋಗಿ ಒಂದು ವೃಕ್ಷದ ಕೆಳಗೆ ಕುಳಿತು ಉಗ್ರ ತಪಸ್ಸನ್ನು ಆಚರಿಸಿದನು 6 ವರ್ಷಗಳ ಸತತ ಪ್ರಯತ್ನದ ಫಲವಾಗಿ ಅವನಿಗೆ ಜ್ಞಾನೋದಯವಾಯಿತು. ಅಂದಿನಿಂದ ಬುದ್ಧ ಜ್ಞಾನಿಯಾದ. ಈತನು ತಪಸ್ಸಿಗೆ ಕುಳಿತ್ತಿದ್ದ ಮರವನ್ನು ಬೋಧಿ ವೃಕ್ಷ ಅಥವಾ ಜ್ಞಾನ ವೃಕ್ಷವೆಂದು ಕರೆಯಲಾಯಿತು. ಜ್ಞಾನೋದಯವಾದ ಸ್ಥಳದಲ್ಲಿ ಈಗ ಮಹಾಬೋಧಿ ದೇವಾಲಯವಿದೆ. ಗಯಾ ಈಗ ಬುದ್ಧಗಯೆಯಾಗಿದೆ. ತನಗೆ ದೊರೆತ ಜ್ಞಾನವನ್ನು ಬುದ್ಧ ಲೋಕ ಕಲ್ಯಾಣಕ್ಕಾಗಿ ವಿನಿಯೋಗಿಸಿದನು. ಸುಮಾರು 45 ವರ್ಷಗಳ ಕಾಲ ಸತತವಾಗಿ ಆತನು ಧರ್ಮ ಪ್ರಚಾರ ಕೈಗೊಂಡನು ಭಾರತದ ವಿವಿಧ ಭಾಗಗಳಲ್ಲಿ ಸಂಚರಿಸುತ್ತಾ ದೇಶೀಯ ಭಾಷೆಯಲ್ಲಿಯೇ ಧರ್ಮ ಪ್ರಚಾರ ಮಾಡುವುದರ ಮೂಲಕ ದೇಶ ವಿದೇಶಗಳಿಗೆ ತನ್ನ ಶಿಷ್ಯರುಗಳ ಮೂಲಕ ಉಪದೇಶಿಸಿದನು. ಬೌದ್ದ ಧರ್ಮದ ಜಾತಿ ಮತ ಭೇದವಿಲ್ಲದೆ ಎಲ್ಲರನ್ನು ಒಂದೇ ರೀತಿಯಾಗಿ ಕಂಡರು. ಅ ಸಮಯದಲ್ಲಿ ಬೇರಾವ ಧರ್ಮದ ಪ್ರಬಲ ವಿರೋಧಿಯಾಗಿ ನಿಲ್ಲದಿದ್ದುದರಿಂದ ಬೌದ್ಧ ಮತ ಭಾರತದಲ್ಲಿ ಮಾತ್ರವಲ್ಲದೇ ಏಷ್ಯಾದ ಅರ್ಧಭಾಗಗಳಿಗೂ ಹೆಚ್ಚು ಆವರಿಸಿತು. ಪಶ್ಚಿಮ ಖಂಡಗಳಲ್ಲಿ ಕ್ರೈಸ್ತ ಮತ ನಾಗರೀಕತೆಗೆ ಕಾರಣವಾದಂತೆ ಅನೇಕ ಪಾಶ್ಚಿಮಾತ್ಯ ದೇಶಗಳಲ್ಲಿ ಬೌದ್ಧ ಮತ ತಳಹದಿಯಾಯಿತು. ವಾಯುವ್ಯ ಮಾರ್ಗವಾಗಿ, ಅಫಘಾನಿಸ್ಥಾನ, ತುರ್ಕಿಸ್ಥಾನ, ಟಿಬೆಟ್, ಮತ್ತು ಮಂಗೋಲಿಯಾಗಳ ಮೂಲಕ ಬೌದ್ಧ ಭಿಕ್ಷಗಳು ಚೀನಾ ದೇಶಕ್ಕೆ ಹೋಗಿ ಇಲ್ಲಿಂದ ಜಪಾನ್ ಕೊರಿಯಾಗಳಿಗೂ ಪ್ರಚಾರ ಹರಡಿದರು. ಹಾಗೆಯೇ ಆಗ್ನೇಯ ಮತ್ತು ಪೂರ್ವ ರಾಷ್ಟ್ರಗಳಾದ ಬರ್ಮಾ, ಥಾಯ್ಲೆಂಡ್,

ಕಾಂಬೋಡಿಯಾ, ಜಾವ ಮಲಯ, ಸುಮಾತ್ರ, ಇನ್ನೂ ಮೊದಲಾದ ಪ್ರದೇಶಗಳಲ್ಲಿ ಬೌದ್ಧ ಧರ್ಮ ಪ್ರಚಾರ ತಲುಪಿತು. ಹೀಗೆ ಮೇಲಿನ ಕೆಲವು ವಿಷಯಗಳಿಂದ ಬೌದ್ಧ ಧರ್ಮವು ಅನೇಕ ರಾಷ್ಟ್ರಗಳನ್ನು ಹೊಂದಿರುವುದಲ್ಲದೇ ಕರ್ನಾಟಕದಲ್ಲಿಯೂ ನೆಲೆಸಿತು ಎಂಬುದಕ್ಕೆ ಅನೇಕ ಪುರಾವೆ ಹಾಗೂ ಸಾಕ್ಷ್ಯಾಧಾರಗಳಿವೆ. ಕರ್ನಾಟಕದಲ್ಲಿ ದೊರೆತ ಅಶೋಕನ ಕಾಲದ ಶಾಸನಗಳಿಂದ ಹಾಗೂ ಬೌದ್ಧ ಗ್ರಂಥಗಳಲ್ಲಿ ಬರುವ ಕೆಲವು ವಿಷಯಗಳಿಂದ ಕರ್ನಾಟಕವು ಕ್ರಿ.ಶ. 3ನೇ ಶತಮಾನದ ಹೊತ್ತಿಗೆ ಮೌರ್ಯರ ಆಡಳಿತ ಪ್ರಭಾವಕ್ಕೆ ಒಳಗಾಗಿತ್ತೆಂಬುದಕ್ಕೆ ಸಾಕ್ಷಿಗಳಿವೆ. ಮೌರ್ಯರ ಆಡಳಿತ ನಿಂತು ಹೋದ ಮೇಲೆ ಈ ನಾಡುಗಳಲ್ಲಿ ವೈಧಿಕ ಧರ್ಮಗಳು ಹೆಚ್ಚಾಗಿ ಬೆಳೆದವು. ಶಾತವಾಹನರ, ಕದಂಬರ ಕಾಲದಲ್ಲಿ ವೈಧಿಕ ಧರ್ಮದೊಂದಿಗೆ ಜೈನ ಧರ್ಮವು ಪ್ರಚಲಿತದಲ್ಲಿತ್ತು. ಜೈನ ಧರ್ಮಕ್ಕೆ ಹೆಚ್ಚು ಒಲವು ಗಂಗರ ಆಡಳಿತಕ್ಕೆ ಒಳಗಾಗಿದ್ದವು. ಆದರೂ ಕೂಡ ಬೌದ್ಧ ಧರ್ಮದ ಬೆಳವಣಿಗೆ ಮಾತ್ರ ಕುಂಟಿತವಾಗಲಿಲ್ಲ. 7ನೇ ಶತಮಾನದಲ್ಲಿ ಹ್ಯೂಯನ್‌ತ್ಸಾಂಗ್‌ನ ಪ್ರಕಾರ ಭಾರತದಲ್ಲಿ ಅನೇಕ ವಿಹಾರಗಳು, ಭಿಕ್ಷುಗಳು ಇದ್ದರು ಎಂದು ತನ್ನ ಗ್ರಂಥದಲ್ಲಿ ಹೇಳಿದ್ದಾರೆ.[21]

ಕರ್ನಾಟಕಕ್ಕೆ ಬೌದ್ಧಧರ್ಮದ ಆಗಮನವನ್ನು ಕುರಿತು ಈಗ ವಿಚಾರಮಾಡೋಣ. ಬೌದ್ಧ ಧರ್ಮದ ಆಗಮನವನ್ನು ಕುರಿತು ಅತ್ಯಂತ ಪ್ರಾಚೀನ ಉಲ್ಲೇಖವಿರುವುದು ಸೀಲೋನಿನ ಇತಿಹಾಸ ಗ್ರಂಥಗಳಾದ ಮಹಾವಂಶಗಳಲ್ಲಿ ಸಿಗುತ್ತದೆ.[22] ಅಶೋಕನು ಕ್ರಿ.ಪೂ 3ನೇ ಶತಮಾನದಲ್ಲಿ ತನ್ನ ಮಗ ಮಹೇಂದ್ರನನ್ನು ಸಿಲೋನಿಗೆ ಮತ ಪ್ರಚಾರಕ್ಕೆ ಕಳುಹಿಸಿದ ಕಾಲದಲ್ಲಿ ಭಿಕ್ಷು ಮಹಾದೇವನನ್ನು ಮಹಿಷಮಂಡಲ ಮತ್ತು ಬನವಾಸಿಗೆ ಕಳುಹಿಸಿದ್ದಾನೆ. ಕರ್ನಾಟಕದಲ್ಲಿ ದೊರೆತಿರುವ ಮೌರ್ಯ ಚಕ್ರವರ್ತಿ ಅಶೋಕನ 5 ಬ್ರಾಹ್ಮಿ ಶಾಸನಗಳು ಚಿತ್ರದುರ್ಗ, ಕೊಪ್ಪಳ ಮತ್ತು ಮಸ್ಕಿಗಳಲ್ಲಿ ದೊರೆತಿವೆ. ಕ್ರಿಸ್ತ.ಶಕ ಆರಂಭದ ಕಾಲದಲ್ಲಿ ಬೌದ್ಧ ಧರ್ಮವಿತ್ತು ಎಂಬುದಕ್ಕೆ ಚಂದ್ರನಳ್ಳಿಯ ಅಂಕ್ಲೇಗುಹೆಯಲ್ಲಿ ಸಾಕ್ಷ್ಯಾಧಾರಗಳಿವೆ. ಅಶೋಕನ ತಾತನಾದ ಚಂದ್ರಗುಪ್ತನು ಪ್ರಚಾರ ಮಾಡಿದ ಜೈನ ಧರ್ಮವು ಕರ್ನಾಟಕದ ಶ್ರವಣಬೆಳಗೊಳದಲ್ಲಿ ನೆಲೆಯಾಗಿ ನಿಂತುಬಿಟ್ಟಿದೆ. ಈ ಧರ್ಮವು 12ನೇ ಶತಮಾನದವರೆಗೂ ಪ್ರಬಲಧರ್ಮವಾಗಿ ಪ್ರಚಾರದಲ್ಲಿತ್ತು. ಹಾಗೆಯೇ ನೋಡಿದರೆ ಬೌದ್ಧ ಧರ್ಮ ಸಹ ಕರ್ನಾಟಕದಲ್ಲಿತ್ತು. ಆದರೆ ಆಕಾಲವನ್ನು ಒಂದು ಅಲ್ಪ ಸಂಖ್ಯಾತರ ಧರ್ಮವಾಗಿ ಬದುಕಿತೆಂದು ಮಾತ್ರ ಹೇಳಬಹುದು. ಬೌದ್ಧ ಧರ್ಮವು ಕರ್ನಾಟಕದಲ್ಲಿ ಇದ್ದುದಕ್ಕೆ ಈ ಕೆಲವು ಅಂಶಗಳು ಪೂರಕವಾಗಿವೆ.

1. ಕ್ರಿ.ಶ. 1888ರಲ್ಲಿ ಚಂದ್ರವಳ್ಳಿಯ ಭೂಶೋಧನೆಯಲ್ಲಿ ದೊರೆತ ಸೀಸದ ನಾಣ್ಯದ ಮೇಲೆ ಬೌದ್ಧ ಸಂಕೇತಗಳು ಎಂದು ಹೇಳಬಹುದಾದ ಬೋಧಿ ವೃಕ್ಷ ಮತ್ತು ಕಲ್ಲು ಗುಡ್ಡೆಗಳ ಚಿತ್ರವಿದೆ. ಈ ಹಿನ್ನೆಲೆ ಕ್ರಿ.ಶ. ಆರಂಭದ ಶತಮಾನಗಳಲ್ಲಿ ಬೌದ್ಧ ಧರ್ಮವು ರಾಜಾಶ್ರಯವನ್ನು ಪಡೆದಿತ್ತು ಎಂದು ಹೇಳಬಹುದು.
2. ಮೈಸೂರು ಜಿಲ್ಲೆಯ ಕಾವೇರಿ ನದಿಯ ದಡದ ತಲಕಾಡಿನಲ್ಲಿ (ರಾಜರಾಜಪುರ) ಸುಮಾರು ಕ್ರಿ.ಶ. 490ರ ಶಾಸನದಲ್ಲಿ ಮಾಧವನೆಂಬುವನೊಬ್ಬನು ವಾದಿಮದಗಜೇಂದ್ರನೆಂದು ಹೆಸರುಗಳಿಸಿದ್ದ ಬೌದ್ಧ ಯಾತ್ರಿಕನೊಬ್ಬನ ಮೇಲೆ ವಿಜಯಿಯಾದನೆಂದು ಅದರ ಫಲವಾಗಿ ರಾಜನಿಂದ "ವಾಧೀಭಸಿಂಹ"ನೆಂಬ ಬಿರುದನ್ನು ಪಡೆದನೆಂದು ಹೇಳಿವೆ. ಈ ಹಿನ್ನೆಲೆಯಲ್ಲಿ ತಲಕಾಡಿನಲ್ಲಿಯೂ ಬೌದ್ಧರು ಇದ್ದರೆಂದು ಹೇಳಬಹುದು.
3. ಸೊರಬದ ಬಳಿ ಬನವಾಸಿಯೂ 11ನೇ ಶತಮಾನದವರಗೂ ಬೌದ್ಧ ಕೇಂದ್ರವಾಗಿ ಮುಂದುವರಿಯಿತೆಂದು ಬೆಳ್ಳಿಗಾವೆಯ ಶಾಸನದಲ್ಲಿ ಉಕ್ತವಾಗಿದೆ.
4. ಕ್ರಿ.ಶ. 1085 ಬೆಳ್ಳಿಗಾವೆಯ ಶಾಸನದಲ್ಲಿ ಚಾಲುಕ್ಯ ಚಕ್ರವರ್ತಿ ಅಹವಮಲ್ಲನಮಂತ್ರಿ ಪ್ರಭುದ್ಧ ವಿಹಾರವೆಂಬ ಭವ್ಯ ಬೌದ್ಧ ವಿಹಾರವನ್ನು ಕಟ್ಟಿಸಿದಂತೆ ಶಾಸನದಲ್ಲಿ ಯುಕ್ತವಾಗಿದೆ.
5. ಬಾದಾಮಿಯ ಗುಹೆಯೊಂದರಲ್ಲಿ ಪದ್ಮಾಸನದಲ್ಲಿರುವ ಬುದ್ಧನ ಶಿಲ್ಪವಿದೆ ಹಾಗೂ ಬೌದ್ಧರ ಗುಹೆಗಳಿವೆ.
6. ಐಹೊಳೆಯ ಸುಪ್ರಸಿದ್ಧ ದುರ್ಗಾದೇವಾಲಯವು ಮತ್ತು ರಚನೆಯಲ್ಲಿ ಬೌದ್ಧ ದೇವಾಲಯವನ್ನು ಹೋಲುತ್ತದೆ.
7. ಮೌರ್ಯರು, ಕುಶಾನರು, ಶಾತವಾಹನರು ಮತ್ತು ಕಲಚೂರಿಗಳು ಬೌದ್ಧಧರ್ಮದ ಕಡೆ ಒಲವು ಉಳ್ಳವರಾಗಿದ್ದರು.
8. ಕರ್ನಾಟಕ ಸರ್ಕಾರ ಮತ್ತು ಮೈಸೂರು ವಿಶ್ವವಿದ್ಯಾನಿಲಯದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗದವರು ಕೈಗೊಂಡ ಬೆಂಗಳೂರು ಜಿಲ್ಲೆಯ ದೊಡ್ಡಬಳ್ಳಾಪುರ ತಾಲ್ಲೂಕು ರಾಜಘಟ್ಟದಲ್ಲಿ 2001ರಲ್ಲಿ ನಡೆದ ಉತ್ಖನನದಿಂದ ಬೌದ್ಧ ಚೈತ್ಯಾಲಯದಲ್ಲಿ ಬುದ್ಧನ ಶಿಲ್ಪಗಳು ದೊರೆತಿವೆ ಹಾಗೆಯೇ ಮಣ್ಣಿನ ಸ್ತೂಪಗಳು ದೊರೆತಿದ್ದು ಇದರಲ್ಲಿ ಬುದ್ಧನ ಶ್ಲೋಕಗಳು ಬ್ರಾಹ್ಮಿ ಲಿಪಿಯಲ್ಲಿ ವ್ಯಕ್ತವಾಗಿವೆ. ಈ ಹಿನ್ನೆಲೆಯಿಂದ ಹಾಗೂ ಇನ್ನಿತರ ಆಧಾರಗಳಿಂದ ಪ್ರಾಚೀನ ಕರ್ನಾಟಕದಲ್ಲಿ ಬೌದ್ಧ ಧರ್ಮವು ಒಂದು

ಪರ್ವಯುಗವೆಂದು ಹೇಳಬಹುದು. ಪ್ರಾಯಶಃ ರಾಜಘಟ್ಟದ ಭೂಶೋದನೆಯಿಂದ ದೊರೆತ ಹಿನ್ನೆಲೆಯನ್ನೂ ನೋಡುವುದಾದರೆ ಮೌರ್ಯದೊರೆ ಅಶೋಕ ಚಕ್ರವರ್ತಿ ಬೌದ್ಧ ಧರ್ಮ ಪ್ರಚಾರಕ್ಕೆ ಶ್ರೀಲಂಕಕ್ಕೆ ತನ್ನ ಮಕ್ಕಳು ಮತ್ತು ಅನುಯಾಯಿಗಳನ್ನು ಕಳುಹಿಸುವಾಗ ಅವರು ಈ ಮಾರ್ಗವಾಗಿ ಬಂದು ಪ್ರಾಚೀನ ನೆಲೆಯಾದ ರಾಜಘಟ್ಟದಲ್ಲಿ ಬೌದ್ದ ಧರ್ಮ ಕುರುಹು ಕರ್ನಾಟಕದಲ್ಲಿ ಪ್ರಮುಖ ಪಾತ್ರವಹಿಸುವುದರಲ್ಲಿ ಮಹತ್ತರವಾದ ಕೊಡುಗೆಯಾಗಿದೆ ಎಂದು ಹೇಳಬಹುದು. ಹಾಗೆಯೇ ಇನ್ನೊಂದು ಮುಖ್ಯವಾದ ಅಂಶವೆಂದರೆ ಕುಶಾನರ ಕಾಲದಲ್ಲಿ ಗಾಂಧಾರ ಶಿಲ್ಪ ಕಲೆಯು ಹೆಚ್ಚು ಪ್ರಮುಖವಾಗಿತ್ತು. ತಕ್ಷಶಿಲೆ, ಪೇಶಾವರ ಪ್ರದೇಶಗಳಲ್ಲಿ ಗಂಧಾರನೆಂದು ಕರೆಯಲಾಗುತ್ತಿತ್ತು. ಮಹಾಯಾನ ಪಂಥದಲ್ಲಿ ವಿಗ್ರಹ ಪೂಜೆಗೆ ಅವಕಾಶವಿತ್ತು. ಆದ ಕಾರಣ ಕುಶಾನರ ಕಾಲದಲ್ಲಿ ಗಾಂಧಾರ ಶೈಲಿ ಉಗಮವಾಯಿತೆಂದು ಸಹ ಹೇಳಬಹುದು. ಈ ರೀತಿಯ ಬುದ್ಧನ ಗಾರೆ ಶಿಲ್ಪಗಳು ರಾಜಘಟ್ಟದ ಉತ್ಖನನದಿಂದ ದೊರೆತಿದೆ. ಬೌದ್ಧರ ನೆಲೆ ಕರ್ನಾಟಕದಲ್ಲಿ ಒಂದು ಮಹತ್ವಪೂರ್ಣವಾಗಿದೆ. ಗುಲ್ಬರ್ಗದಲ್ಲಿ ವಿಶಾಲವಾದ ಬೌದ್ಧವಿಹಾರ ಸ್ಥಾಪನೆಗೊಂಡಿದೆ. ಮೈಸೂರು ಜಿಲ್ಲೆ ಕುಶಾಲನಗರದ ಹತ್ತಿರ ಬೈಲುಕುಪ್ಪೆಯಲ್ಲಿ ಬೌದ್ಧಕೇಂದ್ರ ಸ್ಥಾಪಿಸಿದ್ದಾರೆ. ಹಾಗೆಯೇ ಚಾಮರಾಜನಗರ ಜಿಲ್ಲೆ ಕೊಳ್ಳೇಗಾಲ ತಾಲ್ಲೂಕು ಒಡೆಯರ ಪಾಳ್ಯದಲ್ಲಿಯು ಟಿಬೆಟ್ ಜನರು ಬೌದ್ಧಕೇಂದ್ರವನ್ನು ಮಾಡಿಕೊಂಡಿದ್ದಾರೆ. ಇದೇ ತಾಲ್ಲೂಕಿನ ಚೆನ್ನಾಲಿಂಗನ ಹಳ್ಳಿಯ ಬಳಿ ಜೇತವನ ಬೌದ್ಧವಿಹಾರ ಸ್ಥಾಪನೆಗೊಂಡಿದೆ. ಈ ಹಿನ್ನೆಲೆಯಿಂದ ಕೊಳ್ಳೇಗಾಲ ತಾಲ್ಲೂಕು ಪ್ರಾಚೀನ ಕಾಲದಲ್ಲಿ ಬೌದ್ಧಧರ್ಮ ಪ್ರಚಾರಗೊಂಡಿದ್ದರೂ ಈ ಭಾಗದಲ್ಲಿ ಟಿಬೆಟ್ ಜನ ಬಂದ ಮೇಲೆ ಬೌದ್ಧ ನೆಲೆಯಾಗಿ ರೂಪುಗೊಂಡಿದೆ ಎಂದು ಹೇಳಬಹುದು.

ಕ್ರೈಸ್ತಧರ್ಮ:- ಭಾರತದಲ್ಲಿ: ಯೇಸು ಕ್ರಿಸ್ತನ ಹನ್ನೆರಡು ಮಂದಿ ಶಿಷ್ಯರುಗಳಲ್ಲಿ ಒಬ್ಬನಾದ ಸಂತ ತೋಮಾ ಕ್ರಿ.ಶ. ಸುಮಾರು 42ರ ಅವಧಿಯಲ್ಲಿ ದಕ್ಷಿಣ ಭಾರತಕ್ಕೆ ಬಂದು ಈ ಭಾಗದಲ್ಲಿ ಕ್ರೈಸ್ತ ಧರ್ಮ ಪ್ರಚಾರ ಮಾಡಿದ. ಅಲ್ಲಿನ ಮಲಬಾರ್ ಮತ್ತು ಮದ್ರಾಸ್‌ಗಳಲ್ಲಿ ಅನೇಕ ಸಭೆಗಳನ್ನು ಸ್ಥಾಪಿಸಿದ್ದ ಈತ ಮದ್ರಾಸಿನಲ್ಲಿ ಕೊಲ್ಲಲ್ಪಡುವ ಮೊದಲೇ ಕರ್ನಾಟಕಕ್ಕೆ ಬಂದಿದ್ದನೆಂದು ಕೆಲವು ಕ್ರೈಸ್ತ ಧಾರ್ಮಿಕರು ಹೇಳುತ್ತಾರೆ.[23]

ವಿದೇಶಗಳಿಂದ ಬಂದ ಫ್ರಾನ್ಸಿಸ್ಕಾನ್ ಹಾಗೂ ಡೊಮಿನಿಕನ್ ಸಭೆಯ ಕ್ರೈಸ್ತ ಗುರುಗಳು ಕ್ರಿ.ಶ. 1325ರಿಂದ ಈಚೆಗೆ ಭಾರತಕ್ಕೆ ಬಂದು ಕ್ರೈಸ್ತ ಧರ್ಮದ ಪ್ರಚಾರ ಕಾರ್ಯವನ್ನು ಕೈಗೊಂಡಿರುತ್ತಾರೆ.

ಕರ್ನಾಟಕದಲ್ಲಿ: 1498 ರಲ್ಲಿ ವಾಸ್ಕೋಡಗಾಮ ಕೇರಳದ ಕಲ್ಲಿಕೋಟೆಗೆ ಬಂದು ಸಮುದ್ರ ಮಾರ್ಗ ಕಂಡುಹಿಡಿದ ಮೇಲೆ ಪೋರ್ಚುಗೀಸರು ಹೆಚ್ಚಿನ ಸಂಖ್ಯೆಯಲ್ಲಿ ಭಾರತಕ್ಕೆ ಬಂದರು. ಇವರು ಕರ್ನಾಟಕದ ಕರಾವಳಿ ಪ್ರದೇಶಗಳಲ್ಲಿ ನೆಲೆನಿಂತು ವ್ಯಾಪಾರ ಶುರುಮಾಡಿದರು. ಇದಾದ ಬಳಿಕ ಕರ್ನಾಟಕದಲ್ಲಿ ಕ್ರೈಸ್ತ ಧರ್ಮದ ಸ್ಪಷ್ಟ ಗುರುತುಗಳನ್ನು ಕಾಣಬಹುದು.[24] ನಾಲ್ಕನೆ ಶತಮಾನದಲ್ಲಿ ಮಲಬಾರಿನಲ್ಲಿ ಕ್ರೈಸ್ತ ಧರ್ಮ ಪ್ರಚಾರದಲ್ಲಿತ್ತೆಂದೂ ಕ್ರಿ.ಶ. 345 ಶ್ರೀಮಂತ ಕ್ರೈಸ್ತನೊಬ್ಬನು ಬಂದಿದ್ದರ ಬಗ್ಗೆಯೂ 520ರಲ್ಲಿ ಇಲ್ಲಿಯ ಚರ್ಚುಗಳ ಬಗ್ಗೆಯೂ ಉಲ್ಲೇಖವಿದ್ದು. ಕ್ರಿ.ಶ. 1324ರಲ್ಲಿ ಐದು ಮಂದಿ ಡೊಮೆನಿಕ್ ಪಾದ್ರಿಗಳು ಕರ್ನಾಟಕದಲ್ಲಿ ಪ್ರಚಾರ ಕೈಗೊಂಡಿದ್ದ. ಆಗ ಹತ್ತು ಸಾವಿರ ಕ್ರೈಸ್ತರಿದ್ದರು ಎಂದೂ ಬೆಂಗಳೂರು ಜಿಲ್ಲೆಯ ಆನೇಕಲ್ಲಿನಲ್ಲಿ 1400 ಕ್ರೈಸ್ತ ಧರ್ಮೀಯನೊಬ್ಬನ ಸಮಾಧಿ ಶಿಲೆಯಿರುವುದಾಗಿಯೂ ತಿಳಿದುಬರುತ್ತದೆ.[25]

ವಾಸ್ಕೋಡಿಗಾಮ 1498ರಲ್ಲಿ ಕಲ್ಲಿಕೋಟೆಗೆ ಬಂದಾಗ ಅಲ್ಲಿಯ ದೇವಾಲಯವೊಂದನ್ನು ತೋರಿಸಿ ಅದು ಮೇರಿಯದೆಂದೂ ಭಿತ್ತಿಚಿತ್ರಗಳು ಕ್ರೈಸ್ತ ಸಾಧುಸಂತರದೆಂದೂ ನಂಬಿಸಲಾಗಿದೆ. ಕೇರಳದ ಚೇಪರ್ಡ್‌ನಲ್ಲಿರುವ ಆಸ್ತಿಕ ಪಂಗಡದ ಸಿರಿಯನ್ನರ ಚರ್ಚ್‌ಗಳಲ್ಲಿ 16ನೇ ಶತಮಾನದ ಕೆಲವು ಭಿತ್ತಿ ಚಿತ್ರಗಳಿವೆ. ಆದರೆ ಚಿತ್ರ ಮತ್ತು ವಿವರಣೆಗಳಲ್ಲಿ ಹೊಂದಾಣಿಕೆ ಇಲ್ಲ. ಪೋರ್ಚುಗೀಸರು 1510ರಲ್ಲಿ ಗೋವ ವಶಪಡಿಸಿಕೊಂಡು ಕಟ್ಟಡಗಳ ರಚನೆ ಮಾಡಿದರು. 1560ರಲ್ಲಿ ಗಾಮೆಯಲ್ಲಿ ಆಸ್ತಿಕರಲ್ಲದ ಪಂಗಡದವರನ್ನು ಶಿಕ್ಷಿಸಲು ಇನ್‌ಕ್ವಿಜಿಸನ್ ಆರಂಭವಾಗಿ 1812ರವರೆಗೆ ಇದ್ದು ಅಪರಾಧಿಗಳನ್ನು ಮೆರವಣಿಗೆಯಲ್ಲಿ ತರುವಾಗ ಬಟ್ಟೆಯ ಮೇಲೆ ಚಿತ್ರ ವಿಚಿತ್ರವಾಗಿ ಚಿತ್ರಗಳು ಬರೆಯುತ್ತಿದ್ದರಲ್ಲದೆ ಮರಣದಂಡನೆಯ ನಂತರ ಅವರ ಚಿತ್ರ ಬರೆಯಿಸಿ ಡೊಮೇನಿಕ್ ಚರ್ಚ್‌ನಲ್ಲಿ ತೂಗು ಹಾಕುತ್ತಿದ್ದರು ಇದೊಂದು ಕ್ರೂರ ಆಚರಣೆಯಾದರೂ ಸಾವಿರಾರು ಕೈದಿಗಳ ಭಾವಚಿತ್ರ ರಚನೆಗೆ ಕಾರಣವಾಯಿತು ಈಗ ಈ ಚಿತ್ರಗಳು ಉಳಿದುಬಂದಂತೆ ತೋರುವುದಿಲ್ಲ. ಆದರೆ ಗೋವೆಯನ್ನು ಆಳಿದ ವೈಸ್‌ರಾಯ್‌ಗಳ ಭಾವಚಿತ್ರ ಸೆಕ್ಯಾಡ್ರಿಲ್‌ನಲ್ಲಿ ಇಂದಿಗೂ ಉಳಿದುಬಂದಿದೆ. ಯೂರೋಪಿನಲ್ಲಿರುವಂತೆ ಗೋಡೆಯ ಹಲವು ಚರ್ಚ್‌ಗಳಲ್ಲೂ ಕ್ರೈಸ್ತ ಸಾಧುಸಂತರ ಭಿತ್ತಿಚಿತ್ರ ರಚಿಸಿದ್ದು 1601ರಲ್ಲಿಯೇ ದಾಖಲಾಗಿದೆ. ಇಂಗ್ಲೆಂಡ್‌ನಿಂದ 1583ರಲ್ಲಿ ಬಂದ ನಾಲ್ವರು ಪ್ರವಾಸಿಗರು ಇನ್‌ಕ್ವಿಜಿಷನ್‌ನಿಂದ ತಪ್ಪಿಸಿಕೊಂಡಿದ್ದು

ಅದರಲ್ಲಿ ಜೇಮ್ಸ್‌ಸ್ಟೋರಿ ಎಂಬ ಚಿತ್ರಕಲಾವಿದನೂ ಇದ್ದ. ಚರ್ಚ್‌ಗಳಲ್ಲಿ ಚಿತ್ರ ರಚಿಸಲು ಆತನನ್ನು ನೇಮಿಸಿಕೊಳ್ಳಲಾಯಿತು ಮಹಮ್ಮದೀಯರು ಇರಿಸಿಕೊಂಡಂತೆ ಕ್ರೈಸ್ತರು ದೇಶೀಯ ಕಲಾವಿದರನ್ನು ಬಳಸಿಕೊಂಡಂತೆ ತೋರುವುದಿಲ್ಲ. ಜೇಮ್ಸ್‌ಸ್ಟೋರಿಯವಿನ ಉಳಿದವರು ವಿಜಾಪುರಕ್ಕೆ ಬಂದು ಎರಡನೇ ಇಬ್ರಾಹಿಂನನ್ನು ಕಂಡರು. ಆ ವೇಳೆಗೆ ಗೋವಾದ ಆರ್ಚ್‌ಬಿಷಪ್ ಕೆಲವು ಯಹೂದಿಗಳನ್ನು ರಾಜನ ಕೋರಿಕೆಯಂತೆ ವಿಜಾಪುರಕ್ಕೆ ಕಳುಹಿಸಿದ್ದರು. ಇದರಿಂದಾಗಿ ವಿಜಾಪುರದ ಮುಸ್ಲಿಂ ಅರಸರಿಗೆ ಕ್ರೈಸ್ತ ಧರ್ಮ ಅಪರಿಚಿತವಾಗಿರಲಿಲ್ಲ. ಯೂರೋಪಿನ ವಿಲಕ್ಷಣ ಪಂಥದ ಚಿತ್ರಾಕಾರ ಕಾರ್ನಿಲಿಯಸ್ ಹೆಡಾ ಎಂಬಾತ ಗೋವೆಯಿಂದ ತಪ್ಪಿಸಿಕೊಂಡು 1605ರಲ್ಲಿ ವಿಜಾಪುರಕ್ಕೆ ಬಂದು ಎರಡನೇ ಇಬ್ರಾಹಿಂಗೆ ವೀನಸ್, ಕೂಪಿಡ್ ಇತ್ಯಾದಿ ಚಿತ್ರಗಳನ್ನು ರಚಿಸಿ ತೋರಿಸಿದ್ದು; ಇಬ್ರಾಹಿಂ ಆಸಕ್ತಿಯಿಂದ ಅದನ್ನು ನೋಡಿ ಹೆಡಾನನ್ನು ಆಸ್ಥಾನ ಕಲಾವಿದನನ್ನಾಗಿ ನೇಮಿಸಿಕೊಂಡ ಹಿಂದಿನ ವಿಭಾಗದಲ್ಲಿ ನೋಡಿರುವಂತೆ ಇಬ್ರಾಹಿಂ ಪರ್ಷಿಯನ್ ಹಾಗೂ ದೇಶೀಯ ಚಿತ್ರಾಕಾರರಿಗೆ ಪ್ರೋತ್ಸಾಹ ನೀಡಿದಂತೆ ಹೆಡಾ ಸಹ ಕಲಾವಿದನೆಂದು ಮನ್ನಣೆ ನೀಡಿದ್ದಿರಬಹುದು. ಇಂದಿಗೂ ವಿಜಾಪುರದ ಆಸರ್‌ಮಹಳ್ ಹಾಗೂ ವಿಜಾಪುರದ ಬಳಿ ಉಳಿದಿರುವ ಭಿತ್ತಿಚಿತ್ರಗಳು ಹಿಂದೂ ಅಥವಾ ಪರ್ಷಿಯನ್ ಶೈಲಿಯಲ್ಲಿ ಇರದೆ ಮಧ್ಯಯುಗದ ಯೂರೋಪ್ ಶೈಲಿಯಲ್ಲಿ ನೆರಳು ಬೆಳಕಿನಿಂದ ಕೂಡಿ ರಚಿಸಿದೆ.[26]

ದಕ್ಷಿಣ ಭಾರತದಲ್ಲಿ ವಿಜಯನಗರ 15–17ನೇ ಶತಮಾನದಲ್ಲಿ ವಿದೇಶೀ ಪ್ರವಾಸಿಗರನ್ನು ಆಕರ್ಷಿಸಿತ್ತು ದೊಮಿಂಗೋಪಾಯೆಸ್, ಅಬ್ದುಲ್‌ರಜಾಕ್, ಮುಂತಾದವರು ವಿಜಯನಗರ ವೈಭವದೊಂದಿಗೆ ಚಿತ್ರಕಲೆಯ ಬಗ್ಗೆ ಸಾಕಷ್ಟು ಸಂಗತಿಗಳನ್ನು ಹೇಳಿದ್ದಾರೆ.[27] ಲಿನ್‌ಸ್ಕೊತೆನ್ ಬಂದಿದ್ದಾಗ 1583 ವಿಜಯನಗರ ಅಂತಿಮ ದಿನಗಳನ್ನು ಕಾಣುತ್ತಿತ್ತು ನರಸಿಂಹನ ರಾಜ್ಯದಲ್ಲಿ ಸೆಂಟ್‌ಥಾಮಸನು ತನ್ನ ಧರ್ಮವನ್ನು ಎಷ್ಟು ಬೋಧಿಸಿದರೂ ಉಪಯೋಗವಾಗಲಿಲ್ಲ. ಬ್ರಾಹ್ಮಣರು ಅಡ್ಡಿ ಆತಂಕಗಳನ್ನು ಒಡ್ಡಿದ್ದರು. ಕೊನೆಗೆ ಸೆಂಟ್‌ಥಾಮಸ್‌ನನ್ನೇ ಮೋಸದಿಂದ ಕೊಂದರು ಈ ಕೊಲೆಯ ಚಿತ್ರವನ್ನು ಇಂಡಿಯಾದ ಚರ್ಚ್‌ಗಳಲ್ಲಿ ಬರೆಯಲಾಗಿದೆ ಎಂದು ಲಿನ್‌ಸ್ಕೋತೆನ್ ಹೇಳುತ್ತಾನೆ. ಸೇಂಟ್‌ಥಾಮಸ್ ಬಂದು ಆ ವೇಳೆಗೆ ಹದಿನೈದು ಶತಮಾನಗಳೇ ಕಳೆದಿತ್ತು. ವಿಜಯನಗರ ಚೋಳಮಂಡಲದವರೆಗೂ ವ್ಯಾಪಿಸಿದ್ದಾಗ ಬುಕ್ಕರಾಯ ಸಹ ಮೈಲಾಪುರದ ಸೇಂಟ್‌ಥಾಮಸ್‌ನ ಇಗರ್ಜಿಗೆ ದತ್ತಿ ಬಿಟ್ಟಿದ್ದ. ಆತನ ಪ್ರೋತ್ಸಾಹದಿಂದ ಚರ್ಚ್‌ಗಳಲ್ಲಿ ಥಾಮಸ್‌ನ ಕಥೆಯ ಚಿತ್ರಗಳನ್ನು ಬರೆಸಿರಬಹುದು. ಈತ ಹೇಳುವ ನರಸಿಂಗ ಎಂದರೆ ಸಾಳುವ ನರಸಿಂಹನೇ (1485–91) ಥಾಮಸ್ ಬಂದಾಗ ವಿಜಯನಗರ ಕಾಲದಲ್ಲಿ

ದೇವಾಲಯಗಳಲ್ಲಿ ರಾಮಾಯಣ ಮಹಾ ಭಾರತಗಳ ಚಿತ್ರಬರೆಸುವ ಪದ್ಧತಿ ಹೆಚ್ಚಾಗಿ ಮತ್ತೆ ಬಳಕೆಗೆ ಬಂದದ್ದು ಅಂತೆಯೇ ಚರ್ಚ್‌ಗಳಲ್ಲಿ ಕ್ರೈಸ್ತಪರ ಚಿತ್ರಗಳ ರಚನೆಯಾಗಿದ್ದಿರಬಹುದು.[28] ಇದಾದ ಹದಿನೇಳು ವರ್ಷಗಳಾದ ಮೇಲೆ ವಿಜಯನಗರದ ಇನ್ನೊಂದು ಶಾಖೆಯಾಗಿ ಚಂದ್ರಗಿರಿಯಲ್ಲಿ ಎರಡನೇ ವೆಂಕಟ, ಕ್ರೈಸ್ತ ಮತೀಯರು ಚಿತ್ರಕಲೆ ಕಲಾವಿದರಿಗೆ ಅಕ್ಬರನಷ್ಟೇ ಆಸಕ್ತಿ ತೋರಿಸಿ ಪ್ರೋತ್ಸಾಹಿಸಿದ. ಪೋರ್ಚುಗಲ್‌ನ ಫಾದರ್. ಡಿಕಾಸಿಯೊ ಎಂಬುವರು ವೆಂಕಟನ ಆಸ್ಥಾನಕ್ಕೆ ಬಂದು ಕಲವು ಕ್ರೈಸ್ತಮತೀಯರ ಭಾವಚಿತ್ರಗಳನ್ನು ಕೊಟ್ಟಾಗ ಆತ ಅವುಗಳನ್ನು ಅಚ್ಚರಿಯಿಂದ ನೋಡಿದನಲ್ಲದೆ ಸಭಾಸದಸ್ಯರಿಗೂ ತೋರಿಸಿದ. ಹೀಗೆ ದಕ್ಷಿಣ ಭಾರತದಲ್ಲಿ ಕ್ರೈಸ್ತ ಧರ್ಮಬೆಳೆಯಿತು. ಯೂರೋಪಿನಿಂದ 1899ರಲ್ಲಿ ಮಂಗಳೂರಿಗೆ ಬಂದ ಸಹೋದರ ಆ್ಯಂಟೊನಿ ಮೋಶ್ವಿನಿ ಅಲ್ಲಿಯ ಸೇಂಟ್ ಅಲಾಯಸಿಸ್ ಚರ್ಚ್‌ನಲ್ಲಿ 1902–1904ರ ಅವಧಿಯಲ್ಲಿ ನೂರಾರು ಚಿತ್ರಗಳನ್ನು ಕ್ಯಾನ್‌ವಾಸ್ ಮೇಲೆ ರಚಿಸಿರುವುದು ಕಂಡುಬರುತ್ತವೆ.[29] 18–19ನೇ ಶತಮಾನದಲ್ಲಿ ಯೂರೋಪಿನಿಂದ ಬಂದ ಅನೇಕ ಕಲಾವಿದರಲ್ಲಿ ಕೆಲವರು ಅಂದಿನ ಮೈಸೂರು ಸೀಮೆಗೂ ಬಂದರು. ಇಲ್ಲಿಯ ಹಲವಾರು ದೃಶ್ಯಗಳನ್ನು ಗ್ರಾಫಿಕ್ ಮಾಧ್ಯಮದಲ್ಲಿ ಚಿತ್ತಿಸಿದ್ದಾರೆ. ಅದರಲ್ಲಿ ರಾಬರ್ಟ್‌ಹೋಮ್, ಎ.ಅಲೆನ್, ಆರ್.ಎಚ್.ಕೋಲ್‌ಬ್ರೂಕ್, ಜೇಮ್ಸ್‌ಹಂಟರ್ ಚಾರ್ಲ್ಸ್‌ಗೋಲ್ಡ್ ಮುಂತಾದವರ ಕೃತಿಗಳು ಕ್ರೈಸ್ತ ಧರ್ಮದ ಬಗ್ಗೆ ಮಾಹಿತಿ ನೀಡುತ್ತವೆ.

ತಮಿಳುನಾಡು: ಚಾಮರಾಜನಗರ ಜಿಲ್ಲೆಯ ಗಡಿಭಾಗವಾದ ತಮಿಳುನಾಡಿನ ಸೇಲಂ, ಕೊಯಮತ್ತೂರು, ಈರೋಡು ಸ್ವಲ್ಪ ದೂರದ ಭಾಗಗಳಾದ ಮಧುರೆ, ತಂಜಾವೂರು, 1623ರಿಂದ 1659ರಲ್ಲಿ ಮಧುರೆಯ ತಿರುಮನಾಯಕನ ಅಧಿಪತ್ಯಕ್ಕೆ ಒಳಪಟ್ಟಿತ್ತು ಕಟ್ಟಿಮೊದಲಿಯರ್ ಎಂಬ ಸಾಮಂತರಾಜರು ಸುಮಾರು ಎಪ್ಪತ್ತಕ್ಕೂ ಹೆಚ್ಚು ಪುಟ್ಟಪಾಳೆಯಗಳ ಆಡಳಿತ ನಡೆಸುತ್ತಿದ್ದರು. ಮಧುರೆ ಮಿಷನ್‌ಗೆ ಸೇರಿದ ಕ್ರೈಸ್ತ ಗುರುಗಳು ಆಗ ಸಾಂಬಳ್ಳಿ, ಸತ್ಯಮಂಗಲದಲ್ಲಿ ನೆಲೆಸಿದ್ದು ಗಟ್ಟಿ ಮೊದಲಿಯರ್ ಆಳ್ವಿಕೆಗೆ ಒಳಪಟ್ಟಿದ್ದ ಕೊಳ್ಳೇಗಾಲ ತಾಲ್ಲೂಕಿನ ಅಜ್ಜೀಪುರ ಮುಂತಾದ ಕಡೆ ಅನೇಕರನ್ನು ಕ್ರೈಸ್ತಧರ್ಮಕ್ಕೆ ಮತಾಂತರಗೊಳಿಸಿದ್ದರು. ಕೆಲವರು ಕೊಳ್ಳೇಗಾಲ ತಾಲ್ಲೂಕಿನ ಅನೇಕ ಗ್ರಾಮಗಳಿಂದ ಸತ್ಯಮಂಗಲಕ್ಕೆ ಹೋಗಿ ದೀಕ್ಷೆ ಪಡೆದಿರುವ ಬಗ್ಗೆ ಯೇಸು ಸಭೆಯ ಕ್ರೈಸ್ತ ಗುರುಗಳು ಬರೆದ ಪತ್ರಗಳಿಂದ ಹಾಗೂ ವರದಿಗಳಿಂದ ತಿಳಿದು ಬರುತ್ತದೆ.[30]

ಮೈಸೂರು ಒಡೆಯರ ಕಾಲ: ಮೈಸೂರು ಅರಸರು ಶ್ರೀರಂಗಪಟ್ಟಣವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳ್ವಿಕೆ ನಡೆಸುತ್ತಿದ್ದರು. 1630ರಿಂದ 1662ರವರೆಗೆ ಆಡಳಿತ ನಡೆಸಿದ ಕಂಠೀರವ ನರಸರಾಜ ಒಡೆಯರು 1641ರಲ್ಲಿ ವನಂಗಮುಡಿ ಎಂಬುಗಟ್ಟಿ ಮೊದಲಿಯಾರನನ್ನು ಯುದ್ಧದಲ್ಲಿ ಸೋಲಿಸಿ ಸಂಬಳ್ಳ ಮತ್ತು ಸತ್ಯಮಂಗಲವನ್ನು ವಶಪಡಿಸಿಕೊಂಡರು ನಂತರ ದೇವರಾಜ ಒಡೆಯರು (1649 ರಿಂದ 1669) 1667ರಲ್ಲಿ ಈರೋಟ್, ಧಾರಪುರ, ಅನಂತರ ವಾಮಲೂರು ಚಿಕ್ಕದೇವರಾಜ ಒಡೆಯರು (1672ರಿಂದ1714) ಇಡೀ ಕೊಂಗುಮಂಡಲವನ್ನು ವಶಪಡಿಸಿಗೊಂಡು ಗಟ್ಟಿ ಮೊದಲಿಯಾರ್ ಪಾಳೆಯ ಪಟ್ಟಿಗೆ ನಾಂದಿ ಹಾಡಿದರು.

ಮೈಸೂರು ಮಿಷನ್ ಸ್ಥಾಪನೆ: ಮೈಸೂರು ಒಡೆಯರು ಕೊಂಗು ಮಂಡಲವನ್ನು ವಶಪಡಿಸಿಕೊಂಡ ಬಳಿಕ ಅಂದರೆ ಕಂಠೀರವ ನರಸರಾಜ ಒಡೆಯರ ಕಾಲದಲ್ಲೇ ಈ ಭಾಗಗಳಲ್ಲಿ ಮಧುರೆ ಮಿಷನ್ನಿನ ಪ್ರಭಾವ ತಗ್ಗುತ್ತದೆ. ಕೊಳ್ಳೇಗಾಲ ತಾಲ್ಲೂಕಿನಲ್ಲಿ ಈಗಾಗಲೇ ಕ್ರೈಸ್ತಧರ್ಮ ಪ್ರಚಾರಕ್ಕೆ ಅನುಕೂಲವಾಗುವಂತೆ ಒಂದು ಹೊಸಮಿಷನ್ನಿನ ಸ್ಥಾಪನೆ ಅನಿವಾರ್ಯವಾಗುತ್ತದೆ. ಹೀಗೆ ಸ್ಥಾಪಿತವಾದದ್ದೇ ಮೈಸೂರು ಮಿಷನ್ ಇದನ್ನು ಸ್ಥಾಪಿಸಿದವರು ಯೇಸು ಸಭೆಯ ಗುರುಗಳಾದ ಸ್ವಾಮಿಲಿಯೋನಾರ್ಡೊ ಚಿನ್ನಮಿ ಇವರು ಮೂಲತಃ ಇಟಲಿ ದೇಶದವರು. ಲಲಿತ ಶಾಸ್ತ್ರವನ್ನು ಓದಿ ಪಾಂಡಿತ್ಯಗಳಿಸಿ ಉಪನ್ಯಾಸಕರಾಗಿ ಸೇವೆಸಲ್ಲಿಸಿದ್ದರು. ಇವರೊಬ್ಬ ಉತ್ತಮ ಲೇಖಕರೂ ಹೌದು ಭಾರತಕ್ಕೆ ಬಂದು ಸೇವೆ ಸಲ್ಲಿಸಬೇಕೆಂಬ ಇವರ ಮಹದಾಸೆ ಪೂರ್ಣಗೊಂಡು 1644ರಲ್ಲಿ ಗೋವಾಕ್ಕೆ ಬರುತ್ತಾರೆ. ಗೋವಾದಲ್ಲಿ ಕೆಲಕಾಲ ಅಲ್ಲಿನ ಗುರುಮಠದಲ್ಲಿ ಉಪನ್ಯಾಸಕರಾಗಿರುತ್ತಾರೆ. ಜನಗಳ ಮಧ್ಯ ಕೆಲಸ ಮಾಡಬೇಕೆಂಬ ಅವರ ಆಸೆ ಈಡೇರುವುದು 1648ರಲ್ಲಿ ಅವರಿ ಮೈಸೂರು ಮಿಷನ್ ಸ್ಥಾಪನೆಗೆ ಅನುಮತಿ ದೊರೆಯುತ್ತವೆ. ಧಾರ್ಮಿಕ ಸ್ವಾತಂತ್ರ್ಯ ಭಾರತದ ಸಂವಿಧಾನದ ಮೂಲಕ ಈಗ ನಮಗೆ ಧರ್ಮ ಪ್ರಚಾರದ ಸ್ವಾತಂತ್ರ್ಯ ಲಭಿಸಿದೆ. ಆಗಿನ ಕಾಲದಲ್ಲಿ ದೇಶವನ್ನಾಳುತ್ತಿದ್ದ ರಾಜಮಹಾರಾಜರುಗಳ ಅನುಮತಿ ಧರ್ಮಪ್ರಚಾರ ನಡೆಸಲು ಅನಿವಾರ್ಯವಾಗಿತ್ತು. ಆಗ ಕಂಠೀರವ ನರಸರಾಜ ಒಡೆಯರು (1638 ರಿಂದ 1662) ಶ್ರೀರಂಗಪಟ್ಟಣವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಡಳಿತ ನಡೆಸುತ್ತಿದ್ದರು. ಇದರಿಂದ ಧರ್ಮ ಪ್ರಚಾರಕ್ಕೆ. ಅನುಮತಿ ಪಡೆಯಲು 1648ರಲ್ಲಿ ಶ್ರೀರಂಗ ಪಟ್ಟಣಕ್ಕೆ ಭಂದ ಯೇಸು ಸಭೆಯ ಗುರು ಲಿಯೋನಾರ್ಡೊ ಚಿನ್ನಮಿ ತೆರಳುತ್ತಾರೆ. ಕವನಕಟ್ಟಿ ರಾಜನ ಗುಣಗಾನ ಮಾಡುತ್ತಾರೆ. ಒಂದು ಸುಂದರವಾದ ಕತ್ತಿಯನ್ನು ರಾಜನಿಗೆ ಉಡುಗೊರೆಯಾಗಿ ನೀಡುತ್ತಾರೆ ಇದರಿಂದ ಸಂತೋಷಗೊಂಡ ನರಸರಾಜರು ಈ ರೋಮನ್ ಸನ್ಯಾಸಿಗೆ ರೇಷ್ಮೆ ಶಾಲು ಹೊದಿಸಿ

ಫಲ ತಾಂಬೂಲ ನೀಡಿ ಗೌರವಿಸಿ ಧರ್ಮ ಪ್ರಚಾರ ನಡೆಸಲು ಅನುಮತಿಯ ತಾಮ್ರ ಪತ್ರವನ್ನು ನೀಡುವಂತೆ ಮಂತ್ರಿ ತಿಮ್ಮರಸಯ್ಯನಿಗೆ ಆಜ್ಞಾಪಿಸುತ್ತಾರೆ. ಹೀಗೆ ಧಾರ್ಮಿಕ ಸ್ವಾತಂತ್ರ್ಯ ಪಡೆದ ಲಿಯೋನಾರ್ಡೊ ಚಿನ್ನಮಿ ಶ್ರೀರಂಗಪಟ್ಟಣದಿಂದ ಪ್ರಾರಂಭಿಸಿ ನಂತರ ಕೊಳ್ಳೇಗಾಲ ತಾಲ್ಲೂಕಿನ ಅನೇಕ ಗ್ರಾಮದಲ್ಲಿ ಧರ್ಮ ಪ್ರಚಾರ ಕೈಗೊಂಡು ಸಾವಿರಾರು ಜನರನ್ನು ಕ್ರೈಸ್ತ ಧರ್ಮಕ್ಕೆ ಮತಾಂತರಗೊಳಿಸುತ್ತಾರೆ.

ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ ತಾಲ್ಲೂಕಿನಲ್ಲಿ ಮೊಟ್ಟಮೊದಲಿಗೆ ಕ್ರೈಸ್ತ ಸನ್ಯಾಸಿ ಇಟಲಿ ದೇಶದ ಲಿಯೋನಾರ್ಡೊ ಚಿನ್ನವಿ ಕ್ರೈಸ್ತ ಧರ್ಮ ಪ್ರಚಾರ ಕೈಗೊಳ್ಳುತ್ತಾರೆ ಕೊಳ್ಳೇಗಾಲ ತಾಲ್ಲೂಕಿನ ಬಹುಭಾಗ ಮೈಸೂರು ಒಡೆಯರ ಕಾಲದಲ್ಲಿ (1638 ರಿಂದ 1766) ಹೈದರ್ ಮತ್ತು ಟಿಪ್ಪುಸುಲ್ತಾನ್‌ರ ಕಾಲದಲ್ಲಿ (1756 ರಿಂದ 1792) ಮೈಸೂರು ಸಂಸ್ಥಾನದ ಆಡಳಿತಕ್ಕೆ ಒಳಪಟ್ಟಿತ್ತು. 1792ರಲ್ಲಿ ನಡೆದ ಮೈಸೂರು ಯುದ್ಧದಲ್ಲಿ ಟಿಪ್ಪು ಬ್ರಿಟಿಷರಿಗೆ ಸೋತು ಹೋದ ಬಳಿಕ ಅದು ಬ್ರಿಟೀಷರ ಮದ್ರಾಸ್ ಪ್ರೆಸಿಡೆನ್ಸಿಗೆ ಸೇರಿಹೋಯಿತು. ಭಾರತಕ್ಕೆ ಸ್ವಾತಂತ್ರ್ಯ ಬಂದ ಬಳಿಕ ಮತ್ತೆ ಮೈಸೂರು ಜಿಲ್ಲೆಗೆ ಸೇರ್ಪಡೆಯಾಯಿತು. ಮೈಸೂರಿನಿಂದ ಚಾಮರಾಜನಗರ ಜಿಲ್ಲೆ ಬೇರ್ಪಟ್ಟ ಬಳಿಕ ಕೊಳ್ಳೇಗಾಲ ತಾಲ್ಲೂಕು ಚಾಮರಾಜನಗರ ಜಿಲ್ಲೆಗೆ ಸೇರಿತು. ಹಿಂದುಗಳಲ್ಲಿ ಬೇರೆ ಬೇರೆ ಮಠಗಳಿರುವಂತೆ ಕ್ರೈಸ್ತರ ರೋಮನ್ ಕ್ಯಾಥೋಲಿಕ್ ಪಂಗಡದಲ್ಲೂ ಬೇರೆ ಬೇರೆ ಸಂತರ ಹೆಸರಿನಲ್ಲಿ ಸಭೆಗಳಿವೆ 1650 ರಿಂದ 51ರಲ್ಲಿ ಕೊಳ್ಳೇಗಾಲ ತಾಲ್ಲೂಕು ಮಾರ್ಟಳ್ಳಿಗೆ ಬಂದು ಅಲ್ಲಿನ ಶೈವ ಮಠದಲ್ಲಿದ್ದ ಸ್ವಾಮೀಜಿಯವರ ಶಿಷ್ಯನನ್ನೇ ಮತಕ್ಕೆ ಸೇರಿಸುತ್ತಾರೆ. ಇದರಿಂದ ಮಠದ ಭಕ್ತಾದಿಗಳು, ಗುರುಗಳು ಚಿನ್ನಮಿ ವಿರುದ್ಧ ತಿರುಗಿ ಬೀಳುತ್ತಾರೆ.[31] ಆದರೆ ಕಂಠೀರವ ನರಸರಾಜ ಒಡೆಯರು ನೀಡಿದ ಅನುಮತಿಗೆ ಕೌದಳ್ಳಿ, ಕೂಡಲೂರು, ಪಾಳ್ಯ, ಹ್ಯೂಗಂ ಮೊದಲಾದೆಡೆ ಅವರು ನಿರಂತರವಾಗಿ ಧರ್ಮ ಪ್ರಚಾರ ನಡೆಸುತ್ತಾರೆ.

.ಕ್ರೈಸ್ತ ಸನ್ಯಾಸಿ ಮತ್ತು ಕ್ರೈಸ್ತ ಭಕ್ತಾದಿಗಳ ಸಂಖ್ಯೆ ಕೊಳ್ಳೇಗಾಳ ತಾಲ್ಲೂಕು ಸುತ್ತ ಮುತ್ತ ಬೆಳೆಯುತ್ತಿದ್ದಂತೆ ಪೂಜೆ ಪುರಸ್ಕಾರಗಳು ನಡೆಸಲು ಭಕ್ತರ ಧಾರ್ಮಿಕ ವಿಧಿ ವಿಧಾನಗಳನ್ನು ಪೂರೈಸಲು ಗುರುಚಿನ್ನಮಿರವರು ಕೊಳ್ಳೇಗಾಲದಿಂದ ಸುಮಾರು 25 ಕಿಲೋ ಮೀಟರ್ ದೂರದಲ್ಲಿರುವ ಬಸವನಪುರದಲ್ಲಿ ಒಂದು ಕ್ರೈಸ್ತ ಸನ್ಯಾಸಿ ಮಠವನ್ನು ತೆರೆಯುತ್ತಾರೆ. ಬೆಂಜಮಿನ್ ಲೂಯಿರೈಸ್ 1877ರಲ್ಲಿ ಬರೆದ 'ಹಿಸ್ಟರಿ ಆಫ್ ಮೈಸೂರು ಆಂಡ್ ಕೂರ್ಗ್'ನಲ್ಲಿ ಬಸವನಪುರದ ಕ್ರೈಸ್ತ ಮಠದ ಬಗ್ಗೆ ಪ್ರಸ್ತಾಪಿಸಿದ್ದಾರೆ.[32] ಈ ಮಠದ ಸುತ್ತ ನಾಲ್ಕು

ಶಿಲಾಸ್ಮಾರಕಗಳಿದ್ದು ಅವುಗಳ ಮೇಲೆ 1704ರಲ್ಲಿ ಭೂಮಿಯನ್ನು ರೋಮನ್ , ಸನ್ಯಾಸಗಳಿಗೆ ದಾನವಾಗಿ ನೀಡಲಾಗಿದೆ ಎಂಬ ಕೆತ್ತನೆಯ ಕಲ್ಲುಗಳು ಇವೆ.[33]

ಕಾಮಗೆರೆ ಧರ್ಮ ಕ್ಷೇತ್ರದ ಗುರು ಡಿಸೋಜಾರವರ ಕೊಳ್ಳೇಗಾಲ ಭಾಗದಲ್ಲಿ ಮೊಟ್ಟ ಮೊದಲ ಬಾರಿಗೆ ಬಂದು ಸೇವಾ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದರು. ಇವರ ನಂತರ ಬಂದ ಸೇವಾಗುರುಗಳು ಸ್ವಾಮಿ ಚಿಮಾನೋ ಮಾರ್ಟಿನೇಸ್, ಸ್ವಾಮಿ ಮನುಮೇಲ್ ಬರೆಟ್ಟೊ, ಸ್ವಾಮಿ ವಾರ್ತೆ ಅಲ್ಮೆಡಾ, ಸ್ವಾಮಿ ಜೋಸೆಫ್ ಮಚರ, ಮುಂತಾದವರು. ಇವರು ಕನ್ನಡ, ತಮಿಳು ಭಾಷೆಗಳನ್ನು ಕಲಿತು ಕನ್ನಡದಲ್ಲಿ ಪುಸ್ತಕ ಬರೆಯುವಷ್ಟು ಕಲಿತಿದ್ದರು.

ಹೈದರ್ ಮತ್ತು ಟಿಪ್ಪುಸುಲ್ತಾನರ ಕಾಲದಲ್ಲಿ ಉತ್ತರಕನ್ನಡ, ದಕ್ಷಿಣಕನ್ನಡ ಜಿಲ್ಲೆಗಳಿಂದ ಹತ್ತಾರು ಸಾವಿರ ಕ್ರೈಸ್ತರನ್ನು ಬಲವಂತವಾಗಿ ಕರೆತಂದು ತನ್ನ ಸೈನ್ಯಕ್ಕೆ ಸೇರಿಸಿಕೊಂಡಿದ್ದರು. ಟಿಪ್ಪುಸುಲ್ತಾನ್ ಕ್ರೈಸ್ತರಿಗೆ ನಾನಾ ರೀತಿಯ ಹಿಂಸೆಗಳನ್ನು ನೀಡಿ ಮುಸ್ಲಿಂ ಧರ್ಮಕ್ಕೆ ಮತಾಂತರಗೊಳಿಸಿದರೆಂದು ತಿಳಿದುಬರುತ್ತದೆ. ಕೊಳ್ಳೇಗಾಲ ಭಾಗದ ಕ್ರೈಸ್ತರ ಸೇವೆಗೆ ಫ್ರೆಂಚ್ ಗುರುಗಳು ನೇಮಕವಾದದ್ದರಿಂದ ಟಿಪ್ಪುಗೆ ಫ್ರೆಂಚರ ಬಗ್ಗೆ ಒಲವಿದ್ದರಿಂದ ಆತ ಈ ಭಾಗದ ಕ್ರೈಸ್ತರ ಗೊಡವೆಗೆ ಹೋಗಲಿಲ್ಲವೆಂದು ತಿಳಿದುಬರುತ್ತದೆ.

ಟಿಪ್ಪುವನ್ನು ಬ್ರಿಟಿಷರು ಸೋಲಿಸಿದ ನಂತರ ಇಡೀ ಕೊಳ್ಳೇಗಾಲ ತಾಲ್ಲೂಕು ಮದ್ರಾಸ್ ಪ್ರೆಸಿಡೆನ್ಸಿಗೆ ಸೇರಿಕೊಳ್ಳುತ್ತದೆ ಈ ಸಂದರ್ಭದಲ್ಲಿ ಕೊಳ್ಳೇಗಾಲ ತಾಲ್ಲೂಕು ಪ್ರದೇಶಗಳಲ್ಲಿ ಕ್ರೈಸ್ತ ಧರ್ಮ ಬೆಳೆಯಲು ಕಾರಣವಾಯಿತು. 1648ರಲ್ಲಿ ಸ್ವಾಮಿ ಲಿಯೋನಾರ್ಡೋನ ಚಿನ್ನಮಿರವರ ಕ್ರೈಸ್ತಧರ್ಮದ ಪ್ರಚಾರ ಕೊಳ್ಳೇಗಾಲ ತಾಲ್ಲೂಕಿನಲ್ಲಿ ಹೆಮ್ಮರವಾಗಿ ಬೆಳೆದಿದೆ. ಕೊಳ್ಳೇಗಾಲ ತಾಲ್ಲೂಕಿನ ಮಾರ್ಟಳ್ಳಿ, ಕೌದಳ್ಳಿ, ಒಡೆಯರ ಪಾಳ್ಯ, ಕಾಮಗೆರೆ, ಜಕ್ಕಳ್ಳಿ, ಸಂದನ ಪಾಳ್ಯ, ಮರಿಯಮಂಗಳ, ತೋಮಿಯಪಾಳ್ಯ, ಜಲ್ಲಿಪಾಳ್ಯ, ಒಡ್ಡರದೊಡ್ಡಿ, ಮರಿಯನಪುರ, ಜಾಗೇರಿ, ಹನೂರು, ಪಿ.ಜಿ.ಪಾಳ್ಯ, ಪ್ರಕಾಶ್ ಪಾಳ್ಯ ಮುಂತಾದ ಕಡೆಗಳಲ್ಲಿ ಕ್ರೈಸ್ತ ದೇವಾಲಯಗಳಿವೆ.[34,35]

ವೀರಶೈವ ಧರ್ಮ: – ವೀರಶೈವ ಧರ್ಮವು ಕೊಳ್ಳೇಗಾಲ ತಾಲ್ಲೂಕಿನಲ್ಲಿ ಒಂದು ಪ್ರಾಚೀನ ಧರ್ಮವಾಗಿದೆ ಎಂದು ಹೇಳಬಹುದು. ಈ ಧರ್ಮಕ್ಕೆ ಸಾವಿರಾರು ವರ್ಷ ಇತಿಹಾಸವನ್ನು ಹೇಳಬಹುದು. ಆದರೆ ಮಹಿಷಮಂಡಲ ಪ್ರಾಂತ್ಯದಲ್ಲಿ ವೀರ ಶೈವ ಧರ್ಮದ ಕೇಂದ್ರವೆಂದರೆ ನಂಜನಗೂಡು ತಾಲ್ಲೂಕು ಸುತ್ತೂರು ಎಂದು ಹೇಳಬಹುದು.[36] ಇಲ್ಲಿಂದ ಪ್ರಾರಂಭವಾಗಿ ಈ ಪ್ರಾಂತ್ಯದಲ್ಲಿ ಹಲವಾರು ವೀರಶೈವ ಧರ್ಮ ಒಂದು ಪ್ರಮುಖ ಧರ್ಮವಾಗಿ ಬೆಳೆದಿದೆ.

ಭರತ ಖಂಡದಲ್ಲಿ ಈ ಧರ್ಮಕ್ಕೆ ಇರುವಷ್ಟು ಪ್ರಾಮುಖ್ಯತೆ ಬೇರೆ ಯಾವ ದೇಶದಲ್ಲಿಯು ಇರಲಿಕ್ಕಿಲ್ಲ. ಭಾರತದಲ್ಲಿ ಹಲವು ಧರ್ಮಗಳು ತಮ್ಮ ಅಸ್ತಿತ್ವವನ್ನು ಬೆಳೆಸಿಕೊಂಡಿವೆ. ಪುರಾತನ ಹಿಂದೂ ಧರ್ಮದಲ್ಲಿ ಅನೇಕ ಶಾಖೆಗಳು ಇದ್ದು ಪ್ರತಿಯೊಂದು ಶಾಖೆಗೂ ಧರ್ಮಾಧಿಕಾರಿ ಅಥವಾ ಗುರುಗಳು ಇರುತ್ತಾರೆ. ಅದೇರೀತಿ ಬೌದ್ಧಧರ್ಮ, ಜೈನಧರ್ಮ, ಸಿಖ್‌ಧರ್ಮ, ಕ್ರೈಸ್ತ ಧರ್ಮ, ಮುಸ್ಲಿಂಧರ್ಮ, ವೀರಶೈವ ಧರ್ಮಗಳು ಅಸ್ತಿತ್ವದಲ್ಲಿದ್ದು ತಮ್ಮದೆಯಾದ ತತ್ವಗಳೊಂದಿಗೆ ಆಯಾ ಧರ್ಮಗಳಲ್ಲಿ ಬೆಳೆದು ಬಂದಿವೆ. ಈ ಎಲ್ಲಾ ಧರ್ಮಗಳು ಕೇಂದ್ರಗಳನ್ನು ಸ್ಥಾಪಿಸಿಕೊಂಡು ಧರ್ಮ ಪ್ರಚಾರವನ್ನು ಮಾಡುತ್ತಾ ಬಂದಿವೆ. ಧರ್ಮ ಪ್ರಚಾರಕರು ಅಥವಾ ಸನ್ಯಾಸಿಗಳ ವಾಸಸ್ಥಾನಗಳೇ ಮಠಗಳಾಗಿ ಹೆಸರು ಪಡೆದಿದೆ.

ಇಂದು ಆಧುನಿಕ ವೀರಶೈವ ಅಧ್ಯಯನಕ್ಕೆ ನೂರು ವರ್ಷಗಳ ಇತಿಹಾಸವಿದೆ ಎಂದು ಹೇಳಬಹುದು. ಈ ಅವಧಿಯಲ್ಲಿ ಎಲ್ಲರೂ ಮಾಡಿದುದು ಸಾಹಿತ್ಯದ ಅಭ್ಯಾಸ ಸಿದ್ಧಾಂತದ ಅಭ್ಯಾಸ ಅದು ಗ್ರಂಥಾಲಯದಲ್ಲಿ ಕುಳಿತು ಮಾಡಿದ ಕೇಂದ್ರೀಯ ಅಭ್ಯಾಸ ಇಂದಿನ ಸಂಕ್ರಮಣ ಕಾಲ ಹಳೆಯ ಮೌಲ್ಯಗಳು ವೇಗವಾಗಿ ಮರೆಯಾಗುತ್ತಲಿರುವ ಕಾಲ, ವೀರಶೈವ ಮಠಗಳು ಇದಕ್ಕೆ ಹೊರತಲ್ಲ. ಒಂದು ಅಂದಾಜಿನ ಪ್ರಕಾರ ಕರ್ನಾಟಕದಲ್ಲಿದ್ದ 5706 ಮಠಗಳಲ್ಲಿ 3828 ಮಠಗಳು ಶಾಶ್ವತವಾಗಿ ನಾಶವಾಗಿವೆ ಉಳಿದ 1878 ಮಠಗಳನ್ನು ಗುರುತಿಸಬಹುದಾದರೂ ಅಸ್ತಿತ್ವದಲ್ಲಿರುವವು 1089 ಮಾತ್ರ. ಕರ್ನಾಟಕದಲ್ಲಿ ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ, ಸಾಹಿತ್ಯಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರಕ್ಕೆ ವೀರಶೈವ ಮಠಗಳು ನೀಡಿದ ಕೊಡುಗೆ ಅಪಾರವಾಗಿದೆ. ಸಮಗ್ರ ಕರ್ನಾಟಕ ಬಹುಮುಖ ಅಭಿವೃದ್ಧಿಯ ಹಿಂದೆ ಈ ನಾಡಿನ ವೀರಶೈವ ಮಠಗಳ ಪಾತ್ರವನ್ನು ಮರೆಯುವಂತಿಲ್ಲ. ಸರ್ವಸಮಾನತೆಯ ನೆಲೆಗಟ್ಟಿನ ಮೇಲೆ ಮಾನವೀಯ ಮೌಲ್ಯಗಳನ್ನು ನಿಜಧರ್ಮದ ಬೆಳಕನ್ನು ನೀಡಿದ್ದಲ್ಲದೇ ದಲಿತರಿಗೆ ನ್ಯಾಯ ದೊರಕಿಸಿಕೊಟ್ಟು ಅವರಲ್ಲಿ ಆತ್ಮಗೌರವ ಮೂಡುವಂತೆ ಮಾಡುವಲ್ಲಿಯೂ ವೀರಶೈವ ಮಠಗಳು ಶ್ರಮಿಸಿವೆ.

ಹನ್ನೆರಡನೆಯ ಶತಮಾನದಲ್ಲಿ ಕಲ್ಯಾಣದಲ್ಲಿ ನಡೆದ ಧಾರ್ಮಿಕ ಕ್ರಾಂತಿಯ ನಂತರ ಶರಣರು ತಮ್ಮ ತತ್ವಗಳನ್ನು ಸಾರಲು ನಾಡಿನಾದ್ಯಂತ ಪ್ರಯಾಣ ಬೆಳೆಸಿದಾಗ ಮೂರು ಸಾವಿರ ಶರಣರ ಗುಂಪು ಇತ್ತು. ಈ ಶರಣರ ಗುಂಪಿನ ನಾಯಕರಾದ ಶ್ರೀ ಗುರುಸಿದ್ದ ಸ್ವಾಮಿಗಳು ಮಾರ್ಗ ಮಧ್ಯದ ಕಾಲ ಘಟ್ಟದಲ್ಲಿ ನೆಲೆ ನಿಂತಿತ್ತು ಎಂದು ಹೇಳಬಹುದು.

ಶ್ರೀ ಅಲ್ಲಮ ಪ್ರಭುಗಳಿಂದ ಪ್ರಾರಂಭಗೊಂಡ ಶೂನ್ಯ ಪೀಠವು ಕಲ್ಯಾಣ ಕ್ರಾಂತಿಯ ನಂತರ ಮಹಾರಾಷ್ಟ್ರ, ಆಂಧ್ರಪ್ರದೇಶ, ತಮಿಳುನಾಡು ಮತ್ತು ಮಧ್ಯಪ್ರದೇಶ ಈ ರೀತಿ ದೇಶಾದ್ಯಂತ ಶೂನ್ಯ ಪೀಠದ ಪರಂಪರೆಯ ಮಠಗಳು ಸ್ಥಾಪನೆಗೊಂಡವು, ಹನ್ನೆರಡನೆಯ ಶತಮಾನದಲ್ಲಿ ಸ್ಥಾಪನೆಗೊಂಡ ಶ್ರೀ ಮೂರು ಸಾವಿರ ಮಠವು ಶರಣ ತತ್ವಗಳನ್ನು ಪ್ರಚಾರಗೊಳಿಸಿ ಈತನು ಬೆಳೆದು ವೀರಶೈವ ಧರ್ಮವನ್ನು ಅಭಿವೃದ್ಧಿ ಪಡಿಸಿರುವುದಲ್ಲದೆ ಸಮಾಜದ ಒಂದು ಶಕ್ತಿಯಾಗಿ ರೂಪುಗೊಂಡಿದೆ.

ಈ ಹಿನ್ನೆಲೆಯಿಂದ ಆಯಾ ಪ್ರಾಂತ್ಯಗಳನ್ನು ಗಮನಿಸಿದರೆ ವೀರ ಶೈವಧರ್ಮ ಮತ್ತು ವೀರಶೈವ ಮಠಗಳು ಕೊಳ್ಳೇಗಾಲ ತಾಲ್ಲೂಕಿನ ಪ್ರಾಂತ್ಯಗಳಲ್ಲಿಯೂ ಕಂಡುಬರುತ್ತವೆ. ಶ್ರೀ ಮಹದೇಶ್ವರ ಚರಿತ್ರೆ ಮತ್ತು ಸಿದ್ಧಪ್ಪಾಜಿ ಚರಿತ್ರೆಗಳನ್ನು ಓದಿದಾಗ ವೀರಶೈವ ಬೆಳವಣಿಗೆಯನ್ನು ಕಾಣಬಹುದು.[37]

ಸಿಂಗಾನಲ್ಲೂರು ಕಟ್ಟೆ ಅಥವಾ ಬಸವೇಶ್ವರ ಕ್ಷೇತ್ರ ಇಲ್ಲಿ ಶ್ರೀ ಮಹದೇಶ್ವರ ಚರಿತ್ರೆಯಲ್ಲಿ ಬರುವ ಸಿದ್ಧಪುರಷ ಕಟ್ಟೆ ಬಸವೇಶ್ವರನಿಗೆ ಪೂಜೆ ಸಲ್ಲಿಸಿ ಬರಬೇಕು ಎಂಬ ಪ್ರತೀತಿ ಇದೆ. ಇದನ್ನೂ ವೀರಶೈವರು ಆರಾಧಿಸುತ್ತಾರೆ.[38] ಈ ಕ್ಷೇತ್ರವು ಒಂದು ಪುಣ್ಯ ಕ್ಷೇತ್ರವಾಗಿ ಇಲ್ಲಿನ ಬಸವೇಶ್ವರ ದೇವಾಲಯದಲ್ಲಿ ಪೂಜೆ-ಪ್ರಾರ್ಥನೆಗಳು ನಡೆಯುತ್ತವೆ. ಇದರಿಂದಲೇ ವೀರಶೈವ ಧರ್ಮ ಇಲ್ಲಿ ಪ್ರಚಾರವಾಗಿವೆ ಎಂದು ಹೇಳಬಹುದು.[39]

ಧರೆಗೆ ದೊಡ್ಡವರು ಮಂಟೇಸ್ವಾಮಿ ಅವರ ಶಿಷ್ಯ ಸಿದ್ಧಪ್ಪಾಜಿಯವರು ಐಕ್ಯವಾದ ಸ್ಥಳವೆ ಚಿಕ್ಕಲ್ಲೂರು ಇಲ್ಲಿ ಸಹ ವೀರಶೈವ ಮಠವಿದೆ. ಇದನ್ನು ನಿಡುಗಟ್ಟ ಗ್ರಾಮದ ಮುದ್ದೋಜಿ ಲಿಂಗವಂತ ಪಂಚಾಳದವರು ಪೂಜಿಸುತ್ತಾರೆ. ಇಲ್ಲಿ ಪ್ರತಿ ವರ್ಷ ಜನವರಿ ತಿಂಗಳಲ್ಲಿ ಬರುವ ಪೌರ್ಣಮಿಯ ದಿನ ಸಂಕ್ರಾಂತಿ ಹಬ್ಬದ ಸಮಯದಲ್ಲಿ ಚಂದ್ರ ಮಂಡಲ ನಡೆಯುತ್ತದೆ. ಅಂದು ಹಳೆ ಮಠದ ಅರಸು ಮನೆತನದ ಗುರುಗಳು ಬರುತ್ತಾರೆ. ಸೋಮವಾರ, ಶುಕ್ರವಾರ ವಿಶೇಷ ಪೂಜೆ ನಡೆಯುತ್ತದೆ. 'ಪರಮ ಜ್ಯೋತಿ ನೀವೇ ಬನ್ನಿ ಮಂಟದ ಲಿಂಗಯ ನೀವೆ ಬನ್ನಿ' ಎಂದು ಹಾಡುವ ನೀಲಗಾರರ ಮೇಳ ಈ ಸಮಯದಲ್ಲಿ ಕಾಣಬಹುದು.[40]

ಕೊಳ್ಳೇಗಾಲ ತಾಲ್ಲೂಕು ಹೊಂಡರಬಾಳು ಗ್ರಾಮದಲ್ಲಿ ವೀರಶೈವ ಮಠವಿದೆ. ಇಲ್ಲಿಯ ಸಿದ್ಧೇಶ್ವರ ಕ್ಷೇತ್ರ ಪ್ರಖ್ಯಾತಿ ಪಡೆದಿದೆ. ಇದು ಪುರಾಣ ಪ್ರಸಿದ್ದವಾದ ಸ್ಥಳವೂ ಹೌದು. ಸಿದ್ಧೇಶ್ವರ ಗಿರಿಯಲ್ಲಿ ನೂರೊಂದು ಗವಿಗಳಿದ್ದವೆಂದು ಪ್ರತೀತಿ ಇದೆ.[41] ಶ್ರೀ ಶಂಭುಲಿಂಗ ಕ್ಷೇತ್ರ ಇದು ಇತರ

ಕ್ಷೇತ್ರಗಳಿಂದ ವಿಭಿನ್ನವಾದ ಕ್ಷೇತ್ರವಾಗಿದೆ. ಇದು ಶರಣರ ಸನ್ನಿಧಿಯೂ ಹೌದು. ಇಲ್ಲಿ ಸಿದ್ಧರನ್ನು ಶಂಭುಲಿಂಗಸ್ವಾಮಿಗಳೆಂದು ಕರೆಯಲಾಗಿದೆ. ಐತಿಹಾಸಿಕ ಪುರಾತನ ಪುರಾವೆಗಳಿವೆ. ಅನೇಕ ಶಿವಶರಣರು ವಾಸವಾಗಿದ್ದು ದೃಢಪಟ್ಟಿದೆ. ಈ ಕ್ಷೇತ್ರದ ಸಮೀಪವೇ ಶ್ರೀ ಮಲೈ ಮಹದೇಶ್ವರರು ವಾಸಿಸಿದ ಪರಿಸರವಿದೆ. ಪ್ರಭುದೇವರ ಬೆಟ್ಟ, ಪ್ರಭುದೇವರ ಗದ್ದುಗೆ ಮತ್ತು ಶ್ರೀಕಾಂತ ಮಲ್ಲಿಕಾರ್ಜುನಸ್ವಾಮಿ ಗುಹೆ ಇದೆ. ಈ ಕ್ಷೇತ್ರದಲ್ಲಿ ಎರಡು ಪ್ರಾಚೀನ ಮಠಗಳಿವೆ. ಪಕ್ಕದ ಕುಂತೂರು ಶಿವಶರಣರಿದ್ದ ಗ್ರಾಮ. ಇಂದಿಗೂ ಈ ಗ್ರಾಮದಲ್ಲಿ ವೀರಶೈವ ಮಠಗಳಿವೆ.[42] ಮೈಸೂರು ಕೊಳ್ಳೇಗಾಲದ ಹೆದ್ದಾರಿಯಲ್ಲಿ ಪುರಾತನ ಗುಹೆ ಮಂದಿರಗಳಿವೆ, ಸನಿಹದಲ್ಲೇ ನೂತನ ಭವ್ಯಸುಂದರ ಮಂದಿರ, ಸರ್ವರ ಗಮನ ಸೆಳೆಯುವ ಕೇಂದ್ರ ಪ್ರಾರ್ಥನೆ ಪ್ರಾಂಗಣ ಭವ್ಯ ಪೀಠದಲ್ಲಿ ಅಮೃತ ಶಿಲೆ ನಿಜಗುಣ ಶಿವಯೋಗಿಗಳ ಮೂರ್ತಿ, ಕಣ್ಮನ ಸೆಳೆಯುವ ಭಕ್ತಿ ಕೇಂದ್ರ ಇಲ್ಲಿ ಬರುವ ಭಕ್ತರಿಗೆ ಜ್ಞಾನಾಮೃತವಾಗಿರುವ ವೀರಶೈವ ಕೇಂದ್ರವಿದೆ. ಹಾಗೆಯೇ ಮುಡಿಗುಂಡದ ಅನುಭವಿಗಳ ಸಾಧನಾ ಸ್ಥಳವೂ ಇರುವುದು ಮತ್ತೆ ತಿಮ್ಮರಾಜೀಪುರ, ಪಾಳ್ಯದಲ್ಲಿ ಪ್ರಾಚೀನ ಮಠಗಳಿವೆ, ಮಹದೇಶ್ವರ ಬೆಟ್ಟದಲ್ಲಿ ಸಾಲೂರು ಮಠವೂ ಕೂಡ ಒಂದು ಪ್ರಾಚೀನ ಮಠವಾಗಿದೆ. ಸಾಲೂರು ಮಠದ ಗುರುಪರಂಪರೆಯಲ್ಲಿ ಅರಮನೆಯವರೆಂದು ಪರಿಗಣಿಸಲ್ಪಟ್ಟಿರುವ ಶ್ರೀ ಕೆಂಪನಂಜಸ್ವಾಮಿಗಳು ಶಾಸನೋಕ್ತ ವ್ಯಕ್ತಿಗಳು.[43] ಆ ಗುರು ಪರಂಪರೆಯಲ್ಲಿ ಹದಿನಾಲ್ಕನೆಯವರೆಂದು ಹೇಳಲಾದ ಶ್ರೀ ಶಾಂತಮಲ್ಲಿಕಾರ್ಜುನ ಸ್ವಾಮಿಗಳು ದೇವಾಲಯದ ಸುತ್ತಲೂ ಪ್ರಾಕಾರದ ಗೋಡೆಗಳಿಗೆ ಸೇರಿದಂತಿರುವ ಮಂಟಪಗಳನ್ನು ಕಟ್ಟಿಸಿದರು. ದೇವಸ್ಥಾನದ ಹೆಬ್ಬಾಗಿಲಿನ ಪಕ್ಕದ ವಾಹನದ ಬಾಗಿಲನ್ನು ಮಾಡಿಸಿದರು ಎಂದು ಅಲ್ಲಿಯ ಕಂಬದ ಮೇಲಿರುವ 15–8–1927ರ ಶಿಲಾಶಾಸನ ಬರಹವು ಇದನ್ನು ಸಮರ್ಥಿಸುತ್ತದೆ. ಈ ಗುರುಪರಂಪರೆಯಲ್ಲಿ ಹದಿನೈದನೆಯವರಾದ ಶ್ರೀ ಮುದ್ದುವೀರಸ್ವಾಮಿಗಳು 1950ರಲ್ಲಿ ಹಕ್ಕು ಬಾಧ್ಯತೆಯಾಗಿದ್ದ ದೇವಸ್ಥಾನದ ಅಡಳಿತವನ್ನು ಸಂಪೂರ್ಣವಾಗಿ ಸರ್ಕಾರಕ್ಕೆ ಬಿಟ್ಟು ಕೊಟ್ಟರೆಂಬುದಕ್ಕೆ ದಾಖಲೆ ಇದೆ. ನಾಗಮಲೆ ಕೂಡ ಶೈವ ಧರ್ಮದ ಪ್ರತೀಕವಾಗಿರುವ ವೀರಶೈವ ಕೇಂದ್ರವಾಗಿದೆ. ಈ ಹಿಂದೆ ಸ್ತ್ರೀಯರು ನಾಗಮಲೆಗೆ ಹೋಗಬಾರದು ಹೋದರೆ ಅವರು ಹಿಂತಿರುಗಿ ಬರಲಾರದು ಎಂಬ ಮೂಢನಂಬಿಕೆ ಇತ್ತು ಆದರೆ ಇಂದು ಹುಸಿಯಾಗಿದೆ ಸ್ತ್ರೀಯರು ಹೋಗಿ ದರ್ಶನಾಶೀರ್ವಾದ ಪಡೆದು ಬರುತ್ತಾರೆ. ಈ ಹಿನ್ನೆಲೆಯಿಂದ ಕೊಳ್ಳೇಗಾಲ ತಾಲ್ಲೂಕು ವೀರ ಶೈವರ ಒಂದು ಪ್ರಮುಖ ನೆಲೆಯಾಗಿ ಪ್ರಚಾರಗೊಂಡಿದೆ ಎಂದು ಹೇಳಲಾಗಿದೆ.

ಮುಸ್ಲಿಂ (ಇಸ್ಲಾಂ) ಧರ್ಮ:– ಭಾರತದಲ್ಲಿ ಇಸ್ಲಾಂ ಧರ್ಮವು ಸಹ ತನ್ನದೆ ಆದ ಪ್ರಾಮುಖ್ಯತೆಯನ್ನು ಪಡೆದುಕೊಂಡಿದ್ದೆ.[44] ಮಧ್ಯಯುಗದಲ್ಲಿ ಪ್ರಪಂಚದಾದ್ಯಂತ ಹೆಚ್ಚು ಪ್ರಭಾವ ಬೀರಿದವೇನೆಂದರೆ ಇಸ್ಲಾಂ ಧರ್ಮಸ್ಥಾಪಕ ಮಹಮ್ಮದ್ ಪೈಗಂಬರ್ ಇಸ್ಲಾಂ ಎಂದರೆ ಒಬ್ಬ ದೇವರಿಗೆ ಶರಣು ಹೋಗುವುದು ಎಂದು ಅರ್ಥ, ಮುಸ್ಲಿಂ ಎಂದರೆ ಶರಣ ಎಂದರ್ಥ. ಮುಸ್ಲಿಂ ಪವಿತ್ರ ಗ್ರಂಥ ಖುರಾನ್ ಆಯಿತು. ಖುರಾನ್ ಎಂದರೆ ಪ್ರವಚನ ಎಂದರ್ಥ ಇದರ ಪ್ರಥಮ ಸಂಪಾಕದ ಜಾಯಿದ್ ಎಂಬುವವನು.[45] ಹೀಗೆ ಇಸ್ಲಾಂ ಧರ್ಮ ಪ್ರಪಂಚದಾದ್ಯಂತ ಪ್ರಭಾವ ಬೀರಿ ಭಾರತದಲ್ಲೂ ಅದರಲ್ಲೂ ಕರ್ನಾಟಕದ ಮಹಿಷಮಂಡಲ ಪ್ರಾಂತ್ಯದ ಕೊಳ್ಳೇಗಾಲದಲ್ಲೂ ಇಸ್ಲಾಂಧರ್ಮ ಹೆಚ್ಚು ಪರಿಣಾಮಕಾರಿಯಾಗಿ ಬೆಳದಿದೆ.

ಮೊದಲು ಅರೇಬಿಯಾ ದೇಶದಲ್ಲಿ ಇಸ್ಲಾಂ ಧರ್ಮ ಉಗಮವಾಗುತ್ತಿದ್ದಂತೆ ಕರ್ನಾಟಕದಲ್ಲೂ ಪ್ರವೇಶಿಸಿತು. ಮೊದಲು ಅರಬ್ಬರು ವ್ಯಾಪಾರ ಮಾಡುತ್ತಿದ್ದರು. ಅವರನ್ನು ನಮ್ಮ ಶಾಸನಗಳಲ್ಲಿ "ತಜ್ಜಿಕ" ರೆಂದು ಕರೆದಿರುತ್ತಾರೆ. ಕೊಂಕಣದ ಆಡಳಿತಾಧಿಕಾರಿಯಾಗಿ ತಜ್ಜಿಕನೊಬ್ಬನನ್ನು ರಾಷ್ಟ್ರಕೂಟ ದೊರೆಗಳು ನೇಮಿಸಿದರು ಎಂದು ತಿಳಿದುಬರುತ್ತದೆ.[46] ಹೊನ್ನಾವರವನ್ನು ಒಬ್ಬ ಮುಸಲ್ಮಾನ 1342 ಆಳುತ್ತಿದ್ದನೆಂಬ ವಿಚಾರವಿದೆ.[47] ವಿಜಯನಗರ ಅರಸರ ಕಾಲದಲ್ಲಿ ಇಸ್ಲಾಂ ಪ್ರಭಾವ ಹೆಚ್ಚು ಪ್ರಚಾರವಾಯಿತು. ಏಕೆಂದರೆ ವಿಜಯನಗರ ಅರಸರ ಸೈನ್ಯದಲ್ಲಿ ಮುಸಲ್ಮಾನರು ಸಾಕಷ್ಟು ಸಂಖ್ಯೆಯಲ್ಲಿದ್ದರು ಎಂಬ ಹೇಳಿಕೆ ಇದೆ.[48] ಈಭಾಗದಲ್ಲಿ ಬಹಮನಿ ಸುಲ್ತಾನ್‌ರ ಕಾಲದಲ್ಲಿ, ಹೈದರ್ ಮತ್ತು ಟಿಪ್ಪುಸುಲ್ತಾನ್‌ರ ಕಾಲದಲ್ಲಿ ಈ ಧರ್ಮಕ್ಕೆ ಸಾಕಷ್ಟು ಪ್ರೋತ್ಸಾಹವನ್ನು ನೀಡಿದ್ದರು. ಇಸ್ಲಾಂ ಭಾಷೆಯನ್ನು ಪ್ರಚಾರ ಪಡಿಸಿದರು ಜೊತೆಗೆ ಕರ್ನಾಟಕದ ಕಲಾ ವೈಭವ ಚರಿತ್ರೆಗೆ ಹೆಸರು ತರುವಂತ ಹಿಂದೂ – ಮುಸ್ಲಿಂ ಬಗೆಯ ಸುಂದರ ವಾಸ್ತುಶಿಲ್ಪದ ಕಟ್ಟಡಗಳು ಈ ಭಾಗದಲ್ಲಿ ಬೆಳೆದವು. ಈ ಎಲ್ಲಾ ಹಿನ್ನೆಲೆಯಲ್ಲಿ ಹಲವಾರು ಆಧಾರಗಳಿಂದ ಕೊಳ್ಳೇಗಾಲ ಪ್ರಾಂತ್ಯದಲ್ಲಿ ತನ್ನದೇ ಅದ ಬೆಳವಣಿಗೆಯನ್ನು ಕಂಡಿದೆ. ಶಿವನಸಮುದ್ರದಲ್ಲಿ ದರ್ಗಾ, ಕೊಳ್ಳೇಗಾಲ ಹಲವಾರು ಮಸೀದಿಗಳು, ಹೊಂಡರಬಾಳು, ಸಿಂಗಾನಲ್ಲೂರು, ದೊಡ್ಡಿಂದುವಾಡಿ, ಹನೂರು, ಪಾಳ್ಯ, ಬಂಡಳ್ಳಿ, ಮಂಗಲ, ಈ ಭಾಗದಲ್ಲಿ ಹೀಗೆ ಮುಸ್ಲಿಂ ಜನರ ಮಸೀದೆಗಳು. ಕೆಲವೊಂದು ಆಧಾರ ಸಹಿತ ಮತ್ತು ಕೆಲವೊಂದು ಐತಿಹ್ಯ ಉಲ್ಲೇಖದಿಂದಲೂ ಈ ಒಂದು ಧರ್ಮ ಕೊಳ್ಳೇಗಾಲ ತಾಲ್ಲೂಕು ಪ್ರಾಂತ್ಯದಲ್ಲಿ ಬೇರೆ ಬೇರೆ ಧರ್ಮಗಳಂತೆ ಇಸ್ಲಾಂ ಧರ್ಮವು ಈಗಲೂ ಪ್ರಚಲಿತದಲ್ಲಿದ್ದೆ ಎಂದು ಹೇಳಲಾಗಿದೆ.

ಅಡಿ ಟಿಪ್ಪಣ್ಣಿಗಳು

---

[1] ಎಂ. ಚಿದಾನಂದಮೂರ್ತಿ. ಕ.ಶಾ.ಸಾ.ಆ. ಪು 125–127

[2] ಎಂ. ಚಿದಾನಂದಮೂರ್ತಿ. ಕ.ಶಾ.ಸಾ.ಅ. ಪು 130–131

[3] ಆರ್. ಎಸ್.ಗುಪ್ತ. ಆಯ್. ಹಿ.ಬು.ಜೈ. ಪು 16

[4] ಶೈವ ದೇವಾಲಯಗಳ ಚಿತ್ರಗಳನ್ನೂ ದೇವಾಲಯಗಳ ಅಧ್ಯಯನದಲ್ಲಿ ನೀಡಲಾಗಿದೆ.

[5] ಮೈಸೂರು ಸ್ಟೇಟ್ ಗೆಜೆಟಿಯರ್, ಮೈಸೂರು.

[6] ಮೈಸೂರ್ ಸ್ಟೇಟ್ ಗೆಸೆಟಿಯರ್, ಮೈಸೂರು.

[7] ರಾಮಚಂದ್ರರಾಯ. ಎಸ್. ಕೆ. ಮೂರ್ತಿ ಶಿಲ್ಪ ನೆಲೆ ಹಿನ್ನೆಲೆ ಪು. 130–133

[8] ಶಿಲಾಕಾಂತ ಸುತ್ತಾರ – ಬಾದಾಮಿ ಸಾಂಸ್ಕೃತಿಕ ಅಧ್ಯಯನ ಪು 149

[9] ಎಸ್. ರಾಜಶೇಖರ್ ಕರ್ನಾಟಕದ ವಾಸ್ತುಶಿಲ್ಪ ಮತ್ತು ಚಿತ್ರ ಕಲೆ ಪು 23

[10] ವಸಂತಕುಮಾರತಳ್ತಿಜೆ ಕರ್ನಾಟಕದಲ್ಲಿ ಬೌದ್ಧ ಸಂಸ್ಕೃತಿ ಪು 40–45

[11] ಮೈಸೂರ್ ಸ್ಟೇಟ್ ಗೆಸೆಟಿಯರ್, ಮೈಸೂರು.

[12] ಕರ್ನಾಟಕದಲ್ಲಿ ಜೈನಧರ್ಮ ಪ್ರಸಾರಾಂಗ ಕನ್ನಡ ವಿ.ವಿ.ಹಂಪಿ.

[13] ಕರ್ನಾಟಕದಲ್ಲಿ ಜೈನಧರ್ಮ ಪ್ರಸಾರಾಂಗ ಕನ್ನಡ ವಿ.ವಿ.ಹಂಪಿ.

[14] ಕರ್ನಾಟಕ ಪರಂಪರೆ ಸಂಪುಟ ಒಂದು

[15] ಮದ್ರಾಸ್ ವಸ್ತು ಸಂಗ್ರಾಹಾಲಯದಲ್ಲಿರುವ ಬಸ್ತಿಪುರದ ಜಿನನ ಕಂಚು ಶಿಲ್ಪ

[16] ಎಪಿಗ್ರಾಫಿಯ ಕರ್ನಾಟಕ 4 ಶಾಸನ ಸಂಖ್ಯೆ 404

[17] ಎಪಿಗ್ರಾಫಿಯ ಕನಾಟಕ 4 ಶಾಸನ ಸಂಖ್ಯೆ 405

[18] ಸಂಶೋಧನಾ ತರಂಗ (1970)

[19] ಶ್ರೀ ರಂಗಪಟ್ಟಣದಲ್ಲಿರುವ ಧನಗೆರೆಯ ಜೈನ ಶಿಲ್ಪ

[20] ಚಾಮರಾಜನಗರ ಜಿಲ್ಲಾ ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನ ಪುಟ ಸಂಖ್ಯೆ 3–4

[21] ಹ್ಯೂಯನ್‌ತ್ಸಾಂಗನ ಸಿ.ಯು.ಕಿ. ಗ್ರಂಥದ ಆಧಾರದ ಮೇಲೆ

[22] ದೀಪವಂಶ ಮತ್ತು ಮಹಾವಂಶ ಗ್ರಂಥಗಳ ಉಲ್ಲೇಖ

[23] ಕೊಳ್ಳೇಗಾಲದ ಕೃಷ್ಣಚಾರ್ ಲೋಧರ್‌ರವರ ಹೇಳಿಕೆ

[24] ಚಾಮರಾಜನಗರ ಜಿಲ್ಲಾ ದರ್ಶನ

[25] ಕರ್ನಾಟಕ ಭಿತ್ತಿಚಿತ್ರ ಪರಂಪರೆ ಪು 78–79

[26] ಕರ್ನಾಟಕ ಭಿತ್ತಿಚಿತ್ರ ಪರಂಪರೆ ಪು 78–79

[27] ವಿದೇಶೀ ಪ್ರವಾಸಿಗರ ಬರವಣಿಗೆಯ ಗ್ರಂಥಗಳು

[28] ಕರ್ನಾಟಕ ಭಿತ್ತಿ ಚಿತ್ರ ಪರಂಪರೆ ಪು.81

[29] ಕರ್ನಾಟಕ ಭಿತ್ತಿ ಚಿತ್ರ ಪರಂಪರೆ ಪು.81

[30] ಪತ್ರಿಕಾ ವರದಿಗಳ ಆಧಾರದ ಹಿನ್ನೆಲೆಯಿಂದ.

[31] ಮಾರ್ಟಳ್ಳಿಯ ಹಿರಿಯ ಜನರುಗಳ ಹೇಳಿಕೆ.

[32] ಬಿ.ಎಲ್. ರೈಸ್‌ರವರು ಸಂಪಾದಿಸಿದ ಮೈಸೂರು ಮತ್ತು ಕೊಡಗಿನ ಶಾಸನಗಳ ಅಧ್ಯಯನ

[33] ಇತಿಹಾಸ ತಜ್ಞ ಹಯವದನರಾವ್ 1927ರಲ್ಲಿ ಬರೆದ ಗೆಸೆಟಿಯರ್ಸ್‌ನಲ್ಲಿ ಕಂಡು ಬರುತ್ತದೆ.

[34] ಕರ್ನಾಟಕ ರಾಜ್ಯ ಗೆಜಿಟಿಯರ್ ಮೈಸೂರು ಜಿಲ್ಲೆ ಸಂ. ಸೂರ್ಯನಾಥ್ ಕಾಮತ್

[35] ಕನ್ನಡ ವಿಶ್ವಕೋಶ ಮೈಸೂರು ವಿ.ವಿ

[36] ಸುತ್ತೂರು ಧಾರ್ಮಿಕ ನೆಲೆಯ ಇದಕ್ಕೆ ಆಧಾರ

[37] ಶ್ರೀ ಮಹದೇಶ್ವರ ಪ್ರಸಂಗ ಪಿ.ಕೆ ರಾಜಶೇಖರ್‌ರವರ ಲೇಖನಗಳು

[38] ದೊಡ್ಡಿಂದುವಾಡಿಯ ಪುಟ್ಟಮಲ್ಲಪ್ಪರವರು ರಚಿಸಿರುವ ಶ್ರೀ ಮಹದೇಶ್ವರ ಚರಿತ್ರೆ, ಪು. 30

[39] ಎಪಿಗ್ರಾಫಿಯ ಕರ್ನಾಟಕ, ಸಂ IV ಪು. 431–436 ನಮೂದಿಸಿದೆ.

[40] ಪ್ರತಿ ವರ್ಷದ ಕ್ಯಾಲೆಂಡರ್‌ಗಳಲ್ಲಿ ಚಿಕ್ಕಲ್ಲೂರು ಬಗ್ಗೆ ವಿವರಣೆ ಇದೆ.

[41] ಸಿದ್ದೇಶ್ವರ ಕ್ಷೇತ್ರ ಪರಿಚಯ 1972 ಎಂಬ ಕೃತಿ. ಡಾ.ಬಿ.ಎಸ್. ಸ್ವಾಮಿರವರು ಕೃತಿಯನ್ನು ಹೊರತಂದಿರುತ್ತಾರೆ.

[42] ಎಪಿಗ್ರಾಫಿಯ ಕರ್ನಾಟಕ ಸಂಪುಟ IV (1975, ಪು 400–404)

[43] ಕ್ರಿ.ಶ. 1545ನೆಯ ಕುಂತೂರು ಶಾಸನ 9ರಲ್ಲಿ ಇವರ ಹೆಸರು ಬರುತ್ತದೆ.

[44] ಕರ್ನಾಟಕ ರಾಜ್ಯ ಗೆಜೆಟಿಯರ್ ಭಾಗ ಒಂದು ಪು. 334

[45] ಪ್ರಪಂಚದ ಇತಿಹಾಸ 2000, ಪುಟ 84,85.

[46] ಸನ್ಯಾದ ತಾಮ್ರ ಶಾಸನದಿಂದ ತಿಳಿದು ಬರುತ್ತದೆ.

[47] ಇಬನ್‌ತೂತಾನ ಬರವಣಿಗೆಯಲ್ಲಿ (ಕರ್ನಾಟಕ ರಾಜ್ಯ ಗ್ಯಾಜೆಟಿಯರ್).

[48] ವಿದೇಶಿ ಪ್ರವಾಸಿಗ ಬರ್ಬೋಸಾ ಖಚಿತವಾಗಿ ಮಾಹಿತಿ ತಿಳಿಸಿದ್ದಾನೆ.

ಅಧ್ಯಾಯ – 3

ಕೊಳ್ಳೇಗಾಲ ತಾಲ್ಲೂಕು ಪ್ರಮುಖ ಊರುಗಳ ದೇವಾಲಯಗಳ ವಾಸ್ತು ಮತ್ತು ಶಿಲ್ಪ ಬೆಳವಣಿಗೆ

ಚಾಮರಾಜನಗರ ಜಿಲ್ಲೆಯು ಕರ್ನಾಟಕ ರಾಜ್ಯದ ಪ್ರಮುಖ ಜಿಲ್ಲೆಗಳಲ್ಲೊಂದಾಗಿದೆ. ಇದು ಹೊಂದಿರುವ ಐತಿಹಾಸಿಕ ಮತ್ತು ಭೌಗೋಳಿಕ ಲಕ್ಷಣದ ಆಧಾರದ ಮೇಲೆ ಇಂದು ಭಾರತದಾದ್ಯಂತ ಹೆಸರುವಾಸಿಯಾಗಿದೆ ಅದಕ್ಕೆ ಬಹುಮುಖ್ಯ ಕಾರಣಗಳು ಸಹ ಇವೆ. ಒಂದು ಅಪಾರ ಪ್ರಮಾಣದಲ್ಲಿ ಹೊಂದಿರುವ ಗ್ರಾನೈಟ್‌ಶಿಲೆ, ಎರಡನೆಯದು ಐತಿಹಾಸಿಕ ಹಿನ್ನೆಲೆ, ಮೂರನೆಯದಾಗಿ ಇಲ್ಲಿ ದೊರೆಯುವ ಶ್ರೀಗಂಧ ಮತ್ತು ಆನೆ ದಂತ. ಆದರೆ ಇದಕ್ಕಿಂತ ಮಿಗಿಲಾಗಿ ಆಯಾ ಕಾಲದಲ್ಲಿ ನಿರ್ಮಾಣವಾಗಿರುವ ದೇವಾಲಯಗಳು ಸಹ ಪ್ರಮುಖವಾಗಿದೆ. ಚಾಮರಾಜನಗರ ಜಿಲ್ಲೆ ಕರ್ನಾಟಕ ರಾಜ್ಯದ ದಕ್ಷಿಣದ ಗಡಿಯ ಜಿಲ್ಲೆಯಾಗಿದ್ದು ಮೈಸೂರು ಜಿಲ್ಲೆಯಿಂದ ಆಗಸ್ಟ್ 15, 1997ರಲ್ಲಿ ಬೇರ್ಪಟ್ಟಿತು. ಈ ಜಿಲ್ಲೆಯು ಚಾಮರಾಜನಗರ, ಗುಂಡ್ಲುಪೇಟೆ, ಯಳಂದೂರು ಮತ್ತು ಕೊಳ್ಳೇಗಾಲವನ್ನು ಹೊಂದಿದೆ ಆದರೆ ನನ್ನ ಸಂಶೋಧನೆಯ ಹಿನ್ನೆಲೆಯಿಂದ ತಾಲ್ಲೂಕಿಗೆ ಮಾತ್ರ ಸೀಮಿತಗೊಂಡಿರುತ್ತದೆ.[1]

ಕೊಳ್ಳೇಗಾಲ ತಾಲ್ಲೂಕು ಪ್ರಾಚೀನ ಕಾಲದಿಂದಲೂ ಇತಿಹಾಸಿಕ ದೃಷ್ಠಿಯಿಂದ ಮಹತ್ವದ ಸ್ಥಾನವನ್ನು ಪಡೆದುಕೊಂಡಿದೆ. ಈ ಪ್ರದೇಶದಲ್ಲಿ ಇತಿಹಾಸ ಆರಂಭ ಕಾಲದಿಂದಲೂ ಜನವಸತಿಗಳಿದ್ದವೆಂದು ಕುರುಹುಗಳು ಕಂಡುಬರುತ್ತವೆ. ಆದ್ದರಿಂದ ಈ ಪ್ರದೇಶವನ್ನು ಇತಿಹಾಸ ಆರಂಭ ಕಾಲದಿಂದಲೂ ಇತ್ತು ಎಂದು ಹೇಳಬಹುದು. ಆದರೆ ಇಲ್ಲಿನ ದೇವಾಲಯಗಳನ್ನು ನೋಡಿದರೆ ಕ್ರಿ.ಶ. 10–11ನೇ ಶತಮಾನದಿಂದ ಪ್ರಾರಂಭವಾಗಿದೆ ಎಂದೆ ಇಲ್ಲಿರುವ ವಾಸ್ತುರಚನೆ, ಶಿಲ್ಪಕಲಾ ದೃಷ್ಠಿಯಿಂದ ತಿಳಿಯಬಹುದಾಗಿದೆ. ದೇವಾಲಯಗಳು ಅನಾಗರೀಕತೆಯ ಜೀವನದಿಂದ ನಾಗರೀಕತೆಯ ಜೀವನಕ್ಕೆ ಪಾದಾರ್ಪಣೆ ಮಾಡಿದ ಬೆಳವಣಿಗೆಯನ್ನು ತಿಳಿಸುತ್ತದೆ. ಕರ್ನಾಟಕದಲ್ಲಿ ಆರಂಭದ ಅರಸು ಮನೆತನಗಳು ನಿರ್ಮಿಸಲ್ಪಟ್ಟ ದೇವಾಲಯಗಳು ಶಾಸನಗಳಲ್ಲಿ ಕಂಡುಬರುತ್ತವೆಯಾದರೂ ಇವತ್ತು ಅವುಗಳ ನಿಜವಾದ ಸ್ವರೂಪ ಈಗ ಉಳಿದುಬಂದಿಲ್ಲ. ಬಾದಾಮಿಚಾಲುಕ್ಯರ ಕಾಲದಿಂದ ಕರ್ನಾಟಕದಲ್ಲಿ ದೇವಾಲಯಗಳ ನಿರ್ಮಾಣ ತೀವ್ರಗತಿಯಿಂದ ಬೆಳವಣಿಗೆ ಹೊಂದಿದಂತೆ ಕಂಡುಬರುತ್ತದೆ. ಆದರೆ ಕೊಳ್ಳೇಗಾಲದಲ್ಲಿ ಪ್ರಾರಂಭವಾಗಿರುವುದು. ಕ್ರಿ.ಶ. 10–11ನೇ ಶತಮಾನದಲ್ಲಿ ದೇವಾಲಯಗಳ ರಚನೆಯ ಉದ್ದೇಶ, ಧರ್ಮ, ಅರ್ಥ, ಕಾಮ, ಮೋಕ್ಷ ಎಂಬ ಪ್ರಾಪಂಚಿಕ ಸುಖ–ದುಃಖಗಳು ಮಾನವನ ಪೂರ್ಣವಿಕಾಸಕ್ಕೆ ಬಹುಮುಖ್ಯವಾದುದೆಂದು ಪ್ರಾಚೀನರ ನಂಬಿಕೆಯಾಗಿತ್ತು ಕೊಳ್ಳೇಗಾಲದ ವಾಸ್ತು ನೋಟ

ನೋಡಿದರೆ ದ್ರಾವಿಡ ವಾಸ್ತುರಚನೆ ನೋಟವನ್ನು ಗುರುತಿಸಬಹುದಾಗಿದೆ ಕೊಳ್ಳೇಗಾಲದಲ್ಲಿ ಹಲವಾರು ದೇವಾಲಯಗಳನ್ನು ಕಾಣಬಹುದು. ಅಲ್ಲದೆ ಶೈವ, ವೈಷ್ಣವ ಮತ್ತು ಶಕ್ತಿ ಪ್ರಧಾನವಾದ ದೇವಾಲಯಗಳೂ ಸಹ ಕಂಡುಬರುತ್ತದೆ.[2]

ಲಕ್ಷ್ಮೀ ನಾರಾಯಣಸ್ವಾಮಿ ದೇವಾಲಯ: ಕೌಹಲ+ಗಾಲದ = ಕೊಳ್ಳೇಗಾಲದ ಪ್ರಾಚೀನ ನೆಲೆಯಲ್ಲಿ ಲಕ್ಷ್ಮೀನಾರಾಯಣನ ದೇವಾಲಯವಿದೆ.(ಚಿತ್ರ ಸಂಖ್ಯೆ 1) ಸುಮಾರು ಕ್ರಿ.ಶ.11ನೇ ಶತಮಾನದಲ್ಲಿ ನಿರ್ಮಾಣಗೊಂಡ ದೇವಾಲಯವಾಗಿದೆ. ರಾಜರಾಜ ಚೋಳನ ಕಾಲದಲ್ಲಿನ ಶಾಸನ ಒಂದು ಇಲ್ಲಿ ದೊರೆತಿದೆ. ಈಶಾಸನದಲ್ಲಿ ಕೊಳ್ಳೇಗಾಲವನ್ನು ತ್ರಿಭುವನಮಹಾದೇವಿ ಚತುರ್ವೇಧಿಮಂಗಲವೆಂದು ಕರೆಯಲಾಗಿದೆ.[3] ಅಲ್ಲದೆ ದೇವಾಲಯಕ್ಕೆ ದಾನ ನೀಡಿದ ವಿವರವೂ ಕೂಡ ತಿಳಿದು ಬರುತ್ತದೆ. ಈ ಹಿನ್ನೆಲೆಯಿಂದ ಲಕ್ಷ್ಮೀನಾರಾಯಣ ಸ್ವಾಮಿ ದೇವಸ್ಥಾನ ಚೋಳರ ಕಾಲದಲ್ಲಿ ನಿರ್ಮಾಣವಾಗಿ ಹೊಯ್ಸಳರ ಕಾಲದಲ್ಲಿ ಉನ್ನತಿ ಹೊಂದಿದ ದೇವಾಲಯವೆಂದು ಸ್ಪಷ್ಟವಾಗುತ್ತದೆ.[4] ಈ ನಾರಾಯಣ ಸ್ವಾಮಿ ದೇವಸ್ಥಾನ ಪೂರ್ವಾಭಿಮುಖವಾಗಿ ದ್ರಾವಿಡ ಶೈಲಿಯಲ್ಲಿದೆ. ಇದರಲ್ಲಿ ಗರ್ಭಗೃಹ, ಶುಕನಾಸ, ನವರಂಗ ಮುಖಮಂಟಪಗಳನ್ನು ಹೊಂದಿದೆ ಗರ್ಭಗೃಹ ಸುಮಾರು 3x3 ಮೀಟರ್ ಚದುರ ಸುತ್ತಳತೆಯನ್ನು ಹೊಂದಿದ್ದು ಗರ್ಭಗೃಹದ ನಾಲ್ಕು ಮೂಲೆಯಲ್ಲಿ ಗೋಡೆಗೆ ಸೇರಿದಂತೆ ನಾಲ್ಕು ಕಂಬಗಳಿವೆ ಮಧ್ಯದಲ್ಲಿ ಪೀಠದ ಮೇಲೆ ಲಕ್ಷ್ಮೀನಾರಾಯಣ ಸ್ವಾಮಿ ಶಿಲ್ಪವಿದೆ. ಇಕ್ಕೆಲಗಳಲ್ಲಿ ಶ್ರಿದೇವಿ ಭೂದೇವಿಯರ ವಿಗ್ರಹಗಳಿವೆ. ನಾರಾಯಣಶಿಲ್ಪವೂ ಸುಮಾರು ನಾಲ್ಕು ಅಡಿ ಎತ್ತರವಿದ್ದು ಚತುರ್ಭುಜ ಹೊಂದಿದೆ. ಮೇಲೆ ಬಲಗೈಯಲ್ಲಿ ಅಭಯಮುದ್ರೆ ಎಡಗಡೆ ಗಧೆ ಇದೆ. ಮೇಲಾವಣಿಯಲ್ಲಿ ಭುವನೇಶ್ವರಿಯಿದ್ದು ಈ ಭುವನೇಶ್ವರಿಯನ್ನು ನಕ್ಷತ್ರಕಾರವಾಗಿ ಮತ್ತು ಚೌಕಾಕಾರವಾಗಿ ಕುಳ್ಳಿರಿಸಿ ಅದರ ಮಧ್ಯದಲ್ಲಿ ಅರಳಿದ ಕಮಲದ ಕೆತ್ತನೆ ಇದೆ. ಶುಕನಾಸವು ಸಹ 3x3 ಮೀಟರ್ ಇದೆ. ಇಲ್ಲಿ ಯಾವುದೇ ಶಿಲ್ಪ ಇಲ್ಲ, ಸರಳವಾದ ಕೆತ್ತನೆಯಿಂದ ಕೂಡಿದೆ. ನವರಂಗವು 9x9 ಮೀಟರ್ ವಿಸ್ತೀರ್ಣವನ್ನು ಹೊಂದಿದೆ, ನವರಂಗದ ಮಧ್ಯದಲ್ಲಿ ನಾಲ್ಕು ಕಂಬಗಳಿವೆ. ಅಲ್ಲದೆ ಗೋಡೆಯ ಸುತ್ತಲೂ ಹನ್ನೆರಡು ಗೋಡೆ ಕಂಬಗಳಿವೆ. ಮಧ್ಯದಲ್ಲಿರುವ ನಾಲ್ಕು ಕಂಬಗಳ ಕೆಳಭಾಗ ಚೌಕಾಕಾರವಾಗಿಯೂ ದಿಂಡು ಉರುಳಿಯಾಕಾರವಾಗಿಯೂ ಇದೆ ದಿಂಡಿನ ಬುಡದಲ್ಲಿ ನಾಲ್ಕು ಮೂಲೆಯಲ್ಲಿ ನಾಗಪುಷ್ಪವಿದೆ. ಭೋದಿಗೆಯು ನಾಲ್ಕು ಮುಖ ಹೊಂದಿರುತ್ತದೆ. ಚಾವಣಿಯ ಮಧ್ಯದ ಅಂಕಣದಲ್ಲಿ ಭುವನೇಶ್ವರಿಯಿದ್ದು ನಕ್ಷತ್ರಾಕಾರವಾಗಿ ಮತ್ತು ಚೌಕಾಕಾರವಾಗಿ ಚಪ್ಪಡಿ ಜೋಡಿಸಿದ್ದು ಅದರ ಮಧ್ಯದಲ್ಲಿ ಅರಳಿದ ಕಮಲದ ಉಬ್ಬುಗೆತ್ತನೆ ಇದೆ. ಈ ದೇವಸ್ಥಾನದ

ಅದಿಷ್ಠಾನದಲ್ಲಿ ಮೂರು ಪಟ್ಟಿಕೆಗಳಿವೆ, ಭಿತ್ತಿಯಲ್ಲಿ ಸುತ್ತಲೂ ಚೋಳ ದ್ರಾವಿಡ ಮಾದರಿಯ ಅರೆಕಂಬಗಳು ಮತ್ತು ಆಳವಿಲ್ಲದ ಮಂಟಪಗಳಿವೆ. ಈ ದೇವಾಲಯ ಚೋಳರ ಕಾಲದಲ್ಲಿ ನಿರ್ಮಾಣಹೊಂದಿದ ನಂತರ ಕಾಲದ ಸೇರ್ಪಡೆಗಳಿಂದ ಕೂಡಿದೆ.(ಚಿತ್ರ ಸಂಖ್ಯೆ 2) ನಂತರ ಕಾಲದಲ್ಲಿ ಸೇರ್ಪಡೆಯಾದ ಭಾಗವನ್ನು ವಿಜಯನಗರ ಅರಸರ ಕಾಲಕ್ಕೆ ಸೇರಿಸಬಹುದಾಗಿದೆ. ಮುಖ್ಯ ಪ್ರವೇಶ ದ್ವಾರದ ಮೇಲ್ಭಾಗದಲ್ಲಿ ಮಹಾಗೋಪುರವಿದ್ದು ಇದು ದ್ರಾವಿಡ ಶೈಲಿಯನ್ನು ಹೊಂದಿದೆ.(ಚಿತ್ರ ಸಂಖ್ಯೆ 3) ಅಲ್ಲದೆ ಹಲವಾರು ದೇವಾನುದೇವತೆಗಳ ಗಾರೆ ಶಿಲ್ಪಗಳನ್ನು ಬಿಂಬಿಸಲಾಗಿದೆ. ಮುಂಭಾಗದಲ್ಲಿ ಸುಮಾರು 40 ಅಡಿ ಎತ್ತರವಿರುವ ಒಂದು ಗರುಡಗಂಭವಿದೆ. ಒಟ್ಟಾರೆಯಾಗಿ ಇದೊಂದು ವೈಷ್ಣವ ದೇವಾಲಯವಾಗಿದೆ.

ಈಶ್ವರ ದೇವಾಲಯ: ಈಶ್ವರ ದೇವಾಲಯವು ಕೊಳ್ಳೇಗಾಲದ ಮಧ್ಯಭಾಗದಲ್ಲಿ ಅಂದರೆ ಕೊಳದ ಪಕ್ಕದಲ್ಲಿರುವ ಪ್ರಾಚೀನ ಶಿವದೇವಾಲಯವಾಗಿದೆ. ಈ ದೇವಾಲಯವು ಕ್ರಿ.ಶ. 10–11ನೇ ಶತಮಾನದಲ್ಲಿಯೇ ಅಂದರೆ ಚೋಳರ ಕಾಲದಲ್ಲಿಯೇ ನಿರ್ಮಾಣಗೊಂಡ (ಚಿತ್ರ ಸಂಖ್ಯೆ 4) ದೇವಾಲಯವಾಗಿದೆ.[5] ಈ ದೇವಾಲಯವು ಪೂರ್ವಾಭಿಮುಖವಾಗಿದ್ದು ಶುದ್ಧ ದ್ರಾವಿಡ ಶೈಲಿಯ ದೇವಾಲಯವಾಗಿದೆ. ಕರ್ನಾಟಕದಲ್ಲಿ ಅದರಲ್ಲೂ ಈ ಭಾಗದಲ್ಲಿ 10 ರಿಂದ 13ನೇ ಶತಮಾನದಲ್ಲಿ ಪ್ರಮುಖವಾಗಿ ಬೆಳೆದಿತ್ತು. ಅಂದು ಧಾರ್ಮಿಕ ಶೋಭೆಯಿಂದ ಕೂಡಿದ ಕಾಲವಾಗಿರುವುದರಿಂದ ಅಲ್ಲದೆ ಮೂಲತಃ ತಂಜಾವೂರಿನ ಚೋಳರು ಶೈವಧರ್ಮ ಆರಾಧಕರು ಆಗಿದ್ದರು. ಈ ಹಿನ್ನೆಲೆಯಿಂದಲೇ ಇವರು ಶೈವ ದೇವಾಲಯಗಳನ್ನು ಈ ಭಾಗದಲ್ಲಿ ನಿರ್ಮಿಸಿದ್ದಾರೆ. ಪ್ರಾಚೀನ ಕಾಲದಲ್ಲಿಯೇ ಶೈವಧರ್ಮವು ಭಾರತದಲ್ಲೆಲ್ಲಾ ಏಳಿಗೆ ಪಡೆದಿತ್ತು. ಅದರಲ್ಲಿ ಅನೇಕ ಪಂಥಗಳಿದ್ದವು ಎಂಬುದಾಗಿ ತಿಳಿದು ಬರುತ್ತದೆ. ಶಿವನನ್ನು ಲಿಂಗದ ರೂಪದಲ್ಲಿ ಪೂಜಿಸುವ ಶೈವ ಧರ್ಮ ಪ್ರಪಂಚದ ಜೀವಂತವಾದ ಪ್ರಾಚೀನ ಧರ್ಮಗಳಲ್ಲಿ ಒಂದಾಗಿದೆ ಆರ್ಯ ಪೂರ್ವದ ಸಿಂಧೂ ಸಂಸ್ಕೃತಿಯಲ್ಲಿ ಶಿವಾರಾಧನೆ ಇದ್ದಿತೆಂದು ಶಿವನ್ನು ಪಶುಪತಿಯ ರೂಪದಲ್ಲಿ ಪೂಜಿಸುತ್ತಿದ್ದರೆಂದೂ ಹರಪ್ಪ – ಮೊಹೆಂಜೆದಾರೋ ಸಂಸ್ಕೃತಿಯಲ್ಲಿ ಸಿಕ್ಕಿರುವ ಅವಶೇಷಗಳಿಂದ ತಿಳಿದು ಬರುತ್ತದೆ. ಈ ಹಿನ್ನೆಲೆಯಿಂದ ಕೊಳ್ಳೇಗಾಲದಲ್ಲಿ ಅಂದರೆ ಚೋಳರ ಕಾಲದಲ್ಲಿ ಈ ದೇವಾಲಯ ಸ್ಥಾಪನೆಯಾಗಿ ಭಕ್ತಿ, ಗೌರವಗಳಿಂದ ಕೂಡಿತ್ತು. ತಂಜಾವೂರಿನಂತೆಯೇ ಇಲ್ಲಿಯ ದೇವಾಲಯದ ಮುಂದೆ ಸುಂದರವಾದ ಕೊಳವನ್ನು ನಿರ್ಮಿಸಿರುವುದು ಸಹ ಕಂಡುಬರುತ್ತದೆ. ಆದರೆ ಈ ಕೊಳವು ಯಾರ ಕಾಲದಲ್ಲಿ ನಿರ್ಮಾಣವಾಯಿತು ಎಂದು ತಿಳಿದಿಲ್ಲ. ಆದರೆ ಈ ಕೊಳವು ತಮಿಳು ಸರ್ಕಾರದ ಅವಧಿಯಲ್ಲಿ ಆಗಿದೆ ಎಂದು ಹೇಳಬಹುದು. ಇದಕ್ಕೆ ಸಾಕ್ಷಿಯಾಗಿ ಕೊಯಮತ್ತೂರು ಸರ್ಕಾರದವತಿಯಿಂದ ಕೆತ್ತಲ್ಪಟ್ಟ ಒಂದು ಕಲ್ಲು ಶಾಸನ ಇರುವುದರಿಂದ ಇದು

ಕೊಯಮತ್ತೂರು ಸರ್ಕಾರದ ಅವಧಿಯಲ್ಲಿಯೇ ಆಗಿದೆ ಎಂದು ಹೇಳಬಹುದು. ಈ ದೇವಾಲಯದ ವಾಸ್ತುಶಿಲ್ಪವನ್ನು ನೋಡುವುದಾದರೆ ಮೇಲೆ ಹೇಳಿದಂತೆ ಶುದ್ಧ ದ್ರಾವಿಡ ಶೈಲಿಯ ದೇವಾಲಯವಾಗಿದ್ದು ಗರ್ಭಗೃಹ, ಶುಕನಾಸಿ, ನವರಂಗ, ಪ್ರಾಕಾರವನ್ನು ಹೊಂದಿದೆ. ಗರ್ಭಗುಡಿಯಲ್ಲಿ ಮೂಲ ಶಿವಲಿಂಗವಿದ್ದು ಒಂದು ನಂದಿಯ ಶಿಲ್ಪವಿದೆ. ನವರಂಗದಲ್ಲಿ ನಾಲ್ಕು ಕಂಬಗಳಿವೆ. ದೇವಾಲಯದ ಒಳಗೆ ಕಂಚು ಶಿಲ್ಪಗಳಿವೆ. ಹೊರಭಾಗದಲ್ಲಿ ದೇವಾಲಯದ ಸುತ್ತಲೂ ಚೋಳ ವಾಸ್ತು ಶೈಲಿಯ ಅರೆಕಂಬಗಳು ಮತ್ತು ಕೋಷ್ಠ ಮಂಟಪಗಳನ್ನು ಕಾಣಬಹುದಾಗಿದೆ. ಅಲ್ಲದೆ ಪ್ರಕಾರದ ಸುತ್ತಲೂ ಹಲವಾರು ಶಿಲ್ಪಗಳಿದ್ದು ಅವುಗಳಲ್ಲಿ ಚೋಳರ ಕಾಲದಲ್ಲಿಯೇ ನಿರ್ಮಾಣವಾದ ಗಣಪತಿ ಶಿಲ್ಪ, ಸೂರ್ಯಶಿಲ್ಪ, ಚಂಡಿಕೇಶ್ವರ ಶಿಲ್ಪಗಳು ಅತೀ ಪ್ರಮುಖವಾದ ಶಿಲ್ಪಗಳಾಗಿದೆ. ಅಲ್ಲದೆ ನಂತರ ಕಾಲದ ವಿಜಯನಗರ ಅರಸರ ಮತ್ತು ಮೈಸೂರು ಒಡೆಯರ ಕಾಲಕ್ಕೆ ಸೇರಿದ ಶಿಲ್ಪಗಳನ್ನು ಸಹ ಪ್ರಾಕಾರದಲ್ಲಿ ಗಮನಿಸಬಹುದು ನಂತರ ಕಾಲದ ಬೆಳವಣಿಗೆಯಲ್ಲಿ ಈ ದೇವಾಲಯಕ್ಕೆ ದಕ್ಷಿಣ ಭಾಗಕ್ಕೂ ಮಹಾದ್ವಾರವನ್ನು ನಿರ್ಮಿಸಿ ಮೇಲ್ಭಾಗದಲ್ಲಿ ಗಾರೆಯಿಂದ ಮಾಡಿದ ನಂದಿಶಿಲ್ಪವನ್ನು ಸಹ ಇಡಲಾಗಿದೆ. ಅಲ್ಲದೆ ದೇವಾಲಯದ ಸುತ್ತಲೂ ಗಾರೆಯಿಂದ ಮಾಡಿದ ಪ್ರಾಕಾರ ಗೋಡೆಯಿದ್ದು ಇಂದು ಕೆಲವು ಅಂಗಡಿಗಳು ಆಗಿರುವುದನ್ನು ಸಹ ಗಮನಿಸಬಹುದಾಗಿದೆ.

ಹುಚ್ಚಾಲಮ್ಮನ ದೇವಾಲಯ: ಹುಚ್ಚಾಲಯಮ್ಮನ ದೇವಾಲಯವು ಕೊಳ್ಳೇಗಾಲದಲ್ಲಿ ಬೆಂಗಳೂರು ರಸ್ತೆಯಲ್ಲಿದೆ. ಇದು ಒಂದು ಶಕ್ತಿ ಪ್ರಧಾನವಾದ ದೇವಾಲಯವಾಗಿದೆ ಇದು ಜಾನಪದ ದೃಷ್ಠಿಯಿಂದಲೂ ಪ್ರಾಮುಖ್ಯತೆ ಪಡೆದಿದೆ.[6] ಮಾನವನ ಸಾಂಸ್ಕೃತಿಕ ಕ್ಷೇತ್ರದಲ್ಲಿ ಜಾನಪದವು ಮಹತ್ತರವಾದ ಪಾತ್ರವನ್ನು ವಹಿಸಿದೆ. ಜಾನಪದ ಒಂದು ಜನಾಂಗದ ಸಮಸ್ತ ಬದುಕಿನ ಇತಿಹಾಸ ಮತ್ತು ಸಾಂಪ್ರದಾಯಿಕ ಜನಜೀವನದ ಎಲ್ಲಾ ವರ್ಗದವರಿಗೂ ವ್ಯಾಪಿಸುತ್ತದೆ. ಜಾನಪದ ಮೂಲದಿಂದ ಬಂದುದಲ್ಲ. ಇದು ಪರಂಪರಾಗತವಾಗಿ ಮೌಖಿಕ ಪರಂಪರೆಯಲ್ಲಿ ಉಳಿದು ಬಂದ ಸಮಗ್ರ ನೋಟ ಎಂದು ಹೇಳಬಹುದು. ಜಾನಪದವು ಗ್ರಾಮೀಣ ಪರಿಸರದಲ್ಲಿ ಬೆಳೆಯುವಂತಹ ಒಂದು ಗುಣ ಪ್ರಮುಖವಾದದ್ದು. ಆದರೂ ಈ ಹಳ್ಳಿಯ ನೋಟ ಪರಂಪರೆಯನ್ನು ನಗರ, ಪಟ್ಟಣ, ಪ್ರದೇಶಗಳಲ್ಲೂ ಆಚರಿಸುವ ಸಂಪ್ರದಾಯವಿದೆ. ಈ ಹಿನ್ನೆಲೆಯಿಂದ ಶಕ್ತಿ ಪ್ರಧಾನವಾದ ದೇವತೆಯನ್ನು ಜನಪದ ದೇವತೆಯಾಗಿ ಪೂಜಿಸುವ ಪ್ರವೃತ್ತಿಯಿದೆ. ಈ ಹಿನ್ನೆಲೆಯಿಂದಲೇ ಮೂಲ ದೇವಾಲಯವಾದ ಹುಚ್ಚಾಲಮ್ಮನ ದೇವಾಲಯವು ಸಹ ಪ್ರಮುಖವಾದ ಒಂದು ದೇವಾಲಯ. ಈ ದೇವಾಲಯದ ಪ್ರಾಕಾರದ ಗೋಡೆಯಲ್ಲಿ ಲಿಂಗ,

ಸೂರ್ಯ, ಚಂದ್ರ ಮತ್ತು ಲಿಂಗ ಇರುವುದು ವಿಶೇಷವಾಗಿ ಮಾಸ್ತಿಕಲ್ಲು, ವೀರಗಲ್ಲು, ಮತ್ತು ಶಾಸನಕಲ್ಲುಗಳಲ್ಲಿ ಕಂಡುಬರುತ್ತವೆ. ಆದರೆ ಇಲ್ಲಿ ಕೇವಲ ಒಂದು ಚಪ್ಪಡಿಯಲ್ಲಿರುವುದು ಒಂದು ವಿಶೇಷವೇ ಎಂದು ಹೇಳಬಹುದು. (ಚಿತ್ರ ಸಂಖ್ಯೆ 5)

ಶಕ್ತಿ ಪ್ರಧಾನವಾದ ಹುಚ್ಚಲಮ್ಮನ ದೇವಾಲಯದ ಮುಂದಿರುವ ಚಪ್ಪಡಿಯಲ್ಲಿ ಲಿಂಗವು ಮನುಷ್ಯನ ಸೃಷ್ಟಿಯ ಮುಖ್ಯ ಸಂಕೇತವಾದರೆ ಸೂರ್ಯ ಮತ್ತು ಚಂದ್ರ ಲೋಕಕ್ಕೆ ಬೆಳಕು ಚೆಲ್ಲುವ ಗ್ರಹಗಳಾಗಿದ್ದು. ಒಂದೊಂದು ಜೀವರಾಶಿಯು ಲಿಂಗ ಸಂಭೋಗದಿಂದ ಸೃಷ್ಟಿಯಾಗಿರುವ ಹಿನ್ನೆಲೆಯಲ್ಲಿ ಲಿಂಗಕ್ಕೆ ಹೆಚ್ಚಿನ ಮಹತ್ವವಿದೆ ಎಂಬುದು ದೃಢ ಪಡುತ್ತದೆ.

ಮರಡಿ ಗುಡ್ಡದ ಮೇಲಿನ ಮಹದೇಶ್ವರ ದೇವಾಲಯ: ಇದೊಂದು ಮಹತ್ತರವಾದ ದೇವಾಲಯವಾಗಿದೆ.[7] ಇದು ಯಾರ ಕಾಲದಲ್ಲಿ ನಿರ್ಮಾಣವಾಗಿದೆ ಎಂಬುದಕ್ಕೆ ಯಾವುದೇ ಪುರಾವೆ ಇಲ್ಲ. ಆದರೆ ಪ್ರಾಯಶಃ ಇದೊಂದು ಪ್ರಾಚೀನ ದೇವಾಲಯವೆಂದು ಹೇಳಬಹುದು. ಆದರೂ ಕೂಡ ಇದಕ್ಕೆ ಜಾನಪದೀಯ ಹಿನ್ನೆಲೆ ಇರುವುದನ್ನು ಕಾಣಬಹುದಾಗಿದೆ. ಮರಡಿ ಕ್ಷೇತ್ರ ಹೇಗೆ ಹೆಸರು ಪಡೆಯಿತ್ತೆನ್ನುವುದಕ್ಕೆ ಶಿವಪುರಾಣದಲ್ಲಿ ಒಂದು ಕಥೆ ಇದೆ. ಆದರೆ ಇಲ್ಲಿಯ ಜಾನಪದೀಯ ಕಥೆ ಏನು ಎಂದು ಯೋಚಿಸುವುದಾದರೆ ಹಾಗೂ ಜಾನಪದ ದೃಷ್ಟಿಯಲ್ಲಿ ನೋಡುವುದಾದರೆ ಮಲೈಮಹದೇಶ್ವರ ಈ ಮಹಿಷಮಂಡಲ ಭಾಗದಲ್ಲಿ ಇದ್ದನೆಂದೂ ಹೇಳಿಕೆ ಇದೆ. ಮೊದಲು ಮಾದೇಶ್ವರನು ಸುತ್ತೂರಿನಲ್ಲಿದ್ದು ನಂತರ ಕುಂತೂರು ಬೆಟ್ಟ ಮತ್ತು ಪ್ರಭುಲಿಂಗ ಬೆಟ್ಟದಲ್ಲಿ ಪ್ರಭುಲಿಂಗ ಸ್ವಾಮಿಯ ಶಿಷ್ಯನಾಗಿ ಸ್ವಲ್ಪ ಕಾಲವಿದ್ದು ನಂತರ ಕೊಳ್ಳೇಗಾಲದ ಮರಡಿಗುಡ್ಡದ ಬೆಟ್ಟದ ಮೇಲೆ ಮಂಡಿಯೂರಿ ನಂತರ ಕೌದಳ್ಳಿ ಕಣಿವೆಯ ಮಾರ್ಗವಾಗಿ ಮಾದೇಶ್ವರನ ಬೆಟ್ಟಕ್ಕೆ ಹೋದನೆಂದು ಹೇಳಿಕೆ ಇದೆ. ಈ ಮರಡಿ ಗುಡ್ಡದಲ್ಲಿ ಹುಣ್ಣಿಮೆ ಮತ್ತು ಅಮಾವಾಸ್ಯೆಯಲ್ಲಿ ವಿಶೇಷ ಪೂಜೆ ನಡೆಯುತ್ತದೆ. ಈ ದೇವಾಲಯ ವಾಸ್ತು ಶಿಲ್ಪದ ದೃಷ್ಟಿಯಲ್ಲಿ ಅಷ್ಟೇನು ಪ್ರಾಮುಖ್ಯತೆ ಪಡೆದಿಲ್ಲ. ಆದರೆ ಈ ಮರಡಿ ಗುಡ್ಡಗಳ ಕೆಳಭಾಗದಲ್ಲಿ ಬೀರೇಶ್ವರ ದೇವಾಲಯವಿದೆ. ಈ ಬೀರೇಶ್ವರ ಶಿಲ್ಪವಿದೆ. ಈ ಬೀರೇಶ್ವರ ದೇವಾಲಯದ ಪಕ್ಕದಲ್ಲಿಯೇ ರಾವಳೇಶ್ವರನ ಶಿಲ್ಪವಿದೆ. ಈ ಶಿಲ್ಪಕಲೆಯನ್ನು ನೋಡಿದರೆ ಪ್ರಾಯಶಃ ಕ್ರಿ.ಶ. 10ನೇ ಶತಮಾನಕ್ಕೆ ಸೇರಿರುತ್ತದೆ ಎಂದು ಹೇಳಬಹುದು. ಈ ರೀತಿಯ ಶಿಲ್ಪಿಗಳು ಕೊಳ್ಳೇಗಾಲದಲ್ಲಿ ಹಲವಾರು ಭಾಗಗಳಲ್ಲಿ ಕಂಡುಬರುತ್ತವೆ. ಅವುಗಳಲ್ಲಿ ಪ್ರಮುಖವಾಗಿ ಕೊಳ್ಳೇಗಾಲದ ಪೀಸ್ ಪಾರ್ಕ್‌ನಲ್ಲಿ, ಗೀತಾ ಹೈಯರ್ ಪ್ರೈಮರಿ ಸ್ಕೂಲ್ ಹತ್ತಿರ ಇರುವ ತೋಟದಲ್ಲಿರುವ ದೇವಾಲಯದಲ್ಲಿ ಮತ್ತು ರಾಘವೇಂದ್ರಸ್ವಾಮಿ ದೇವಾಲಯದ ಎದುರು ಈ ರೀತಿಯ ರಾವಳೇಶ್ವರ ಶಿಲ್ಪಗಳಿವೆ. ಈ ಹಿನ್ನೆಲೆಯಿಂದ ಈ ರಾವಳೇಶ್ವರ ಪರಂಪರೆ ಈ ಭಾಗದಲ್ಲಿ ಅಪಾರವಾಗಿತ್ತೆಂದು

ಹೇಳಬಹುದಾಗಿದೆ. ಇಂತಹ ರಾವಳೇಶ್ವರನ ಶಿಲ್ಪಗಳು ಮಂಡ್ಯ, ಮೈಸೂರು, ಚಾಮರಾಜನಗರ ಜಿಲ್ಲೆಗಳಲ್ಲಿ ವಿಶೇಷವಾಗಿ ಕಂಡುಬರುತ್ತದೆ. ಈ ಭಾಗವು ಪ್ರಾಚೀನ ಕಾಲದಲ್ಲಿ ಮಹಿಷಮಂಡಲ ಪ್ರಾಂತ್ಯವಾಗಿತ್ತು. ಈ ಭಾಗದ ಮೇಲೆ ತಲಕಾಡಿನ ಗಂಗರು ಆಳ್ವಿಕೆ ನಡೆಸಿದರೂ ಕೂಡ ಅವರ ಕಾಲಕ್ಕೆ ಈ ರೀತಿ ಶಿಲ್ಪ ಕಲೆಗಳು ಇರಲಿಲ್ಲ, ಏಕೆಂದರೆ ತಲಕಾಡಿನ ಗಂಗರ ಪ್ರಾಂತ್ಯಗಳಾದ ಕೋಲಾರ, ಮತ್ತು ಹಾಸನ ಜಿಲ್ಲೆಯ ಶ್ರವಣ ಬೆಳಗೊಳದಲ್ಲೂ ಕಂಡುಬರುವುದಿಲ್ಲ. ಈ ಹಿನ್ನೆಲೆಯಿಂದ ತಂಜಾವೂರಿನ ಚೋಳರ ಹೆಚ್ಚಾಗಿ ಈ ಭಾಗದ ಮೇಲೆ ಆಳ್ವಿಕೆ ನಡೆಸಿರುವುದರಿಂದ ಈ ರೀತಿಯ ಶಿಲ್ಪಕಲೆ ಕ್ರಿ.ಶ. 10ನೇ ಶತಮಾನದಲ್ಲಿಯೇ ಪ್ರಾರಂಭವಾದವು ಎಂದು ಹೇಳಬಹುದಾಗಿದೆ. ಇಂದು ಕೊಳ್ಳೇಗಾಲ ಯಳಂದೂರು, ಚಾಮರಾಜನಗರ ಇನ್ನೂ ಮುಂತಾದ ಸ್ಥಳಗಳಲ್ಲಿ ರಾವಳೇಶ್ವರನ ವಂಶದವರೂ ಹಾಗೂ ಸಹಸ್ರಾರು ಭಕ್ತ ಸಮೂಹಗಳಿವೆ. ಅಲ್ಲದೆ ಶ್ರೀ ಮಲೈಮಹದೇಶ್ವರ ಈ ಪ್ರಾಂತ್ಯದಲ್ಲಿ ಹುಟ್ಟಿ ಬೆಳೆದು ದೇವರ ಮೇಲೆ ಅಪಾರ ಪ್ರೀತಿ ನಂಬಿಕೆಗೆ ಪಾತ್ರನಾಗಿ ಶೈವಧರ್ಮದ ಪ್ರಭಾವಿತ ವ್ಯಕ್ತಿಯಾಗಿ ಮಹದೇಶ್ವರ ಬೆಟ್ಟದಲ್ಲಿ ಇಂದು ಜಗತ್ ಪ್ರಸಿದ್ಧನಾಗಿದ್ದಾನೆ. ಆಧುನಿಕತೆ ಹಾಗೂ ಜಾಗತೀಕರಣದ ಭರಾಟೆಯಲ್ಲಿದ್ದರೂ ಕೂಡ ಹಳಿಹಳ್ಳಿಗಳಲ್ಲಿ ಮಾದೇಶ್ವರ ಭಕ್ತರು ಆಚಾರ-ವಿಚಾರ ಮತ್ತು ಸಂಸ್ಕೃತಿಗೆ ಪಾತ್ರರಾಗಿ ಹಬ್ಬ-ಹರಿದಿನಗಳು ಇಂದಿಗೂ ನಡೆಯುತ್ತಧೆ. ಪ್ರಾಚೀನ ಸಂಸ್ಕೃತಿ ಪರಂಪರೆಗೆ ಚ್ಯುತಿಬಾರದಂತೆ ಮಾದೇಶ್ವರನ ಹೆಸರಿನಲ್ಲಿ ದೇವರಗುಡ್ಡರು ಇರುವುದು ಈ ಭಾಗದಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಈ ಹಿನ್ನೆಲೆಯಿಂದ ಮರಡಿಗುಡ್ಡದ ಪರಂಪರೆ ಹಾಗೂ ಮಾದೇಶ್ವರನ ಆರಾಧನೆ ಈಗಲೂ ಕೂಡ ಕೊಳ್ಳೇಗಾಲ ಪ್ರಾಂತ್ಯದಲ್ಲಿ ಹೆಚ್ಚಾಗಿ ಪ್ರಚಲಿತದಲ್ಲಿದೆ. ಇದಕ್ಕೆ ಪೂರಕವಾಗಿ ಕೊಳ್ಳೇಗಾಲದ ಮರಡಿಗುಡ್ಡ ಕೊಳ್ಳೇಗಾಲಕ್ಕೆ ಕಳಸವಿದ್ದಂತೆ. ಈ ಹಿನ್ನೆಲೆಯಿಂದಲೇ ಸ್ಥಾಪನೆಯಾದ ಶ್ರೀ ಮಹದೇಶ್ವರ ಪ್ರಥಮ ದರ್ಜೆ ಕಾಲೇಜ್‌ಗೆ ಈ ಹೆಸರನ್ನೇ ಇಟ್ಟಿರುವುದು ಕೂಡ ವಿಶೇಷತೆ ಎಂದೇ ಹೇಳಬಹುದು.

ಈಗ ಕೊಳ್ಳೇಗಾಲ ವಿಶಾಲವಾಗಿ ಬೆಳೆದು ನಿಂತಿರುವುದರಿಂದ ಹಲವಾರು ಬಡಾವಣೆಗಳಲ್ಲಿ ಹಲವಾರು ಮಹದೇಶ್ವರ ದೇವಾಲಯಗಳು ಕಂಡುಬರುತ್ತವೆ ಅಲ್ಲದೆ ಶೈವ ಧರ್ಮದ ಹಿನ್ನೆಲೆಯಿಂದ ಅನೇಕ ಹೆಸರಿನಲ್ಲಿ ಶಿವದೇವಾಲಯಗಳು ಕೂಡ ಈಭಾಗದಲ್ಲಿ ಕಂಡುಬರುತ್ತವೆ. ಇವೆಲ್ಲಕ್ಕೂ ಈ ಪ್ರಾಂತ್ಯ ಮಹದೇಶ್ವರನ ಹಿರಿಮೆಗೆ ಹೆಸರುವಾಸಿಯಾಗಿದೆ. ಮತ್ತೊಂದು ಸಂಶೋಧನೆಯ ಪ್ರಕಾರ ಯೋಚನೆ ಮಾಡುವುದಾದರೆ ಮಾದೇಶ್ವರನ ಪ್ರಸಂಗ ಬರುವುದು ಸುಮಾರು 15-16ನೇ ಶತಮಾನದಿಂದ ಆದರೆ ಅದಕ್ಕೆ ಮೊದಲು ಈ ಭಾಗದಲ್ಲಿ ಶೈವ ದೇವಾಲಯಗಳಿವೆ. ಈ ಭಾಗದಲ್ಲಿ ಮೊಟ್ಟ ಮೊದಲ ರಾಜಕೀಯವಾಗಿ ಆಳ್ವಿಕೆ

ಪ್ರಾರಂಭಿಸಿದವರು ತಲಕಾಡಿನ ಗಂಗರು. ಗಂಗರ ಆಳ್ವಿಕೆಯಲ್ಲಿ ಶೈವಧರ್ಮವಿದ್ದರೂ ಹೆಚ್ಚಾಗಿ ಜೈನ ಧರ್ಮಕ್ಕೆ ಪ್ರೋತ್ಸಾಹ ನೀಡಿದರು. ಆದ ಕಾರಣದಿಂದಲೇ ಕ್ರಿ.ಶ. 6–7ನೇ ಶತಮಾನದಲ್ಲಿಯೇ ಕೊಳ್ಳೇಗಾಲದ ಬಸ್ತೀಪುರ ಪ್ರಮುಖ ಜೈನ ನೆಲೆಯಾಗಿತ್ತು. ಕ್ರಿ.ಶ. 10ನೇ ಶತಮಾನದಲ್ಲಿ ತಂಜಾವೂರಿನ ಚೋಳರು ಆಳ್ವಿಕೆ ಮಾಡಿ ಶೈವ ಧರ್ಮದ ಆರಾಧಕರು ಆಗಿರುವುದರಿಂದ ಇಲ್ಲಿ ಶೈವ ದೇವಾಲಯಗಳು ನಿರ್ಮಾಣವಾದವು. ಉದಾಹರಣೆಗೆ ಕೊಳ್ಳೇಗಾಲದ ಕೊಳದ ಪಕ್ಕದಲ್ಲಿರುವ ಈಶ್ವರ ದೇವಾಲಯ ಚೋಳರ ಕಾಲದ ಪ್ರಾಚೀನ ದೇವಾಲಯ, ಆದುದರಿಂದಲೇ ಮಾದೇಶ್ವರನಿಗಿಂತಲೂ ಮೊದಲು ಈ ಭಾಗದಲ್ಲಿ ಶೈವ ಪರಂಪರೆ ಇತ್ತು. ನಂತರ ಮಾದೇಶ್ವರನ ಪರಂಪರೆ ಹಾಗೂ ಆರಾಧನೆಯಿಂದ ಶಿವನ (ಮಾದೇಶ್ವರ) ದೇವಾಲಯಗಳು ಈ ಭಾಗದಲ್ಲಿ ಕ್ರಿ.ಶ. 16–17ನೇ ಶತಮಾನದ ನಂತರ ಹೆಚ್ಚು-ಹೆಚ್ಚು ದೇವಾಲಯಗಳು ಸ್ಥಾಪಿತಗೊಂಡವು.

ಗಣೇಶನ ದೇವಾಲಯ: ಇದೊಂದು ಪ್ರಾಚೀನ ದೇವಾಲಯ ಇದು ಕೊಳ್ಳೇಗಾಲದಲ್ಲಿ ಮಹದೇಶ್ವರನ ಬೆಟ್ಟಕ್ಕೆ ಹೋಗುವ ರಸ್ತೆಯಲ್ಲಿದೆ. ಈ ದೇವಾಲಯವನ್ನು ಮತ್ತೆ ಗಣೇಶನ ಶಿಲ್ಪವನ್ನು ನೋಡಿದರೆ ಗಂಗರ ಕಾಲಕ್ಕೆ ಇದು ನಿರ್ಮಾಣಗೊಂಡಿರಬೇಕೆಂದು ತಿಳಿಯಬಹುದಾಗಿದೆ. ಇದೊಂದು ಗ್ರಾನೈಟ್ ಶಿಲೆಯಿಂದ ಮಾಡಿದ ಮೂರ್ತಿಯಾಗಿದೆ.

ಚಿತ್ರಚಾವಡಿ ಬೀದಿಯಲ್ಲಿರುವ ದೇವಾಲಯ: ಚಿತ್ರಚಾವಡಿ ಬೀದಿ ಸಾಂಸ್ಕೃತಿಕ ಚಿತ್ರ ಮತ್ತು ಶಿಲ್ಪಧಾರ ಮೂರ್ತಿ ನೋಟ / ಅಲ್ಲದೆ ಮಾತೃ ಪ್ರಧಾನ ಕ್ಷೇತ್ರ ದೇವರು ರಕ್ಷಸಮ್ಮ ದೇವಾಲಯದ ಬಗ್ಗೆ ಸೂಕ್ತ ಮಾಹಿತಿಯೊಂದಿಗೆ ವಿವರಣೆಯನ್ನು ಇಲ್ಲಿ ನೀಡಲಾಗಿರುತ್ತದೆ. ಭಾರತದೇಶದಲ್ಲಿ ಭಾರತಾಂಬೆಯ ಮಡಿಲಲ್ಲಿ ಮಾತೃಪ್ರಧಾನ ದೇವರು ಹಿಂದೂ ಧರ್ಮ ಜೈನ ಧರ್ಮ, ಮುಸ್ಲಿಂ ಧರ್ಮ, ಕ್ರೈಸ್ತ ಧರ್ಮ, ಹೀಗೆ ವಿವಿಧ ಎಲ್ಲಾ ಧರ್ಮದ ಮತಗಳಲ್ಲಿ ಭೂಮಿತಾಯಿ, ತಾಯಿದೇವರು, ದೈವಿಕಾಭಾವನೆ ಪ್ರೀತಿಯ ಭಾವನೆ, ನ್ಯಾಯ ಸಮ್ಮತೆಗೆ, ಅನುಗುಣವಾಗಿ ಮಾತೃ ಪ್ರಧಾನ ತಾಯಿಯನ್ನು ಗೌರವಿಸಿ ಪ್ರೀತಿಸುವುದು ಆಯಾಕಾಲದ ಮಾನವನ ಸದ್ಭಾವನೆಚ್ಚಿಯಾಗಿದೆ. ಈ ಹಿನ್ನೆಲೆಯಿಂದ ಕೆಲವೊಂದು ಆಧಾರಗಳಿಂದ ಪ್ರಾಚೀನ ಸಾಂಸ್ಕೃತಿಕ ನೋಟವನ್ನು ಹಲವಾರು ದೃಷ್ಟಿಕೋನಗಳಿಂದ ಕಾಣಲು ಸಾಧ್ಯವಾಗಿದೆ. ಚಾಮರಾಜನಗರ ಜಿಲ್ಲೆ ಕೊಳ್ಳೇಗಾಲ ತಾಲ್ಲೂಕು ಕೊಳ್ಳೇಗಾಲದ ನಾಯಕರ ಚಿತ್ರ ಚಾವಡಿ ಬೀದಿಯಲ್ಲಿ ಒಂದು ರಾಮಮಂದಿರವಿದೆ. ಮಂದಿರದ ಒಳ ಪ್ರಾಕಾರದಲ್ಲಿ ಮರದಿಂದ ಕೆತ್ತಲ್ಪಟ್ಟ ಸುಂದರವಾದ ಕಂಬಗಳು ವ್ಯಾಳವಾರಿ ಮುಖ, ಸಿಂಹರೂಪದ ಮೂರ್ತಿಗಳು ಆ ಕಾಲದಲ್ಲಿ ನ್ಯಾಯತೀರ್ಮಾನ ಮಾಡುತ್ತಿದ್ದ ಯಜಮಾನರ ಮುಖದ ಹೋಲಿಕೆಯಂತೆ ನಾಲ್ಕು ದಿಕ್ಕುಗಳಲ್ಲಿ ಕಮಲದ ಮಧ್ಯದಲ್ಲಿ ಚಿತ್ರಿಸಿದ್ದಾರೆ. ಅಂದರೆ

ನಾಲ್ಕು ದಿಕ್ಕುಗಳಲ್ಲಿ ಕಮಲದ ಮಧ್ಯದಲ್ಲಿ ಚಿತ್ರಿಸಿದ್ದಾರೆ. ಅಂದರೆ ನಾಲ್ಕು ದಿಕ್ಕುಗಳನ್ನು ಸಾಕ್ಷಾಭೂತವಾಗಿ ಅಂದು ನ್ಯಾಯ ಮಾಡುತ್ತಿದ್ದರು ಎಂಬುದು ತಿಳಿಯುತ್ತದೆ. ಮಧ್ಯದ ಅಂಕಣದ ಚೌಕಟ್ಟಿನಲ್ಲಿ ವಿಶೇಷವಾದ ಅಲಂಕಾರಗಳಿಂದ ಫಲಪುಷ್ಪ, ಬಳ್ಳಿ, ಪ್ರಾಣಿ, ಪಕ್ಷಿ ಮುಂತಾದವುಗಳನ್ನು ಸುಂದರವಾಗಿ ಕೆತ್ತಲ್ಪಟ್ಟಿದೆ. ಮೂರು ಕಡೆಗೋಡೆಗಳಲ್ಲಿ ಫೋಟೋಗಳಿವೆ ಅವುಗಳು ಈ ಕೆಳಕಂಡಂತೆ ಕಂಡುಬರುತ್ತವೆ. (ಚಿತ್ರ ಸಂಖ್ಯೆ 6 ಮತ್ತು 7)

1. ಟಿಪ್ಪುಸುಲ್ತಾನ್, ಇಂಗ್ಲೀಷ್‌ರೊಡನೆ ಯುದ್ಧ ಮಾಡುತ್ತಿರುವ ದೃಶ್ಯ.
2. ರಾಮ–ರಾವಣ ಯುದ್ಧ ಮಾಡುತ್ತಿರುವ ದೃಶ್ಯ.
3. ಅರ್ಜುನ, ಭೀಷ್ಮರ ಯುದ್ಧದೃಶ್ಯ.
4. ಗಿರಿಜಾಕಲ್ಯಾಣ ಅಥವಾ ಮೀನಾಕ್ಷಿಕಲ್ಯಾಣ.
5. ಗೋಪಾಲಕೃಷ್ಣ – ಗಜಲಕ್ಷ್ಮೀ, ಕಾಳಿಂಗಮರ್ದನ.
6. ಸೀತಾ ಕಲ್ಯಾಣ.
7. ಅನಂತಶಯನಾ
8. ಕೃಷ್ಣಲೀಲಾ.
9. ಕಾಮಧೇನು.
10. ದಶವಾತಾರ.
11. ಮೈಸೂರು ದಸರ, ಜಂಬುಸವಾರಿ ದೃಶ್ಯ ಚಿತ್ರಕಲೆಯಲ್ಲಿ ಮೂಡಿಬಂದಿದೆ.

ಈ ಭಿತ್ತಿ ಚಿತ್ರಗಳನ್ನು ಕ್ರಿ.ಶ. 1850 ರಿಂದ 1950ರ ಕಾಲದಲ್ಲಿ ರಚಿಸಲಾಗಿದೆಯೆಂದು ತಿಳಿದುಬರುತ್ತದೆ. ಈ ದೇವಾಲಯದ ಪಕ್ಕದಲ್ಲಿ ಬ್ರಾಹ್ಮಣ ಮಾರಮ್ಮ ದೇವಸ್ಥಾನ ಬಹಳ ಸುಂದರವಾಗಿದೆ. ಅಲ್ಲದೆ ಇಲ್ಲಿ ಹನುಮಂತನ ದೇವರು, ಸಿದ್ಧಪ್ಪಾಜಿ ಗದ್ದುಗೆಯ ದೇವಾಲಯಗಳಿವೆ.

ಮಾರಮ್ಮನ ದೇವಸ್ಥಾನವು 9 ಅಂಕಣದಲ್ಲಿ ಕಟ್ಟಲಾಗಿದೆ. ಸಣ್ಣಪುಟ್ಟಗಾರೆ ಚಿತ್ರಗಳು ಬಹಳ ಸುಂದರವಾಗಿವೆ. ಆನೆಗಳಸಾಲು, ಹೂ ಬಳ್ಳಿಗಳ ಸಾಲು, ಕೋಟೆಸಾಲು ಮುಂತಾದವುಗಳು, ಪ್ರಧಾನವಾಗಿ ಮೂರು ಕೋಷ್ಠಗುಡಿಗಳಿವೆ. (ಚಿತ್ರ ಸಂಖ್ಯೆ 8) ಅದರಲ್ಲಿ ಸರಸ್ವತಿ, ಕಾಳಿಕಾಂಬ, ಲಕ್ಷ್ಮೀ, ಗಾರೆಮೂರ್ತಿಗಳು ಮುಗ್ಧವಾಗಿ ಚಿತ್ರಿಸಲಾಗಿದೆ. ಅಕ್ಕಪಕ್ಕದಲ್ಲಿ ಕೆಲಸಗಾರರು, ಸನ್ಯಾಸಿಗಳು, ವಿರಕ್ತರು ಕುಳಿತು, ನಿಂತು ತಪಸ್ಸನ್ನು ಆಚರಿಸುವಂತೆ ಗೋಪುರದ ಎಲ್ಲಾ ಭಾಗಗಳಲ್ಲಿ ಕಾಣಬಹುದು. ಅಂದಿನ ಕಾಲಘಟ್ಟದಲ್ಲಿ ಕೊಳ್ಳೇಗಾಲದಲ್ಲಿ ಈ ರೀತಿ ಸುಂದರವಾದ ದೇವಸ್ಥಾನ ಮತ್ತೊಂದು ಇಲ್ಲ ಎಂಬುದು ತಿಳಿದು ಬರುತ್ತದೆ.

ಬ್ರಾಹ್ಮಣಮಾರಮ್ಮ ಅಥವಾ ಜೈನಮಾರಮ್ಮ ಎಂದು ಸಾಂಸ್ಕೃತಿಕವಾಗಿ ಕರೆಯುತ್ತಾರೆ. ಈ ತಾಯಿಗೆ ತಂಪಿನ ಸೇವೆ ಮಾಡುತ್ತಾರೆ. ಮಾಂಸಹಾರ ನೈವೇದ್ಯ ವಿರುವುದಿಲ್ಲ. ಬಲಿ ಕೊಡುವ ಸಂದರ್ಭದಲ್ಲಿ ಬಲಿ ದೇವತೆಗೆ ತೀರ್ಥಕೊಟ್ಟು ಶಿವನ ಸಮುದ್ರದ ಮಾರಮ್ಮನಿಗೆ ಬಲಿಕೊಡುವ ಪದ್ಧತಿ ಇಲ್ಲ.

ಬ್ರಾಹ್ಮಣ ಮಾರಮ್ಮ ದೇವಾಲಯದಲ್ಲಿ ದೇವಿಯನ್ನು ಮೃದುಕಲ್ಲಿನಲ್ಲಿ ಮಾಡಲಾಗಿದೆ. ತಾಯಿ ಮೂರ್ತಿ ರೂಪಲಾವಣ್ಯವನ್ನು ಗಮನಿಸಿದಾಗ ಮಾರಮ್ಮ ತಾಯಿಯು ಕನ್ಯೆಯ ರೂಪದಲ್ಲಿ ಕಂಡುಬರುತ್ತಾಳೆ. (ಚಿತ್ರ ಸಂಖ್ಯೆ 9) ವಿಶ್ವಕರ್ಮ ಆಚಾರ್ಯರು ಈ ಶಿಲ್ಪವನ್ನು ಇತಿಹಾಸದ ಸಂಗತಿಯನ್ನು ಮರೆಮಾಚದೆ ಚಿತ್ರಿಸಿದ್ದಾರೆ. ಇದೆ ತಾಯಿಗೆ ಉತ್ಸವ ಮೂರ್ತಿಯನ್ನು ಸಂಪ್ರದಾಯ ಪ್ರಮಾಣಬದ್ಧವಾಗಿ ಸುಂದರವಾಗಿ ಪಂಚಲೋಹದಿಂದ ಮಾಡಿಸಿದ್ದಾರೆ. ಈ ಉತ್ಸವ ಮೂರ್ತಿಯನ್ನು ದಸರ ಹಬ್ಬದ ಸಂದರ್ಭದಲ್ಲಿ ಪಟ್ಟಕ್ಕೆ ಕೂರಿಸಿ ನವರಾತ್ರಿ ಉತ್ಸವ ಮಾಡುತ್ತಾರೆ ಮೈಸೂರಿನ ಜಂಬೂ ಸವಾರಿಯ ದಿನ ಮೂರ್ತಿಯನ್ನು ಬನ್ನಿ ಪೂಜೆಗೆ ಶಮಿರುಷ ತರಲು ಊರಿನಲ್ಲಿ ಪ್ರದಕ್ಷಣೆ ಮಾಡಿ ಬರುತ್ತದೆ. ಇದು ವಿಜಯನಗರದ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತದೆ ಎಂದು ಹೇಳಬಹುದು.

ಮಾರಮ್ಮ ದೇವಸ್ಥಾನದಲ್ಲಿ ಪಂಚಲೋಹದ ಮೂರ್ತಿಗಳಲ್ಲಿ ಉತ್ಸವಮೂರ್ತಿ ದೊಡ್ಡದಾಗಿದೆ. ಅದರ ಪಕ್ಕದಲ್ಲಿ ಚಿಕ್ಕವಾದ ಮೂರ್ತಿ ಇದೆ. ಈ ಮೂರ್ತಿ ಸ್ವರೂಪ ವಿಶೇಷವಾಗಿದೆ. ಮೂರ್ತಿಯ ಸ್ತ್ರೀ ದೇವತೆಯಾಗಿ ಮಗುವನ್ನು ತನ್ನ ಸೊಂಟದ ಮೇಲೆ ಕುಳ್ಳಿರಿಸಿ ಕೊಂಡಿದ್ದು ನಾಲ್ಕು ಕೈಗಳಿವೆ. ಬಲಗೈಯಲ್ಲಿ ಕಟ್ಟಿ ಮತ್ತು ಫಲ್ಲು ಹಿಡಿದಿದೆ. ಎಡಗೈಯಲ್ಲಿ ಗುರಾಣಿ, ದಂಡಕವನ್ನು ಹಿಡಿದಿದೆ ದೇವಿಯು ವೀರಾಸನದಲ್ಲಿ ಕುಳಿತಿದ್ದು ಕರ್ಣಕುಂಡಲ, ಕಂಠಾಭರಣ, ವಸ್ತ್ರ, ಕೇಶಾಭರಣ ಕಿರೀಟವಿದೆ. ತಾಯಿತು ಕಮಲದ ದಳದ ಮೇಲೆ ಕುಳಿತ್ತಿದ್ದು ಪ್ರಭಾವಳಿಯಲ್ಲಿ ಮೂರು ಕಳಶವಿದೆ. ಸುತ್ತಲಿನ ಪ್ರಭಾವಳಿಯಲ್ಲಿ ಭೈರವ ಸ್ವರೂಪ ವ್ಯಕ್ತಿ, ನಾಯಿ, ಮೂರು ಭಾವನೆಯುಳ್ಳದ್ದು. ಗಣಪತಿ ಅಕ್ಕಪಕ್ಕದಲ್ಲಿ ಟಗರುಗಳಿವೆ. ಈ ಮೂರ್ತಿಯು ಅಪರೂಪದ ಪಂಚಲೋಹದಿಂದ ಮಾಡಿದೆ. ಜೈನ ಸಂಸ್ಕೃತಿಯಲ್ಲಿ ಈ ಶಿಲ್ಪ ಮಾಡಿರಬಹುದು ಎಂದು ಊಹಿಸಬಹುದು. ಚಾಮರಾಜನಗರ ತಾಲ್ಲೂಕಿನ ಮಲೆಯೂರಿನ ಜೈನ ದೇವಾಲಯಗಳಲ್ಲಿ ತಾಯಿ ಮಗು ಕಂಡುಬರುತ್ತದೆ. ಆ ಮೂರ್ತಿಗಳು ಸಹ ಪಂಚಲೋಹದಿಂದ ಮಾಡಿದ್ದು ಅಲ್ಲದೆ ಕಲ್ಲಿನ ಶಿಲ್ಪಗಳು ಸಹ ಮಹಿಷಮಂಡಲ ಪ್ರಾಂತ್ಯದಲ್ಲಿ ಕಂಡುಬರುತ್ತದೆ. ಅದರಿಂದ ಸಂಸ್ಕೃತಿಯಲ್ಲಿ ಇಂತಹ ಮೂರ್ತಿಗಳನ್ನು ಮಾಡಿರಬಹುದು ಈ ತಾಯಿ ಹಿಂದೂ

ಸಂಸ್ಕೃತಿಯಲ್ಲಿ ಪುನರುತ್ಥಾನ ತಾಯಿಯಾಗಿ ಮತ್ತು ಪ್ರಧಾನ ಕ್ಷೇತ್ರಾ ದೇವರಾಗಿ ಹಿಂದೂ ಧರ್ಮವನ್ನು ಸಂರಕ್ಷಿಸಿರುವುದು ತಿಳಿದುಬರುತ್ತದೆ.[8]

"ಮುಡಿಗುಂಡದ ಚರಿತ್ರೆ ಮತ್ತು ವಾಸ್ತು ಶಿಲ್ಪ"

ಮುಡಿಗುಂಡ (ಮುಡಿಗೊಂಡ) ಗ್ರಾಮವು ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ ತಾಲ್ಲೂಕಿನಲ್ಲಿದ್ದು ಕೊಳ್ಳೇಗಾಲದಿಂದ ಪಶ್ಚಿಮ ಹಾಗೂ ನೈರುತ್ಯ ದಿಕ್ಕಿಗೆ ಹೆಚ್ಚು ಕಡಿಮೆ ಎರಡು ಕಿಲೋಮೀಟರ್ ದೂರದಲ್ಲಿದೆ ಈ ಗ್ರಾಮವು ಕ್ರಿ.ಶ.10ನೇ ಶತಮಾನದಿಂದ 14ನೇ ಶತಮಾನದವರೆಗೂ ಒಂದು ಪ್ರಮುಖ ವ್ಯಾಪಾರಕೇಂದ್ರವಾಗಿತ್ತು ಎಂದು ಹಲವಾರು ಶಾಸನಾಧಾರಗಳಿಂದ ತಿಳಿದು ಬರುತ್ತವೆ.[9]

1. ಮುಡಿಗೊಂಡ ಗ್ರಾಮವು ತಲಕಾಡಿನ ಗಂಗರು ಮತ್ತು ಚೋಳರ ಕಾಲದಲ್ಲಿ ನಿರ್ಮಾಣವಾಯಿತೆಂದು ಮತ್ತು ರಾಜೇಂದ್ರ ಚೋಳನ ಆಳ್ವಿಕೆಯ ಕಲದಲ್ಲಿ ಈ ಹೆಸರನ್ನು ಪಡೆದಿರುತ್ತವೆ.[10]
2. ಇಲ್ಲಿನ ಶಾಸನಗಳಿಂದ ಈ ಊರನ್ನು ಅನೇಕ ಹೆಸರುಗಳಿಂದ ಕರೆದಿರುತ್ತಾರೆ. ಅವುಗಳು ಯಾವುವುವೆಂದರೆ ಮುಡಿಗೊಂ.ಡ, ಬೋಳಪುರ ಮುಡಿಕೊಂಡ, ಮುಡಿಕೊಂಡ ಚೋಳ ಪಟ್ಟಣಂ, ದೇಶಿಯಪಟ್ಟಣಂ, ಇತ್ಯಾದಿ.[11] ಇಂತಹ ಹೆಸರುಗಳ ಇತಿಹಾಸಹೊಂದಿರುವ ಈ ಊರಿನಲ್ಲಿ ಪ್ರಾಚೀನ ಕಾಲದ ಎರಡು ದೇವಾಲಯಗಳಿವೆ ಅವುಗಳೆಂದರೆ ನಾರಾಯಣಸ್ವಾಮಿ ಮತ್ತು ಮುಡಿಗೊಂಡೇಶ್ವರ (ಈಶ್ವರ) ಹಾಗೂ ಮುಳ್ಳಾಚಮ್ಮನ ದೇವಲಯಗಳು ಕಂಡುಬರುತ್ತವೆ. ಚೋಳರು ಈ ಭಾಗದಲ್ಲಿ ದೇವಾಲಯಗಳನ್ನು ಕಟ್ಟಲು ಕಾರಣವೇನೆಂದರೆ ತಂಜಾವೂರಿನ ಚೋಳರು ಕ್ರಿ.ಶ. ಸುಮಾರು 900 ಹೊತ್ತಿಗೆ ತಮಿಳುನಾಡಿನಲ್ಲಿ ಸಲ್ಲವರನ್ನು ಸೋಲಿಸಿ ರಾಜ್ಯಭಾರವನ್ನು ಮಾಡಿದರು. 28P

ತಮಿಳುನಾಡು ಇವರ ಕಾಲದಲ್ಲಿ ವಾಸ್ತು ಶಿಲ್ಪ ಕಲೆಯ ದೃಷ್ಟಿಯಿಂದ ಬೆಳೆಯಿತು ಅದೇ ಮಾದರಿಯಲ್ಲಿ ಕರ್ನಾಟಕದ ಆಗ್ನೇಯ ಭಾಗದ ಮೇಲೆ ರಾಜರಾಜ ಚೋಳನು ಈ ಭಾಗದ ಮೇಲೆ ಅಂದರೆ 985ರ ನಂತರ ಕೋಲಾರ, ಬೆಂಗಳೂರು, ಮೈಸೂರು, ಮಂಡ್ಯ, ಹಾಸನ ಈ ಜಿಲ್ಲೆಗಳ ಬಹುಭಾಗವನ್ನು ಆಕ್ರಮಿಸಿಕೊಂಡನು ಈ ಭಾಗವು ಗಂಗಾವಾಡಿ 96,000 ಸಾವಿರ ಪ್ರಾಂತ್ಯಗಳನ್ನು ನೊಳಂಬರು ಆಳ್ವಿಕೆ ಮಾಡುತ್ತಿದ್ದ ಕಾಲದಲ್ಲಿ ರಾಜೇಂದ್ರ ಚೋಳನು ಈ ಭಾಗದಲ್ಲಿ ಆಳ್ವಿಕೆ ಪ್ರಾರಂಭಿಸಿದನು. ಸುಮಾರು ಕ್ರಿ.ಶ. 10ನೇ ಶತಮಾನದಲ್ಲಿ ಈ ಮುಡಿಗೊಂಡ

ಪ್ರದೇಶ ಪ್ರಮುಖ ನೆಲೆಯಾಗಿದ್ದು ಪ್ರಮುಖ ವ್ಯಾಪಾರ ಕೇಂದ್ರವು ಸಹ ಆಗಿತ್ತೆಂದು ಅನೇಕ ಆಧಾರಗಳಿಂದ ತಿಳಿದುಬರುತ್ತವೆ.[12] ಚಾಮರಾಜನಗರ ಜಿಲ್ಲೆ ದಕ್ಷಿಣ ಕರ್ನಾಟಕದ ಆಗ್ನೇಯ ತುದಿಯ ಕೊನೆಯ ಜಿಲ್ಲೆಯಾಗಿದ್ದು ಅದರಲ್ಲೂ ಪ್ರಮುಖ ಜಾನಪದೀಯ ನೆಲೆಯಾದ ಕೊಳ್ಳೇಗಾಲ ತಾಲ್ಲೂಕಿನಲ್ಲಿ ಮುಡಿಗುಂಡ ಇರುವುದು ಒಂದು ಮಹತ್ವವೆಂದೇ ಹೇಳಬಹುದಾಗಿದೆ. ಆದರೆ ಸಾಂಸ್ಕೃತಿಕ ಸಂಪರ್ಕಗಳು ವ್ಯವಹಾರ ವಹಿವಾಟುಗಳು ಪ್ರಧಾನವಾಗಿ ಉತ್ತರ ಭಾಗಗಳಿಂದಲೇ ನಡೆಯುತ್ತಿತ್ತು. ಈ ಒಂದು ವಿಚಾರದಲ್ಲಿ ದಕ್ಷಿಣ ಕರ್ನಾಟಕ ಸುಭದ್ರವಾಗಿದ್ದರೂ, ಸಾಂಸ್ಕೃತಿಕವಾಗಿ ಇದು ಕೆಲಕಾಲ ಅಡಚಣೆಗಳಿಗೂ ಕಾರಣವಾಗಿತ್ತು. ಯಾವುದೇ ಒಂದು ಸಾಂಸ್ಕೃತಿಕ ಸಂಬಂಧ, ವ್ಯಾಪಾರ ಸಂಬಂಧ ಕೇವಲ ಉತ್ತರದಿಂದ ನಡೆಯಬೇಕಾಗಿರುವುದರಿಂದ, ಚಾಮರಾಜನಗರ ಜಿಲ್ಲೆ ಕರ್ನಾಟಕದ ತುದಿ ಎನಿಸಿದೆ. ರಾಜಕೀಯವಾಗಿ ಈ ಭಾಗವು ಪ್ರಬಲರಾಜ ಶಕ್ತಿಗಳ ಅಂದರೆ ಚಾಲುಕ್ಯ, ರಾಷ್ಟ್ರಕೂಟ ಮುಂತಾದವರ ಸ್ವಭಾವದಿಂದ ಸ್ವಲ್ಪ ಅಂತರದಲ್ಲಿಯೇ ಉಳಿಯಬೇಕಾಯಿತು. ಈ ಕಾರಣದಿಂದಾಗಿ ದಕ್ಷಿಣ, ಕರ್ನಾಟಕದ ತಲಕಾಡಿನ ಗಂಗರು ಸುಭದ್ರವಾಗಿ ಈ ಭಾಗದಲ್ಲಿ ಆಳಿದರೂ, ಕ್ರಿ.ಶ. 10ನೇ ಶತಮಾನದಲ್ಲಿ ಅಂದರೆ 985ರಲ್ಲಿ ತಮಿಳುನಾಡಿನ ತಂಜಾವೂರಿನ ಚೋಳರು ಈಭಾಗದ ಮೇಲೆ ಆಳ್ವಿಕೆ ನಡೆಸಿ ಸುಮಾರು 135 ರಿಂದ 150 ವರ್ಷಗಳ ಕಾಲ ಆಳಿಹೋಗಿದ್ದಾರೆ. ಈ ಚೋಳರು ಬಿಟ್ಟು ಹೋಗಿರುವಂತಹ ಪ್ರಮುಖ ನೆಲೆಗಳಲ್ಲಿ ಒಂದಾದ ಮುಡಿಗುಂಡದ ಹಿನ್ನೆಲೆಯನ್ನು ಇಲ್ಲಿ ತಿಳಿಸಲಾಗಿದೆ. ಚೋಳರು ಗಂಗವಾಡಿಯ 96,000 ಪ್ರಾಂತ್ಯದಲ್ಲಿ ಅಂದು ಪ್ರಚಲಿತದಲ್ಲಿದ್ದ ಸಾಮಾಜಿಕ, ಸಾಂಸ್ಕೃತಿಕ, ಮತ್ತು ಧಾರ್ಮಿಕ ಸಂವೇದನೆಗಳಿಗೆ ತೀವ್ರವಾಗಿ ಸ್ಪಂದಿಸಿದಂತೆ ತೋರುತ್ತದೆ. ಪ್ರಾಯಶಃ ತಮಿಳುನಾಡಿನಲ್ಲಿ ಅಂದರೆ ತಮ್ಮ ತವರು ರಾಜ್ಯದಲ್ಲೂ ಕೂಡ ಅಂದು ಪ್ರಚಲಿತದಲ್ಲಿದ್ದ ಧಾರ್ಮಿಕ ಸಂವೇದನೆಗಳನ್ನು ಗಂಗವಾಡಿಯ ಸಂವೇದನಗಳೊಂದಿಗೆ ಸಮೀಕರಿಸಿ ಈಭಾಗದಲ್ಲಿ ದೇವಾಲಯಗಳ ನಿರ್ಮಾಣವನ್ನು ಮಾಡಿದ್ದಾರೆ ಎಂದು ಹೇಳಬಹುದಾಗಿದೆ. ಚೋಳರು ಮೂಲತಃ ಶೈವ ದೇವಾಲಯಗಳನ್ನು ಅಧಿಕವಾಗಿ ತಮಿಳುನಾಡಿನಲ್ಲಿ ನಿರ್ಮಿಸಿರುವುದು ಕಂಡುಬರುತ್ತದೆ. ಅದರಂತೆಯೇ ಈಭಾಗದಲ್ಲಿಯೂ ಕೂಡ ಹಲವಾರು ಶೈವ ದೇವಾಲಯಗಳನ್ನು ನಿರ್ಮಾಣ ಮಾಡಿರುವುದು ಕಂಡುಬರುತ್ತದೆ. ಆದರೆ ವಿಶೇಷವಾಗಿ ಈಭಾಗದಲ್ಲಿ ಚೋಳರು ವಿಷ್ಣುವಿಗಾಗಿಯೂ ದೇವಾಲಯಗಳನ್ನು ನಿರ್ಮಾಣ ಮಾಡಿರುವುದು ಸಹ ಕಂಡುಬರುತ್ತದೆ. ಉದಾಹರಣೆಗೆ ತಿರುಮಕೂಡಲು ನರಸೀಪುರ, ಮಾಲಂಗಿ, ಕೊಳ್ಳೇಗಾಲ, ಮದ್ದೂರು, ಅಗರ, ಮಾರೇಹಳ್ಳಿ, ಸಿಂಗಾನಲ್ಲೂರು, ಶಿವನಸಮುದ್ರ ಹಾಗೂ ಈ ಮುಡಿಗುಂಡದಲ್ಲಿಯೂ ಕಾಣಬರುತ್ತವೆ.

ಮುಡಿಗುಂಡೇಶ್ವರ ದೇವಾಲಯ: ಮುಡಿಗುಂಡ ಗ್ರಾಮದಲ್ಲಿ ಮುಡಿಗುಂಡೇಶ್ವರದ ದೇವಾಲಯವು ಒಂದು ಇದು ಕೂಡ ಚೋಳರ ಕಾಲದಲ್ಲಿ ನಿರ್ಮಾಣವಾಗಿರುವ ಒಂದು ಪ್ರಮುಖ ದೇವಸ್ಥಾನ.(ಚಿತ್ರ ಸಂಖ್ಯೆ 10) ಇದು ಊರಿನ ಮಧ್ಯಭಾಗದಲ್ಲಿ ಇದೆ. ಬಹುಶಃ ಈ ದೇವಾಲಯ ಇರುವುದರಿಂದಲೇ ಈ ಊರಿಗೆ ಮುಡಿಗುಂಡ ಎಂಬ ಹೆಸರು ಸಹ ಬಂದಿರಬಹುದು. ಈ ದೇವಸ್ಥಾನಕ್ಕೆ ಹಲವಾರು ಶಾಸನಗಳಿದ್ದು ಚೋಳರ ದೊರೆಯಾದ ಮೊದಲನೆಯ ಕುಲೋತ್ತುಂಗನ ಪ್ರಶಸ್ತಿಯ ಬಗ್ಗೆ ತಿಳಿಸುತ್ತದೆ.[13] ವಿತಂಕದೇವ ಮತ್ತು ನಂಬಿರತ್ತಿಯರ್‌ಎನ್ನುವ ದೇವಮಾನವರಿಗೆ ಪ್ರತಿನಿತ್ಯದ ಕಾಣಿಕೆ ಕೊಡುತ್ತಿದ್ದುದನ್ನು ತಿಳಿಸುತ್ತದೆ.[14] ಹೊಯ್ಸಳರ ರಾಜ ವಿಷ್ಣುವರ್ಧನನ ಆಳ್ವಿಕೆಯ ಬಗ್ಗೆ ತಿಳಿಸುತ್ತದೆ ಮತ್ತು ಮುಡಿಗೊಂಡಚೋಳರ ಎಂಬ ಸ್ಥಳದ ಬಗ್ಗೆ ತಿಳಿಸುತ್ತದೆ. ಮತ್ತೊಂದು ಶಾಸನವು ಶ್ರೀರಂಗನಾಯಕ ಮುಡಿಗೊಂಡ ಚೋಳಪಟ್ಟಣ ಮತ್ತು ದೇಶಿ ಉಯ್ಯಕೊಂಡ ಪಟ್ಟಣದ ಬಗ್ಗೆ ತಿಳಿಸುತ್ತದೆ.[15] ಮತ್ತೊಂದು ಶಾಸನದಲ್ಲಿ ವೀರನರಸಿಂಹ ಚೋಳದೇವನು ಮುಡಿಗೊಂಡ ಚೋಳೇಶ್ವರ ಎಂಬ ದೇವರಿಗೆ ಧಾನ್ಯಗಳನ್ನು ಕಾಣಿಕೆ ನೀಡಿರುವುದರ ಬಗ್ಗೆ ತಿಳಿಸುತ್ತದೆ.[16] ಈ ಮೇಲಿನ ಎಲ್ಲಾ ಶಾಸನಗಳು ಚೋಳರು, ಹೊಯ್ಸಳರು ಮತ್ತು ವಿಜಯನಗರ ಅರಸರ ಬಗ್ಗೆಯೂ ಕೂಡ ತಿಳಿಸುವ ಶಾಸನಗಳು ಇಲ್ಲಿವೆ. ಮೂಲತಃ ಈ ದೇವಾಲಯ ಚೋಳರ ಕಾಲದಾದ್ದರೂ ನಂತರ ಕಾಲದ ಸೇರ್ಪಡೆಗಳನ್ನು ಇಲ್ಲಿ ಕಾಣಲಾಗಿದೆ. ಈ ಮುಡಿಗುಂಡೇಶ್ವರ ದೇವಸ್ಥಾನವು ಗರ್ಭಗೃಹ, ಅಂತರಾಳ, ನವರಂಗ ಮತ್ತು ಮಂಟಪವನ್ನು ಹೊಂದಿದೆ. ಗರ್ಭಗೃಹವು 2 1/2 x 2 1/2 ಮೀಟರ್ ಅಳತೆ ಹೊಂದಿದ್ದು ಮಧ್ಯದಲ್ಲಿ ಸುಮಾರು ಪಟ್ಟಿಕೆಗಳಿಂದ ಕೂಡಿದ ಕಲ್ಲು ಪೀಠದ ಮೇಲೆ 2 1/2 ಅಡಿ ಇರುವ ಶಿವಲಿಂಗವನ್ನು ಸ್ಥಾಪಿಸಲಾಗಿದೆ ಲಿಂಗದ ಮುಂದೆ ಒಂದು ನಂದಿಶಿಲ್ಪವನ್ನು ಇಡಲಾಗಿದೆ. ಗರ್ಭಗೃಹದ ದ್ವಾರ ಸರಳ ಕೆತ್ತನೆಯಿಂದ ಕೂಡಿದೆ. ಇಲ್ಲಿ ಯಾವುದೇ ಶಿಲ್ಪವಾಗಲೀ ಇಲ್ಲ. ಅಂತರಾಳದ ಅಂಕಣದಲ್ಲಿಯೂ ಯಾವುದೇ ಶಿಲ್ಪವಾಗಲಿ ಇಲ್ಲ. ಅಂತರಾಳವು ಪೂರ್ವಾಭಿಮುಖವಾಗಿ 1 ಮೀಟರ್ 60 ಸೆಂಟಿಮೀಟರ್ ಉದ್ದವನ್ನು 3 ಮೀಟರ್ 95 ಸೆಂಟಿಮೀಟರ್ ಅಗಲವಿದೆ. ಮಧ್ಯದಲ್ಲಿ ನಾಲ್ಕು ಕಂಬಗಳು ಚೋಳ ಶೈಲಿಯ ವಾಸ್ತುರಚನೆ ಹೊಂದಿದ್ದರೂ ಇವುಗಳ ವಿಶೇಷತೆ ಬೇರೆ ಕಂಬಗಳ ತಳಭಾಗದ ಪೀಠ ಚೌಕಾಕಾರವಾಗಿದ್ದು, ದಿಂಡು ಸಹ ಚೌಕಾಕಾರವಾಗಿದೆ. ಬೋಧಿಗೆಯು ಸಹ ಚೌಕಾಕಾರವಾಗಿದ್ದು ಎಲೆಯ ರೀತಿಯ ಕೆತ್ತನೆಯಿಂದ ಕೂಡಿದೆ. ಇಲ್ಲಿರುವ ಎಲ್ಲಾ ಕಂಬಗಳು ಒಂದು ಮೀಟರ್ 70 ಸೆಂಟಿ ಮೀಟರ್ ಉದ್ದವಿದೆ. ನವರಂಗದಲ್ಲಿ ದಕ್ಷಿಣ ದಿಕ್ಕಿಗೆ ಒಂದು ಚಪ್ಪಡಿಯಿದ್ದು ಏಳು ಶಿಲ್ಪಗಳಿರುವ ಸಪ್ತಮಾತೃಕೆಯರ ಕೆತ್ತನೆಯಿದೆ. ಇದೇ ರೀತಿ ನಾವು ಮೈಸೂರು ನಗರದಲ್ಲಿರುವ ಭೋಗಾದಿಯ ಭೋಗೇಶ್ವರ

ದೇವಾಲಯದ ಪಕ್ಕದಲ್ಲಿರುವ ಒಂದು ಪ್ರಾಚೀನ ಕಾಲದ ಗುಡಿಯಲ್ಲಿ ಕಾಣಬಹುದಾಗಿದೆ. ಆದರೆ ಮುಡಿಗುಂಡದ ಮುಡಿಗುಂಡೇಶ್ವರ ದೇವಾಲಯದಲ್ಲಿರುವ ಈ ಶಿಲ್ಪಗಳು ಒಂದೇ ರೀತಿ ಇರದೇ ಬೇರೆ ಬೇರೆ ಮುಖಗಳನ್ನೊಂದಿದೆ. ನವರಂಗದ ದಕ್ಷಿಣ ದಿಕ್ಕಿನ ಹೊರಭಾಗದ ಗೋಡೆಯ ಭಿತ್ತಿಯಲ್ಲಿ ಸುಂದರವಾದ ಸ್ತ್ರೀ ಶಿಲ್ಪವಿದೆ. ಗರ್ಭಗೃಹದ ಭಾಗದಲ್ಲಿ ಚೋಳ ಶೈಲಿಯ ಕಂಬ ಹಾಗು ಕೋಷ್ಠಗುಡಿ ಇದೆ, ಆಳವಿಲ್ಲದ ಕೋಷ್ಠದಲ್ಲಿ ಮಕರತೋರಣವು ಸಹ ಇದೆ. ಗರ್ಭಗೃಹದ ಹಿಂದೆ ಅಂದರೆ ಪಶ್ಚಿಮ ದಿಕ್ಕಿಗೆ ಶಿವನ ಶಿಲ್ಪವನ್ನು ಭಿತ್ತಿಯಲ್ಲಿ ಕಡೆಯಲಾಗಿದೆ. ಅದೇ ರೀತಿ ಉತ್ತರ ದಿಕ್ಕಿನ ಗರ್ಭಗೃಹದ ಭಿತ್ತಿಯಲ್ಲಿ ಮಹಿಷ ಶಿಲ್ಪವನ್ನು ಕಡೆಯಲಾಗಿದೆ. (ಚಿತ್ರ ಸಂಖ್ಯೆ 11) ಗರ್ಭಗೃಹದ ಮೂರು ಕಡೆಗೂ ಒಂದೊಂದು ಶಿಲ್ಪವನ್ನು ಕಡೆದಿರುವುದು ಇಲ್ಲಿಯ ವಿಶೇಷವಾಗಿದೆ. ನವರಂಗ ಮತ್ತು ವರಾಂಡ ಭಾಗಗಳು ಸಂಪೂರ್ಣ ಜೀರ್ಣೋದ್ಧಾರವಾಗಿವೆ. ಗರ್ಭಗೃಹದ ಸುತ್ತಲೂ ಅರೆಕಂಬಗಳು ಆಳವಿಲ್ಲದೆ ಕೋಷ್ಠದಲ್ಲಿರುವ ಮಕರ ತೋರಣ ಚೋಳರ ವಾಸ್ತುಶಿಲ್ಪ ಕಲೆಗೆ ಉತ್ತಮ ಉದಾಹರಣೆಗಳಾಗಿವೆ.

ಭಿತ್ತಿಯ ಮೇಲ್ಭಾಗದಲ್ಲಿ ಕಪೋತ ಮತ್ತು ಕೂಡುಗಳಿವೆ, ನಂತರ ಮೇಲ್ಭಾಗದ ಸಾಲಿನಲ್ಲಿ ವ್ಯಾಳವಾರಿ ಸಾಲುಗಳ ಉಬ್ಬು ಶಿಲ್ಪಗಳ ಕೆತ್ತನೆ ಇದೆ. ಗರ್ಭಗೃಹದ ಮೇಲ್ಭಾಗದಲ್ಲಿ ದ್ರಾವಿಡ ವಿಮಾನವಿದೆ. ಈ ದೇವಸ್ಥಾನದ ಸುತ್ತಲೂ ತ್ರಿಪಟ್ಟ ಕುಮುದದಲ್ಲಿ ತಮಿಳು ಗ್ರಂಥ ಲಿಪಿಯ ಬರವಣಿಗೆ ಇದೆ ಗರ್ಭಗೃಹದ ಹೊರಭಾಗದಲ್ಲಿ ಉತ್ತರದಿಕ್ಕಿಗೆ ಒಂದು ಗುಡಿಯಿದೆ ಇಲ್ಲಿ ಭೈರವ ಶಿಲ್ಪವನ್ನು ಇರಿಸಲಾಗಿದೆ. ಹಾಗೂ ಅಮ್ಮನವರ ಗುಡಿಯಿದೆ. ಈ ಮುಡಿಗೊಂಡೇಶ್ವರ ದೇವಾಲಯದ ಸುತ್ತಲೂ ಪ್ರಾಕಾರ ಗೋಡೆಯನ್ನು ಇತ್ತೀಚಿಗೆ ಕಟ್ಟಲಾಗಿದೆ. ಪಶ್ಚಿಮ ದಿಕ್ಕಿಗೆ ಇರುವ ಪ್ರಾಕಾರದ ಗೋಡೆಗೆ ಸೇರಿದಂತೆ ಐದು ಕೋಷ್ಠಗುಡಿಗಳಿದ್ದು ಅದರಲ್ಲಿ ಮೂರು ಗುಡಿಗಳಲ್ಲಿ ಲಿಂಗವಿದೆ. ಇನ್ನೊಂದು ಗುಡಿಯಲ್ಲಿ ಕುಮಾರ, ಮತ್ತೊಂದು ಗುಡಿಯಲ್ಲಿ ವೀರಭದ್ರನ ಶಿಲ್ಪವಿದೆ. ಈ ದೇವಸ್ಥಾನದ ನವರಂಗ ಮತ್ತು ವರಾಂಡ ಭಾಗದ ಮೇಲ್ಭಾಗದಲ್ಲಿ ಕೈಪಿಡಿ ಗೋಡೆ ಇದೆ. ಇದು ಇತ್ತೀಚಿನ ಕಾಲದಲ್ಲಿ ಮಾಡಲಾಗಿದೆ ಮುಂಭಾಗದಲ್ಲಿ ಮೇಲ್ಗಡೆ ಗಾರೆಯಿಂದ ಮಾಡಿದ ಒಂದು ಗುಡಿಯಿದ್ದು ಅದರಲ್ಲಿ ಶಿವನ ಶಿಲ್ಪವನ್ನು ಕುಳ್ಳಿರಿಸಲಾಗಿದೆ. ಪ್ರಾಕಾರದ ಗೋಡೆಯ ಉತ್ತರ ಮತ್ತು ದಕ್ಷಿಣ ದಿಕ್ಕಿಗೆ ಒಂದೊಂದು ಸಣ್ಣ ಸಣ್ಣ ಕೋಷ್ಠಗುಡಿಗಳಿದ್ದು ಇವುಗಳಲ್ಲಿ ಒಂದೊಂದು ಸಣ್ಣ ಸಣ್ಣ ಸೂರ್ಯನ ಶಿಲ್ಪವನ್ನು ಇರಿಸಲಾಗಿದೆ. ಉತ್ತರ ದಿಕ್ಕಿಗೆ ಎರಡು ಗುಡಿಯಿದ್ದು ಒಂದು ಗುಡಿಯಲ್ಲಿ ವಿಷ್ಣುವಿನ ಶಿಲ್ಪ ಮತ್ತೊಂದು ಗುಡಿಯಲ್ಲಿ ಭೈರವನ ಶಿಲ್ಪವಿದೆ. ಭೈರವ ಶಿಲ್ಪವೂ ಸೊಗಸಾದ ಕೆತ್ತನೆಯಿಂದ ಕೂಡಿದ್ದು ತ್ರಿಶೂಲ ಕೆಳಗಿನ ಕೈಯಲ್ಲಿ ಖಡ್ಗವಿದೆ. ಎಡಗಡೆಯ ಮೇಲಿನ ಕೈಯಲ್ಲಿ ಡಮರು, ಒಂದು ಕೈಯಲ್ಲಿ ಪಾತ್ರೆ ಇದೆ. ಕಿವಿಯಲ್ಲಿ ಕರ್ಣ

ಕುಂಡಲ ತಲೆಯ ಮೇಲೆ ಕಿರೀಟ, ಕಂಠದಲ್ಲಿ ಸರ ಇರುವುದು ಪಾದದಲ್ಲಿ ಒಂದು ಕಡೆ ಸ್ತ್ರೀ ಶಿಲ್ಪವಿದ್ದು ಮತ್ತೊಂದು ಕಡೆ ಬೇಟೆನಾಯಿಯ ಶಿಲ್ಪವನ್ನು ಕಡೆಯಲಾಗಿದೆ. ಇದು ಇಲ್ಲಿಯ ವಿಶೇಷತೆ ಎನ್ನಬಹುದು. ಮುಂಭಾಗದಲ್ಲಿರುವ ವರಾಂಡವನ್ನು ನಂತರ ಕಾಲದ ಸೇರ್ಪಡೆ ಎಂದು ಹೇಳಬಹುದು. ಇಲ್ಲಿರುವ ದ್ವಾರದ ಇಕ್ಕೆಲಗಳಲ್ಲಿ ದ್ವಾರ ಪಾಲಕರ ಉಬ್ಬು ಶಿಲ್ಪವನ್ನು ಕಡೆಯಲಾಗಿದೆ ವರಾಂಡವು ಪೂರ್ವಾಭಿಮುಖವಾಗಿ 2 ಮೀಟರ್ ಉದ್ದವನ್ನು, ಉತ್ತರ–ದಕ್ಷಿಣಾಭಿಮುಖವಾಗಿ 4 ಮೀಟರ್ 20 ಸೆಂಟಿಮೀಟರ್ ಅಗಲವಿದೆ.

ಲಕ್ಷ್ಮೀ ನಾರಾಯಣಸ್ವಾಮಿ ದೇವಾಲಯ: ಈ ದೇವಾಲಯವು ಮುಡಿಗುಂಡದ ಊರಿನ ಮಧ್ಯಭಾಗದಲ್ಲಿ ಪೂರ್ವಾಭಿಮುಖವಾಗಿದ್ದು ಗ್ರಾನೈಟ್ ಕಲ್ಲಿನಲ್ಲಿ ಕಟ್ಟಿದ್ದು ದ್ರಾವಿಡ ಶೈಲಿಯ ಏಕಕೂಟದೇವಾಲಯವಾಗಿದೆ. ಇಲ್ಲಿರುವ ಎಲ್ಲಾ ಶಾಸನಗಳು ಹೊಯ್ಸಳರ ಕಾಲದ ಶಾಸನಗಳಾಗಿದ್ದು ಚೋಳರ ಬಗ್ಗೆ ತಿಳಿಸುವ ಒಂದು ಶಾಸನವೂ ಇಲ್ಲ, ಮತ್ತೊಂದು ವಿಶೇಷವೇನೆಂದರೆ ಹೊಯ್ಸಳರ ಶಾಸನದಲ್ಲೂ ಸಹ ಈ ದೇವಾಲಯ ನಿರ್ಮಾಣದ ಬಗ್ಗೆ ಉಲ್ಲೇಖವಿಲ್ಲ ಅದರೆ ಈ ಗ್ರಾಮದ ಮಧ್ಯಭಾಗದಲ್ಲಿ ಲಕ್ಷ್ಮೀ ನಾರಾಯಣಸ್ವಾಮಿಯ ದೇವಾಲಯ ಚೋಳರ ಆಳ್ವಕೆಯ ಮಧ್ಯಕಾಲದ ವಾಸ್ತುಶಿಲ್ಪ ರಚನಾಶೈಲಿಗೆ ಒಂದು ಉತ್ತಮ ಉದಾರಹರಣೆಯಾಗಿದೆ ಎಂದು ಇಲ್ಲಿ ಹೇಳುತ್ತೇವೆ. ಈ ದೇವಾಲಯವನ್ನು ನಿಖರವಾಗಿ ಕಟ್ಟಿಸಿದ ಕಲವು ತಿಳಿದುಬಂದಿಲ್ಲ ಆದರೂ ಸಹ ಈ ಕಟ್ಟಡ ವಾಸ್ತುಶಿಲ್ಪ ರಚನ ಶೈಲಿಯಿಂದ ಇದು ಚೋಳರ ಕಾಲದ ದೇವಾಲಯವೆಂದು ಹೇಳುವುದಕ್ಕೆ ಯಾವುದೇ ಅಡಚಣೆ ಇಲ್ಲ. ಈ ದೇವಾಲಯದ ಗರ್ಭಗೃಹ, ಅಂತರಾಳ, ಶುಕನಾಸಿ, ನವರಂಗ, ಅರ್ಧಮಂಟಪ, ಕೈಸಾಲೆ, ಇವುಗಳನ್ನು ಹೊಂದಿವೆ. ತಳವಿನ್ಯಾಸದಲ್ಲಿ ಈ ದೇವಾಲಯದ ಗರ್ಭಗೃಹ, 3x3 ಮೀಟರ್, ನವರಂಗ 6x6 ಮೀಟರ್‌ಗಳನ್ನು ಹೊಂದಿವೆ. ಈ ದೇವಾಲಯದ ಮುಖ್ಯದ್ವಾರವು ದುಸ್ಥಿತಿಯಲ್ಲಿದ್ದು ನೈರುತ್ಯ ದಿಕ್ಕಿಗೆ ಒಂದು ಸಣ್ಣ ಕೋಣೆಯಾಕಾರದ ಕೋಷ್ಠಗುಡಿ ಇದ್ದು ಅದು ಲಕ್ಷ್ಮೀ ಗುಡಿಯಾಗಿದೆ ಮೇಲಿನ ಎಲ್ಲಾ ಅಂಶಗಳಿಂದ ಗರ್ಭಗೃಹ, ಅಂತರಾಳ, ನವರಂಗಗಳು ಮೂಲ ಕಟ್ಟಡವಾಗಿದ್ದು ಇನ್ನುಳಿದವುಗಳು ನಂತರ ಕಾಲದ ಸೇರ್ಪಡೆಗಳಾಗಿವೆ ಎಂದು ಹೇಳಬಹುದು. ಈ ದೇವಸ್ಥಾನ ಒಳ್ಳೆಯ ಆಲಯವಾಗಿದ್ದು ಅಧಿಷ್ಠಾನ, ಸಣ್ಣವಾದ ಉಪಾನ ಮತ್ತು ಜಗತಿ ಮೂರು ಮುಖದ ಕುಮುದ, ಕಂಠ, ಮತ್ತು ಪ್ರತಿಗಳಿಂದ ಕೂಡಿದೆ. ಈ ಅಧಿಷ್ಠಾನದ ನಿರ್ಮಾಣವು ಕೋಲಾರದ ಕೋಲಾರಮ್ಮನ ದೇವಾಲಯದಲ್ಲಿರುವಂತೆ ಇದೆ. ಈ ದೇವಾಲಯದ ಮೇಲೆ ವಿಮಾನವಿದ್ದು ಇದು ಕೀರ್ತಿ ಮುಖ ಹೊಂದಿದ್ದು ಇಳಿಜಾರನ್ನು ಸಹ ಹೊಂದಿದೆ. ಈ ದೇವಸ್ಥಾನಕ್ಕೆ ಭಿತ್ತಿಯು ಸಹ ಇದ್ದು ಸರಳವಾಗಿದೆ. ಈ ದೇವಾಲಯ ದೇವತಾ

ಕೋಷ್ಠಕಗಳು ಗರ್ಭಗೃಹದ ಗೋಡೆಯ ಮೂರು ಕಡೆಗಳಲ್ಲಿ ಕಂಡುಬರುತ್ತವೆ. ಒಂದೊಂದು ಕಂಬಗಳು ಕೆತ್ತನೆಯಿಂದ ಕೂಡಿದೆ. ಈ ದೇವಕೋಷ್ಠಗಳು ಗರ್ಭಗೃಹದ ಗೋಡೆಯ ಮೂರು ಕಡೆಗಳಲ್ಲಿ ಕಂಡುಬರುತ್ತವೆ. ಮತ್ತೊಂದು ನವರಂಗದ ಕಡೆಯಲ್ಲಿ ಕಂಡುಬರುತ್ತದೆ. ಈ ನವರಂಗದಲ್ಲಿರುವ ದೇವಕೋಷ್ಠಕವು ಯಾವುದೇ ಕೆತ್ತನೆಯಿಂದ ಕೂಡಿಲ್ಲ. ಈ ದೇವಕೋಷ್ಠವು ಪೂರ್ಣಗೊಂಡಿಲ್ಲ, ಮತ್ತೊಂದು ಮುಖ ಅಂಶವೆಂದರೆ ಇದು ಒಂದು ಕಂಬದಿಂದ ಕೂಡಿದ್ದು ಸ್ತಂಭಪಂಜರದ ರೀತಿಯನ್ನು ಅನುಸರಿಸುತ್ತದೆ. ಇವುಗಳು ಎಲ್ಲಾ ಚೋಳರ ದೇವಾಲಯಗಳಲ್ಲಿ ಕಂಡುಬರುವ ಅಂಶವಾಗಿದೆ. ಸ್ತಂಭ ಪಂಜರವು ಪೂರ್ಣಗೊಳ್ಳದೆ ಮೇಲ್ಭಾಗ ಹೊಂದಿದ್ದು ಮಧ್ಯಭಾಗದಲ್ಲಿ ಕೆತ್ತನೆಯಿಂದ ಕೂಡಿದ್ದು ವೃತ್ತಾಕಾರವಾಗಿದೆ. ಗೋಡೆಯ ಮೇಲ್ಭಾಗದ ಕಪೋತ ಬಹಳ ಸುಂದರವಾಗಿ ಮಾಡಲ್ಪಟ್ಟಿದ್ದು ಕೂಡುಗಳಿಂದ ಕೂಡಿದೆ. ಈ ಕೂಡುಗಳು ವೃತ್ತಾಕಾರವಾಗಿದ್ದು ಯಾವುದೇ ಅಲಂಕರಣೆ ಕಂಡುಬರುವುದಿಲ್ಲ. ಈ ದೇವಾಲಯದಲ್ಲಿ ಕಲ್ಲಿನಿಂದ ಮಾಡಿದ ವಿಮಾನ ಕಂಡುಬರುವುದಿಲ್ಲ. ಇಟ್ಟಿಗೆ ಗಾರೆಯಿಂದ ಕೂಡಿದೆ ವಿಮಾನ ಕಂಡುಬರುತ್ತದೆ. ಈ ದೇವಾಲಯದ ಒಳಭಾಗವು ನವರಂಗವನ್ನು ಹೊಂದಿದ್ದು ಚೋಳರ ನಿಜವಾದ ಹೋಲಿಕೆಯನ್ನು ಹೊಂದಿದೆ. ನವರಂಗದ ಛಾವಣಿ ಕಮಲಗಳಿಂದ ಕೂಡಿದೆ ಅಂತರಾಳ ಮತ್ತು ಗರ್ಭಗೃಹಗಳು ಮುಖ್ಯವಾದ ಯಾವುದೇ ಕೆತ್ತನೆಗಳಿಂದ ಕೂಡಿರುವುದಿಲ್ಲ. ನವರಂಗ ಮತ್ತು ಅಂತರಾಳಗಳ ಬಾಗಿಲ ನಿಲುವುಕಂಬ ಒಂದೆ ರೀತಿಯಲ್ಲಿದ್ದು ಅಡ್ಡಪಟ್ಟಿಯು ಸಹ ಸರಳವಾಗಿದೆ. ಇಲ್ಲಿರುವ ನಾರಾಯಣಸ್ವಾಮಿ ಶಿಲ್ಪವು ಬಹಳ ಮುಖ್ಯವಾದ ವಿಗ್ರಹವಾಗಿದೆ. ಈ ಶಿಲ್ಪವು 43 ಸೆಂಟಿಮೀಟರ್ ಎತ್ತರ 18 ಸೆಂಟಿಮೀಟರ್ ಅಗಲವಿದ್ದ ವಿದ್ದ ಪೀಠದ ಮೇಲೆ ಪ್ರತಿಸ್ಥಾಪಿಸಲಾಗಿದೆ. ಈ ಶಿಲ್ಪವು ಚತುರ್ಭುಜ ಹೊಂದಿದ್ದು ಮೇಲಿನ ಬಲಗೈಯಲ್ಲಿ ಅಭಯ ಹಸ್ತವನ್ನು ಎಡಗೈಯಲ್ಲಿ ಗದೆಯನ್ನು ಮತ್ತು ಶಿಲ್ಪಕ್ಕೆ ಆಭರಣಗಳನ್ನು ತೊಡಿಸಲಾಗಿದೆ. ಇನ್ನೊಂದು ಮುಖ್ಯವಾದ ಅಂಶವೆಂದರೆ ನವರಂಗದ ಒಳಗೆ ಇನ್ನೂ ಕೆಲವು ಕೆತ್ತನೆಗಳಿದ್ದು. ಅವುಗಳು ವಿಶ್ವಕ್‌ಸೇನ, ವೇಣುಗೋಪಾಲ, ಇತ್ಯಾದಿ. ವೇಣುಗೋಪಾಲ ಶಿಲ್ಪವು ಅಪೂರ್ಣವಾಗಿದ್ದು. ವಿಶ್ವಕ್‌ಸೇನ ಮತ್ತು ನಮ್ಮಾಳ್ವಾರ್ ಶಿಲ್ಪವು ಬಹಳ ಸುಂದರವಾದ ಕೆತ್ತನೆಯಿಮದ ಕೂಡಿದೆ. ಇನ್ನೊಂದು ಲಕ್ಷ್ಮೀದೇವತೆಯ ಶಿಲ್ಪವಿದ್ದು, ಈ ಶಿಲ್ಪವನ್ನು ಪಕ್ಕದಲ್ಲಿರುವ ಗುಡಿಯಲ್ಲಿ ಈಗ ಇರಿಸಲಾಗಿದೆ. ದೇವಿಯು ನಾಲ್ಕು ಕೈಗಳನ್ನು ಹೊಂದಿದ್ದು ಮೇಲಿನ ಎರಡು ಕೈಗಳಲ್ಲಿ ಕಮಲವನ್ನು ಇರಿಸಲಾಗಿದೆ. ಕೆಳಗಿನ ಎರಡು ಕೈಗಳು ಅಭಯಮುದ್ರೆ ಮತ್ತು ವರದ ಮುದ್ರೆಗಳಿಂದ ಕೂಡಿದೆ, ಮತ್ತು ಈ ಶಿಲ್ಪದ ಮೆಲೆ ಕೆಲವು ಆಭರಣಗಳಿದ್ದು ಸುಂದರವಾಗಿ ಕೆತ್ತಲಾಗಿದೆ.

ಮುಳ್ಳಾಚಮ್ಮನ ದೇವಾಲಯ: ಈ ದೇವಾಲಯವು ಗ್ರಾಮದ ಮಧ್ಯಭಾಗದಲ್ಲಿದೆ. ಇದರ ಕಾಲ ಸುಮಾರು 14–15ನೇ ಶತಮಾನವಿರಬಹುದು ಪ್ರಾಯಶ: ಪ್ರತಿಯೊಂದು ಊರಿನಲ್ಲಿಯೂ ಸ್ತ್ರೀ ಶಕ್ತಿ ದೇವತೆಯನ್ನು ಕಾಣುತ್ತೇವೆ ಹಾಗೆಯೇ ಇಂತಹ ದೇವಾಲಯಗಳು ಊರಿನಿಂದ ಹೊರಗಡೆ ಇರುವುದು ಸಾಮಾನ್ಯವಾಗಿದೆ. ಇದರ ಉದ್ದೇಶ ಈ ದೇವತೆಗಳು ಊರನ್ನು ಕಾಯುವುದಕೋಸ್ಕರ ಎಂಬ ಹಿರಿಯರ ಹೇಳಿಕೆ ಸಹ ಇದೆ. ಅದು ಏನೇ ಇರಲಿ ಪ್ರತಿಯೊಂದು ಗ್ರಾಮದಲ್ಲಿಯೂ ಇಂತಹ ದೇವಾಲಯಗಳು ಊರಿನಿಂದ ಹೊರಗೆ ಇರುವುದು ಸರ್ವೇಸಾಮಾನ್ಯವಾಗಿದೆ. ಈ ದೇವಾಲಯದಲ್ಲಿ ದುರ್ಗಿ ಶಿಲ್ಪವನ್ನು ಗರ್ಭಗುಡಿಯಲ್ಲಿ ಇರಿಸಲಾಗಿದ್ದು ಹೊರಭಾಗದಲ್ಲಿ ಒಂದು ಶಾಸನ ಕಲ್ಲು ಚಪ್ಪಡಿಯಿದ್ದು, ಇದು ಪ್ರಾಚೀನತೆಯನ್ನು ದೃಢಪಡಿಸುತ್ತದೆ. ಹಾಗೆಯೇ ಅನೇಕ ಬೀದಿ ಶಿಲ್ಪಗಳು ಅಲ್ಲಲ್ಲಿ ಕಂಡುಬರುತ್ತವೆ. ಈ ದೃಷ್ಠಿಯಿಂದಲೂ ಇದು ಸುಮಾರು 14–15ನೇ ಶತಮಾನಕ್ಕೆ ಸೇರಿದ ದೇವಾಲಯವಾಗಿದೆ ಎಂದು ಹೇಳಬಹುದು.

ಒಟ್ಟಾರೆಯಾಗಿ ಈ ಊರಿನ ಇತಿಹಾಸವನ್ನು ಶಾಸನವನ್ನು ನೋಡಿದಾಗ ಇದು ಕ್ರಿ.ಶ. 10–11ನೇಯ ಶತಮಾನದಲ್ಲಿ ಪ್ರವರ್ಧ ಮಾನವಾಗಿ ಬೆಳೆದಿತ್ತು ಹಾಗೂ ಅಂದಿನ ಕಾಲದಲ್ಲಿ ಪ್ರಮುಖ ನೆಲೆಯಾಗಿ ವ್ಯಾಪಾರ ಕೇಂದ್ರವಾಗಿತ್ತೆಂದು ಅನೇಕ ಶಾಸನ ಆಧಾರಗಳಿಂದ ತಿಳಿದು ಬರುತ್ತದೆ.[17] ಈಗಲೂ ಕೂಡ ಇಲ್ಲಿ ರೇಷ್ಮೆ ಕಾರ್ಖಾನೆ ಇರುವುದರಿಂದ ರೇಷ್ಮೆ ಸೀರೆ ಇನ್ನಿತರ ಬಟ್ಟೆ ಹಾಗೂ ವ್ಯಾಪಾರ ಕೇಂದ್ರದಲ್ಲಿಯೂ ಪ್ರಮುಖ ಪಾತ್ರ ನಿರ್ವಹಿಸುತ್ತಿದೆ ಎಂದು ತಿಳಿಯಬಹುದು ಹಾಗೂ ಈ ಗ್ರಾಮದ ಪಕ್ಕದಲ್ಲಿಯೇ ಸುವರ್ಣಾವತಿ ನದಿ ಹರಿಯುವುದರಿಂದಲೂ ಒಂದು ಮಹತ್ತರವಾದ ಸ್ಥಾನವಾಗಿದೆ. ಈ ನದಿಯ ಇಕ್ಕೆಲಗಳಲ್ಲಿ ಹಲವಾರು ದೇವಾಲಯಗಳನ್ನು ಕಾಣುತ್ತೇವೆ. ಈಗಲೂ ಸಹ ಇಲ್ಲಿಯ ಜನರು ಜಾನಪದೀಯ ದೃಷ್ಠಿಯಿಮಂಲೂ ಪ್ರಾಚೀನ ಪರಂಪರೆಯ ದೃಷ್ಠಿಯಿಂದಲೂ ಕೆಲವು ಹಬ್ಬಗಳನ್ನು ಆಚರಿಸುವುದು ರೂಢಿಯಲ್ಲಿದೆ. ಈ ಊರಿನ ಒಳಗಡೆ ದೊಡ್ಡ ದೊಡ್ಡ ದೇವಾಲಯಗಳ ಅಧಿಷ್ಠಾನ ಗೋಡೆ, ಕಂಬಗಳ ಮೇಲೂ ಶಾಸನಗಳನ್ನು ಕಾಣುತ್ತೇವೆ. ಕೆಲವು ಶಾಸನಗಳುತಮಿಳು ಲಿಪಿಗಳಿಂದ ಕೂಡಿದ್ದು ಕೆಲವು ಹಳೇ ಕನ್ನಡ ಲಿಪಿಯಿಂದ ಕೆತ್ತಲ್ಪಟ್ಟಿರುವುದು ಕಂಡುಬರುತ್ತದೆ. ಈ ಶಾಸನಗಳ ಆಧಾರದ ಮೇಲೆ ನಿಖರವಾಗಿ ಇದು ಚೋಳರ ಹೊಯ್ಸಳರ ಮತ್ತು ವಿಜಯನಗರ ಅರಸರ ಕಾಲದಲ್ಲಿ ಒಂದು ಪ್ರಮುಖ ನೆಲೆ ಹಾಗೂ ವ್ಯಾಪಾರ ಕೇಂದ್ರವಾಗಿತ್ತೆಂದು ತಿಳಿದುಬರುತ್ತದೆ. ಚೋಳರು ಈ ಊರಿನ ಹೆಸರಿನಿಂದಲೂ ಅವರ ಬಿರುದುಗಳನ್ನು ಕರೆದು ಕೊಂಡಿರುವುದು ಸ್ಪಷ್ಟವಾಗಿ ತಿಳಿದುಬರುತ್ತದೆ. ಅಂದರೆ ತಂಜಾವೂರಿನ ಚೋಳರು ತಲಕಾಡಿನ ಗಂಗರ ಮೇಲೆ

ವಿಜಯ ಸಾಧಿಸಿದ್ದರು. ತಲಕಾಡಿನಂತೆ ಮುಡಿಗುಂಡವನ್ನು ಒಂದು ಮುಖ್ಯ ಪಟ್ಟಣವನ್ನಾಗಿ ಮಾಡಿಕೊಂಡಿದ್ದರು ಎಂದು ಇಲ್ಲಿ ಕಂಡುಬರುವ ಶಾಸನ ಆಧಾರಗಳಿಂದ ಹೇಳಬಹುದಾಗಿದೆ.

ಮಹಾಲಿಂಗೇಶ್ವರ ದೇವಾಲಯ ಕುಂತೂರು: ಕೊಳ್ಳೇಗಾಲ ತಾಲ್ಲೂಕಿನಲ್ಲಿರುವ ಕುಂತೂರು ಗ್ರಾಮ. ಈ ಗ್ರಾಮದಲ್ಲಿರುವ ಮಹಾಲಿಂಗೇಶ್ವರ ದೇವಾಲಯ (ಚಿತ್ರ ಸಂಖ್ಯೆ 12) ಒಂದು ಪ್ರಾಚೀನ ದೇವಾಲಯವಾಗಿದೆ. ಪ್ರಸ್ತುತ ಮಹಾಲಿಂಗೇಶ್ವರ ದೇವಾಲಯ ಗರ್ಭಗೃಹ ಮತ್ತು ಶುಕನಾಪಿಗಳನ್ನು ಮಾತ್ರಹೊಂದಿರುವ ಈ ದೇವಾಲಯ ತಲಕಾಡಿನ ಗಂಗರ ಮತ್ತು ಚೋಳರ ಕಾಲದ ವಾಸ್ತುಶಿಲ್ಪಕ್ಕೆ ಮತ್ತೊಂದು ಉತ್ತಮ ಉದಾಹರಣೆಯಾಗಿದೆ. ಈ ದೇವಸ್ಥಾನದ ನವರಂಗ ಭಾಗ ಬಹುಶಃ ಮೊದಲು ಇದ್ದು ಈಗ ಸಂಪೂರ್ಣವಾಗಿ ನಶಿಸಿ ಹೋಗಿದೆ. ಈ ದೇವಸ್ಥಾನಕ್ಕೆ ಸಂಬಂಧಿಸಿದಂತೆ ಕ್ರಿ.ಶ.10ನೇ ಶತಮಾನ ಲಿಪಿ ಶೈಲಿಯುಳ್ಳ ಗಂಗರ ಶಾಸನವೊಂದಿದೆ ಕೊಂಗುಣಿವರ್ಮ ಮಹಾರಾಜಾದಿರಾಜ ಮತ್ತು ನೀತಿ ಮಾರ್ಗಪರ್ಮಾನಡಿ ಇವರುಗಳ ಹೆಸರನ್ನು ಉಲ್ಲೇಖಿಸುವ ಈ ಶಾಸನವು ಈ ಗ್ರಾಮವನ್ನು ಪಿರಿಯಬ್ಬರಸಿ ಎಂಬ ರಾಣಿಯು ನೋಡಿಕೊಳ್ಳುತ್ತಿರಲು ಮಹಾದೇವರ ಸ್ಥಾನದ ಪರಮ (ಸತಿ) ಭಟಾರನಿಗೆ ದಾನ ನೀಡಿದ ವಿವರವನ್ನು ತಿಳಿಸುತ್ತದೆ. ಈ ಶಾಸನದಿಂದ ಪ್ರಸ್ತುತ ದೇವಾಲಯವು ಕ್ರಿ.ಶ.10ನೇ ಶತಮಾನಕ್ಕಾಗಲೇ ನಿರ್ಮಾಣವಾಗಿರಬಹುದೆಂದು ತೋರುತ್ತವೆ.[18] ಪ್ರಸ್ತುತ ದೇವಾಲಯವು ಒಂದು ಸರಳವಾದ ಚೋಳರ ಕಾಲದ ದ್ರಾವಿಡ ಭಿತ್ತಿಯುಳ್ಳ ಗರ್ಭಗೃಹ ಮತ್ತು ಶುಕನಾಸಿ ಹೊಂದಿರುವ ದೇವಾಲಯವಾಗಿದೆ. ದೇವಾಲಯದ ಗರ್ಭಗೃಹವು 3x3 ಮೀಟರ್, ಶುಕನಸ 3x3 ಮೀಟರ್ ವಿಸ್ತೀರ್ಣಹೊಂದಿದೆ. ಗರ್ಭಗೃಹದಲ್ಲಿ ಶಿವಲಿಂಗವಿದೆ. ದೇವಾಲಯವು ನಾಲ್ಕು ದಿಂಡುಗಳ ಅಧಿಷ್ಠಾನದ ಮೆಲೆ ನಿರ್ಮಾಣವಾಗಿದೆ ಉಪಾನ, ಜಗತಿ, ತ್ರಿಪಟ್ಟಕಮಲದ ಕಂಠ ಮತ್ತು ಹೊರಚಾಚಿರುವ ಪ್ರತಿ ಇವುಗಳ ಅಧಿಷ್ಟಾನದ ಅಂಗಗಳಾಗಿವೆ. ದೇವಾಲಯದ ಹೊರ ಭಿತ್ತಿಯಲ್ಲಿ ಗರ್ಭಗೃಹದ ಮೇಲೆ ಕೋಷ್ಠಗಳು ಮತ್ತು ಅರೆಕಂಬಗಳು ಕಂಡುಬರುತ್ತವೆ. ಕಂಬಗಳು ಚಪ್ಪಟೆಯದಿಂಡು, ದಿಂಬಿನಬೋದಿಗೆ ಅಬ್ಯಾಕಸ್ ಮತ್ತು ಚಾಚು ಪೀಠಗಳನ್ನು ಹೊಂದಿದೆ. ಕೋಷ್ಠಗಳು ಅರ್ಧಬೇದಿತ ಕಂಬಗಳನ್ನು ಹೊಂದಿದ್ದು ಹೊರಚಾಚಿದ ತೊಲೆಯನ್ನು ಹೊಂದಿದೆ ಈ ದೇವಸ್ಥಾನದ ಕಪೋತ ಮತ್ತು ಕಪೋತದ ಕೆಳಭಾಗವು ಅತ್ಯಂತ ವಿಶೇಷವಾಗಿದೆ ಕಪೋತದ ಕೆಳಭಾಗವು ಅದರ ವಲ್ಲಭಿಯು ದುಂಡಾದ ಕೊಳವೆ ಅಕಾರದಲ್ಲಿದ್ದು ಕಪೋತವು ಅಲ್ಲಲ್ಲಿ ಹೂವುಗಳ ಅಲಂಕರಣ ಹೊಂದಿದೆ ಈ ಉಬ್ಬು ಕೊಳವೆ ಆಕಾರದ ವಲ್ಲಭಿ ಇದುವರೆವಿಗೂ ನಾವು ನೋಡಿದ ದೇವಾಲಯಗಳಲ್ಲಿ ಮೊಟ್ಟಮೊದಲ ಬಾರಿಗೆ ಕಂಡುಬರುತ್ತದೆ. ಈ ಉಬ್ಬು ಭಾಗದ ಕೆಳಗೆ ಹಾರದಂತಹ ತೆಳುವಾದ ಪಟ್ಟಿಕೆಯು ಕೂಡ ಕಂಡುಬರುತ್ತದೆ. ಗರ್ಭಗೃಹದ

ಒಳಗೆ ಭುವನೇಶ್ವರಿಯಿದ್ದು ಭುವನೇಶ್ವರಿಯನ್ನು ನಾಭಿಚ್ಛಂದ್ರ ರೀತಿಯಲ್ಲಿ ನಿರ್ಮಿಸಿ ಮಧ್ಯದಲ್ಲಿ ಅರಳಿದ ಪದ್ಮವನ್ನು ಕತ್ತಲಾಗಿದೆ, ಶುಕನಾಸಿಯ ಅಂಕಣದಲ್ಲಿ ಒಂದು ನಂದಿ ಶಿಲ್ಪ ಹಾಗೂ ಗಣಪತಿ ಶಿಲ್ಪ ಇದೆ.

ವರದರಾಜಸ್ವಾಮಿ ದೇವಾಲಯ ಸತ್ತೇಗಾಲ: ಸತ್ತೇಗಾಲ ಚಾಮರಾಜನಗರ ಜಿಲ್ಲೆ ಕೊಳ್ಳೇಗಾಲ ತಾಲ್ಲೂಕಿನಲ್ಲಿದೆ. ಈ ಗ್ರಾಮ ಕಾವೇರಿ ನದಿಯ ದಕ್ಷಿಣ ಕಡೆಯಲ್ಲಿದ್ದು ಇಲ್ಲಿ ಎರಡು ಪ್ರಾಚೀನ ದೇವಾಲಯಗಳಿವೆ ವರದರಾಜಸ್ವಾಮಿ ದೇವಾಲಯ ಈ ಊರಿನಲ್ಲಿದ್ದರೆ ಮರುಳೇಶ್ವರ ದೇವಾಲಯ ನದಿಯ ಪಾತ್ರದಲ್ಲಿದೆ. ಈ ಎರಡು ದೇವಾಲಯಗಳು ಸಹ ಪೂರ್ವಾಭಿಮುಖವಾಗಿವೆ.[19] ಈ ಗ್ರಾಮದಲ್ಲಿ ಅತ್ಯಂತ ಪ್ರಾಚೀನ ಶಾಸನ ಕ್ರಿ.ಶ. 1321ನೇ ಇಸವಿಗೆ ಸರಿ ಹೊಂದಿರುವ ಹೊಯ್ಸಳ ದೊರೆ ಮೂರನೇ ವೀರಬಲ್ಲಾಳನ ಕಾಲದ್ದು.[20]

ಪ್ರಾಯಶಃ ಹೊಯ್ಸಳರ ಕಾಲಕ್ಕಿಂತ ಮೊದಲೇ ಈ ದೇವಾಲಯ ನಿರ್ಮಾಣವಾಗಿ ಹೊಯ್ಸಳರ ಕಾಲದಲ್ಲಿ ಮತ್ತು ಮೈಸೂರಿನ ಒಡೆಯರ ಕಾಲದಲ್ಲಿ ಹಲವಾರು ಬದಲಾವಣೆಯಾದ ಬಗ್ಗೆ ಮತ್ತು ಪ್ರಾಕಾರದ ನಿರ್ಮಾಣವಾದ ಬಗ್ಗೆ ದೇವಾಲಯದ ಆಯಾ ಭಾಗಗಳಿಂದ ತಿಳಿದು ಬರುತ್ತದೆ. ಈ ದೇವಾಲಯವು ಕೂಡ ನವರಂಗದವರೆಗೂ ಚೋಳ ವಾಸ್ತುರೂಪ ಹೊಂದಿದ್ದು ಮುಂಭಾಗದಲ್ಲಿ ನಂತರ ಕಾಲದಲ್ಲಿ ನಿರ್ಮಿಸಲಾದ ಮುಖಮಂಟಪ ಮತ್ತು ಮಂಟಪದ್ವಾರಗಳಿವೆ. ತಳವಿನ್ಯಾಸದಲ್ಲಿ ವರದರಾಜಸ್ವಾಮಿ ದೇವಾಲಯದ (ಚಿತ್ರ ಸಂಖ್ಯೆ 13) ಗರ್ಭಗೃಹ 3x3 ಮೀಟರ್ ಶುಕನಾಸಿ 2 1/2x2 1/2 ಮೀಟರ್ ಹಾಗೂ ನವರಂಗ 8.70 X 8.80 ಮೀಟರ್ ವಿಸ್ತೀರ್ಣ ಹೊಂದಿದೆ.

ದೇವಸ್ಥಾನ ಆಧಿಷ್ಠಾನದ ಮೇಲೆ ನಿರ್ಮಾಣವಾಗಿದೆ. ಉಪಾನ, ಜಗತಿ, ತ್ರಿಪಟ್ಟಕುಮುದ ಮತ್ತು ಪ್ರತಿ ಇವುಗಳು ಆಧಿಷ್ಠಾನದ ಮೇಲೆ ಕಂಡುಬರುತ್ತವೆ. ಗರ್ಭಗೃಹ, ಶುಕನಾಸ, ನವರಂಗದ ಹೊರಭಾಗಗಳಲ್ಲಿ ಅರ್ಧ ಭೇದಿತ ಕಂಬಗಳು ದಿಂಬು ಮತ್ತು ಅಬ್ಯಾಕಸ್ ಇರುವ ಭೋದಿಗೆ ಕಪೋತಶಾಲ, ಶಿಖರವಿರುವ ಕೋಷ್ಠಗಳು ಕಂಡುಬರುತ್ತವೆ. ಈ ಕೋಷ್ಠಗಳು ಅಷ್ಟೊಂದು ಆಳವಾಗಿಲ್ಲ. ಗರ್ಭಗೃಹ, ಶುಕನಾಸವನ್ನು ಸಂಧಿಸುವ ಸ್ಥಳದಲ್ಲಿ ಮತ್ತು ಶುಕನಾಸ ನವರಂಗವನ್ನು ಸಂಧಿಸುವ ಸ್ಥಳ ಹಿನ್ಸರಿತವಿದ್ದು ಈ ಭಾಗದಲ್ಲಿ ಸ್ತಂಭ ಪಂಜರವಿದೆ, ಈ ಸ್ತಂಭ ಪಂಜರ ಅಗಲವಾದ ಪೀಠವನ್ನು ಹೊಂದಿದ್ದು ತೆಳುವಾದ ಚೌಕಟ್ಟಾದ ದಿಂಡನ್ನು ಹೊಂದಿದೆ. ಮೇಲ್ಗಡೆ ಭೋಧಿಗೆಯಿದ್ದು ನೆಗೆಯುವ ಭಂಗಿಯಲ್ಲಿರುವ ಸಿಂಹಗಳು ಎರಡು ಮೂಲೆಯಲ್ಲಿ ಕಂಡುಬರುತ್ತವೆ. ಕಪೋತದ ಮೇಲೆ ಚಿಕ್ಕ ವಿಮಾನವಿದೆ. ಈ ಸ್ತಂಭ ಪಂಜರ ಚೋಳ ವಾಸ್ತುಶೈಲಿಯ ಅಂಶವೆಂಬುದನ್ನು ಇಲ್ಲಿ ಗಮನಿಸಬೇಕು. ಹೊರಭಿತ್ತಿಯಲ್ಲಿ ಸರಳವಾದ

ಅರೆಕಂಬಗಳ ಸಾಲುಗಳು ಕಂಡುಬರುತ್ತವೆ. ಕಪೋತ ಹೊರ ಚಾಚಿದ್ದು ಮೇಲ್ಭಾಗದಲ್ಲಿ ಸಿಂಹಮುಖಿಗಳು ಮತ್ತು ವ್ಯಾಳವಾರಿಗಳು ಕಂಡುಬರುತ್ತವೆ.

ಗರ್ಭಗೃಹದ ಒಳಭಾಗದಲ್ಲಿ ಮತ್ತು ಶುಕನಾಸದ ಒಳಭಾಗದಲ್ಲಿ ನಾಲ್ಕು ಮೂಲೆ ಕಂಬಗಳಿವೆ, ಗರ್ಭಗೃಹದ ಭುವನೇಶ್ವರಿ ನಾಭಿಶ್ಚಂದ್ರ ರೂಪವಾಗಿದ್ದು ಮಧ್ಯದಲ್ಲಿ ಅರಳಿದ ಕಮಲದ ಕೆತ್ತನೆ ಇದೆ. ಗರ್ಭಗೃಹದ ಮತ್ತು ಶುಕನಾಸದ ಬಾಗಿಲುವಾಡಗಳು ಸರಳವಾದ ಕೆತ್ತನೆಯಿಂದ ಕೂಡಿದ್ದು ಶುಕನಾಸದ ಬಾಗಿಲುವಾಡದ ಇಕ್ಕೆಲಗಳಲ್ಲಿ ಮಾತ್ರ ದ್ವಾರಪಾಲಕರ ಕಿರು ಶಿಲ್ಪಗಳು ಕಂಡುಬರುತ್ತವೆ. ನವರಂಗದ ಕಂಬಗಳು ಅತ್ಯಂತ ಸರಳ ವಿನ್ಯಾಸಹೊಂದಿದ್ದು ಚೌಕಟ್ಟಾದ ಪೀಠ ವೃತ್ತಾಕಾರದ ದಿಂಡು ಮತ್ತು ಆಯತಾಕಾರದ ಬೋಧಿಕೆಗಳಿಂದ ಕೂಡಿದೆ. ಕಂಬಗಳ ಮೇಲೆ ಯಾವುದೇ ಕೆತ್ತನೆ ಆಗಲಿ ದಿಂಬಿನ ಅಥವಾ ಪಲಗೈ ಬೋದಿಗೆಯಾಗಲಿ ಕಂಡುಬರುವುದಿಲ್ಲ. ನವರಂಗದ ಮಧ್ಯದ ಭುವನೇಶ್ವರಿಯಲ್ಲಿ ಸರಳವಾದ ಕಮಲದ ಕೆತ್ತನೆಯ ಅಲಂಕಾರವಿದೆ. ದೇವಸ್ಥಾನದ ಮುಖಮಂಟಪ ಪ್ರಾಕಾರ ಹಾಗೂ ಅಮ್ಮನವರ ದೇವಸ್ಥಾನ ನಂತರದ ಕಾಲದವು ಅಂದರೆ ವಿಜಯನಗರ ಅರಸರು ಮತ್ತು ಮೈಸೂರು ಒಡೆಯರ ಕಾಲದಲ್ಲಿ ಸಾಕಷ್ಟು ಅಭಿವೃದ್ಧಿಯನ್ನು ಹೊಂದಿದೆ. ಗರ್ಭಗೃಹದಲ್ಲಿರುವ ಶಿಲ್ಪ ವರದರಾಜ ಸ್ವಾಮಿಯಾದಾಗಿದ್ದು ನಾಲ್ಕು ಕೈಗಳನ್ನು ಹೊಂದಿದ್ದು ಎತ್ತರದ ಪೀಠದ ಮೇಲೆ ಸಮಭಂಗಿಯಲ್ಲಿ ನಿಂತಿದೆ. ದುಂಡಾದ ಮುಖ ಕೋನಾಕೃತಿಯ ಕಿರೀಟ ಮಕರಕುಂಡಲಗಳು ಮತ್ತು ಸಕಲ ಆಭರಣಗಳಿಂದ ಭೂಷಿತನಾದ ವಿಷ್ಣು ಬಲ ಮೇಲ್ಗೈಯಲ್ಲಿ ಚಕ್ರ ಎಡಮೇಲ್ಗೈಯಲ್ಲಿ ಶಂಖ, ಕೆಳ ಬಲಗೈಯಲ್ಲಿ ಗದೆಯನ್ನು ಹಿಡಿದಿದ್ದಾನೆ. ಶಿಲ್ಪವು ಸುಂದವಾಗಿದ್ದು ನೈಜವಾದ ಕೆತ್ತನೆ ಹೊಂದಿದೆ. ಶಿಲ್ಪ ಶೈಲಿ ದೃಷ್ಟಿಯಿಂದ ಈ ಶಿಲ್ಪ ಕ್ರಿ.ಶ. 11–12ನೇ ಶತಮಾನದ ಕಾಲಕ್ಕೆ ಸೇರಿರುತ್ತದೆ.

ಈಶ್ವರ ದೇವಾಲಯ: ಈಶ್ವರ ದೇವಾಲಯ ಕೂಡ ಮಧ್ಯ ಪ್ರಾಕಾರಹೊಂದಿದ್ದು ಮೂಲದ ಗರ್ಭಗೃಹ ಮತ್ತು ಶಕನಾಸಕ್ಕೆ ಹೊಂದಿಕೊಂಡಂತೆ ನಂತರ ಕಾಲದಲ್ಲಿ ವಿಶಾಲವಾದ ನವರಂಗ ಮತ್ತು ಮುಖ ಮಂಟಪವನ್ನು ಸೇರಿಸಲಾಗಿದೆ. ಈಶ್ವರ ದೇವಾಲಯದ ಪಕ್ಕದಲ್ಲಿಯೇ ಇದರ ನವರಂಗಕ್ಕೆ ಹೊಂದಿಕೊಂಡಂತೆ ಪಾರ್ವತಿ ದೇವಾಲಯ ನಿರ್ಮಿಸಲಾಗಿದೆ. ಪಾರ್ವತಿ ದೇವಾಲಯವು ಕೂಡ ಗರ್ಭಗೃಹ, ಶುಕನಾಸಿ, ಮತ್ತು ನವರಂಗವನ್ನು ಹೊಂದಿದೆ. ಆದರೆ ಇದು ಸಹ ಸಂಪೂರ್ಣವಾಗಿ ಹೊಸ ಕಟ್ಟಡ ಎಂದು ಸ್ಪಷ್ಟವಾಗಿ ಹೇಳಬಹುದು. ಈಶ್ವರ ದೇವಾಲಯದ ಗರ್ಭಗೃಹ ಮತ್ತು ಶುಕನಾಸಿಗಳು ಮಾತ್ರ ಚೋಳವಾಸ್ತುವನ್ನು ಹೊಂದಿರುವ ಪ್ರಾಚೀನ ಭಾಗವಾಗಿವೆ. ಈ ದೇವಸ್ಥಾನದ ಅಧಿಷ್ಠಾನ ಉಪಾನ, ಜಗತಿ, ಕಿರಿದಾದಕಂಠ ವೃತ್ತಾಕಾರದ ಕುಮುದ ಮತ್ತು ಪ್ರತಿಗಳಿಂದ ಕೂಡಿದೆ. ವರದರಾಜಸ್ವಾಮಿ ದೇವಾಲಯದ ಹೊರ ಭಿತ್ತಿಯಂತೆ

ಈ ದೇವಾಲಯವು ಕೂಡ ಅದೇ ಮಾದರಿಯ ಅರೆಕಂಬಗಳು ಮತ್ತೆ ಆಳವಿಲ್ಲದ ವಿಶಾಲ ಶಿಖರವುಳ್ಳ ಕೋಷ್ಠಗಳನ್ನು ಹೊಂದಿದೆ. ಗರ್ಭಗೃಹದಲ್ಲಿ ಶಿವಲಿಂಗವನ್ನು ಎತ್ತರವಾದ ಪೀಠದ ಮೇಲೆ ಸ್ಥಾಪಿಸಲಾಗಿದೆ. ಗರ್ಭಗೃಹ ಮತ್ತು ಶುಕನಾಸಿಗಳಲ್ಲಿ ಮೂಲೆಕಂಬಗಳಿವೆ. ಗರ್ಭಗೃಹದ ಬಾಗಿಲವಾದ ಸರಳವಾಗಿದೆ. ಆದರೆ ಶುಕನಾಸದ ಬಾಗಿಲವಾಡ ಪಂಚಶಾಖೆಗಳನ್ನು ಹೊಂದಿದ ದ್ವಾರಬಂಧವಾಗಿದೆ. ಈ ಬಾಗಿಲವಾಡ ಚಿಕ್ಕಹನಸೋಗೆಯ ಆದಿನಾಥ ಬಸದಿ ಮತ್ತು ತಲಕಾಡಿನ ಮರುಳೇಶ್ವರ ದೇವಾಲಯದ ದ್ವಾರ ಬಂಧಗಳನ್ನು ನೆನಪಿಗೆ ತರುತ್ತದೆ. ಪ್ರತಿ ಶಾಖೆಗಳು ಕೂಡ ಲತಾ ಬಳ್ಳಿ ಸುರುಳಿಗಳಿಂದ ಅಲಂಕೃತವಾಗಿದ್ದು ಮಧ್ಯದ ಶಾಖೆಯು ತೆಳುವಾದ ಅರೆಕಂಬಗಳನ್ನು ಹೊಂದಿವೆ ಲಲಾಟಬಿಂಬದಲ್ಲಿ ಯಾವುದೇ ಬಿಂಬಗಳು ಕಂಡುಬರುವುದಿಲ್ಲ. ಈ ದೇವಾಲಯದ ಇನ್ನುಳಿದ ಭಾಗಗಳು ನಂತರ ಕಾಲದಲ್ಲಿ ವಿಜಯನಗರ ಅರಸರು ಮೈಸೂರು ಅರಸರು ಹಾಗೂ ಇನ್ನಿತರ ಸ್ಥಳೀಯರು ಕೂಡ ದೇವಾಲಯದ ಭಾಗಗಳನ್ನು ನಿರ್ಮಿಸಿರುತ್ತಾರೆ.

ಜನಾರ್ಧನದೇವಾಲಯ ಸಿಂಗನಲ್ಲೂರು: ಕೊಳ್ಳೇಗಾಲ ತಾಲ್ಲೂಕಿನಲ್ಲಿ ಸಿಂಗನಲ್ಲೂರು ಗ್ರಾಮವಿದ್ದು. ಈ ಗ್ರಾಮದಲ್ಲಿ ಜನಾರ್ಧನ ದೇವಾಲಯವು ಪ್ರಾಚೀನ ದೇವಾಲಯವಾಗಿದೆ. (ಚಿತ್ರ ಸಂಖ್ಯೆ 14) ಊರಿನ ಒಳಗೆ ಪೂರ್ವಾಭಿಮುಖವಾಗಿದ್ದು ಏಕಕೂಟ ಹಾಗೂ ದ್ರಾವಿಡ ಶೈಲಿಯ ದೇವಾಲಯವಾಗಿದೆ. ಕ್ರಿ.ಶ. ಸುಮಾರು 11ನೇ ಶತಮಾನದ ಪ್ರಾರಂಭದಲ್ಲಿಯೇ ಈ ದೇವಾಲಯ ನಿರ್ಮಾಣವಾಗಿತ್ತೆಂಬುದು ಇಲ್ಲಿರುವ ದೇವಸ್ಥಾನದ ವಾಸ್ತು ಲಕ್ಷಣಗಳಿಂದ ತಿಳಿದುಬರುತ್ತದೆ.[21] ತಳವಿನ್ಯಾಸದಲ್ಲಿ ಗರ್ಭಗೃಹ ಶುಕನಾಸ ಮತ್ತು ನವರಂಗಗಳಿವೆ. ದೇವಸ್ಥಾನದ ಗರ್ಭಗೃಹವು 3x3 ಮೀಟರ್ ಅಡಿ ಉದ್ದ ಅಗಲಗಳಿಂದ ಕೂಡಿದ್ದು ಚೌಕಾಕಾರವಾಗಿದೆ. ನಾಲ್ಕು ಮೂಲೆಯಲ್ಲಿ ನಾಲ್ಕು ಗೋಡೆಕಂಬಗಳಿವೆ. ಮೇಲ್ಭಾಗದಲ್ಲಿ ಭುವನೇಶ್ವರಿಯಿದ್ದು. ಭುವನೇಶ್ವರಿಯಲ್ಲಿ ನಕ್ಷತ್ರಾಕಾರವಾಗಿ ಮತ್ತು ಚೌಕಾಕಾರವಾಗಿ ಕಲ್ಲು ಚಪ್ಪಡಿಯನ್ನು ಕುಳ್ಳಿಸಿರುತ್ತಾರೆ. ಅದರ ಮಧ್ಯದಲ್ಲಿ ಅರಳಿದ ಕಮಲದ ಪುಷ್ಪದ ಕೆತ್ತನೆ ಇದೆ. ಗರ್ಭಗೃಹದ ಪೀಠದ ಮೇಲೆ ಜನಾರ್ಧನ ಶಿಲ್ಪವಿದ್ದು, ಶಿಲ್ಪವು ನಾಲ್ಕು ಅಡಿ ಎತ್ತರವಿದೆ. ಚತುರ್ಭುಜ ಹೊಂದಿದ್ದು ಮೇಲಿನ ಬಲಗೈಯಲ್ಲಿ ಚಕ್ರ ಎಡಗೈಯಲ್ಲಿ ಶಂಖ ಕೆಳಗಿನ ಬಲಗೈಯಲ್ಲಿ ಅಭಯಹಸ್ತ ಮತ್ತು ಎಡಗಡೆಯ ಕೈಯಲ್ಲಿ ಗದೆ ಇದೆ. ತಲೆಯ ಮೇಲೆ ಕೋನಾಕೃತಿಯ ಕಿರೀಟ, ಎರಡು ಕಿವಿಯಲ್ಲಿ ಕರ್ಣಕುಂಡಲ, ಬಲಗಡೆಗೆ ಶ್ರೀದೇವಿ, ಎಡಗಡೆಗೆ ಭೂದೇವಿಯರ ಉಬ್ಬು ಶಿಲ್ಪಗಳಿವೆ. ಇಲ್ಲಿರುವ ದ್ವಾರವು ಸರಳವಾದ ಕೆತ್ತನೆಯಿಂದ ಕೂಡಿದೆ. ಶುಕನಾಸಿಯು ಗರ್ಭಗುಡಿಯಷ್ಟೇ 2 1/2 x 2 1/2 ಮೀಟರ್ ಚದುರ ಸುತ್ತಳತೆಯನ್ನು ಹೊಂದಿದೆ. ಇಲ್ಲಿಯೂ ಸಹ ನಾಲ್ಕು ಮೂಲೆಗಳಲ್ಲಿ ನಾಲ್ಕು ಕಂಬಗಳಿವೆ ಮುಂದಿನ ಅಂಕಣ ನವರಂಗವು 9x9 ಮೀಟರ್ ಉದ್ದ ಅಗಲದಿಂದ ಕೂಡಿದ್ದು ಮಧ್ಯದಲ್ಲಿ

ನಾಲ್ಕು ಕಂಬಗಳಿವೆ. ಈ ಕಂಬಗಳು ಚೋಳೋತ್ತರ ಕಾಲದ ಕಂಬಗಳಾಗಿವೆ. ವಿಜಯನಗರ ಅರಸರ ಕಾಲಕ್ಕೆ ಸೇರಿದ ಸೇರ್ಪಡೆಯಲ್ಲಿ ಅವರದೇ ಆದ ಎರಡು ಕಂಬಗಳಿವೆ.

ಈ ದೇವಸ್ಥಾನದ ಆಧಿಷ್ಠಾನವು ಚೌಕಾಕಾರವಾಗಿದ್ದು ಐದು ಪಟ್ಟಿಕೆಗಳಿಂದ ಕೂಡಿದ್ದು ಉಪಾನ, ಜಗತಿ, ತ್ರಿಪಟ್ಟಕುಮುದ, ಪ್ರತಿ, ಇವಿಷ್ಟೂ ಇವೆ. ಇವುಗಳು ಹಿಮ್ಮುಖ ಮತ್ತು ಮುಮ್ಮುಖದಿಂದ ಜೋಡಿಸಲ್ಪಟ್ಟಿದೆ. ಈ ದೇವಾಲಯದ ದಕ್ಷಿಣ ದಿಕ್ಕಿನ ಹೊರಗೋಡೆಯಲ್ಲಿ ಭಿತ್ತಿಯಲ್ಲಿ ಸುತ್ತಲೂ ದ್ರಾವಿಡ ಶೈಲಿಯ ಅರೆಕಂಬಗಳು ಮತ್ತು ಆಳವಿಲ್ಲದೆ ಕೋಷ್ಠಗಳಿವೆ. ಭಿತ್ತಿಯ ಮೇಲಿನ ಭಾಗದಲ್ಲಿ ಕಪೋತವಿದೆ. ಕಪೋತವು ಸ್ವಲ್ಪ ಇಳಿಜಾರನ್ನು ಹೊಂದಿದ್ದು ಹೊರಮೈಯ ಮೇಲ್ಭಾಗದಲ್ಲಿ ಸಿಂಹ ಮತ್ತು ವ್ಯಾಳಮುಳ ಇರುವ ಸೂಕ್ಷ್ಮವಾದಂತಹ ಉಬ್ಬುಕೆತ್ತನೆಗಳಿವೆ. ಗರ್ಭಗೃಹದ ಮೇಲೆ ವಿಮಾನವಿದ್ದು ಇದು ದ್ರಾವಿಡ ಶೈಲಿಯ ವಿಮಾನವಾಗಿದೆ. ಈ ವಿಮಾನವು ಸಹ ಇತ್ತೀಚಿನ ಕಾಲದ್ದು.

ಸಿದ್ಧೇಶ್ವರಸ್ವಾಮಿ ದೇವಾಲಯ ಚಿಲಕವಾಡಿ ಬೆಟ್ಟ: ಕೊಳ್ಳೇಗಾಲದಿಂದ ಪಶ್ಚಿಮ ದಿಕ್ಕಿಗೆ ಸುಮಾರು 12ಕಿ.ಮೀ. ದೂರದಲ್ಲಿ ಕೊಳ್ಳೇಗಾಲ ಮೈಸೂರು ರಸ್ತೆಯಲ್ಲಿಯೇ ಚಿಲಕವಾಡಿ ಬೆಟ್ಟದ ಮೇಲೆ ಸಿದ್ಧೇಶ್ವರಸ್ವಾಮಿ ದೇವಾಲಯವನ್ನು ಕಾಣಬಹುದು. ಇದು ಪ್ರಾಯಶಃ ಕ್ರಿ.ಶ. 10ನೇ ಶತಮಾನದಲ್ಲಿ ಶಂಭುಲಿಂಗ ಕ್ಷೇತ್ರದಲ್ಲಿ ತಂಜಾವೂರಿನ ಚೋಳರು ತಮ್ಮದೇ ಆದ ಶೈಲಿಯಲ್ಲಿ ಈ ದೇವಾಲಯವನ್ನು ಕಟ್ಟಿರುತ್ತಾರೆ.[22] ನಂತರ ಸುಮಾರು ಕ್ರಿ.ಶ. 1500ರ ಹೊತ್ತಿಗೆ ಈ ಕ್ಷೇತ್ರದಲ್ಲಿ ವೀರಶೈವ ಕವಿ ನಿಜಗುಣರಾಧ್ಯ ಎಂಬುವವನು ಈ ಕ್ಷೇತ್ರಕ್ಕೆ ರಾಜನಾಗಿದ್ದನೆಂದು ಅನೇಕ ಗ್ರಂಥಗಳಿಂದ ತಿಳಿದುಬರುತ್ತದೆ. ಅವುಗಳಲ್ಲಿ ಕೆಲವು ಗ್ರಂಥಗಳನ್ನು ಇಲ್ಲಿ ತಿಳಿಸಲಾಗಿದೆ. ಪ್ರಸಿದ್ಧವಾದ

1. ಅನುಭವಸಾರ ಪದ್ಧತಿ
2. ಪರಮಾರ್ಥ ಗೀತೆ
3. ಪರಮಾನುಭವಬೋಧೆ
4. ಪರಮಾರ್ಥ ಪ್ರಕಾಶಿಕೆ
5. ವಿವೇಕ ಚಿಂತಾಮಣಿ

ಈ ಮೇಲಿನ ಗ್ರಂಥಗಳಿಂದ ಇಲ್ಲಿನ ಇತಿಹಾಸ ತಿಳಿದುಬರುತ್ತವೆ[23]. ಇಂತಹ ಒಂದು ಐತಿಹಾಸಿಕ ಕ್ಷೇತ್ರದಲ್ಲಿ ಚೋಳರು ಒಂದು ದೇವಾಲಯವನ್ನು ಒಂದು ಮಂಟಪವನ್ನು ನಿರ್ಮಿಸಿರುತ್ತಾರೆ ಅಲ್ಲದೇ ವಿಜಯನಗರ ಅರಸರ ಕಾಲದಲ್ಲಿ ಶಂಭುಲಿಂಗೇಶ್ವರ ದೇವಾಲಯವು ಸಹ ನಿರ್ಮಾಣವಾಗಿದ್ದು ಅಲ್ಲದೆ ಶಕ್ತಿ ಪ್ರಧಾನವಾದ ಮಾರಿ ದೇವಾಲಯವು ಈ ಕ್ಷೇತ್ರದಲ್ಲಿದೆ. ಆದರೆ

ತಂಜಾವೂರಿನ ಚೋಳರು ಇಲ್ಲಿ ತಮ್ಮದೆ ವಾಸ್ತುರಚನೆಯನ್ನು ಅನುಸರಿಸಿಲ್ಲ. ಅದರೆ ಅಂದಿನ ಕಾಲದಲ್ಲಿ ಈ ಸಿದ್ಧೇಶ್ವರ ದೇವಾಲಯ ಒಂದು ಮಠವಾಗಿದ್ದು. ಇತೀಚಿನ ವರ್ಷಗಳಲ್ಲಿ ಈ ಮಠವನ್ನು ಒಂದು ದೇವಾಲಯವಾಗಿ ನಿರ್ಮಿಸಿರುತ್ತಾರೆ. ಸಿದ್ಧೇಶ್ವರ ದೇವಾಲಯದ ಗರ್ಭಗೃಹವು 10x10 ಅಡಿ ಉದ್ದ ಅಗಲದಿಂದ ಕೂಡಿದ್ದು ಗರ್ಭಗೃಹದ ಮಧ್ಯದಲ್ಲಿ ಕಲ್ಲುಪೀಠದ ಮೇಲೆ ವಿಗ್ರಹವನ್ನು ಪ್ರತಿಷ್ಠಾಪಿಸಲಾಗಿದೆ ಈ ವಿಗ್ರಹವು ಸುಮಾರು 2 ಅಡಿ ಎತ್ರವಿದ್ದು ಎರಡು ಕೈಗಳನ್ನು ಹೊಂದಿದೆ, ಒಂದು ಕೈಯಲ್ಲಿ ಕತ್ತಿ ಮತ್ತೊಂದು ಕೈಯಲ್ಲಿ ಕಳಸ. ಕಂಠದಲ್ಲಿ ಮಣಿಸರ ಧರಿಸಿದ್ದು ಕಿವಿಯಲ್ಲಿ ಓಲೆಯ ರೀತಿಯ ಉಂಗುರ (ಕರ್ಣ ಕುಂಡಲ) ಧರಿಸಿರುವುದು ಈ ಗರ್ಭಗೃಹವು ಪೂರ್ವಾಭಿಮುಖವಾಗಿದ್ದು ಪ್ರವೇಶದ್ವಾರವನ್ನು ಉತ್ತರಾಭಿಮುಖವಾಗಿ ತೆರೆದಿದ್ದು ವಿಶೇಷತೆಯನ್ನು ಹೊಂದಿದೆ. ಈ ದೇವಾಲಯದಲ್ಲಿ ಶುಕನಾಸಿ ಮುಖಂಡುಬರುವುದಿಲ್ಲ.

ನವರಂಗ: – ನವರಂಗದಲ್ಲಿ ಮೂರು ಸಾಲುಗಳಲ್ಲಿ ಒಟ್ಟು 18 ಕಂಬಗಳು ಇವೆ. ದೇವಾಲಯದ ಒಳಗೆ ಇರುವ ನಾಲ್ಕು ಕಂಬಗಳಲ್ಲಿ ಅನೇಕ ಉಬ್ಬು ಶಿಲ್ಪಗಳು ಇರುವುದು ಅರ್ಜುನ ಯುದ್ಧ ಮಾಡುತ್ತಿರುವ ಶಿಲ್ಪ, ಮುನಿಗಳು, ರಾವಣ, ಆಚಾರ್ಯರ ಶಿಲ್ಪ, ಡೋಲು ಒಡೆಯುವ ಶಿಲ್ಪ, ಪೂಜೆ ಮಾಡುತ್ತಿರುವ ಶಿಲ್ಪ, ನೃತ್ಯ ಮಾಡುತ್ತಿರುವ ದೃಶ್ಯ, ಮಹಿಷಮರ್ಧಿನಿ, ಮೀನಿನ ಮೇಲೆ ಕುಳಿತಿರುವ ಶಿಲ್ಪ, ಶ್ರೀದೇವಿ, ಭೂದೇವಿ, ಈಶ್ವರ, ಲಿಂಗ, ಸಿಂಹಮುಖ, ಮತ್ತು ವ್ಯಾಳವಾರಿ ಮುಖ ಇರುವ ಉಬ್ಬು ಶಿಲ್ಪಗಳಿವೆ. ಇವುಗಳು ಇಲ್ಲಿರುವ ನಾಲ್ಕು ಕಂಬಗಳಲ್ಲಿ ಕಂಡುಬರುತ್ತವೆ. ಹೊರಗೆ ಇರುವ ಕಂಬಗಳಲ್ಲಿ ನಂದಿ, ಋಷಿಮುನಿ ಕಂಡುಬರುತ್ತವೆ. ಈ ದೇವಾಲಯ ಸಂಪೂರ್ಣ ಉದ್ದ ಪೂರ್ವ–ಪಶ್ಚಿಮಾಭಿಮುಖವಾಗಿ 45 ಅಡಿ ಮತ್ತು ಉತ್ತರ ದಕ್ಷಿಣಾಭಿಮುಖವಾಗಿ 15 ಅಡಿ ಅಗಲವಿರುವುದು.

ಈ ಕ್ಷೇತ್ರದಲ್ಲಿ ಕೊಳ್ಳೇಗಾಲ – ಮೈಸೂರಿಗೆ ಹೋಗುವ ರಸ್ತೆಬದಿಯಲ್ಲಿಯೇ ಒಂದು ಮಂಟಪವಿದೆ. ಈ ಮಂಟಪವು ಸುಮಾರು ಪೂರ್ವ–ಪಶ್ಚಿಮಾಭಿಮುಖವಾಗಿ 3 ಸಾಲು ಕಂಬಗಳು ಕಂಡುಬರುತ್ತವೆ. ಒಂದೊಂದು ಸಾಲಿನಲ್ಲಿ ಆರು ಕಂಬಗಳು ಇದೆ. ಉತ್ತರ ದಕ್ಷಿಣಾಭಿಮುಖವಾಗಿ 6 ಸಾಲು ಕಂಬಗಳು ಕಂಡುಬರುತ್ತವೆ. ಒಟ್ಟು ಈ ಮಂಟಪದಲ್ಲಿ 18 ಕಂಬಗಳು ಕಂಡುಬರುತ್ತವೆ. ಈ ಕಂಬಗಳು ಒಂದೇ ಮಾದರಿಯನ್ನು ಹೊಂದಿದೆ. ಈ ಕಂಬಗಳ ಕೆಳಭಾಗ ಪೀಠ ಚೌಕಾಕಾರವಾಗಿದ್ದು ನಂತರ ಭಾಗ ಎಂಟು ಮುಖವನ್ನು ಹೊಂದಿದೆ ನಂತರ ಮೇಲಿನ ಭಾಗ ಚೌಕಾಕಾರವಾಗಿದ್ದು ಭೋದಿಗೆಯು ಚೌಕಾಕಾರವಾಗಿ ಒಂದೊಂದು ಕಡೆ 3 ಮುಖವನ್ನು ಹೊಂದಿದೆ. ಪಶ್ಚಿಮಾಭಿಮುಖವಾಗಿರುವ ಒಂದು ಕಂಬದಲ್ಲಿ ಭೈರವ ನರ್ತನ ಮಾಡುತ್ರಿರುವ ದೃಶ್ಯವಿದೆ. ಪೂರ್ವಾಭಿಮುಖದಲ್ಲಿರುವ ಒಂದು ಕಂಬದಲ್ಲಿ ಭೈರವ

ನಿಂತಿರುವುದು ಕಂಡುಬರುತ್ತದೆ. ಈ ಎರಡು ಉಬ್ಬು ಶಿಲ್ಪಗಳು ಶಿಲ್ಪಕಲಾ ದೃಷ್ಟಿಯಿಂದ ಚೋಳರ ಶಿಲ್ಪಶೈಲಿಯನ್ನೇ ನೆನಪಿಗೆ ತರುತ್ತವೆ. ಪೂರ್ವದಿಕ್ಕಿನ ಕಂಬದಲ್ಲಿ ಉಬ್ಬು ಶಿಲ್ಪವು ಸುಮಾರು 3 1/2 ಎತ್ತರವಿದ್ದು ಚತುರ್ಭುಜವನ್ನು ಹೊಂದಿದೆ. ಒಂದು ಕೈಯಲ್ಲಿ ತ್ರಿಶೂಲ, ಒಂದು ಕೈಯಲ್ಲಿ ಡಮರು, ಮತ್ತು ಸರ್ಪ ಮತ್ತೊಂದು ಕೈಯಲ್ಲಿ ಗದೆ ಇರುವುದು ಕಂಡುಬರುತ್ತದೆ. ತಲೆಯಲ್ಲಿ ಕಿರೀಟ ಬಲವಾದ, ದೇಹ, ಮೀಸೆ,ಕಿವಿಯಲ್ಲಿ ಕರ್ಣಕುಂಡಲ, ಕತ್ತಿನಲ್ಲಿ ಮಣಿಸರ, ಸೊಂಟದಲ್ಲಿ ಮಣಿಸರ, ಧರಿಸಿದ್ದು ತಲೆಯ ಕಿರೀಟದ ಮೇಲೆ ಸಿಂಹ ಬಾಯಿ ತೆರೆದು ನಾಲಿಗೆಯನ್ನು ಕಿರೀಟದ ಮೇಲೆ ಚಾಚಿರುವುದು ಕಂಡುಬರುತ್ತದೆ. ಇದೇ ರೀತಿ ಪಶ್ಚಿಮ ದಿಕ್ಕಿನಲ್ಲಿದ್ದರೂ ಇದು ವಿಶೇಷವಾಗಿ ನರ್ತನ ಮಾಡುತ್ತಿರುವ ದೃಶ್ಯ ಅಮೋಘವಾಗಿದೆ.

ಶಂಭುಲಿಂಗೇಶ್ವರ ದೇವಲಯ: ಈ ಕ್ಷೇತ್ರದಲ್ಲಿ ಶಂಭುಲಿಂಗೇಶ್ವರ ದೇವಾಲಯವು ಸಹ ಒಂದು ಪ್ರಾಚೀನ ದೇವಾಲಯವಾಗಿದೆ ಇದು ಯಾರ ಕಾಲದಲ್ಲಿ ಕಟ್ಟಲ್ಪಟ್ಟಿತು ಎಂಬುದು ಗೋಚರವಾಗಿಲ್ಲ. ಪ್ರಾಯಶಃ ಗಂಗರ ಕಾಲದ್ದೋ ಅಥವಾ ವಿಜಯನಗರ ಅರಸ ಕಾಲದ್ದೋ ಹೇಳುವುದಕ್ಕೆ ಬರುವುದಿಲ್ಲ ಆದರೆ ಇಲ್ಲಿರುವ ಶಿಲ್ಪಿಗಳು ಪ್ರಾಚೀನತೆಯನ್ನು ದೃಡಪಡಿಸುತ್ತವೆ. ಗರ್ಭಗುಡಿ ಶುಕನಾಸಿ, ನವರಂಗವನ್ನು ಹೊಂದಿದೆ. ಇದು ದಕ್ಷಿಣಾಭಿಮುಖವಾಗಿರುವ ಶುದ್ಧ ದ್ರಾವಿಡ ಶೈಲಿಯ ದೇವಾಲಯ ಗರ್ಭಗುಡಿಯಲ್ಲಿ ಸುಂದರವಾದ ಶಿವಲಿಂಗವಿದೆ. ಶುಕನಾಸದ ದ್ವಾರದ ಲಲಾಟಬಿಂಬದಲ್ಲಿ ಗಜಲಕ್ಷ್ಮೀ ಉಬ್ಬು ಶಿಲ್ಪವಿದೆ. ನವರಂಗದಲ್ಲಿ ನಾಲ್ಕು ಕಂಬಗಳಿವೆ ಇವು ಹೆಚ್ಚು ಆಲಂಕೃತವಾಗಿಲ್ಲ. ದೇವಾಲಯದ ಹೊರಗೋಡೆಯ ಭಿತ್ತಿಯಲ್ಲಿ ವಿಶೇಷವಾದ ಉಬ್ಬು ಶಿಲ್ಪವಿದೆ. ಈ ರೀತಿಯ ಶಿಲ್ಪ ಕಲೆಯನ್ನು ರಜಪೂತರ ಕಾಲದ ದೇವಾಲಯಗಳಲ್ಲಿ ಕಾಣುತ್ತೇವೆ. ಅಂದರೆ ಹೆಂಗಸು ಒಂದು ಮಗುವಿಗೆ ಜನ್ಮ ನೀಡುವ ದೃಶ್ಯ ಮನ ಮೋಹಕವಾಗಿದೆ. ಅಂದರೆ ಹೆಂಗಸಿನ ನಗ್ನತೆ ಮತ್ತು ಹೆಂಗಸರು ಪಡುತ್ತಿರುವ ಕಷ್ಟವನ್ನು ಶಿಲ್ಪಿ ಈ ದೇವಾಲಯದಲ್ಲಿ ಬಿಡಿಸಿದ್ದಾನೆ, ಅಲ್ಲದೆ ಮೀನಿನ ಉಬ್ಬುಶಿಲ್ಪ ಕಂಡುಬರುತ್ತದೆ. ಅಂದರೆ ಇದು ತೊರೆಯ ನಾಡಿನ ಜನತೆಯ ಬಗ್ಗೆ ಮಾಹಿತಿ ನೀಡುತ್ತದೆ. ಈ ರೀತಿಯ ಮೀನಿನ ಉಬ್ಬುಶಿಲ್ಪಗಳು ಈ ಭಾಗದಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಕಂಡುಬರುತ್ತವೆ. ಉದಾಹರಣೆಗೆ ಮೂಗೂರು, ನಂಜನಗೂಡು, ದೇವಾಲಯಗಳಲ್ಲಿ ಸಹ ಕಾಣಬರುತ್ತವೆ ಈ ಹಿನ್ನೆಲೆಯಿಂದ ಪ್ರಾಯಶಃ ಮೈಸೂರು ಒಡೆಯರ ಕಾಲದಲ್ಲಿಯೇ ನಿರ್ಮಾಣವಾಗಿರಬೇಕು ಎಂದು ಸಹ ಹೇಳಬಯಸುತ್ತೇನೆ. ಗರ್ಭಗೃಹದ ಮೇಲ್ಭಾಗದಲ್ಲಿರುವ ವಿಮಾನವನ್ನು ನೋಡಿದರೆ ಚೋಳರ ವಾಸ್ತುಶೈಲಿಯನ್ನು ಹೋಲುತ್ತದೆ.

ದಾಸನಪುರದ ರೇವಣ್ಣ ಸಿದ್ದೇಶ್ವರ ದೇವಾಲಯ: ದಾಸನಪುರ ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ ತಾಲ್ಲೂಕು ದಾಸನಪುರ ಮತ್ತು ಹರಳೆ ಗ್ರಾಮದ ಮಧ್ಯ ಕಾವೇರಿಯ ತಡಿಯ ದಕ್ಷಿಣ ತೀರದಲ್ಲಿರುವ ಪ್ರಾಚೀನ ದೇವಾಲಯವೇ ರೇವಣ್ಣಸಿದ್ಧೇಶ್ವರ ದೇವಾಲಯ ಕ್ರಿ.ಶ. 10ನೇ ಶತಮಾನದ ಕೊನೆಯ ಭಾಗದಲ್ಲಿ ಕರ್ನಾಟಕದ ಆಗ್ನೇಯ ಭಾಗವನ್ನು ಇಂದಿನ ತಮಿಳುನಾಡಿಗೆ ಹೊಂದಿಕೊಂಡಂತೆ ಇರುವ ಈ ಭಾಗದಲ್ಲಿ ಚೋಳ ಚಕ್ರವರ್ತಿ ರಾಜರಾಜಚೋಳನು ಆಕ್ರಮಿಸಿಕೊಂಡು ಆಳ್ವಿಕೆ ಪ್ರಾರಂಭಿಸಿ ಈ ಭಾಗದಲ್ಲಿ ಅಂದರೆ ಹರಳೆ ಮತ್ತು ದಾಸನಪುರದ ಮಧ್ಯ ಈ ದೇವಸ್ಥಾನವನ್ನು ನಿರ್ಮಿಸಿದ್ದಾರೆ ಆದರೆ ಈ ದೇವಾಲಯ ಸಂಪೂರ್ಣ ದುಸ್ಥಿತಿ ಹೊಂದಿ ಜೀರ್ಣೋದ್ಧಾರವಾಗಿ ಮತ್ತೆ ದುಸ್ಥಿತಿಗೆ ಬಂದಿದೆ. (ಚಿತ್ರ ಸಂಖ್ಯೆ 15) ಕೆಲವು ದಶಕಗಳ ಹಿಂದೆಯೇ ದುಸ್ಥಿತಿ ಹೊಂದಿದ್ದಾಗ ಸ್ಥಳೀಯರು ಜೀರ್ಣೋದ್ಧಾರ ಮಾಡಿದ್ದಾರೆ. ಈಗ ನೋಡಿದರೆ ಗತಕಾಲದ ಪರಂಪರೆ ನಶಿಸುತ್ತಿರುವುದರಿಂದ ಪ್ರಾಚೀನ ಪರಂಪರೆ ಮತ್ತು ಕಲಾ ಪರಂಪರೆ ಕಡೆಗಣಿಸಿದಂತೆ ಆಗುತ್ತದೆ. ಈ ದೇವಾಲಯದಲ್ಲಿ ತಮಿಳು ಲಿಪಿಯ ಮೂರು ಶಾಸನಗಳಿವೆ. ದೇವಾಲಯದ ಒಳಗೆ ಮೇಲ್ಭಾಗದಲ್ಲಿ ಒಂದು ಶಾಸನವಿದ್ದರೆ ಮತ್ತೆರಡು ಶಾಸನಗಳು ಮುಂದೆ ಇರುವ ಕಂಬಗಳ ಮೇಲೆ ಇದೆ ಈ ಕಂಬಗಳ ವಾಸ್ತುರಚನೆ ನೋಡಿದರೆ ತಿ.ನರಸೀಪುರ ತಾಲ್ಲೂಕು ತಡಿಮಾಲಂಗಿಯಲ್ಲಿರುವ ಜನಾರ್ಧನ ದೇವಾಲಯದ ಹೊರ ಭಾಗದ ಕಂಬಗಳಂತೆ ಇದೆ. ತಡಿಮಾಲಂಗಿಯ ದೇವಾಲಯವನ್ನು ಚೋಳರೇ ಕಟ್ಟಿಸಿರುತ್ತಾರೆ. ಇಲ್ಲಿರುವ ದೇವಾಲಯವು ಅದೇ ಮಾದರಿಯ ಕಂಬಗಳನ್ನು ಹೊಂದಿರುವುದರಿಂದ ತಮಿಳು ಲಿಪಿಯ ಬರವಣಿಗೆ ಇರುವುದರಿಂದ ಇದು ಸಹ ಚೋಳರ ಒಂದು ಕೊಡುಗೆ ಎಂದು ಹೇಳಬಹುದು. ಇಂತಹ ತಮಿಳು ಸಂಸ್ಕೃತಿ ಮತ್ತೇ ಕರ್ನಾಟಕ ಸಂಸ್ಕೃತಿಯ ಸಮ್ಮಿಲನದಿಂದ ನಿರ್ಮಾಣವಾಗಿರುವ ದೇವಾಲಯ ರೇವಣಸಿದ್ದೇಶ್ವರ ದೇವಾಲಯವಾಗಿದೆ ಈ ದೇವಾಲಯದ ಬಗ್ಗೆ ಆಗಲಿ ಇಲ್ಲಿರುವ ಶಾಸನಗಳ ಬಗ್ಗೆ ಆಗಲಿ ಎಲ್ಲೂ ವರದಿಯಾಗಿಲ್ಲ ಈ ಹಿನ್ನೆಲೆಯಿಂದ ಇದೊಂದು ಹೊಸ ಶೋಧನೆಯಾದರೂ ಸಂಪೂರ್ಣ ದೇವಾಲಯ ವಾಸ್ತು ರಚನೆಯಿನ್ನು ಕಳೆದುಕೊಂಡಿದೆ.

ಮೋಡಳ್ಳಿಯ ಬೀರೇಶ್ವರ ದೇವಾಲಯ: ಮೋಡಳ್ಳಿ ಗ್ರಾಮವು ಒಂದು ಪ್ರಾಚೀನ ನೆಲೆ. ಮೋಡಳ್ಳಿ ಕಾಮಗೆರೆಯಿಂದ ದಕ್ಷಿಣ ದಿಕ್ಕಿಗೆ 2.ಕಿ.ಮೀ ದೂರದಲ್ಲಿದೆ. ಇಲ್ಲಿ ಸುಮಾರು ಸಾವಿರ ವರ್ಷಗಳ ಹಿಂದೆ ನಿರ್ಮಾಣವಾಗಿದ್ದ ದೇವಾಲಯ ದುಸ್ಥಿತಿ ಹೊಂದಿದ್ದ ಕಾರಣ ಅದೇ ದೇವಾಲಯದ ಸ್ಥಳದಲ್ಲಿಯೇ ಬೀರೇಶ್ವರ ದೇವಾಲಯವು ನಿರ್ಮಾಣವಾಗುತ್ತಿದ್ದೆ. (ಚಿತ್ರ ಸಂಖ್ಯೆ 16) ಈ ದೇವಸ್ಥಾನವು ಪೂರ್ವಭಿಮುಖವಾಗಿದ್ದು ಪೂರ್ವ – ಪಶ್ಚಿಮಾಭಿಮುಖವಾಗಿ 80 ಅಡಿ ಉದ್ದವಾಗಿಯೂ ಉತ್ತರದಕ್ಷಿಣಾಭಿಮುಖ 40 ಅಡಿ ಅಗಲವನ್ನು ಹೊಂದಿದೆ. ಮೂಲಗರ್ಭಗುಡಿ

ಮತ್ತು ಶುಕನಾಸಿಯನ್ನು ಹೊಂದಿದೆ. ನವರಂಗದಲ್ಲಿ ನಾಲ್ಕು ಕಂಬಗಳಿವೆ ಮುಖಮಂಟಪದಲ್ಲಿ ಎರಡು ಕಂಬಗಳಿವೆ ಮುಖ ಮಂಟಪದಲ್ಲಿ ಎರಡು ಕಂಬಗಳಿವೆ 7 ಕಂಬಗಳು ದಕ್ಷಿಣ ದಿಕ್ಕಿಗೆ 7 ಕಂಬಗಳಿವೆ. ಈ ಎಲ್ಲಾ ಕಂಬಗಳು ಸಿಮೆಂಟ್ ಗಾರೆಯಿಂದ ನಿರ್ಮಿತಾದ ಕಂಬಗಳಾಗಿವೆ. ಗರ್ಭಗುಡಿ ಮತ್ತು ಶುಕನಾಸದ ಹೊರಭಾಗ ಸುಂದರವಾಗಿ ಹಂತ ಹಂತ ಕಟ್ಟಲ್ಪಟ್ಟಿದೆ. ದೇವಾಲಯದ ಗರ್ಭಗುಡಿಯ ಮೇಲೆ ವಿಮಾನವಿದ್ದು ದ್ರಾವಿಡ ಶೈಲಿಯನ್ನು ಹೊಂದಿದೆ. ಹಲವಾರು ಗಾರೆ ಶಿಲ್ಪಗಳನ್ನು ಒಳಗೊಂಡಿದೆ ಮತ್ತು ದೇವಾಲಯದ ಮೇಲ್ಭಾಗದಲ್ಲಿ ನಾಲ್ಕು ದಿಕ್ಕಿಗೂ ನಾಲ್ಕು ಭೂತಗಳಿರುವುದು ವಿಶೇಷವೆಂದು ಹೇಳಬಹುದು. ಗರ್ಭಗುಡಿಗೆ ಪ್ರತಿಸ್ಥಾಪಿಸಲು ಸಿದ್ಧವಾಗುತ್ತಿರುವ ಬೀರೇಶ್ವರ ಶಿಲ್ಪ ಸುಂದರವಾಗಿದೆ. (ಚಿತ್ರ ಸಂಖ್ಯೆ 17) ಚತುರ್ಭುಜ ಹೊಂದಿದ್ದು ಒಂದು ಕೈಯಲ್ಲಿ ಕೃತಿ, ಒಂದು ಕೈಯಲ್ಲಿ ಭರ್ಜಿ, ಒಂದು ಕೈಯಲ್ಲಿ ಬಿಲ್ಲು, ಮತ್ತೊಂದು ಕೈಯಲ್ಲಿ ಗದೆ ಇದೆ. ಸೂಕ್ಷ್ಮವಾಗಿ ಕಣ್ಣು, ಮೀಸೆ, ಕಿವಿಯಲ್ಲಿ ಕರ್ಣಾಕುಂಡಲ, ಕಂಠದ ಸುತ್ತಲೂ ಸರಗಳು, ಲಿಂಗಧಾರಣೆ, ಭುಜಕಿರೀಟ ತೋಳಬಂದಿ, ಸುಂದರವಾದ ಕಿರೀಟ, ಪಾದದಲ್ಲಿ ಪಾದುಕಿ, ಕಾಲು ಕಡಗ ಧರಿಸಿರುತ್ತಾನೆ. ಇದು 21ನೇ ಶತಮಾನ ಶಿಲ್ಪವಾಗಿದ್ದರೂ ಸಹ ಹೊಯ್ಸಳರ ಕಲೆಯನ್ನು ನೆನಪಿಗೆ ತರುತ್ತದೆ. ಇಕ್ಕೆಲಗಳಲ್ಲಿ ಒಂದು ಕಡೆ ನಂದೀಶ್ವರ ಮತ್ತೊಂದು ಕಡೆ ಸೇವಕ ಇಬ್ಬರೂ ಕೈಮುಗಿಯುತ್ತಿರುವುದು ಕಂಡುಬರುತ್ತದೆ. ಆದರೂ ಸಹ ಈ ದೇವಾಲಯ ಈಗ ಇನ್ನೂ ಪ್ರಗತಿಯಲ್ಲಿದ್ದ ಈ ದೇವಾಲಯಕ್ಕೆ ಮಹಾಗೋಪುರವು ಸಹ ನಿರ್ಮಾಣವಾಗುತ್ತಿದೆ. ಒಟ್ಟಿನಲ್ಲಿ ಪ್ರಾಚೀನ ಕಾಲದ ನೆಲೆಯಲ್ಲಿ ಬೀರೇಶ್ವರ ದೇವಾಲಯವಾಗುತ್ತಿರುವುದು ಸಂತೋಷದ ಸಂಗತಿ ಇಲ್ಲ ಜನರೇ ವಾಸಮಾಡದ ಈ ಸ್ಥಳದಲ್ಲಿ ದೇವಾಲಯ ನಿರ್ಮಾಣ ಸುತ್ತಮುತ್ತಲಿನ ಅಂದರೆ ಕಾಮಗೆರೆ, ಮಂಗಲ ಮತ್ತೆ ಕಣ್ಣೂರು ಗ್ರಾಮದವರಿಗೆ ಸಂತೋಷ ತಂದಿದೆ.

ಸಿದ್ಧೇಶ್ವರ ಬೆಟ್ಟದ ಸಿದ್ಧೇಶ್ವರ ಬೆಟ್ಟದ ದೇವಾಲಯ: ಕೊಳ್ಳೇಗಾಲಕ್ಕೆ ಸುಮಾರು ನಾಲ್ಕು ಮೈಲಿ ದೂರದಲ್ಲಿ **ಸಿದ್ಧೇಶ್ವರ ಬೆಟ್ಟದ** ಬೆಟ್ಟವಿದೆ. ಈ ಬೆಟ್ಟಕ್ಕೆ ಮಧುವನಹಳ್ಳಿ ಮತ್ತು ಹೊಂಡರಬಾಳು ಗ್ರಾಮಗಳಿವೆ. **ಸಿದ್ಧೇಶ್ವರ ಬೆಟ್ಟದ** ಹೊಂಡರುಬಾಳು ಗ್ರಾಮದ ಮುಖ್ಯ ದೇವರಾಗಿರುವುದರಿಂದ ಅಲ್ಲದೆ **ಸಿದ್ಧೇಶ್ವರನ** ಬೆಟ್ಟದ ಮೇಲೆ **ಸಿದ್ಧೇಶ್ವರ** ದೇವಾಲಯವಿರುವುದರಿಂದ ಪ್ರಾಚೀನ ಕಾಲದಿಂದಲೂ ಹೆಸರುವಾಸಿಯಾಗಿದೆ. ಈ ದೇವಾಲಯಕ್ಕೆ ಮತ್ತೆ ಬೆಟ್ಟಕ್ಕೂ ಅನೇಕ ಪುರಾಣ ಕಥೆಯನ್ನು ಸಹ ಸ್ಥಳೀಯರು ಹೇಳುತ್ತಾರೆ. ಬೆಟ್ಟದಲ್ಲಿ ಗುಹೆಗಳು ಅಧಿಕವಾಗಿವೆ. ಪೂಜಾಬಾಗಿಲು ವಿಶಾಲವಾಗಿದೆ ಮತ್ತು ಇಲ್ಲಿರುವ ಸ್ವರ್ಗದ ಬಾಗಿಲ ಬಗ್ಗೆ ಒಂದು ದಂತ ಕಥೆ ಇದೆ ದೇವಾಲಯದಲ್ಲಿ ಅಣ್ಣಮ್ಮತಾಯಿ **ಸಿದ್ಧೇಶ್ವರ**, ವೀರಭದ್ರರ ಶಿಲ್ಪಗಳಿವೆ. ಬೆಟ್ಟದ ಅಣ್ಣಮ್ಮತಾಯಿಯ

ಇಲ್ಲಿನ ಶಕ್ತಿದೇವತೆಯಾಗಿದ್ದಾರೆ. **ಸಿದ್ಧೇಶ್ವರ** ದೇವಾಲಯಕ್ಕಿಂತ ಇಲ್ಲಿಯ ದರ್ಶನ ಪ್ರಮುಖವಾಗಿದೆ, ಏಕೆಂದರೆ **ಸಿದ್ಧೇಶ್ವರ** ನ ಪರಿಸರವನ್ನು ನೋಡಿ ಆನಂದಿಸಿ ಕೆಲವು ಕುರುಹುಗಳನ್ನು ಕಂಡು ವಿಸ್ಮಯಗೊಳ್ಳುವ ಸಂದರ್ಭಗಳು ಸಹ ಉಂಟು **ಸಿದ್ಧೇಶ್ವರ** ನ ಬೆಟ್ಟಕ್ಕೆ ಏರುವ ಪ್ರಪ್ರಥಮದಲ್ಲಿ ಅನೇಕ ಗವಿಗಳಿವೆ ಈ ಗವಿಗಳು ಸುಮಾರು ಸಾಲು ಸಾಲಾಗಿದ್ದಲ್ಲಿ ಒಳಗೆ ಹೋಗುತ್ತಾ ಕತ್ತಲಿನಿಂದ ಆವರಿಸಿದ್ದಲ್ಲಿ ಅಲ್ಲಿಯ ಗವಿಯ ಕೊನೆ ಮುಟ್ಟಲು ಹೋಗಿ ಹೆದರಿ ಬಂದಿರುವ ಪ್ರಸಂಗಗಳು ಉಂಟು ಅಲ್ಲಿಂದ ಮೇಲೇರಿ ಹೋದರೆ ದಾರಿಯುದ್ದಕ್ಕು ಋಷಿಗಳು ತಪಸ್ಸು ಮಾಡುತ್ತಿದ್ದ ಗುಹೆಗಳನ್ನೇ ಕಣಬಹುದು. ಈ ಗುಹೆಗಳೆಲ್ಲವೂ ಕಲ್ಲಿನಿಂದಲೇ ಕೂಡಿವೆ. ಅಲ್ಲಿಂದ ಮೇಲೇರಿ ಹೋದರೆ ಒಂದು ಕುದುರೆಯಾಕಾರದ ಕಲ್ಲಿದೆ. ಆ ಕಲ್ಲಿನ ಕುದುರೆಗೆ ಶಿರವಿಲ್ಲ. ಏಕೆಂದು ಕೇಳಿದಾಗ ಸುಮಾರು ವರ್ಷಗಳ ಹಿಂದೆ **ಸಿದ್ಧೇಶ್ವರ** ನ ಬೆಟ್ಟದಲ್ಲಿ ಪಾಂಡವರು ವಾಸಿಸುತ್ತಿದ್ದರಂತೆ. ಒಂದು ದಿನ ಕುಂತಿಯು ತನ್ನ ಐವರು ಮಕ್ಕಳು ಭಿಕ್ಷೆ ಮಾಡಿ ತಂದ ಧಾನ್ಯಗಳನ್ನು ಬಿಸಿಲಿಗೆ ಒಣಗಿಸಲು ಹಾಕುತ್ತಿದ್ದಾಗ ಒಂದು ಕುದುರೆಯು ದಿನ ನಿತ್ಯ ಎಲ್ಲಾ ಧಾನ್ಯಗಳನ್ನು ತಿಂದು ಹೋಗುತ್ತಿರಲು ಒಂದು ದಿನ ಕುದುರೆಯನ್ನು ಮರೆಯಾಗಿ ಕಾಯ್ದು ನೋಡಲು ಪ್ರತಿದಿನದಂತೆ ಆದಿನವೂ ಕುದುರೆಯು ಬಂದು ಭಿಕ್ಷೆಯ ಧಾನ್ಯವನ್ನು ತಿನ್ನುತ್ತಿರಲು ಕುಂತಿಯು ಮರುದಿನ ಅರ್ಜುನನಿಗೆ ವಿಷಯವನ್ನು ತಿಳಿಸಿದಾಗ ಅರ್ಜುನನು ತನ್ನ ಹರಿತವಾದ ಖಡ್ಗದಿಂದ ಆ ಕುದುರೆಯ ಶಿರವನ್ನು ಕಡಿದನು ಶಿರಸ್ಸು ಗಾಜನೂರಿನಲ್ಲಿ ಬೀಳಲು ಆ ಊರಿನಲ್ಲಿ ಪ್ರತಿದಿನ ಕುದುರೆಯ ಮುಖವನ್ನು ಪೂಜಿಸುತ್ತಿದ್ದರಂತೆ. ಈ ರೀತಿಯ ಕಲ್ಲಿನಕಥೆ ಕೂಡ ಇದೆ.

ದೇವಸ್ಥಾನದಿಂದ ಸ್ವಲ್ಪ ಬಲಭಾಗಕ್ಕೆ ಹೋದರೆ ಅಲ್ಲಿ ಐದು ದೊಡ್ಡ ದೊಡ್ಡ ಬಂಡೆಗಳು ಇವೆ. ಈ ದೊಡ್ಡ ಬಂಡೆಗಳು ಹಿಂದೆ ಕುಂತಿಯು ಅಟವಾಡುತ್ತಿದ್ದ ಚಿಕ್ಕ ಅಣಕಲ್ಲಾಗಿದ್ದವಂತೆ ಈ ಐದು ಕಲ್ಲುಗಳು ಈಗ ದೊಡ್ಡ ಬಂಡೆಗಳಾಗಿವೆ. ಈ ಬಂಡೆಗಳ ಹತ್ತಿರದಲ್ಲಿ ದೊಡ್ಡ ದೊಡ್ಡ ಬಂಡೆಗಳಿವೆ. ಈ ಕೆರೆಯ ಮಧ್ಯದಲ್ಲಿ ನಿತ್ಯನಿರಂತರವಾಗಿ ತುಂಬಿದ ನೀರಿದೆ. ಈ ನೀರು ಬೆಟ್ಟದ ಮೇಲೆ ಎಂತಹ ಬರಗಾಲ ಬಂದರೂ ಬತ್ತುವುದಿಲ್ಲ. ಇದುವರೆವಿಗೂ ಈ ಸ್ಥಳದಲ್ಲಿ ನೀರು ಬತ್ತಿದ ದಿನವನ್ನು ಯಾರು ಕಂಡಿಲ್ಲ, ಕುಂತಿಗೆ ನೀರಡಿಕೆಯಾಗಿದ್ದಾಗ ಭೀಮನಿಗೆ ನೀರನ್ನು ಹುಡುಕಿ ಎಲ್ಲಿಯೂ ನೀರು ಸಿಗದೆ ಕೊನೆಗೆ ನಿರಾಶೆಯಿಂದ ರೋಷಗೊಂಡು ತನ್ನ ಗಧೆಯಿಂದ ಅ ಬಂಡೆಗೆ ಅಪ್ಪಳಿಸಲು ಆ ಬಂಡೆಯಲ್ಲಿ ನೀರು ಉಕ್ಕಿತಂತೆ. ಅದ್ದರಿಂದಲೇ ಅದಕ್ಕೆ ಭೀಮನ ಕೊಳ ಎಂದು ಹೆಸರಾಗಿದೆ ಇದರಿಂದ ಸ್ವಲ್ಪ ಹಿಂದಕ್ಕೆ ಹೋದಂತೆ ಅಲ್ಲಿ ಒಂದು ಬೃಹದಾಕಾರದ ಬಂಡೆಯೊಂದು ಕಾಮನ ಬಿಲ್ಲಿನಾಕಾರದಲ್ಲಿ ನಿಂತಿದೆ. ಈ ಬೃಹದಾಕಾರದ ಬಂಡೆಯ ತಳಭಾಗವು ವಿಶಾಲವಾದ ವಿಶ್ರಾಂತಿ ಪಡೆಯುವ ಸ್ಥಳದಂತಿದೆ. ಈ ಸ್ಥಳಕ್ಕೆ ಭೀಮನ ಹಜಾರ ಎಂದು

ಹೆಸರಾಗಿದೆ. ಈ ರೀತಿ ಅನೇಕ ಕುರುಹುಗಳನ್ನು ನಾವು ಗಮನಿಸಿದಾಗ ಈ ಸಿದ್ಧೇಶ್ವರ ಬೆಟ್ಟದಲ್ಲಿ ಹಿಂದೆ ಪಾಂಡವರು ವಾಸವಾಗಿದ್ದರೇ ಎಂಬುದು ಐತಿಹ್ಯ. ಆದರೆ ಬೆಟ್ಟದ ಮಡಿಲಲ್ಲಿರುವ ಊರಿನ ಹೆಸರು ಹಿಂದೆ ಪಾಂಡವರ ಬಾಳು ಎಂದು ಕರೆಯುತ್ತಿದ್ದು, ಅ ಊರಿನಲ್ಲಿ ಕೆಲವು ಕಲ್ಲು ಹೊಡೆಯುವ ವಡ್ಡರು ಹೆಚ್ಚಾಗಿ ಕಂಡುಬರುತ್ತಾರೆ. ವಡ್ಡರಿಗೆ ಪಾಂಡವರ ಬಾಳು ಎಂದು ಉಚ್ಚರಿಸಲು ಬಾರದೆ ವಂಡರಬಾಳು ಎಂದು ಕರೆದರು ಎಂಬ ವಾಡಿಕೆ ಕೂಡ ಇದೆ. ಅದರೆ ವಾಸ್ತು ರಚನೆ ನೋಟಕ್ಕಿಂತ ಸ್ಥಳ ಪುರಾಣಕ್ಕೆ ಪೂರಕವಾಗಿ ಚಾರಿತ್ರಿಕ ಆಧಾರಗಳು ಇಲ್ಲಿಯ ಬೆಟ್ಟದಲ್ಲಿದ್ದು ಆ ಊರಿಗೆ ಈ ಹೆಸರು ಬಂದಿದೆ ಎಂದೂ ಸಹ ಹೇಳಬಹುದು.[24]

ಶ್ರೀ ತಗುರುದೇವಿ ಮಾರಮ್ಮ ಹೊಸದೇವಸ್ಥಾನದ ಕಟ್ಟಡದ ವಿನ್ಯಾಸ: ಪ್ರತಿಯೊಂದು ಗ್ರಾಮಕ್ಕೂ ಗ್ರಾಮದೇವತೆ ಇದ್ದೇ ಇರುತ್ತದೆ ಅದೇ ರೀತಿ ನಮ್ಮ ಊರಿಗೂ ಶ್ರೀ ತಗುರು ಮಾರಮ್ಮ ಎಂದು ಮಾರಿದೇವತೆ ಇದ್ದಾಳೆ ಇವಳ ಹಬ್ಬವನ್ನು ಮಾರ್ಚ್ ತಿಂಗಳಲ್ಲಿ ಮಾಡುತ್ತಾರೆ ಹಬ್ಬದದಿನ ಹಲವಾರು ಕಾರ್ಯಕ್ರಮಗಳು ಇರುತ್ತದೆ ಹಾಗೇ ಅದ್ಭುತ ಹಾಗೂ ಪವಾಡಗಳು ನಡೆಯುತ್ತದೆ ನೋಡುಗರು ಬಾಯಿ ಮೇಲೆ ಬೆರಳಿಡುವಂತಹ ತಲೆ ಮೇಲೆ ಕಾಯಿ ಹೊಡೆಯುವ್ವದು, ಬಾಯಿಗೆ ಬೀಗ ಹಾಕಿಕೊಳ್ಳುವುದು ಇನ್ನೂ ಮುಂತಾದ ಸಾಂಸ್ಕೃತಿಕ ಚಟುವಟಿಕೆಗಳು ನಡೆಯುತ್ತದೆ.

ಈ ಮಾರಮ್ಮನ ದೇವಸ್ಥಾನದ ಕಟ್ಟಡವು ಸುಮಾರು 550 ವರ್ಷಗಳ ಹಿಂದಿನದ್ದು (ಚಿತ್ರ ಸಂಖ್ಯೆ 18) ಹಾಗಿದ್ದು ಅಲ್ಲಲ್ಲಿ ಬಿರುಕು ಕಾಣಿಸಿಕೊಂಡಿತ್ತು ಇದನ್ನು ಕಂಡ ಗ್ರಾಮದ ಜನತೆ ಇದನ್ನು ದುರಸ್ಥಿ ಮಾಡುವ ಬದಲು ಹೊಸಕಟ್ಟಡವನ್ನು (ಚಿತ್ರ ಸಂಖ್ಯೆ 19) ನಿರ್ಮಿಸಲು ತೀರ್ಮಾನಿಸಿ ಸರ್ಕಾರಕ್ಕೆ ಅರ್ಜಿ ಸಲ್ಲಿಸಿದ್ದರು ಈ ಜವಾಬ್ದಾರಿಯನ್ನು ಬಿ. ಪುಟ್ಟಮಾದಯ್ಯನವರು, ಚಿನ್ನಸ್ವಾಮಿಗೌಡರು, ನಂಜುಂಡಪ್ಪನವರು, ಕಾಂಗ್ರೆಸ್ ಪಕ್ಷದ ಮುಖಂಡ ನಾಗರಾಜಮೂರ್ತಿಯವರು, ಊರಿನ ಯಜಮಾನರುಗಳು ಗ್ರಾಮದ ಜನತೆ ಸಹಕಾರ ಹಾಗೂ ಸಹಾಯ ದೇವತೆಯ ಭಕ್ತರ ಸಹಾಯದಿಂದ ಸೆಪ್ಟೆಂಬರ್ 24–1998ರಂದು ಹಳೆಯ ದೇವಸ್ಥಾನವನ್ನು ಕೆಡವಲು ಕ್ರೈನ್ ತರಿಸಿ ದೇವಾಲಯವನ್ನು ಬೀಳಿಸಲಾಯಿತು. ಆದರೆ ಗರ್ಭಗುಡಿಯಲ್ಲಿ ದೇವರನ್ನು ಉಳಿದ ಎಲ್ಲಾ ಗೋಡೆಗಳನ್ನು ಕೆಡವಲಾಯಿತು. ನಂತರ ಅಂದೇ ಹೊಸ ದೇವಸ್ಥಾನದ ಅಡಿಪಾಯ ತೆಗೆಸಲಾಯಿತು. ಕಟ್ಟಡ ನಿರ್ಮಾಣದ ಜವಾಬ್ದಾರಿಯನ್ನು ಟಗರಪುರ ಗ್ರಾಮಪಂಚಾಯಿತಿಯ ಉಪಾಧ್ಯಕ್ಷರಾದ ಜಯರಾಜು, ತಾಯರೆಗೌಡ ರವರಿಗೆ ವಹಿಸಲಾಯಿತು. ಹಿಂದೇ ಇದ್ದ ದೇವಸ್ಥಾನದ ಅಳತೆಗೆ ಸ್ವಲ್ಪ ಹೆಚ್ಚಿನ ಅಳತೆಯಲ್ಲಿ ದೇವಸ್ಥಾನ ನಿರ್ಮಾಣ ಮಾಡಲಾಗಿದೆ. ಕಟ್ಟಡದ ಅಡಿಪಾಯದ ವಿವರ ಸುತ್ತಲೂ ಕಮಾನು ಸೇರಿಸಿ ಈ

ದೇವಸ್ಥಾನದ ಕಟ್ಟಡದ ಅಳತೆ ಸುಮಾರು 10 ಚದುರ ಅಡಿ ಇದೆ. ಕಾಮನನ್ನು ಬಿಟ್ಟರೆ ಸುಮಾರು 7-5 ಚದುರ ಅಡಿ ಬರುತ್ತದೆ ಇದರಲ್ಲಿ ಗರ್ಭಗುಡಿ 12x11.5 ಅಡಿ ಇದೆ ಮಧ್ಯ ಹಾಲು 18 1/2x26 1/2 ಅಡಿ ಉದ್ದವಿದೆ. ಅದೇ ರೀತಿ 9x9.25 ಅಡಿ ಉದ್ದದ ಮಂಟಪ ಇದೆ.

ಈ ಕಟ್ಟಡ ಅಡಿಪಾಯವನ್ನು ಸುಮಾರು 7 ಅಡಿ ಆಳದಿಂದ ಹಾಕಲಾಗಿದ್ದು ಕೆಳಗಡೆ ಪಾಯದ ಅಗಲವು 3.5 ಅಡಿ ಅಗಲವಿದ್ದು ಭೂಮಿಯ ಸಮಕ್ಕೆ ಅದು 2.5 ಅಡಿಗೆ ದಿಂಡು ನಿಲ್ಲಿಸಲಾಗಿದೆ ಇದರ ಮೇಲೆ ಬಂದು ಸುತ್ತ ಕಾಂಕ್ರಿಟ್ ಹಾಕಲಾಗಿದೆ ಭೂಮಿಯ ಮೇಲೆ ಕೆತ್ತನೆ ಕಲ್ಲಿನಿಂದ 3 ಸುತ್ತು ಕಟ್ಟಡ ಮಾಡಲಾಗಿದೆ ನಂತರ ಇದರ ಮೇಲೆಯೂ ಸರಳ ಕಾಂಕ್ರೆಟ್ ಹಾಕಲಾಗಿದೆ.

ಸುಮಾರು 4,500 ಸಾವಿರ ಕೆತ್ತನೆ ಕಲ್ಲಿನಿಂದ ಹಾಗೂ 400 ಮೂಲೆ ಬಾಂಡುಗಳಿಂದ ಕಟ್ಟಡ ಕೆಲಸ ಪ್ರಾರಂಭವಾಯಿತು. ಕಲ್ಲಿನ ಕೆತ್ತನೆ ಮಾಡಿಸಿಕೊಟ್ಟಿರುತ್ತಾರೆ ದಿನಕ್ಕೆ ಒಂದೇ ಸುತ್ತಿನಂತೆ ಕೆಲಸ ನಡೆಯುತಿತ್ತು ಇಲ್ಲಿಯೂ ಸಹ ಹೊರಕ್ಕೆ ಕಾಣದಂತೆ 13ನೇ ಸುತ್ತಿನ ಒಳಗೆ ಬಂದು ಸುತ್ತ ಸರಳ ಕಾಂಕ್ರಿಟ್ ಹಾಕಲಾಗಿದೆ. ಈ ದೇವಸ್ಥಾನಕ್ಕೆ ಒಟ್ಟು 21 ಸುತ್ತು ಕಲ್ಲಿನಿಂದ ಗೋಡೆಗಳನ್ನು ನಿರ್ಮಿಸಿದ್ದು ಇದು ಸುಮಾರು 9 1/2 ಅಡಿ ಎತ್ತರದ ಕೈಪಿಡಿ ಇದೆ ಕೈಪಿಡಿಯ ಮೇಲೆ ಮೂಲೆ ಮೂಲೆಗಳಲ್ಲಿಯೂ ಸಿಂಹಗಳ ಗಾರೆ ಶಿಲ್ಪಗಳಿವೆ ಹಾಗೂ ಮುಂದೆ ದೇವಾಲಯದ ಮೇಲ್ಭಾಗದಲ್ಲಿ ಕೋಷ್ಠಗುಡಿಗಳಿದ್ದು ಅಲ್ಲಿ ಗಾರೆ ಶಿಲ್ಪವನ್ನು ಕೆತ್ತಲಾಗಿದೆ.

ವಿಗ್ರಹಗಳ ವಿವರ: – ದೇವಸ್ಥಾನದ ಮೇಲಿನ ಭಾಗದಲ್ಲಿ ಒಟ್ಟು 4 ವಿಗ್ರಹಗಳ ಗೂಡು ಇದ್ದು ಬಾಯಿ ಮಾತ್ರ ತೆರೆದಂತೆ ಇದೆ. ದೇವಸ್ಥಾನದ ಮುಂದೆ ಅಂದರೆ ಮಂಟಪದ ಮೇಲೆ ಗ್ರಾಮದೇವತೆಯಾದ ಮಾರಮ್ಮನ ಗಾರೆ ಶಿಲ್ಪವಿದೆ ಮಂಟಪ ಬಲಕ್ಕೆ ಗಂಡ, ಎಡಕ್ಕೆ 5 ತಲೆ ಸರ್ಪದ ಮೇಲೆ ಮಲಗಿರುವ ವಿಷ್ಣುವಿನ ವಿಗ್ರಹವಿದೆ. ಹಾಗೇ ದೇವಸ್ಥಾನದ ಬಲಕ್ಕೆ ನಟರಾಜನ ಹಾಗೂ ಭಕ್ತಮಾರ್ಕಂಡೆಯನ್ನು ಶಿವನ ಲಿಂಗವನ್ನು ತಬ್ಬಿಕೊಂಡಿರುವ ಯಮರಾಜನನ್ನು ಅವನಿಗೆ ಪ್ರಾಣಕ್ಕೆ ಸೂಲ ಹಾಕಿರುವ ಹಾಗೂ ನಟರಾಜನ ಪ್ರತೇಕ್ಷನಾದ ಸನ್ನಿವೇಶವನ್ನು ವಿಗ್ರಹರೂಪದಲ್ಲಿ ಮಾಡಲಾಗಿದೆ. ಹಾಗೆಯೇ ಎಡಕ್ಕೆ ಚಾಮುಂಡೇಶ್ವರಿಯ ಶಿಲ್ಪವನ್ನು ಬಿಡಿಸಲಾಗಿದೆ. ಗರ್ಭಗುಡಿಯ ಒಳಿಗೆ ಶ್ರೀ ಮಾರಮ್ಮನ ವಿಗ್ರಹವು ಕಂಡುಬರುತ್ತದೆ ಇದೆ ಮೂಲತಃ ಮರದಿಂದ ಮಾಡಿದ ಶಿಲ್ಪವಾಗಿದ್ದು ಇದರ ಮೇಲೆ ಬೆಳ್ಳಿಯ ಮುಖವನ್ನು ಮಾಸಿಸಲಾಗಿದೆ ವಾಸ್ತುಶಿಲ್ಪ ಕಲೆಯ ದೃಷ್ಠಿಯಿಂದ ಅಷ್ಟೇನು ಪ್ರಾಮುಖ್ಯತೆ ಹೊಂದದೆ ಇದ್ದರೂ ಕೂಡ ಸರಳ ದೇವಾಲಯವಾಗಿ ನಿರ್ಮಾಣಗೊಂಡಿದೆ.

ಪ್ರಾಚೀನ ಕಾಲದಿಂದಲೂ ಬ್ರಾಹ್ಮಣರು "ನಹೀ ಜ್ಞಾನೇನಸದೃಶಂ" ಎಂಬ ಅಂಶವನ್ನು ಹೊಂದಿದ್ದರೂ ಹಾಗೂ ದೇವಾಲಯಗಳಲ್ಲಿ ದೇವತೆಗಳನ್ನು ಪೂಜಿಸುವ ಪರಿಪಾಠವನ್ನು ಹೊಂದಿದ್ದರು ಅದರ ಸಂಸ್ಕೃತಿಗೆ ಪ್ರಧಾನವಾದ ಪ್ರಾಚೀನ ಭಾರತದಲ್ಲಿ ಅದರಲ್ಲೂ ಕರ್ನಾಟಕದ ದಕ್ಷಿಣದ ಕೊನೆಯ ಬಾಗವಾದ ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ ತಾಲ್ಲೂಕಿನ ತಗರಪುರ ಗ್ರಾಮದಲ್ಲಿರುವ ಬ್ರಾಹ್ಮಣ ಗೋವಿಂದರವರು. "ನಹೀಜ್ಞಾನೇನ ಸದೃಶೋ" ಎಂಬ ಅಂಶವನ್ನು ಹೊಂದಿದ್ದರೂ ಕೂಡ ಇದರ ಜೊತೆ ಜೊತೆಗೆ ಗ್ರಾಮದಲ್ಲಿರುವ ಗ್ರಾಮದೇವತೆಯನ್ನು ಪೂಜಿಸುವುದರಲ್ಲಿಯೂ ಬಹುಮುಖ್ಯವಾದ ಅಂಶವನ್ನು ಪರಿಪಾಠವನ್ನು ಮಾನ್ಯ ಗೋವಿಂದಪ್ಪರವರು ಹೊಂದಿದ್ದಾರೆ. ಕ್ರಿ.ಶ. 1415ನೇ ಶತಮಾನದಲ್ಲಿ ನಿರ್ಮಿಸಲ್ಪಟ್ಟ ದೇವಾಲಯವನ್ನು ಮತ್ತೆ ಪುನರ್‌ನಿರ್ಮಾಣವಾಗಿದ್ದರೂ ಕೂಡ ಮಾನ್ಯ ಗೋವಿಂದಪ್ಪರವರು ಮಾರಿ ದೇವಾಲಯದ ಮೇಲ್ಬಾಗದಲ್ಲಿ ವಿಮಾನವನ್ನು (ಗೋಪುರ) ನಿರ್ಮಿಸಲು ಸ್ವತಃ ಕೊಡುಗೆ ಅವಿಸ್ಮರಣೀಯವಾದದ್ದು ನಮ್ಮ ನಾಡಿನ ಜಾತಿಗಳ ಮೂಲದ ಬಗ್ಗೆ ಶೋಧನೆ ಮಾಡಿದಾಗ ಬ್ರಾಹ್ಮಣರು, ದೇವಾಲಯಗಳಲ್ಲಿ ಪೂಜಿಸಿಕೊಂಡು ಹೋಗುವುದು ಅವರ ಮೂಲ ಕರ್ತವ್ಯವಾಗಿತ್ತು ಈ ಹಿನ್ನೆಲೆಯನ್ನು ನೋಡಿದಾಗ ಅನೇಕ ರಾಜ–ಮಹಾರಾಜರುಗಳು ದೇವಾಲಯಗಳನ್ನು ನಿರ್ಮಿಸಿ ಅದನ್ನು ಬ್ರಾಹ್ಮಣರಿಗೆ ದಾನವಾಗಿ ಕೊಟ್ಟು ಅವರಿಂದ ಪೂಜೆ ಪುರಸ್ಕಾರ ಹಾಗೂ ವಿದ್ಯಾಭ್ಯಾಸವನ್ನು ಹೇಳಿ ಕೊಡಲು ಮಾತ್ರ ಸೀಮಿತವಾಗಿದ್ದರೆಂದು ಇತಿಹಾಸ ಪುಟಗಳಲ್ಲಿ ಕಾಣುತ್ತವೆ.

ದಕ್ಷಿಣ ಭಾರತದಲ್ಲಿ ಸಂಘ ಸಾಹಿತ್ಯ ಕೇಂದ್ರದ ಪ್ರಾಚೀನ ಭಾರತೀಯರ ಸಾಹಿತ್ಯ ಮತ್ತು ಜ್ಞಾನಾರ್ಜನೆಯ ಪ್ರಯತ್ನಗಳ ಬಗ್ಗೆ ಸಾಕಷ್ಟು ಮಹಿತಿಯನ್ನೊದಗಿಸುತ್ತದೆ. ಕ್ರಿ.ಶ. 4 ರಿಂದ 10ನೇ ಶತಮಾನದ ಮಧ್ಯದಲ್ಲಿ ಭಾರತದ ನಾನಾ ಭಾಗಗಳಲ್ಲಿ ಅನೇಕ ವಿದ್ಯಾಕೇಂದ್ರಗಳಿದ್ದವು. ಇವುಗಳಲ್ಲಿ ಉಜ್ಜಯಿನಿ, ಪಾಟಲೀಪುತ್ರ, ಕಣರೆ, ಮಧುರೆ, ಬಳ್ಳಿಗಾಮಿ, ವಿಕ್ರಮಶೀಲ ಮತ್ತು ನಳಂದ ಇನ್ನೂ ಮುಂತಾದವು ಅಂದಿನ ಕಾಲದಲ್ಲಿ ಉಚ್ಛ್ರಾಯ ಮಟ್ಟದಲ್ಲಿದ್ದವು. ಇವುಗಳಲ್ಲೆಲ್ಲಾ ನಳಂದವು ಕ್ರಿ.ಶ. 13ನೇ ಶತಮಾನದ ಅಂತ್ಯದವರೆಗೂ ಅತ್ಯಂತ ಪ್ರಭಾವಶಾಲಿಯಾದ ಹಾಗೂ ಪ್ರಖ್ಯಾತವಾದ ವಿದ್ಯಾಕೇಂದ್ರವಾಗಿತ್ತು. ಇವುಗಳನ್ನು ನೋಡಿದಾಗ ಬ್ರಾಹ್ಮಣರು ವಿಶೇಷವಾಗಿ ಪೂಜೆ ಪುರಸ್ಕಾರ ವಿದ್ಯೆಕಲಿಸುವುದು ಕಂಡುಬರುತ್ತದೆ. ಆದರೆ ದೇವಾಲಯಗಳನ್ನು ನಿರ್ಮಿಸುವುದು ಬಹುವಿರಳವೆಂದೂ ಹೇಳಬಹುದು. ಈ ಹಿನ್ನೆಲೆಯಿಂದ ತಗರಪುರದ ಗೋವಿಂದಪ್ಪರವರ ಕೊಡುಗೆ ಇತಿಹಾಸ ಪುಟಗಳಲ್ಲಿ ಎಂದೂ ಮರೆಯುವಂತೆ ಇಲ್ಲ. ಮಾನ್ಯ ಗೋವಿಂದಪ್ಪರವರು ಈ ಮಾರಿಗುಡಿಯ ಮೇಲ್ಭಾಗದ ನಿರ್ಮಾಣವನ್ನು ಸ್ವತಃ ಕೊಡುಗೆಯಾಗಿ ನಿರ್ಮಿಸಿರುವುದು

ಸುಂದರವಾಗಿ ನಿರ್ಮಿಸಿ ಅಲ್ಲಲ್ಲಿ ಬಿದ್ದಿದ್ದ ಅನೇಕ ಬಿಡಿ ಶಿಲ್ಪಿಗಳನ್ನು ಒಂದೇ ವೇದಿಕೆಯಲ್ಲಿಟ್ಟು ಮುಂದೆ ಕನ್ನಡಿ ಹಿಡಿದಂತೆ ಮಾಡಿಸಿದ್ದಾರೆ ತಗರಪುರಗ್ರಾಮದಲ್ಲಿ ಅವರ ಒಂದು ಸಾಧನೆಯನ್ನು ಹಾಗೂ ಸೇವೆಯನ್ನು ಪ್ರತಿಯೊಬ್ಬರು ಮೆಚ್ಚುವಂತೆ ಮಾಡಿದ್ದಾರೆಂದು ಹೇಳಬಹುದು ಹಾಗೂ ಕಾಣಬಹುದಾಗಿದೆ ಸುಮಾರು 600 ವರ್ಷಗಳ ಹಿಂದೆ ನಿರ್ಮಾಣವಾಗಿದ್ದ ಈ ದೇವಾಲಯಕ್ಕೆ ತಗರಪುರಮೋಳೆ, ಕಜ್ಜಿಹುಂಡಿ, ಶಿಲಕತಪುರ, ಇನ್ನೂ ಮುಂತಾದವರ ಕೊಡುಗೆಯಿಂದ ಹೊಸದಾಗಿ ಕೊಡುಗೆಯಿಂದ ವಿಮಾನ ಅಂದರೆ ವಿಜಯನಗರ ಅರಸರ ಶೈಲಿಯ ಕಲಾ ಪ್ರೌಢಿಮೆಯನ್ನು ಹೊಂದಿರುವ ಈ ಗೋಪುರವು ಸುಂದರವಾಗಿ ನಿರ್ಮಾಣವಾಗಿದ್ದು ಬಹುದೂರದಿಂದ ಈಗೋಪುರವು ದರ್ಶನಾರ್ಥಿಗಳನ್ನು ಸ್ಥಳೀಯರು ಹಾಗೂ ಸುತ್ತಮುತ್ತಲಿನ ಊರಿನವರು ಧಾವಿಸಿ ಬರುವಂತೆ ಮಾಡುತ್ತದೆ. ವಿಮಾನದ ಮೇಲ್ಭಾಗದಲ್ಲಿ ಸುಂದರ ಬಳ್ಳಿ ಸುರುಳಿ ಕೆತ್ತನೆ ಮತ್ತು ಸುತ್ತಲೂ ಇರುವ ಶಿಲ್ಪಗಳು, ಶಿಲ್ಪಕಲಾಗಳ ವೈಭವದ ಮೇರು ಕೃತಿಯನ್ನು ಕಂಡು ಯಾಂತ್ರಿಕರು ಆನಂದ ತುಂಬಿ ಮನಸ್ಸು ಮುಗ್ದಗೊಳ್ಳುತ್ತಿದೆ. ಇದರಿಂದ ಭಕ್ತರು ದೇವರದರ್ಶನ ದೂರದಿಂದಲೇ ನೋಡಿ ಪುನೀತರಾಗಲು ಗೋವಿಂದಪ್ಪರವರ ಕೊಡುಗೆ ಅಪಾರವಾಗಿದೆ ಇಂದಿನ ದಿನಗಳಲ್ಲಿ ಇಂತಹ ದೇವಾಲಯಗಳು ಒಂದೇ ಕಡೆ ಪೂಜೆ ಪುರಸ್ಕಾರ ನಡೆದರೆ ಮತ್ತೊಂದು ಕಡೆ ವಿದ್ಯೆ ಕಲಿಸುವ ಕೇಂದ್ರವಾಗಿತ್ತು. ಈವಾಗ ಕೆಲವು ಕ್ಷೇತ್ರಗಳನ್ನು ಬಿಟ್ಟರೆ ವಿದ್ಯಾರ್ಜನೆ ಇಂತಹ ಸ್ಥಳಗಳಲ್ಲಿ ಕಡಿಮೆಯಾಗಿದೆ. ಮುಂದಿನ ದಿನಗಳಲ್ಲಿ ಇದರ ಜೊತೆಗೆ ಬಡವಿದ್ಯಾರ್ಥಿಗಳಿಗೆ ಸಹಾಯವಾಗುವಂತಹ ಕಾರ್ಯವನ್ನು ರೂಪಿಸುವ ಕುರಿತು ಚಿಂತನೆ ನಡೆಸಿದ್ದಾರೆ.

ಪೂರ್ವ ಕಾಲದ ಮೂಲಭೂತ ಧಾರ್ಮಿಕ ನಂಬಿಕೆ ಮತ್ತು ಅನುಸರಣೆಗಳು ತಲಾ ತಲಾಂತರದಿಂದಲು ಮುಂದುವರಿದವು ಹಾಗೂ ಧಾರ್ಮಿಕ ಜೀವನದ ಎರಡು ಗಮನಾರ್ಹ ವೈಶಿಷ್ಟಗಳಾಗಿದ್ದ ಅನ್ಯಧರ್ಮಸಹಿಷ್ಣತೆ ಮತ್ತು ಮೂರ್ತಿ ಪೂಜೆಗಳು ಎಲ್ಲಾ ವಿಧದಿಂದಲೂ ಮುಂದುವರಿದವು ಅವರವರ ಒಲವಿಗನುಸಾರವಾಗಿ ರಾಜರುಗಳು ಶಿವನನ್ನು, ವಿಷ್ಣವನ್ನು, ಶಕ್ತಿ ಪ್ರಧಾನವಾದ ಶ್ರೀ ದೇವತೆಯನ್ನು ಆರಾಧಿಸುತ್ತಿದ್ದರು ಹಾಗೂ ಪ್ರಾಚೀನ ಕಾಲದಿಂದಲೂ ಭಾರತದಲ್ಲಿ ಕಾರ್ಮಿಕ ಮಹತ್ವವನ್ನು ಪಡೆಯಲು ದಾನಶೀಲರಾಗುವುದು ಹಾಗೂ ಪರಿಣಾಮಕಾರಿಯಾದ ಮತ್ತು ನಂಬಬಹುದಾದ ಮಾರ್ಗವೆಂಬ ತತ್ವದಿನ ಕಳೆದಂತೆ ಪ್ರಬಲಗೊಳ್ಳುತ್ತಿತ್ತು ದಾನ–ಧರ್ಮಗಳ ನಿರ್ಮೂಲನದ ಸಲುವಾಗಿ ಇಂತಹ ದಾರಿಯಲ್ಲಿ ಸಾಗುವಲ್ಲಿ ತಗರಪುರದ ಗೋವಿಂದಪ್ಪರವರು ಪ್ರಾಚೀನಕಾಲದ ರಾಜರುಗಳ ಮಾರ್ಗವನ್ನು ಅನುಸರಿಸಿದ್ದಾರೆ ಸಾರ್ವತಿಕವಾಗಿ ಅನೇಕ ದೃಷ್ಟಿಕೋನವನ್ನು ಅನುಸರಿಸಿ ಹೇಳುವುದಾದರೆ

ಗೋವಿಂದಪ್ಪರವರ ಮನಸ್ಸಿನಲ್ಲಿರುವುದು ಭೂಮಿಯಮೇಲೆ ಮಾನವನಾಗಿ ಹುಟ್ಟಿದ ಮೇಲೆ ಸ್ವರ್ಗ–ನರಕ, ಪಾಪ, ಪುಣ್ಯ ಮತ್ತು ಪುನರ್ಜನ್ಮಕ್ಕೆ ಸಂಬಂಧಿಸಿದ ಸಿದ್ಧಾಂತಗಳೂ ಸಾಮಾನ್ಯ ಜನರಿಗೆ ನಂಬಿಕೆಯಲ್ಲಿ ಆಳವಾಗಿ ಬೇರೂರಿ ಪೂಜಿಸಬೇಕೆಂದು ಇದರಿಂದ ಪ್ರತಿಯೊಬ್ಬ ಸಾಮಾನ್ಯ ವರ್ಗದ ಜನರಿಗೂ ಒಳ್ಳೆಯದಾಗಲಿ ಎಂಬ ಸಿದ್ದಾಂತ ಗೋವಿಂದಪ್ಪರವರ ಹೃದಯಂತರಾಳದಲ್ಲಿ ಅಡಕವಾಗಿ ಈ ಒಂದು ದೃಷ್ಟಿಯಿಂದ ಹಾಗೂ ತಾವು ಹುಟ್ಟಿದ ಊರಿನಲ್ಲಿ ತಮ್ಮ ಕೈಯಲ್ಲಾಗುವ ಒಂದು ಪ್ರಮುಖ ಕಾರ್ಯವನ್ನು ಸಾಧನೆಗೈದು ಇತಿಹಾಸ ಪುಟಗಳಲ್ಲಿ ಸ್ಥಿರವಾಗಿ ಉಳಿದು ಕೊಂಡವರಲ್ಲಿ ಮಾನ್ಯ ಬ್ರಾಹ್ಮಣವರ್ಗಕ್ಕೆ ಸೇರಿದ ಗೋವಿಂದಪ್ಪರವರು ಒಬ್ಬರಾಗಿದ್ದಾರೆ ಅವರಿಗೆ ಈ ಒಂದು ಕಾರ್ಯ ಸಣ್ಣ ಕಾರ್ಯವಾಗಿದೆ ಎಂದು ಗೋವಿಂದಪರ್ಪವರು ಹೇಳುತ್ತಾರೆ. ಆದರೆ ಯೋಚನೆ ಮಾಡುವುದಾದರೆ ಈ ಒಂದು ಕಾರ್ಯ ಸಾಧನೆ ಯುಗದಿಂದ ಯುಗಕ್ಕೆ ಮುಂದಿನ ಪರ್ವಕಾಲಕ್ಕೂ ಸಾಕ್ಷಿಯಾಗಿ ನಿಂತಿದೆ ಎಂದು ಹೇಳಬಹುದಾಗಿದೆ ಇಂತಹ ಕಾರ್ಯ ಆದಿಕಾಲದಿಂದಲೂ ಜಾರಿಯಲ್ಲಿತ್ತೆಂದು ಹೇಳಲಿಕ್ಕೆ ಸಾಕ್ಷಿಯಾಗಿ ಪ್ರತಿಯೊಂದು ಹಳ್ಳಿಯಲ್ಲಿ ನಿರ್ಮಾಣವಾಗಿರುವ ಕೆರೆ–ಕಟ್ಟೆ ದೇವಾಲಯಗಳು ಬಸದಿಗಳು ಹಾಗೂ ಅನೇಕ ಶಾಸನಾಧಾರಗಳಿಂದ ಕಂಡುಬರುತ್ತವೆ. ಈ ದಿಟ್ಟಿನಲ್ಲಿ ಸೂಕ್ಷ್ಮವಾಗಿ ಗಮನಿಸಿದಾಗ ಮಾನ್ಯ ಗೋವಿಂದಪ್ಪರವರ ಕೊಡುಗೆಯು ಸಹ ಸಾಕ್ಷಿಯಾಗಿ ನಿಂತಿದೆಂದು ಹೇಳಲಾಗಿದೆ.

ಶಿವನ ಸಮುದ್ರ: – ಶಿವನ ಸಮುದ್ರದ ಬಗ್ಗೆ ಅನೇಕ ದಾಖಲಾತಿಗಳು ದೊರೆಯುತ್ತವೆ ಕಾವೇರಿ ತೀರದ ಶಿವನಸಮುದ್ರ ಇಲ್ಲಿ ಶ್ರೀವೈಷ್ಣವ ಶೈವ ಮತ್ತು ಶಕ್ತಿ ಪ್ರಧಾನವಾದ ದೇವಾಲಯಗಳಿರುವುದು ಅಲ್ಲದೆ ಮುಸ್ಲಿಂರ ಪ್ರಾಚೀನ ದರ್ಗಾಕೂಡ ಇಲ್ಲಿದೆ. ಕೆಲವು ದೇವಾಲಯಗಳಿಗೆ ಶಿಲಾಶಾಸನಗಳ ವಿವರಣೆಯು ಕಂಡುಬರುತ್ತದೆ ಶಕ್ತಿ ದೇವತೆ ಶಿವನ ಸಮುದ್ದದ ಮಾರಮ್ಮ ಬಹಳ ಪ್ರಸಿದ್ಧಿಯಾಗಿದೆ. ಜನರು ಭಯ ಭಕ್ತಿಯಿಂದ ಇಲ್ಲಿಗೆ ಬಂದು ಹರಕೆ ಹೊತ್ತು ಹರಕೆ ತೀರಿಸುವ ವಾಡಿಕೆಯೂ ಕೂಡ ಇದೆ. ಇಲ್ಲಿನ ವೈಷ್ಣವ ದೇವಾಲಯ ವೆಂಕಟರಮಣಸ್ವಾಮಿ ದೇವಾಲಯ ಬಹಳ ವಿಶಾಲವಾದದ್ದು (ಚಿತ್ರ ಸಂಖ್ಯೆ 20) ಶಯನಭಂಗಿಯಲ್ಲಿರುವ ವಿಷ್ಣುವಿನ ಮೂರ್ತಿ ಬಹಳ ಸುಂದರವಾದ (ಚಿತ್ರ ಸಂಖ್ಯೆ 21) ಶಿಲ್ಪವಾಗಿದೆ.[25] ಇಲ್ಲಿರುವ ಮುಸಲ್ಮಾನರ ದರ್ಗಾ ಸುಂದರ ವನಸಿರಿಯ ಮಧ್ಯೆ ಭೋರ್ಗರೆದು ಧುಮ್ಮಿಕ್ಕುವ ಕಾವೇರಿ ತಟದಲ್ಲಿದೆ. ಶಿವನಸಮುದ್ರ ಚಾಮರಾಜನಗರ ಜಿಲ್ಲೆ ಕೊಳ್ಳೇಗಾಲ ತಾಲ್ಲೂಕಿನ ಒಂದು ಪುಟ್ಟಗ್ರಾಮ ಇದೊಂದು ಹಳ್ಳಿ ಒಂದು ಜಲಾಶಯ ಮತ್ತು ಜಲ ವಿದ್ಯುತ್ ಕೇಂದ್ರವೂ ಹೌದು ಕಾವೇರಿ ನದಿಯು ವಿಶಾಲವಾಗಿ ಮೈದುಂಬಿ ಹರಿಯುವ ಪ್ರದೇಶವಿದು

ಸುತ್ತಲೂ ಸುಂದರ ಬೆಟ್ಟಗಳು ಮತ್ತು ಗದ್ದೆ ಬಯಲುಗಳು ಅದರ ಮಧ್ಯೆ ಕಾವೇರಿಯ ಒಡಲು ಮೈಮನ ತುಂಬಿ ಬರುವ ಕಾವೇರಿ ಈ ಪ್ರದೇಶದಲ್ಲಿ ಸೃಷ್ಟಿಸಿರುವ ನಡುಗದ್ದೆಗಳು ಮತ್ತೆ ಜಲಪಾತಗಳು ಅತ್ಯದ್ಭುತ ಮತ್ತು ನಯನ ಮನೋಹರ. ಒಂದರ್ಥದಲ್ಲಿ ಶಿವನಸಮುದ್ರ ಮತ್ತೊಂದು ಹೆಸರು ಮದ್ಸರಂಗ. ಪ್ರಾಚೀನ ಹೆಸರು "ಹೆಗ್ಗೂರು" ಇದು ಕಾವೇರಿ ನದಿಯ ಎರಡನೇ ಬೃಹತ್ ದ್ವೀಪ. ಕಾವೇರಿ ನದಿಯು ಜಲಪಾತವಾಗಿ ಧುಮ್ಮಿಕ್ಕುವ ಈ ಸ್ಥಳದಲ್ಲಿ ಮೈಸೂರು ಮಹಾರಾಜರು (ಒಡೆಯರು) ಏಷ್ಯಾದಲ್ಲಿಯೇ ಪ್ರಥಮವೆನಿಸಿದ ಜಲವಿದ್ಯುತ್ ಸ್ಥಾವರ ಸ್ಥಾಪಿಸಿದರು. ಗಗನಚುಕ್ಕಿ-ಭರಚುಕ್ಕಿ ಜೋಡಿ ಜಲಪಾತಗಳು ಸೃಷ್ಟಿ ಸೊಬಗಿನ ಮೋಡಿ ಇದ್ದಂತೆ ಕರ್ನಾಟಕ ಸರ್ಕಾರದ ಹಳೆಯ ಜಲ ವಿದ್ಯುತ್‌ಸ್ಥಾವರ ಮತ್ತು ಇತ್ತೀಚಿನ ಖಾಸಗಿ ವಿದ್ಯುತ್ ಉತ್ಪಾದನಾ ಘಟಕಗಳು ಶಿವನಸಮುದ್ರ ಪ್ರವೇಶವನ್ನು ನದಿ-ನೀರು, ಜಲಪಾತ-ದ್ವೀಪ, ವಿದ್ಯುತ್-ಸಾಹಸ, ಪ್ರಕೃತಿ-ಸೌಂದರ್ಯ ಹಾಗೂ ವಾಸ್ತು-ಶಿಲ್ಪ ರಚನಾ ಶೈಲಿಯಲ್ಲಿಯೂ ಅತೀ ಪ್ರಮುಖವಾಗಿದೆ.

ಗಗನಚುಕ್ಕಿ: - ಗಗನದಿಂದಿಳಿದರೆ ಕಾವೇರಿ ಚುಕ್ಕಿಯಾಗಿ ಗಗನದಿಂದ ಧುಮ್ಮಿಕ್ಕುವವಳಂತೆ ಗೋಚರಿಸುವ ಕಾವೇರಿಯದು ದೊಡ್ಡ ಇತಿಹಾಸ. ಸುಮಾರು ನೂರು ಮೀಟರ್ ಆಳಕ್ಕೆ ಧುಮ್ಮಿಕ್ಕುವ ರಭಸ ಮತ್ತು ಭೋರ್ಗರೆತ ವರ್ಣಿಸಲು ಸಾಧ್ಯ ಶಿವನಸಮುದ್ರವನ್ನಾಳಿದ ಗಂಗರಾಜನ ಮಗ ನಂದಿರಾಜ ಯಾವುದೋ ಅಪರಾಧಕ್ಕಾಗಿ ಪತ್ನಿ ಸಮೇತ ಕುದುರೆಯನ್ನೇರಿ ಜಲಪಾತಕ್ಕೆ ಹಾರಿ ಪ್ರಾಣ ಬಿಟ್ಟನೆಂಬ ಪ್ರತೀತಿ ಇದೆ. ಮುಂದೆ ನಂದಿರಾಜನ ಮಗ ಇಮ್ಮಡಿಗಂಗರಾಜನ ಒಡೆಯ ಪಾಳೇಗಾರರಾಗಿದ್ದ ಇಬ್ಬರು ಅಳಿಯಂದಿರು ತಮ್ಮ ಹೆಂಡತಿಯರ ಅಹಂಕಾರ ಇಳಿಸಲು ಮಾವನ ಮೇಲೆ ಹನ್ನೆರಡು ವರ್ಷ ಯುದ್ಧ ಮಾಡಿದರು. ಯುದ್ದದಲ್ಲಿ ಮಾವ ಮಾಡಿದ ಪಶ್ಚಾತಾಪಕ್ಕೆ ಪತ್ನಿಯರ ಸಮೇತ ಗಗನಚುಕ್ಕಿ ಜಲ ಪಾತ್ರದಲ್ಲಿ ಬಿದ್ದು ಅಸುನೀಗಿದರೆಂದು ಇತಿಹಾಸವಿದೆ. ಗಗನಚುಕ್ಕಿಯ ದರ್ಗಾ ಪ್ರಸಿದ್ದ ಧಾರ್ಮಿಕ ಕೇಂದ್ರ ದೇಶದ ನಾನಾ ಭಾಗಗಳಿಂದ ಭಕ್ತರು ಆಗಮಿಸುವ ತೀರ್ಥಸ್ಥಳವೂ ಹೌದು.

ಭರಚುಕ್ಕಿ: - ಕಾವೇರಿಯು ಅತ್ಯಂತ ವಿಶಾಲವಾಗಿ ಕವಲುಕವಲಾಗಿ ಶರವೇಗದಲ್ಲಿ ಬಿರುಸು ಬಿರುಸಾಗಿ ರಭಸದಿಂದ ಧುಮ್ಮಿಕ್ಕುವ ದೃಶ್ಯವೇ ಭರಚುಕ್ಕಿ ಸುಮಾರು ಒಂದು ಕಿಲೋಮೀಟರ್ ಅಗಲವಾಗಿ ಮೈದಳೆದಿರುವ ಕಾವೇರಿಯು ಸುಮಾರು 75 ರಿಂದ 100 ಅಡಿ ವರೆಗೆ ಭೂಮಿಯಿಂದ ಭೂಮಿಗೆ ಧುಮ್ಮುಕ್ಕುವಳು ಜಲಪಾತದ ಭೋರ್ಗರೆತ "ನಭೋ ಲೋಕ" ಮಟ್ಟದ ಭಾಸವಾಗುತ್ತದೆ. ಜಲಪಾತದ ಸುತ್ತಲೂ ಬೆಟ್ಟಸಾಲು, ಜಲಪಾತದ ಮೇಲಿನ ಕ್ಯಾದೆಗುಡ್ಡ, ದಟ್ಟವಾದ ಜಾಗೇರಿ, ಅರಣ್ಯ ಪ್ರದೇಶ, ಜಲಪಾತದ ಸುತ್ತಲು ಹಸಿರು ರಾಗಿ ಗದ್ದೆ ಬಯಲುಗಳು

ತೆಂಗು, ಕೊಂಗು, ಬಾಳೆ, ಭತ್ತಗಳು ಮಳೆಗಾಲದ ದಿನಗಳೆಂದರೆ ಭರಚುಕ್ಕಿ ಮದುವಣಗಿತ್ತಿಯಂತೆ ಮೈದುಂಬಿ ಹರಿಯುತ್ತಾಳೆ. ಒಂದಲ್ಲಾ ಎರಡಲ್ಲಾ ಅನೇಕ ಪಾತ್ರಗಳು ಒಂದಕ್ಕಿಂತ ಒಂದು ಮನೋಹರ ಬ್ರಹ್ಮ ವಿಷ್ಣು, ಮಹೇಶ್ವರ, ಜೊತೆಗಿನ ಪ್ರಿಯಗಣಗಳಂತೆ ಮೂರು ಲೋಕಗಳನ್ನೇ ಸೃಷ್ಟಿಸುತ್ತವೆ. ಮಳೆಗಾಲದ ದಿನಗಳಲ್ಲಿ ಅಂದರೆ ಜುಲೈ–ಡಿಸೆಂಬರ್ ತಿಂಗಳಲ್ಲಿ ಅದರಲ್ಲೂ ಕೃಷ್ಣರಾಜಸಾಗರದಿಂದ ನೀರು ಹೊರಬಿಟ್ಟ ಸಂದರ್ಭಗಳಲ್ಲಿ ಜಲಪಾತದ ಪಾದದಲ್ಲಿ ಜಲಧಾರೆ ಮೈಯೊಡ್ಡಿ ಜಲಸಿಂಚನ ಪಡೆಯುವ ಪ್ರವಾಸಿಗರ ಆನಂದಕ್ಕೆ ಮಿತಿ ಇರಲಾರದು ತುಂಬಾ ಕಡಿದಾದ ಮತ್ತು ಭರದಿಂದ ಬೀಳುವ ಜಲಪಾತ ಪ್ರವಾಸಿಗರ ನೋಟವನ್ನು ಸದಾ ಎಚ್ಚರಿಸುತ್ತದೆ.

ಶಿವನಸಮುದ್ರದ ಶ್ರೀರಂಗನಾಥಸ್ವಾಮಿ ದೇವಾಲಯ ಶಿವನಸಮುದ್ರ: – ಈ ಕ್ಷೇತ್ರಕ್ಕೆ ಶಿಲಾಭೇದದ ಕ್ಷೇತ್ರ, ದಕ್ಷಿಣಕಾರಣ್ಯ ತಕ್ಷಕಾಶ್ರಮ–ಸಪ್ತಋಷಿಕ್ಷೇತ್ರ ಎಂಬ ಹಲವಾರು ಹೆಸರುಗಳಿವೆ. ಈ ಒಂದೊಂದು ಹೆಸರಿಗೂ ಪುರಾಣದ ಒಂದೊಂದು ಕಥಾಸಾರವನ್ನು ಗುರುತಿಸಲಾಗಿದೆ ಈ ದೇವಾಲಯ ಹೊಯ್ಸಳರ ಕಾಲದಲ್ಲಿ ನಿರ್ಮಿತವಾಗಿದೆ ಎಂಬುದಕ್ಕೆ ಸಾಕಷ್ಟು ಐತಿಹ್ಯಗಳು ಲಭ್ಯವಾಗಿವೆ. ಇಲ್ಲಿ ಶ್ರೀರಂಗನಾಥಮೂರ್ತಿಯು ಮಿಶ್ರಮಿಥುನ ಭಂಗಿಯಲ್ಲಿದೆ. ಇದರ ಪಾದದ ಬಳಿ ಕಾವೇರಿಯ ಚಿಕ್ಕ ಕಂಚು ವಿಗ್ರಹವೊಂದಿಗೆ ಈ ದೇವತೆಯ ಮೂರ್ತಿ ಚಿಕ್ಕದಾದರೂ ಅದರ ಮುಖ ನೋಡುವುದಕ್ಕೆ ತುಂಬಾ ಮನಮೋಹನಕಾರಿಯಾಗಿದೆ ಆದ್ದರಿಂದ ಜಗನ್ಮೋಹನ ರಂಗನಾಥ ಎಂದು ಕರೆಯುವುದು ವಾಡಿಕೆಯಾಗಿದೆ. ರಂಗತ್ರಯಗಳಲ್ಲಿ ಒಂದಾದ ಇದನ್ನು ಮಧ್ಯರಂಗ ಎಂದು ಕರೆಯುತ್ತಾರೆ.[26]

ಶ್ರೀರಂಗನಾಥಸ್ವಾಮಿ ದೇವಾಲಯವು ಪೂರ್ವಾಭಿಮುಖವಾಗಿದ್ದು ವಿಶಾಲವಾದ ದೇವಾಲಯ ಇದು ಗರ್ಭಗೃಹ, ಶುಕನಾಸಿ ಮತ್ತು ನವರಂಗವನ್ನು ಹೊಂದಿದೆ ಗರ್ಭಗೃಹದಲ್ಲಿ ವಿಷ್ಣುವು ಸರ್ಪದ ಮೇಲೆ ಮಲಗಿದ್ದು ಸುಂದರವಾಗಿದೆ. ಶುಕನಾಸ ಭಾಗವು ಸರಳವಾಗಿದೆ. ಹಾಗೆಯೇ ನವರಂಗವು ವಿಶಾಲವಾಗಿದೆ ನವರಂಗದಲ್ಲಿ ಉತ್ತರದಿಕ್ಕಿಗೆ ಪ್ರವೇಶದ್ವಾರವು ಕಂಡುಬರುತ್ತದೆ. ಮುಖಮಂಟಪದಲ್ಲಿ ನಾಲ್ಕು ಕಂಬಗಳಿವೆ ಈ ಕಂಬಗಳನ್ನು ನೋಡಿದರೆ ವಿಜಯನಗರ ಅರಸರ ಕಾಲದಲ್ಲಿ ದೇವಾಲಯ ಮುಂದುವರೆದಿರುವುದು ಕಂಡುಬರುತ್ತದೆ.

ದೇವಾಲಯದ ಅದಿಷ್ಠಾನವು ಮೂರು ಪಟ್ಟಿಕೆಗಳಿಂದ ಕೂಡಿದೆ. ಗರ್ಭಗೃಹದ ಮೇಲೆ ವಿಮಾನವಿದ್ದು ಇದು ದ್ರಾವಿಡ ಶೈಲಿಯನ್ನು ಹೊಂದಿರುತ್ತದೆ. ವಿಮಾನವು ಮೂರು ಅಂತಸ್ತುಗಳಿಂದ ಕೂಡಿದ್ದು ದ್ರಾವಿಡ ಮಾದರಿಯ ಚೋಳ ಶೈಲಿಯ ಅರೆಕಂಬಗಳನ್ನು ಸೇರಿಸಲಾಗಿದೆ. ಮೇಲ್ಭಾಗದಲ್ಲಿ ಶಿಖರವಿದೆ. ದೇವಾಲಯಗರ್ಭಗೃಹದ ಹೊರಭಾಗದಲ್ಲಿ ಮೂರು ದಿಕ್ಕಿಗೆ ಮೂರು ಉಬ್ಬು ಶಿಲ್ಪಗಳನ್ನು ಕೆತ್ತಲಾಗಿದೆ. ಅದರಲ್ಲಿ ವಿಶೇಷವಾಗಿ ದಕ್ಷಿಣ, ದಿಕ್ಕಿನ

ಹೊರಗೋಡೆಯ ಭಿತ್ತಿಯಲ್ಲಿ ನರ್ತನ ಮಾಡುತ್ತಿರುವ ಶ್ರೀಕೃಷ್ಣನ ಉಬ್ಬು ಶಿಲ್ಪ ಮನಮೋಹಕವಾಗಿದೆ. ಅಲ್ಲದೆ ದೇವಾಲಯದ ದಕ್ಷಿಣ ದಿಕ್ಕಿಗೆ ಒಂದು ಮಂಟಪವಿದ್ದು ಈ ಮಂಟಪದಲ್ಲಿ ತಲಕಾಡಿನ ಗಂಗರ ಕಾಲಕ್ಕೆ ಸೇರಿದ ಮಾದರಿಯಲ್ಲಿ ಅಲ್ಲದೆ ಚೋಳರ ಕಾಲಕ್ಕೆ ಸೇರಿದ ಕಂಬದ ಮೇಲ್ಭಾಗದ ಚಾಚುಪೀಠದ ಮಾದರಿಯ ಕಂಬಗಳನ್ನು ಕಾಣಬಹುದು. ಅಲ್ಲದೆ ದೇವಾಲಯದ ಸುತ್ತಲೂ ಪ್ರಕಾರ ಗೋಡೆ ಇದೆ.

ರಂಗನಾಥಸ್ವಾಮಿ ದೇವಾಲಯಕ್ಕೆ ಎದುರಾಗಿ ಬಲಪೀಠ. ನಂದಿಕಂಬ ಮತ್ತು ಗರುಡಗಂಭ ಇದೆ. ದೇವಾಲಯದ ಮುಂದೆ ಮಹಾದ್ವಾರ ಬಾಗಿಲು ಇದೆ. ಈ ಮಹಾದ್ವಾರ ಹೊಯ್ಸಳರ ಕಾಲ ಮತ್ತು ವಿಜಯನಗರ ಕಾಲಕ್ಕೆ ಸೇರಿದ ಮಾದರಿಯಲ್ಲಿ ಅರೆಕಂಬಗಳು ಮತ್ತು ಆಳವಿಲ್ಲದೆ ಕೋಷ್ಠಗಳನ್ನು ಮಾಡಲಾಗಿದೆ. ದ್ವಾರ ಮೇಲೆ ನಂದಿಯ ಗಾರೆ ಶಿಲ್ಪವನ್ನು ಇರಿಸಲಾಗಿದೆ ಇದು ವಿಶೇಷ ಎಂದು ಹೇಳಬಹುದು ಅಲ್ಲದೆ ಹೊರಭಾಗದಲ್ಲಿ ನಾಲ್ಕು ಕಂಬಗಳಿರುವ ಮೈಸೂರು ಒಡೆಯರ ಕಾಲಕ್ಕೆ ಸೇರಿದ ಒಂದು ಸುಂದರವಾದ ಮಂಟಪ ಇದೆ. ಈ ಮಂಟಪದ ಸ್ವಲ್ಪ ಹತ್ತಿರದಲ್ಲಿಯೇ ವಿಜಯನಗರ ಅರಸರ ಕಾಲಕ್ಕೆ ಸೇರಿದ ವೀರಾಂಜನೇಯನ ಶಿಲ್ಪ ಇದೆ.

ಶಿವನಸಮುದ್ರದ ಪ್ರಸನ್ನ ಮೀನಾಕ್ಷಿದೇವಾಲಯ: – ಶಿವನ ಸಮುದ್ರದಲ್ಲಿ ಪ್ರಸನ್ನ ಮೀನಾಕ್ಷಿ ಮತ್ತು ಸೋಮೇಶ್ವರ ದೇವಾಲಯಗಳು ಒಮದೇ ಕಡೆ ಕಂಡುಬರುತ್ತವೆ. ಪ್ರಸನ್ನ ಮೀನಾಕ್ಷಿ ದೇವಾಲಯವು ಪೂರ್ವಾಭಿಮುಖವಾಗಿದ್ದು ದ್ರಾವಿಡ ಶೈಲಿಯ ದೇವಾಲಯವಾಗಿದೆ. ಈ ದೇವಾಲಯದ ವಾಸ್ತು ರಚನೆ ನೋಡಿದರೆ ಸಂಪೂರ್ಣ ವಿಜಯನಗರ ಅರಸರ ಕಾಲದ ದೇವಾಲಯ ಎಂದು ಹೇಳಬಹುದು ಪ್ರಸನ್ನ ಮೀನಾಕ್ಷಿ ದೇವಾಲಯವು ತಳವಿನ್ಯಾಸದಲ್ಲಿ ಗರ್ಭಗೃಹ, ಶುಕನಾಸ, ನವರಂಗ ಮತ್ತು ಮುಖ ಮಂಟಪವನ್ನು ಹೊಂದಿದೆ ಗರ್ಭಗೃಹವು 8x8 ಅಡಿ ಚದುರ ಸುತ್ತಳತೆಯನ್ನು ಹೊಂದಿದೆ ಪೀಠದ ಮೇಲೆ ಮೀನಾಕ್ಷಿ ಶಿಲ್ಪವನ್ನು ಪ್ರತಿಸ್ಥಾಪಿಸಲಾಗಿದೆ. ಶುಕನಾಸವು ಪೂರ್ವಪಶ್ಚಿಮಾಭಿಮುಖವಾಗಿ 12 ಅಡಿ ಉದ್ದವನ್ನು ಉತ್ತರ–ದಕ್ಷಿಣಾಭಿಮುಖವಾಗಿ 10 ಅಡಿ ಅಗಲವನ್ನು ಹೊಂದಿದೆ ನವರಂಗವು 20x20 ಅಡಿ ಹೊಂದಿದೆ ಶುಕನಾಸಿಗೆ ಹೊಂದಿಕೊಂಡಂತೆ ನವರಂಗದ ದ್ವಾರದ ಇಕ್ಕೆಲಗಳಲ್ಲಿ ದ್ವಾರಪಾಲಕರ ಉಬ್ಬುಶಿಲ್ಪಗಳನ್ನು ಕಾಣಬಹುದು ಮಧ್ಯದಲ್ಲಿ ನಾಲ್ಕು ಕಂಬಗಳನ್ನೂ ಕಾಣಬಹುದಾಗಿದೆ. ಮುಖಮಂಟಪದಲ್ಲಿ ನಾಲ್ಕು ಕಂಬಗಳಿವೆ ಇವು ಸಹ ವಿಜಯನಗರ ಶೈಲಿಯ ಕಂಬಗಳ ಹೋಲಿಕೆಯನ್ನೇ ಕಾಣಬಹುದು. ದೇವಾಲಯವು ಇನ್‌ಸರಿತ ಮತ್ತು ಮುನ್‌ಸರಿತಗಳಿಂದ

ಕೂಡಿದ್ದು ಸುತ್ತಲು ವಿಜಯನಗರ ಶೈಲಿಯ ಅರೆಕಂಬ ಮತ್ತು ಕೋಷ್ಠಗಳನ್ನು ಕಾಣಬಹುದು. ದೇವಾಲಯ ಗರ್ಭಗೃಹದ ಮೇಲ್ಭಾಗದಲ್ಲಿ ದ್ರಾವಿಡ ಶೈಲಿಯ ವಿಮಾನವು ಸುಂದರವಾಗಿದೆ.

ಶಿವನಸಮುದ್ರದ ಸೋಮೇಶ್ವರ ದೇವಾಲಯ: – ಸೋಮೇಶ್ವರ ದೇವಾಲಯವು ಸಹ ಗ್ರಾನೈಟ್ ಕಲ್ಲಿನಿಂದ ಕಟಲ್ಪಟ್ಟಿದ್ದು ದ್ರಾವಿಡ ಶೈಲಿಯ ದೇವಾಲಯವಾಗಿದೆ. (ಚಿತ್ರ ಸಂಖ್ಯೆ 22) ಸೋಮೇಶ್ವರ ದೇವಾಲಯ ತಳವಿನ್ಯಾಸದಲ್ಲಿ ಗರ್ಭಗೃಹ, ಶುಕನಾಸಿ, ನವರಂಗ ಮತ್ತು ಮುಖ ಮಂಟಪವನ್ನು ಹೊಂದಿದೆ ಗರ್ಭಗೃಹದಲ್ಲಿ ಶಿವಲಿಂಗವನ್ನು ಪೀಠದ ಮೇಲೆ ಪ್ರತಿಷ್ಠಾಪಿಸಲಾಗಿದೆ. ಮೇಲ್ಭಾಗದಲ್ಲಿ ಭುವನೇಶ್ವರಿ ಇದೆ ಶುಕನಾಸಿ ಭಾಗದಲ್ಲಿ ನಂದಿಯ ಶಿಲ್ಪವನ್ನು ಇಡಲಾಗಿದೆ. ನವರಂಗದಲ್ಲಿ ನಾಲ್ಕು ಕಂಬಗಳಿವೆ. ಉತ್ತರ ದಿಕ್ಕಿಗೆ ಎರಡು ಕೋಷ್ಠಗಳಿವೆ. ಮುಖಮಂಟಪದಲ್ಲಿ ನಾಲ್ಕು ಕಂಬಗಳು ಕಂಡು ಬಂದು ಇವುಗಳನ್ನು ನೋಡಿದರೆ ನಂತರ ಕಾಲದ ಸೇರ್ಪಡೆ ಎಂದು ಹೇಳಬಹುದು. ಮೆಟ್ಟಿಲಗಳ ಇಕ್ಕೆಲಗಳಲ್ಲಿ ಆನೆ ಮುಖವಿರುವ ಕಲ್ಲು ಚಪ್ಪಡಿಗಳನ್ನು ಸೇರಿಸಲಾಗಿದೆ. ದೇವಾಲಯ ಗರ್ಭಗೃಹದ ಮೇಲ್ಭಾಗದಲ್ಲಿ ವಿಮಾನವಿದೆ. ದೇವಾಲಯಕ್ಕೆ ಹೊಂದಿಕೊಂಡಂತೆ ಗರ್ಭಗೃಹದ ದಕ್ಷಿಣ ದಿಕ್ಕಿಗೆ ಒಂದು ಗುಡಿಯಿದೆ. ಈ ಗುಡಿಯಲ್ಲಿ ತಲಕಾಡಿನ ಗಂಗರ ಕಾಲಕ್ಕೆ ಸೇರಿದ ಕಂಬಗಳಿವೆ. ವಾಸ್ತುರಚನೆ ನೋಡಿದರೆ ಸಂಪೂರ್ಣ ವಿಜಯನಗರ ಅರಸರ ಕಾಲದ ದೇವಾಲಯ ಎಂಧು ಹೇಳಬಹುದು ಪ್ರಸನ್ನ ಮೀನಾಕ್ಷಿ ದೇವಾಲಯವು ತಳವಿನ್ಯಾಸದಲ್ಲಿ ಗರ್ಭಗೃಹ, ಶುಕನಾಸ, ನವರಂಗ ಮತ್ತು ಮುಖ ಮಂಟಪವನ್ನು ಹೊಂದಿದೆ ಗರ್ಭಗೃಹವು 8x8 ಅಡಿ ಚದುರ ಸುತ್ತಳತೆಯನ್ನು ಹೊಂದಿದೆ. ಪೀಠದ ಮೇಲೆ ಮೀನಾಕ್ಷಿ ಶಿಲ್ಪವನ್ನು ಪ್ರತಿಸ್ಥಾಪಿಸಲಾಗಿದೆ ಶುಕನಾಸಿಯು ಪೂರ್ವ ಪಶ್ಚಿಮಾಭಿಮುಖವಾಗಿ 12 ಅಡಿ ಉದ್ದವನ್ನು ಉತ್ತರ–ದಕ್ಷಿಣಾಭಿಮುಖವಾಗಿ 10 ಅಡಿ ಅಗಲವನ್ನು ಹೊಂದಿದೆ ನವರಂಗವು 20x20 ಅಡಿ ಹೊಂದಿದೆ ಶುಕನಾಸಿಗೆ ಹೊಂದಿಕೊಂಡಂತೆ ನವರಂಗದ ದ್ವಾರದ ಇಕ್ಕೆಲಗಳಲ್ಲಿ ದ್ವಾರಪಾಲಕರ ಉಬ್ಬು ಶಿಲ್ಪಗಳನ್ನು ಕಾಣಬಹುದು ಮಧ್ಯದಲ್ಲಿ ನಾಲ್ಕು ಕಂಬಗಳನ್ನು ಕಾಣಬಹುದಾಗಿದೆ. ಮುಖಮಂಟಪದಲ್ಲಿ ನಾಲ್ಕು ಕಂಬಗಳಿವೆ ಇವು ಸಹ ವಿಜಯನಗರ ಶೈಲಿಯ ಕಂಬಗಳ ಹೋಲಿಕೆಯನ್ನೇ ಕಾಣಬಹುದು. ದೇವಾಲಯವು ಇನ್‌ಸರಿತ ಮತ್ತು ಮುನ್‌ಸರಿತಗಳಿಂದ ಕೂಡಿದ್ದು ಸುತ್ತಲೂ ವಿಜಯನಗರ ಶೈಲಿಯ ಅರಕಂಬ ಮತ್ತು ಕೋಷ್ಠಗಳನ್ನು ಕಾಣಬಹುದು. ದೇವಾಲಯ ಗರ್ಭಗೃಹದ ಮೇಲ್ಭಾಗದಲ್ಲಿ ದ್ರಾವಿಡ ಶೈಲಿಯ ವಿಮಾನವು ಸುಂದರವಾಗಿದೆ.

ಶಿವನಸಮುದ್ರದ ಸೋಮೇಶ್ವರ ದೇವಾಲಯ: ಸೋಮೇಶ್ವರ ದೇವಾಲಯವು ಸಹ ಗ್ರಾನೈಟ್ ಕಲ್ಲಿನಿಂದ ಕಟ್ಟಲ್ಪಟ್ಟಿದ್ದು ದ್ರಾವಿಡ ಶೈಲಿಯ ದೇವಾಲಯವಾಗಿದೆ. ಸೋಮೇಶ್ವರ ದೇವಾಲಯ

ತಳವಿನ್ಯಾಸದಲ್ಲಿ ಗರ್ಭಗೃಹ, ಶುಕನಾಸ, ನರವಂಗ ಮತ್ತು ಮುಖ ಮಂಟಪವನ್ನು ಹೊಂದಿದೆ ಗರ್ಭಗೃಹದಲ್ಲಿ ಶಿವಲಿಂಗವನ್ನು ಪೀಠದ ಮೇಲೆ ಪ್ರತಿಷ್ಠಾಪಿಸಲಾಗಿದೆ. ಮೇಲ್ಭಾಗದಲ್ಲಿ ಭುವನೇಶ್ವರಿ ಇದೆ ಶುಕನಾಸ ಭಾಗದಲ್ಲಿ ನಂದಿಯ ಶಿಲ್ಪವನ್ನು ಇಡಲಾಗಿದೆ. ನವರಂಗದಲ್ಲಿ ನಾಲ್ಕು ಕಂಬಗಳಿವೆ. ಉತ್ತರ ದಿಕ್ಕಿಗೆ ಎರಡು ಕೋಷ್ಠಗಳಿವೆ. ಮುಖ ಮಂಟಪದಲ್ಲಿ ನಾಲ್ಕು ಕಂಬಗಳು ಕಂಡು ಬಂದು ಇವುಗಳನ್ನು ನೋಡಿದರೆ ನಂತರ ಕಾಲದ ಸೇರ್ಪಡೆ ಎಂದು ಹೇಳಬಹುದು. ಮೆಟ್ಟಿಲುಗಳ ಇಕ್ಕೆಲಗಳಲ್ಲಿ ಆನೆಮುಖವಿರುವ ಕಲ್ಲು ಚಪ್ಪಡಿಗಳನ್ನು ಸೇರಿಸಲಾಗಿದೆ. ದೇವಾಲಯದ ಗರ್ಭಗೃಹದ ಮೇಲ್ಭಾಗದಲ್ಲಿ ವಿಮಾನವಿದೆ.

ದೇವಾಲಯಕ್ಕೆ ಹೊಂದಿಕೊಂಡಂತೆ ಗರ್ಭಗೃಹದ ದಕ್ಷಿಣ ದಿಕ್ಕಿಗೆ ಒಂದು ಗಡಿ ಇದೆ. ಈ ಗುಡಿಯಲ್ಲಿ ತಲಕಾಡಿನ ಗಂಗರ ಕಾಲಕ್ಕೆ ಸೇರಿದ ಕಂಬಗಳಿವೆ. ಗರ್ಭಗುಡಿಯಲ್ಲಿ ಚಂಡಿಕೇಶ್ವರ ಶಿಲ್ಪವಿದೆ. ಹಾಗೆಯೇ ಉತ್ತರ ದಿಕ್ಕಿಗೂ ಸಹ ಒಂದು ಗುಡಿಯಿದ್ದು ಈ ಗುಡಿಯಲ್ಲಿ ಭೈರವೇಶ್ವರ ಶಿಲ್ಪವನ್ನು ಇಡಲಾಗಿದೆ. ಈ ದೇವಾಲಯಗಳು ವಿಶಾಲವಾದ ಪ್ರಕಾರದಲ್ಲಿದ್ದು ಪೂರ್ವದಿಕ್ಕಿಗೆ ಪ್ರವೇಶದ್ವಾರವಿದೆ. ಹಾಗೆಯೇ ಪಶ್ಚಿಮ ದಿಕ್ಕಿಗೆ ಮುಖ್ಯ ಪ್ರವೇಶದ್ವಾರವಿದೆ. ಈ ದ್ವಾರವು ವಿಜಯನಗರ ಅರಸ ಕಾಲದಲ್ಲಿ ಆಗಿದೆ ಎಂದು ಹೇಳಬಹುದು. ಪ್ರವೇಶದ್ವಾರದ ನಿಲುವು ಕಂಬಗಳಲ್ಲಿ ವಿವಿಧ ಉಬ್ಬು ಶಿಲ್ಪಗಳ ಕೆತ್ತನೆ ಕಂಡುಬರುತ್ತದೆ. ಅಲ್ಲದೆ ನರ್ತನಭಂಗಿಯ ಸ್ತ್ರೀ ಉಬ್ಬು ಶಿಲ್ಪಗಳನ್ನು ಕಾಣಬಹುದಾಗಿದೆ. ಮುಖ್ಯ ಪ್ರವೇಶದ್ವಾರ ಮೇಲ್ಭಾಗದಲ್ಲಿ ಗಾರೆಯಿಂದ ಮಾಡಿದ ನಂದಿ ಶಿಲ್ಪವನ್ನು ಇಡಲಾಗಿದೆ.

ಶಿವನಸಮುದ್ರದ ಶ್ರೀ ಮಾರಮ್ಮನ ದೇವಾಲಯ: ಶಿವನ ಸಮುದ್ರದ ಒಡಲಿನೊಳಗಿನ ಮತ್ತೊಂದು ದೇವಾಲಯವೇಂದರೆ ಶಕ್ತಿ ಪ್ರಧಾನವಾದ ಶ್ರೀ ಮಾರಮ್ಮನ ದೇವಾಲಯ. (ಚಿತ್ರ ಸಂಖ್ಯೆ 23) ಇದಕ್ಕೆ ಶಿವನಸಮುದ್ರದ ಮಾರಮ್ಮ ಅಥವಾ ಶಿಂಷಾ ಮಾರಮ್ಮ ಎಂದೇ ಪ್ರಸಿದ್ಧವಾಗಿರುವ ದೇವಾಲಯವಾಗಿದೆ. ಈ ದೇವಾಲಯಕ್ಕೆ ನಾಡಿನ ಮೂಲೆ ಮೂಲೆಗಳಿಂದ ಜನರು ಆರಾಧನೆಗೆ ಬರುತ್ತಾರೆ. ಯಾವುದೇ ಶುಭಕಾರ್ಯ ಪ್ರಾರಂಭಕ್ಕೆ ಮುನ್ನ ಭಕ್ತರು ಮಾರಮ್ಮ ದೇವಿಗೆ ಹರಕೆ ತೀರಿಸುತ್ತಾರೆ ವರ್ಷಕ್ಕೊಮ್ಮೆ ತಿಂಗಳಲ್ಲಿ ಮಾರಮ್ಮ ದೇವಿಯ ಜಾತ್ರೆ ನಡೆಯುತ್ತದೆ. ಗರ್ಭಗೃಹದಲ್ಲಿ ಮಾರಮ್ಮ ಶಿಲ್ಪವನ್ನು ಪ್ರತಿಸ್ಥಾಪಿಸಲಾಗಿದೆ.

ಲೊಕ್ಕನಹಳ್ಳಿಯ ಈಶ್ವರ ದೇವಾಲಯ: ಈಶ್ವರ ದೇವಾಲಯವು ಲೊಕ್ಕನಹಳ್ಳಿಯಿಂದ ಸ್ವಲ್ಪ ದೂರ ಅಂದರೆ ಪಶ್ಚಿಮ ದಿಕ್ಕಿಗೆ ರಸ್ತೆಯಲ್ಲಿಯೇ ಇದೆ. ಇದು ಪ್ರಾಚೀನ ಕಾಲದ ದೇವಾಲಯ ಆದರೆ

ಈಗ ಸಂಪೂರ್ಣ ಹೊಸದಾಗಿ ನಿರ್ಮಾಣವಾಗಿದೆ. ಈ ಹಿನ್ನೆಲೆಯಿಂದ ಇದರ ಸಂಪೂರ್ಣ ವಾಸ್ತುರಚನಾ ನೋಟವನ್ನು ಕಳೆದು ಕೊಂಡಿದೆ ಮೂಲಗರ್ಭಗುಡಿಯಲ್ಲಿ ಶಿವಲಿಂಗವನ್ನು ಮಾತ್ರ ಇಡಲಾಗಿದೆ.

ಬೂದಿಪಡಗದ ಈಶ್ವರದೇವಾಲಯ: – ಬೂದಿ ಪಡಗ ಗ್ರಾಮದಿಂದ ದಕ್ಷಿಣ ದಿಕ್ಕಿಗೆ ಬೆಟ್ಟಗಳ ಸಾಲುಗಳ ತಳಭಾಗದಲ್ಲಿ ಪ್ರಾಚೀನ ಶಿವದೇವಾಲಯವಿದೆ. ಪ್ರಾಯಶಃ ಈ ದೇವಾಲಯವನ್ನು ನೋಡಿದರೆ ಯಾರ ಕಾಲದಲ್ಲಿ ಕಟ್ಟಲ್ಪಟಿದೆ ಎಂದು ಸಾಧ್ಯವಾಗಿಲ್ಲ ಬಹುಶ: ವಿಜಯನಗರ ಅರಸರ ಕೊನೆಯ ಹಂತದಲ್ಲಿ ಅಂದರೆ 16–17ನೇ ಶತಮಾನದಲ್ಲಿ ನಿರ್ಮಾಣವಾಗಿದೆ ಎಂದು ಹೇಳಬಹುದು. ಇಲ್ಲಿ ಗರ್ಭಗೃಹ ಶುಕನಾಸವನ್ನು ಹೊಂದಿದ್ದು ಗರ್ಭಗೃಹದಲ್ಲಿ ಶಿವಲಿಂಗವಿದೆ. ಈ ದೇವಾಲಯ ಪೂರ್ವಾಭಿಮುಖವಾಗಿದ್ದರೂ ದೇವಾಲಯದ ಪ್ರವೇಶದ್ವಾರ ಪಶ್ಚಿಮಾಭಿಮುಖವಾಗಿದ್ದು ಪ್ರವೇಶದ್ವಾರದ ಮೇಲ್ಭಾಗದಲ್ಲಿ ಗಾರೆಯ ನಂದಿ ಶಿಲ್ಪವಿದೆ.

ಶ್ರೀ ಮಹದೇಶ್ವರಸ್ವಾಮಿ ಮತ್ತು ಶ್ರೀ ವೀರಭದ್ರಸ್ವಾಮಿ ದೇವಾಲಯ, ಗಣಪತಿ ದೇವಾಲಯ ಕಾಮಗೆರೆ

ಕಾಮಗೆರೆಯಲ್ಲಿ ಊರಿನಿಂದ ಹೊರಗೆ ದಕ್ಷಿಣ ದಿಕ್ಕಿಗೆ ಹಾಲಳ್ಳದ ಶ್ರೀ ಮಹದೇಶ್ವರಸ್ವಾಮಿ ದೇವಾಲಯ, ಶ್ರೀ ವೀರಭದ್ರಸ್ವಾಮಿ ಮತ್ತು ಗಣಪತಿ ದೇವಾಲಯವಿದೆ. ಈ ದೇವಾಲಯಗಳು ಒಂದೆ ಸಮೂಹದಲ್ಲಿ ಪ್ರತ್ಯೇಕವಾದ ಮೂರು ಗರ್ಭಗುಡಿಗಳನ್ನು ಹೊಂದಿವೆ. ಶ್ರೀ ಮಹದೇಶ್ವರಸ್ವಾಮಿ , ವೀರಭದ್ರಸ್ವಾಮಿ ಮತ್ತು ಗಣಪತಿ ದೇವಾಲಯಗಳೆಂದು ಸ್ಥಳೀಯರು ಕರೆಯುತ್ತಾರೆ. ಈ ದೇವಾಲಯವು ಪಶ್ಚಿಮಾಭಿಮುಖವಾಗಿದ್ದು ದ್ರಾವಿಡ ಶೈಲಿಯ ದೇವಾಲಯವಾಗಿದೆ. (ಚಿತ್ರ ಸಂಖ್ಯೆ 24)

ಮೂಲಗರ್ಭಗುಡಿಯಲ್ಲಿ ಶಿವಲಿಂಗವಿದೆ, ದಕ್ಷಿಣ ದಿಕ್ಕಿನ ಗರ್ಭಗುಡಿಯಲ್ಲಿ ವೀರಭದ್ರಸ್ವಾಮಿ ಶಿಲ್ಪವಿದೆ. ಉತ್ತರ ದಿಕ್ಕಿಗೆ ಗಣಪತಿ ಶಿಲ್ಪವಿದೆ. ವಿಶೇಷವಾಗಿ ಶ್ರೀ ವೀರಭದ್ರನ ಶಿಲ್ಪ ಆರು ಅಡಿ ಎತ್ತರ ಹೊಂದಿದ್ದು ಚತುರ್ಭುಜವನ್ನು ಹೊಂದಿದೆ, ಅಲಂಕರಣೆ ದೃಷ್ಠಿಯಿಂದ ಸೊಗಸಾಗಿದೆ. ತಲೆಯ ಮೇಲೆ ಕೀರಿಟವಿದೆ, ಕರ್ಣಕುಂಡಲ, ಕೇಯೂರ, ಕಡಗ, ಕಂಠದಲ್ಲಿ ಮಣಿಸರ ನಾಲ್ಕು ಆಯುಧಗಳಿವೆ. ಮಧ್ಯದ ಗರ್ಭಗುಡಿಗೆ ಹೊಂದಿಕೊಂಡಂತೆ ಎದುರಿಗೆ ಒಂದು ನಂದಿ ಶಿಲ್ಪವನ್ನು ಇಡಲಾಗಿದೆ. ನವರಂಗದ ಮಧ್ಯದಲ್ಲಿ ನಾಲ್ಕು ಕಂಬಗಳಿವೆ. ವರಾಂಡವು ಕಂಡುಬಂದು ಇಲ್ಲಿ ನಾಲ್ಕು ಕಂಬಗಳನ್ನು ಸೇರಿಸಲಾಗಿದೆ. ಈ ದೇವಾಲಯದ ಗರ್ಭಗೃಹದ ಮೇಲೆ ದ್ರಾವಿಡ ಶೈಲಿಯ ವಿಮಾನವಿದೆ. ಮುಂಭಾಗದಲ್ಲಿ ಮೂರು ಕೋಷ್ಠಗುಡಿಗಳಿದ್ದು

ಮಧ್ಯದಲ್ಲಿ ಶಿವಪಾರ್ವತಿಯರ ಗಾರೆ ಶಿಲ್ಪ ದಕ್ಷಿಣ ದಿಕ್ಕಿನ ಕೋಷ್ಠಗುಡಿಯಲ್ಲಿ ಕುಮಾರ (ಮುರುಗ) ಉತ್ತರ ದಿಕ್ಕಿನ ಕೋಷ್ಠಗುಡಿಯಲ್ಲಿ ಗಣೇಶನ ಗಾರೆ ಶಿಲ್ಪಗಳಿವೆ. ಈ ದೇವಾಲಯದಲ್ಲಿ ಗರ್ಭಗುಡಿಗೆ ಹೊಂದಿಕೊಂಡಂತೆ ಉತ್ತರ ದಿಕ್ಕಿಗೆ ಮತ್ತು ದಕ್ಷಿಣ ದಿಕ್ಕಿಗೆ ಸೋಮಸೂತ್ರ ಅಥವಾ ಪ್ರನಾಳವಿದೆ. ದೇವಾಲಯದ ಮುಂದೆ ಒಂದು ಬಲಿಪೀಠವಿದ್ದು ಅದರ ಮುಂದೆ ಮಂಟಪವಿದೆ ಈ ಮಂಟಪಕ್ಕೆ ದ್ವಾರ ಮಂಟಪ ಎಂದು ಕರೆಯುತ್ತಾರೆ. (ಚಿತ್ರ ಸಂಖ್ಯೆ 25) ಈ ದ್ವಾರಮಂಟಪಕ್ಕೆ ಎಂಟು ಕಂಬಗಳನ್ನು ಸೇರಿಸಲಾಗಿದ್ದು ಕೆಲವೊಂದು ಕಂಬಗಳಲ್ಲಿ ಉಬ್ಬುಶಿಲ್ಪಗಳಿವೆ. ಈ ಉಬ್ಬುಶಿಲ್ಪಗಳಲ್ಲಿ ಗಣಪತಿ, ನವಿಲು, ಗರುಡ, ವೀರ ಸೇವಕ ಮೊದಲಾದ ಚಿತ್ರಗಳು ಮೂಡಿಬಂದಿವೆ. ಈ ದೇವಾಲಯದ ವಾಯುವ್ಯ ಮೂಲೆಗೆ ಒಂದು ಬಾವಿ ಇದೆ. ಇದು ಪ್ರಾಚೀನ ದೇವಾಲಯವಾಗಿದ್ದರೂ ಇತ್ತೀಚೆಗೆ ದುರಸ್ಥಿಗೊಳಿಸಿರುತ್ತಾರೆ. ಈ ದೇವಾಲಯದ ಸುತ್ತಲೂ ಪ್ರಾಕಾರ ಗೋಡೆಯಿದ್ದು ಈಗ ಸಂಪೂರ್ಣ ದುಸ್ಥಿತಿಯಲ್ಲಿದೆ. ಈ ದೇವಾಲಯಕ್ಕೆ ----- ಸುಮಾರು 30 ಅಡಿ ದೂರದಲ್ಲಿ ಸೂರ್ಯನ ಶಿಲ್ಪ (ಚಿತ್ರ ಸಂಖ್ಯೆ 26) ಇರುವುದು ಮುಂದೆ ಪ್ರಾಚೀನ ಕೆರೆ ಇದೆ. ಪ್ರಾಯಶಃ ಈ ದೇವಾಲಯವನ್ನು ಮೈಸೂರು ಒಡೆಯರ ಕಾಲದಲ್ಲಿ ಕಟ್ಟಿರಬೇಕೆಂದು ಹೇಳಬಹುದು ಏಕೆಂದರೆ ಒಡೆಯರ ಕಾಲಕ್ಕೆ ಸೇರಿದ ವಾಸ್ತು ಪರಂಪರೆಯನ್ನು ಈ ದೇವಾಲಯದಲ್ಲಿ ಕಾಣಬಹುದಾಗಿದೆ.

ದೊಡ್ಡಪಾದಪ್ಪ ದೇವಾಲಯ (ಗುಡಿ)

ಕೊಳ್ಳೇಗಾಲ ತಾಲ್ಲೂಕು ಕಾಮಗೆರೆಯಲ್ಲಿ ಊರಿನಿಂದ ಹೊರಗೆ ದಕ್ಷಿಣದಿಕ್ಕಿಗೆ ಅರ್ಧ ಕಿ.ಮೀ. ದೂರದಲ್ಲಿ ದೊಡ್ಡಪಾದಪ್ಪನ ದೇವಾಲಯವು ಉತ್ತರಾಭಿಮುಖವಾಗಿದೆ. ಪ್ರಾಯಶಃ ಈ ದೇವಾಲಯವು ಯಾರ ಕಾಲದಲ್ಲಿ ಕಟ್ಟಲ್ಪಟ್ಟಿದೆ ಎಂಬುದಕ್ಕೆ ಶಾಸನಾಧಾರಗಳಿಲ್ಲ, ಆದರೆ ವಿಜಯನಗರ ಅರಸ ಕಾಲಕ್ಕೆ ಸಂಬಂಧಿಸಿದಂತೆ ಎರಡು ಶಾಸನಗಳಿವೆ. ವಾಸ್ತುಶಿಲ್ಪವನ್ನು ಸೂಕ್ಷ್ಮವಾಗಿ ಗಮನಿಸಿದರೆ ಚೋಳರ ಲಕ್ಷಣಗಳನ್ನು ಗಮನಿಸಬಹುದು. ದೊಡ್ಡಪಾದಪ್ಪನ ದೇವಾಲಯವು ಈಗ ಸಂಪೂರ್ಣವಾಗಿ ದುಸ್ಥಿತಿಯಲ್ಲಿದೆ. ಮೂಲತಃ ಈ ದೊಡ್ಡಪಾದಪ್ಪನ ದೇವಾಲಯವು ಗರ್ಭಗುಡಿ, ಶುಕನಾಸಿ, ಅಂತರಾಳ, ನವರಂಗ, ದ್ವಾರಮಂಟಪ ಮತ್ತು ಮುಖಮಂಟಪಗಳನ್ನು ಕಾಣಬಹುದು. ಗರ್ಭಗೃಹವು 10X10 ಅಡಿ ಚದರ ಸುತ್ತಳತೆಯನ್ನು ಹೊಂದಿದ್ದು ಇಲ್ಲಿ ಯಾವುದೇ ಶಿಲ್ಪವಿಲ್ಲ. ನವರಂಗದಲ್ಲಿಯೂ ಕೂಡ ಶಿಲ್ಪವಿಲ್ಲ ಇದರ ಮುಂದೆ ಅಂತರಾಳವಿದೆ. ಅಂತರಾಳಕ್ಕೆ ಹೊಂದಿಕೊಂಡಂತೆ ನವರಂಗವು ವಿಶಾಲವಾಗಿದ್ದು ಮಧ್ಯದಲ್ಲಿ ಸುಂದರವಾದ ನಾಲ್ಕು ಕಂಬಗಳಿವೆ. ಈ ಕಂಬಗಳನ್ನು ನೋಡಿದರೆ ಚೋಳರ ಕಾಲದ ವಾಸ್ತುಲಕ್ಷಣಗಳನ್ನು ಕಾಣಬಹುದು. ನವರಂಗದ ಪೂರ್ವದಿಕ್ಕಿಗೆ ಒಂದು ಪ್ರವೇಶ ದ್ವಾರವಿದೆ.

ಒಳಭಾಗದಲ್ಲಿ ಇರುವ ನಾಲ್ಕು ಕಂಬಗಳಲ್ಲಿಯೂ ಪೀಠದಲ್ಲಿ ಸುಂದರವಾದ ನಾಣಭಂಗಿಯಲ್ಲಿ ಪ್ರದರ್ಶಿಸುತ್ತಿರುವ ಸ್ತ್ರೀಯರ ಉಬ್ಬುಶಿಲ್ಪಗಳಿವೆ. ಈ ಶಿಲ್ಪ ಶೈಲಿಯನ್ನು ನೋಡಿದರೆ ಹೊಯ್ಸಳರ ಶಿಲ್ಪಗಳನ್ನು ಮೀರಿಸುವಂತಹ ಕೆತ್ತನೆಯನ್ನು, ಅಲಂಕರಣೆಯನ್ನು ಕಾಣಬಹುದು. ನವರಂಗದ ಮುಂಭಾಗದ ದ್ವಾರದ ಇಕ್ಕೆಲಗಳಲ್ಲಿ ಗೋಡೆಯ ಭಿತ್ತಿಯಲ್ಲಿ ಉಬ್ಬುಶಿಲ್ಪಗಳಿವೆ. (ಚಿತ್ರ ಸಂಖ್ಯೆ 27) ಪೂರ್ವ ದಿಕ್ಕಿಗೆ ವೀರಭದ್ರ, ಉಮಾಮಹೇಶ್ವರ, (ಚಿತ್ರ ಸಂಖ್ಯೆ 28) ನರ್ತಕಿ ಮತ್ತು ಅರ್ಜುನನ ಉಬ್ಬುಶಿಲ್ಪಗಳಿವೆ. ಪಶ್ಚಿಮ ದಿಕ್ಕಿಗೆ ಶಿವ, ವೀರರ ಉಬ್ಬು ಶಿಲ್ಪಗಳಿವೆ. ಮುಖ್ಯ ಪ್ರವೇಶದ್ವಾರದ ಲಲಾಟಬಿಂಬದಲ್ಲಿ ಗಜಲಕ್ಷ್ಮಿಯ ಉಬ್ಬುಶಿಲ್ಪವಿದೆ. ದ್ವಾರಮಂಟಪದಲ್ಲಿ ಎರಡು ಕಂಬಗಳಿವೆ. ಈ ಕಂಬಗಳು ಮೈಸೂರು ಒಡೆಯರ ಕಾಲಕ್ಕೆ ಸೇರಿರುತ್ತವೆ. ಮೇಲ್ಭಾಗದಲ್ಲಿ ಭುವನೇಶ್ವರಿಯಿದೆ. ಇದರ ಮುಂದೆ ಮುಖಮಂಟಪವಿದೆ. ಈ ಮುಖಮಂಟಪ ನಾಲ್ಕು ಕಂಬಗಳನ್ನು ಹೊಂದಿದ್ದು ಮೂರು ಕಡೆಗೂ ಪ್ರವೇಶ ದ್ವಾರಗಳಿವೆ. ಈ ದೇವಾಲಯದ ಹೊರಭಾಗದ ಶುಕನಾಸಿ ಗರ್ಭಗೃಹ ಭಾಗಕ್ಕೆ ಹೊಂದಿಕೊಂಡಂತೆ ಭಿತ್ತಿಯ ಭಾಗದಲ್ಲಿ ಉಬ್ಬುಶಿಲ್ಪಗಳಿವೆ. ಒಂದೆರಡು ಕಡೆ ಕೋಷ್ಠಗಳನ್ನು ಕಾಣಬಹುದು. ದೇವಾಲಯದ ಮೇಲೆ ಇಟ್ಟಿಗೆ ಗಾರೆಯಿಂದ ನಿರ್ಮಿತವಾಗಿರುವ ವಿಮಾನವಿದ್ದು ಈಗ ಸಂಪೂರ್ಣ ದುಸ್ಥಿತಿ ಹೊಂದಿದೆ. ದೇವಾಲಯದ ಸುತ್ತಲೂ ಮುಳ್ಳು ಪೊದೆಗಳು ಹೇರಳವಾಗಿ ಬೆಳೆದು ಪರಿಸರವನ್ನು ಪಾಳು ಮಾಡಿವೆ.

ಬೂದುಬಾಳು ವೆಂಕಟರಮಣಸ್ವಾಮಿ ದೇವಾಲಯ

ಚಾಮರಾಜನಗರ ಜಿಲ್ಲೆಯ ಕೊಳ್ಳೆಗಾಲ ತಾಲ್ಲೂಕಿನಲ್ಲಿರುವ ಚಿಕ್ಕ ಗ್ರಾಮ ಬೂದಬಾಳು. ಈ ಪರಿಸರವನ್ನು ಗಮನಿಸಿದರೆ ಮಲೆನಾಡ ಸೀಮೆಯ ಚೆಲುವಿನ ಸುಂದರ ತೋರಣದಂತೆ ಕಂಗೊಳಿಸುವ ಮನೋಹರವಾದ ಪ್ರಕೃತಿ ದೇವಿಯು ಹಸುರಿನ ಅಲಂಕೃತವಾಗಿ ರಾರಾಜಿಸುವ ಪುಣ್ಯಧಾಮ, ಭಕ್ತಿ ಧರ್ಮಗಳ ತವರಾದ ಬೂದಬಾಳು ಚಿಕ್ಕ ಊರಾದಾರು ಚೊಕ್ಕ ಊರಾಗಿದೆ.

ಈ ಊರಿನಲ್ಲಿ ವೆಂಕಟರಮಣಸ್ವಾಮಿ ದೇವಾಲಯ ಪೂರ್ವಾಭಿಮುಖವಾಗಿದ್ದು ಗರ್ಭಗೃಹ ಮತ್ತು ನವರಂಗವನ್ನು ಹೊಂದಿದೆ. ಮುಂಭಾಗದಲ್ಲಿ ಮುಖಮಂಟಪವಿದೆ. ಗರ್ಭಗೃಹದಲ್ಲಿ ಪೀಠದ ಮೇಲೆ ವೆಂಕಟರಮಣಸ್ವಾಮಿಯ ಶಿಲ್ಪವಿದೆ. (ಚಿತ್ರ ಸಂಖ್ಯೆ 29) ಶಿಲ್ಪವು ಚತುರ್ಭುಜವನ್ನು ಹೊಂದಿದೆ. ಶಂಖ, ಚಕ್ರ ಅಭಯಹಸ್ತ ಮತ್ತು ಗದೆಯನ್ನು ಹೊಂದಿದೆ. ತಲೆಯ ಮೇಲೆ ಕಿರೀಟ ಕಿವಿಯಲ್ಲಿ ಕರ್ಣಕುಂಡಲ ಕತ್ತಿನಲ್ಲಿ ಸರಗಳು ಕಂಠಿಬಂಧ ಕೆಯೂರಗಳನ್ನು ಹೊಂದಿದೆ. ಗರ್ಭಗೃಹದ ದ್ವಾರದ ಲಲಾಟಬಿಂಬದಲ್ಲಿ ಗಜಲಕ್ಷ್ಮಿಯ ಉಬ್ಬುಶಿಲ್ಪವಿದೆ. ನವರಂಗದಲ್ಲಿ ನಾಲ್ಕು ಕಂಬಗಳಿದ್ದು ಮೇಲ್ಭಾಗದಲ್ಲಿ ಭುವನೇಶ್ವರಿ ಇದೆ. ಅದರ ಮುಂದೆ ಒಂದು ಗರುಡ ಕಂಬವಿದೆ. ಈ ಗರುಡಕಂಬದ ನಾಲ್ಕು ದಿಕ್ಕುಗಳಲ್ಲಿಯೂ

ಉಬ್ಬುಶಿಲ್ಪಗಳಿವೆ. ಪಶ್ಚಿಮ ದಿಕ್ಕಿಗೆ ಗರುಡ, ಉತ್ತರ ದಿಕ್ಕಿಗೆ ಚಕ್ರ, ದಕ್ಷಿಣ ದಿಕ್ಕೆಗೆ ಶಂಖ, ಪೂರ್ವ ದಿಕ್ಕಿಗೆ ವೀರಾಜಂನೇಯನ ಉಬ್ಬು ಶಿಲ್ಪಗಳಿವೆ. ದೇವಾಲಯದ ಗರ್ಭಗೃಹದ ಮೇಲೆ ವಿಮಾನವಿದೆ. ಈ ದೇವಾಲಯಕ್ಕೆ ಸುತ್ತಲೂ ಪ್ರಕಾರವಿದೆ. ಅಲ್ಲದೆ ಪ್ರವೇಶದ್ವಾರದ ಮೇಲೆ ಗಾರೆಯ ನಂದಿ ಶಿಲ್ಪ ಇದೆ. ಬೂದಬಾಳು ವೆಂಕಟರಮಣಸ್ವಾಮಿ ದೇವಾಲಯವು ಪ್ರಾಚೀನ ದೇವಾಲಯವಾಗಿದ್ದರೂ ಈಗ ಸಂಪೂರ್ಣವಾಗಿ ಹೊಸದಾಗಿ ನಿರ್ಮಿಸಲ್ಪಟ್ಟಿದೆ.

ದೊಡ್ಡಿಂದುವಾಡಿಯಲ್ಲಿ ದೇವಾಲಯಗಳ ವಾಸ್ತುಶಿಲ್ಪ

ಕೊಳ್ಳೇಗಾಲ ತಾಲ್ಲೂಕು ದೊಡ್ಡಿಂದುವಾಡಿಯಲ್ಲಿ ಪ್ರಾಚೀನ ಕಾಲದ ಹಲವಾರು ದೇವಾಲಯಗಳಿವೆ. ಮತ್ತು ಶಾಸನಗಳು ಕಂಡುಬರುತ್ತವೆ. ಆದರೆ ಇಲ್ಲಿಯ ತನಕ ಈ ಗ್ರಾಮದ ಬಗ್ಗೆ ಎಲ್ಲಿಯೂ ವರದಿಯಾಗಿಲ್ಲ ಈ ಊರಿನ ದೇವಾಲಯಗಳನ್ನು ಈ ಕೆಳಕಂಡಂತೆ ತಿಳಿಸಲಾಗಿದೆ.

ಲಕ್ಷ್ಮೀನರಸಿಂಹ ದೇವಾಲಯ: ದೊಡ್ಡಿಂದುವಾಡಿ ಗ್ರಾಮದ ಸರ್ಕಾರಿ ಶಾಲೆಯ ಆವರಣದಲ್ಲಿ ವಿಜಯನಗರದ ಅರಸರ ಕಾಲಕ್ಕೆ ಸೇರಿದ ಲಕ್ಷ್ಮೀನರಸಿಂಹಸ್ವಾಮಿ ದೇವಾಲಯವಿದೆ. ಈಗ ಈ ದೇವಾಲಯ ಸಂಪೂರ್ಣ ದುಸ್ಥಿತಿ ಹೊಂದಿದ್ದು ಇಲ್ಲಿ ಲಕ್ಷ್ಮಿನರಸಿಂಹಸ್ವಾಮಿ ಶಿಲ್ಪವಿದೆ. (ಚಿತ್ರ ಸಂಖ್ಯೆ 30) ಈ ಶಿಲ್ಪವು ಪ್ರಾಯಶಃ ವಿಜಯನಗರ ಅರಸರ ಕಾಲದ ಶಿಲ್ಪವೆಂದು ಹೇಳಬಹುದು. ನರಸಿಂಹನು ಕುಳಿತಿದ್ದು ಆತನ ತೊಡೆಯ ಮೇಲೆ ಲಕ್ಷ್ಮೀ ಕುಳಿತಿರುವುದು ಕಂಡುಬರುತ್ತದೆ. ಈ ಹಿನ್ನೆಲೆಯಿಂದ ಇದೊಂದು ಲಕ್ಷ್ಮೀನರಸಿಂಹಸ್ವಾಮಿ ದೇವಾಲಯ ಎಂದು ಕರೆಯಲಾಗಿದೆ ಇದರ ಹಣೆಯಲ್ಲಿ ತ್ರಿನಾಮವನ್ನು ಕೆತ್ತಲಾಗಿದೆ.

ಸಿದ್ಧಪ್ಪಾಜಿ ದೇವಾಲಯ: ಊರಿನಿಂದ ಹೊರಗೆ ಅಂದರೆ ವಾಯುವ್ಯದಿಕ್ಕಿಗೆ **ಸಿದ್ಧಪ್ಪಾಜಿ** ದೇವಾಲಯವಿದೆ. ಈ ಸ್ಥಳಕ್ಕೆ ಕೆರೆತೋಟ ಎಂದು ಈಗ ಕರೆಯುತ್ತಾರೆ. ಈ ಸ್ಥಳದಲ್ಲಿ ಕೆಲವು ಪ್ರಾಚೀನ ಕಾಲದ ಬಾವಿಗಳಿವೆ. ಈ ಹಿನ್ನೆಲೆಯಿಂದ ಒಂದು ಕಾಲದಲ್ಲಿ ಜನರು ವಾಸಿಸುತ್ತಿದ್ದರು ಎಂದು ಹೇಳಬಹುದು. ಅಲ್ಲದೆ **ಸಿದ್ಧಪ್ಪಾಜಿ** ದೇವಾಲಯದ ಆವರಣದಲ್ಲಿ ಪ್ರಾಚೀನ ಕಾಲದ ಶಿಲ್ಪಗಳಿವೆ ಅವುಗಳಲ್ಲಿ ಮಹಿಷಮರ್ಧಿನಿ ಶಿಲ್ಪ (ಚಿತ್ರ ಸಂಖ್ಯೆ 31) ಎರಡು ಕೈ ಗಳಿರುವ ಗಣಪತಿ ಶಿಲ್ಪ (ಚಿತ್ರ ಸಂಖ್ಯೆ 32) ಅಲ್ಲದೆ ಕೆಲವು ವೀರಗಲ್ಲುಗಳು ಅದರಲ್ಲಿಯೇ ಶಾಸನವು ಕಂಡುಬರುತ್ತದೆ. (ಚಿತ್ರ ಸಂಖ್ಯೆ 33) ಮಹಿಷಮರ್ಧಿನಿ ಶಿಲ್ಪದಲ್ಲಿ ತಮಿಳು ಲಿಪಿ ಇರುವುದು ಕಂಡುಬರುತ್ತದೆ. ಅಲ್ಲದೆ ಇದು ತಮಿಳು ಸಂಸ್ಕೃತಿಯನ್ನು ತಿಳಿಸುತ್ತದೆ. ಇದೇ ಸ್ಥಳದಲ್ಲಿ ಮಹಾಸತಿ ಕಲ್ಲುಗಳು ಸಹ ಕಂಡುಬರುತ್ತದೆ. ವಿಜಯನಗರ ಅರಸರ ಕಾಲದ ಒಂದು ವೀರಗಲ್ಲಿನಲ್ಲಿ ಆರತಿ ಬೆಳಗುತ್ತಿರುವ ದೀಪವನ್ನು ಸುಂದರವಾಗಿ ಕೆತ್ತಲಾಗಿದೆ. ಈ ವೀರಗಲ್ಲು 8 ಅಡಿ ಉದ್ದ, 3 ಅಡಿ

ಅಗಲವಿದೆ. ಮತ್ತು ಇಲ್ಲಿ ಹತ್ತು ತಲೆಯ ರಾವಣೇಶ್ವರ ಶಿಲ್ಪವೂ ಕಂಡುಬರುತ್ತದೆ. (ಚಿತ್ರ ಸಂಖ್ಯೆ 34) ಒಂದೇ ಕಡೆ 6 ವೀರಗಲ್ಲು ಚಪ್ಪಡಿ, 2 ಮಹಾಸತಿಕಲ್ಲು ಚಪ್ಪಡಿ ಕಲ್ಲುಗಳಿದ್ದು ಒಂದು ವೀರಗಲ್ಲು ವಿಶೇಷವಾಗಿದೆ.

ಕನಕಗಿರಿ ಕ್ಷೇತ್ರ: ದೊಡ್ಡಿಂದುವಾಡಿಯಲ್ಲಿ ಕನಕಗಿರಿ ಕ್ಷೇತ್ರವಿದೆ ಇಲ್ಲಿ ಈಶ್ವರ ದೇವಾಲಯ (ಚಿತ್ರ ಸಂಖ್ಯೆ 35) ಮತ್ತು ಮಾರಮ್ಮನ ದೇವಾಲಯಗಳಿವೆ. (ಚಿತ್ರ ಸಂಖ್ಯೆ 36) ವಾಸ್ತುಶಿಲ್ಪ ದೃಷ್ಟಿಯಿಂದ ನೋಡಿದರೆ ಇತ್ತೀಚಿನ ಕಾಲದ್ದು ಎಂದು ಹೇಳಬಹುದು. ಪ್ರಾಯಶಃ ಇವುಗಳು ಪ್ರಾಚೀನ ಕಾಲದವು ಆಗಿರಬಹುದು. ಆದರೆ ಇತ್ತೀಚಿನ ದಿನಗಳಲ್ಲಿ ಹೊಸದಾಗಿ ನಿರ್ಮಾಣಗೊಂಡಿದೆ. ದೇವಾಲಯವು ದುಸ್ಥಿತಿಯಲ್ಲಿದೆ ಪ್ರಾಯಶಃ ಈ ಸ್ಥಳವನ್ನು ನೋಡಿದರೆ ಜೈನರ ನೆಲೆಯಾಗಿತ್ತೆಂದು ಹೇಳಬಹುದು. ಆದರೆ ಶಿಲ್ಪಗಳು ಮಾತ್ರ ಕಂಡುಬರುವುದಿಲ್ಲ ಇವುಗಳನ್ನು ನೋಡಿದರೆ ಪ್ರಾಚೀನ ಪರಂಪರೆಯನ್ನು ಧೃಡಪಡಿಸುತ್ತದೆ.

ಮಹದೇಶ್ವರ ದೇವಾಲಯ (ಮಹದೇಶ್ವರ ಬೆಟ್ಟ): ಕೊಳ್ಳೆಗಾಲ ತಾಲ್ಲೂಕಿನಲ್ಲಿರುವ ಮಹದೇಶ್ವರ ಬೆಟ್ಟ ಪ್ರಸಿದ್ದ ಯಾತ್ರಾಸ್ಥಳವಾಗಿದೆ. (ಚಿತ್ರ ಸಂಖ್ಯೆ 37) ಕೊಳ್ಳೇಗಾಲದಿಂದ ಪೂರ್ವದಿಕ್ಕಿಗೆ ಸುಮಾರು 80 ಕಿ.ಮೀ ದೂರದಲ್ಲಿ ಈ ಬೆಟ್ಟವಿದೆ. ಈ ಬೆಟ್ಟಕ್ಕೆ ಹಲವಾರು ಹೆಸರುಗಳಿಂದ ಕರೆಯುತ್ತಾರೆ. ಮಹದೇಶ್ವರಗಿರಿ, ಮಲೈಮಹದೇಶ್ವರ, ಮಾದಪ್ಪನ ಬೆಟ್ಟ ಎಂದು ಕರೆಯುವ ವಾಡಿಕೆಯಿದೆ. ಕರ್ನಾಟಕ ಅಲ್ಲದೆ ತಮಿಳುನಾಡಿನ ಭಾಗದಿಂದಲೂ ಭಕ್ತರು ಬರುತ್ತಾರೆ, ಪುರಾಣದ ಪ್ರಕಾರವಾಗಿ ಈ ಒಂದು ಬೆಟ್ಟಕ್ಕೆ ಆನೆಮಲೆ, ಜೇನುಮಲೆ, ಕಾನುಮಲೆ, ಪಚ್ಚೆಮಲೆ, ಪದಳ್‌ಮಲೆ, ಪೊನ್ನಾಚಿಮಲೆ, ಕೊಂಗುಮಲೆ ಇನ್ನೂ ಮುಂತಾದ 77 ಮಲೆಗಳಿವೆ.

ಈ ಎಲ್ಲಾ ಹೆಸರುಗಳನ್ನು ಹೊಂದಿರುವ ಈ ಗಿರಿಧಾಮದಲ್ಲಿ ಮಹದೇಶ್ವರನ ದೇವಾಲಯವಿದೆ. ಈ ದೇವಾಲಯವು ಕ್ರಿ.ಶ.15–16ನೆಯ ಶತಮಾನದಲ್ಲಿ ಕಟ್ಟಿದೆ ಎಂದು ಹೇಳಬಹುದು. ಐತಿಹ್ಯ ಪ್ರಕಾರ ಮಹದೇಶ್ವರ ನಂಜನಗೂಡು ತಾಲ್ಲೂಕು ಸುತ್ತೂರಿನಲ್ಲಿದ್ದು ನಂತರ ಕೊಳ್ಳೇಗಾಲ ತಾಲ್ಲೂಕಿನ ಕುಂತೂರು ಮಠಕ್ಕೆ ಬಂದು ಮರಡಿಗುಡ್ಡದಲ್ಲಿ ಮಂಡಿವೂರಿ ಈ ಬೆಟ್ಟದಲ್ಲಿ ನೆಲೆಸಿದನೆಂದು ಪ್ರತೀತಿ ಸಹ ಇದೆ. ಮಹದೇಶ್ವರ ಬೆಟ್ಟದಲ್ಲಿ ಆಲಂಬಾಡಿ ಎಂಬ ಗ್ರಾಮವಿದೆ. ಇಲ್ಲಿಯೇ ಈ ದೇವಾಲಯವು ಸಹ ಇದೆ. ಐತಿಹ್ಯ ಪ್ರಕಾರ ಮಹದೇಶ್ವರ ಬೆಟ್ಟದಲ್ಲಿ ಮೂಲ ದೇವಾಲಯವನ್ನು ಜುಂಜೇಗೌಡ ಎಂಬುವವನು ಕಟ್ಟಿಸಿದನೆಂದು ತಿಳಿದುಬರುತ್ತದೆ. ಈ ದೇವಾಲಯವು ಪೂರ್ವಾಭಿಮುಖವಾಗಿದ್ದು ಗರ್ಭಗುಡಿ, ಶುಕನಾಸಿ, ನವರಂಗಗಳನ್ನು ಒಳಗೊಂಡಿದೆ. ಮೂಲಗರ್ಭಗುಡಿಯಲ್ಲಿ ಶಿವಲಿಂಗವಿದೆ. ಈ ಲಿಂಗಕ್ಕೆ ಮಹದೇಶ್ವರನ ಮುಖವನನು ಸೇರಿಸಲಾಗಿದೆ. ಶುಕನಾಸಿಯಲ್ಲಿ ನಂದಿ ಶಿಲ್ಪವನ್ನು ಕಾಣಬಹುದಾಗಿದೆ. ನವರಂಗಕ್ಕೆ

ಹಲವಾರು ಕಂಬಗಳನ್ನು ಸೇರಿಸಲಾಗಿದೆ. ಈ ಕಂಬಗಳನ್ನು ನೋಡಿದರೆ ವಿಜಯನಗರ ಅರಸರ ಕಾಲಕ್ಕೆ ಸೇರಿಸಬಹುದಾಗಿದೆ. ದೇವಾಲಯದ ಗರ್ಭಗುಡಿಯ ಮೇಲೆ ದ್ರಾವಿಡ ಶೈಲಿಯ ವಿಮಾನವಿದೆ ದೇವಾಲಯದ ಸುತ್ತಲೂ ಪಾಳಿ ಮಂಟಪಗಳಿವೆ. ಮುಖಮಂಪಟದಲ್ಲಿ ವೀರಭದ್ರನ ಶಿಲ್ಪ ಇದೆ. ಪ್ರಾಕಾರಗೋಡೆಯಿದ್ದು ದಕ್ಷಿಣ ದಿಕ್ಕಿನ ಪ್ರಕಾರಗೋಡೆಗೆ ಸೇರಿದಂತೆ ಗಾರೆಯಿಂದ ಮಾಡಿದ ಬಸವಣ್ಣನ ಶಿಲ್ಪವನ್ನು ಇಡಲಾಗಿದೆ. ಇತ್ತೀಚೆಗೆ ಮಹಾದ್ವಾರಕ್ಕೆ ಮಹಾಗೋಪುರವನ್ನು ಮಾಡಲಾಗಿದೆ. ಮಹಾಗೋಪುರ ಶೈವ-ವೈಷ್ಣವ ಪಂಥದ ಗಾರೆ ಶಿಲ್ಪಗಳನ್ನು ಸಹ ಕಾಣಬಹುದು. ಒಟ್ಟಾರೆ ಶ್ರೀ ಮಹದೇಶ್ವರ ದೇವಾಲಯ ಶಿಲ್ಪ ರಚನಾ ನೋಟದಲ್ಲಿ ಪ್ರಾಮುಖ್ಯತೆ ಪಡೆಯದೆ ಹೋದಿದ್ದರೂ ಸಹ ವಾಸ್ತು ರಚನಾ ನೋಟದಲ್ಲಿ ಚೆನ್ನಾಗಿ ಮೂಡಿಬಂದಿದೆ ಎಂದು ಹೇಳಬಹುದಾಗಿದೆ.

ಅಡಿ ಟಿಪ್ಪಣಿಗಳು

---

[1] ಜಿಲ್ಲಾವಾರು ವರದಿಗಳ ಹಿನ್ನೆಲೆಯಿಂದ ಬರೆಯಲಾಗಿದೆ.

[2] ಮೈಸೂರು ಸ್ಟೇಟ್ ಗೆಸೆಟಿಯರ್, ಕೊಳ್ಳೇಗಾಲ.

[3] ಎ.ಕ.ಸಂ.4 ಶಾಸನಸಂಖ್ಯೆ (2) ಕೊಳ್ಳೇಗಾಲ

[4] ಎ.ಕ.ಸಂ.4 ಶಾಸನಸಂಖ್ಯೆ 4 ಮತ್ತು 5 ಕೊಳ್ಳೇಗಾಲ

[5] ಮೈಸೂರು ಸ್ಟೇಟ್ ಗೆಜೆಟಿಯರ್, ಕೊಳ್ಳೇಗಾಲ.

[6] ಹಲವಾರು ದಿನ ಪತ್ರಿಕೆಗಳ ವರದಿಯಲ್ಲಿದೆ.

[7] ಮೈಸೂರು ಸ್ಟೇಟ್ ಗೆಜೆಟಿಯರ್, ಕೊಳ್ಳೇಗಾಲ.

[8] ಕರ್ನಾಟಕ ಭಿತ್ತಿಚಿತ್ರ ಪರಂಪರೆ ಗ್ರಂಥ

[9] ಎ.ಕ.ಸಂ.4 ಶಾಸನ ಸಂಖ್ಯೆ – 93

[10] ಎ.ಕ.ಸಂ.4 ಶಾಸನ ಸಂಖ್ಯೆ – 103 ಕೊಳ್ಳೇಗಾಲ

[11] ಎ.ಕ.ಸಂ.4. ಶಾಸನ ಸಂಖ್ಯೆ 101 ಕೋಳ್ಳೇಗಾಲ

[12] ಕನ್ನಡ ವಿಷಯ ವಿಶ್ವಕೋಶ ಮೈಸೂರು ವಿ.ವಿ.ಮೈಸೂರು – 1979

[13] ಎ.ಕ.ಸಂ 4, ಶಾಸನ ಸಂಖ್ಯೆ 101 – ಕೊಳ್ಳೇಗಾಲ

[14] ಎ.ಕ.ಸಂ 4. ಶಾಸನ ಸಂಖ್ಯೆ 103 – ಕೊಳ್ಳೇಗಾಲ

[15] ಎ.ಕ.ಸಂ 4. ಶಾಸನ ಸಂಖ್ಯೆ 109 – ಕೊಳ್ಳೇಗಾಲ

[16] ಎ.ಕ.ಸಂ 4. ಶಾಸನ ಸಂಖ್ಯೆ 112 – ಕೊಳ್ಳೇಗಾಲ

[17] ಮುಡಿಗುಂಡದ ಎಲ್ಲಾ ಶಾಸನಗಳ ಆಧಾರಗಳಿಂದ ಹೇಳಲಾಗಿದೆ.

[18] ಎ.ಕ.ಸಂ 4. ಶಾಸನ ಸಂಖ್ಯೆ 101 – ಕೊಳ್ಳೇಗಾಲ

[19] ಶ್ರೀ ಕಾವೇರಿ ವೈಭವ ಎದುರ್ಕಳ ಶಂಕರ ನಾರಾಯಣಭಟ್ ಭಾಗಮಂಡಲ ಕೊಡಗು, ಶ್ರೀರಾಮಕೃಷ್ಣ ಪ್ರಕಾಶನ ಕೊಡಗು – 1978.

[20] ಎ.ಕ.ಸಂ 4. ಶಾಸನ ಸಂಖ್ಯೆ 30 – ಕೊಳ್ಳೇಗಾಲ

[21] ಕರ್ನಾಟಕ ಸ್ಟೇಟ್ ಗೆಜೆಟಿಯರ್, ಮೈಸೂರ್ ಡಿಸ್ಟ್ರಿಕ್ಟ್ ಪುಟ ಸಂಖ್ಯೆ– 913-914

[22] ಕರ್ನಾಟಕ ಸ್ಟೇಟ್ ಗೆಜೆಟಿಯರ್, ಮೈಸೂರ್ ಡಿಸ್ಟ್ರಿಕ್ಟ್ ಪುಟ ಸಂಖ್ಯೆ–913-914

[23] ಕನ್ನಡ ವಿಷಯ ವಿಶ್ವಕೋಷ ಕರ್ನಾಟಕ, ಮೈಸೂರು. ವಿ.ವಿ. ಮೈಸೂರು – 1979

[24] ಹೊಂಡರಬಾಳು ಗ್ರಾಮದ ಕೆಲವು ಹಿರಿಯ ಮಾಹಿತಿ ಮೇರೆಗೆ ರಚಿಸಲಾಗಿದೆ.

[25] ಎಪಿಗ್ರಾಫಿಯ ಸಂಪುಟ 4 ಕೊಳ್ಳೇಗಾಲ 9ತಾ) ಶಿವನ ಸಮುದ್ರ ಶಾಸನಗಳು.

[26] ಮೈಸೂರು ಗೆಜೆಟಿಯರ್ (ಮಂಡ್ಯ ಜಿಲ್ಲೆ ಪರಿಷ್ಕೃತ ಆವೃತ್ತಿ – 2003)

ಅಧ್ಯಾಯ – 4

ಶಾಸನಗಳ ಪರಿಚಯ

ಸಾಮಾನ್ಯವಾಗಿ ನಾಶವಾಗುವಂತಹ ತಾಳೆಗರಿ, ಭೂರ್ಜಪತ್ರ, ಕಾಗದ ಮೊದಲಾದವುಗಳ ಮೇಲಿನ ಬರಹಗಳನ್ನು ಬಿಟ್ಟು ಬಹುಕಾಲ ಉಳಿಯುವಂತಹ ಶಿಲೆ, ಲೋಹಗಳು ಮೊದಲಾದವುಗಳ ಮೇಲಿನ ಬರಹಗಳನ್ನು ಶಾಸನಗಳೆಂದು ಕರೆಯುತ್ತಾರೆ. ಶಾಸನದ ಶಬ್ದದ ಮೂಲಾರ್ಥ "ಆಜ್ಞೆ" ಎಂದು ಶಾಸ್ ಎಂಬ ಧಾತುವಿಗೆ ಆಜ್ಞೆ ಮಾಡು. ಶಿಕ್ಷಿಸು ಮುಂತಾದ ಅರ್ಥಗಳಿವೆ. ಭಾರತದಲ್ಲಿ ಶಾಸನ ಸಂಪತ್ತು ಅಪಾರ. ಅದೂ ದಕ್ಷಿಣ ಭಾರತದಲ್ಲಿ ಸಿಗುವಷ್ಟು ಶಾಸನಗಳು ಭಾರತದ ಬೇರಾವ ಭಾಗದಲ್ಲೂ ಸಿಗುವುದಿಲ್ಲ ಕರ್ನಾಟಕದಲ್ಲಿ ಅತ್ಯಧಿಕ ಸಂಖ್ಯೆಯಲ್ಲಿ ಶಾಸನಗಳು ದೊರೆತಿವೆ. ಇದುವರೆಗೆ ಸುಮಾರು 20,000ಕ್ಕೂ ಹೆಚ್ಚು ಶಾಸನಗಳು ಲಭ್ಯವಾಗಿವೆ.

ಕರ್ನಾಟಕದಲ್ಲಿ ಕ್ರಿ.ಪೂ. 3ನೇ ಶತಮಾನದ ಅಶೋಕನ ಶಾಸನಗಳೇ ಅತ್ಯಂತ ಪ್ರಾಚೀನ ಶಾಸನಗಳಾಗಿವೆ. ಶಾಸನಗಳು ಪ್ರಾಚೀನ ಭಾರತದ ಇತಿಹಾಸವನ್ನು ರಚಿಸುವಲ್ಲಿ ಮತ್ತು ಜನರ ವಿವಿಧ ಮುಖಗಳನ್ನು ಪರಿಚಯಿಸುವಲ್ಲಿ ಶಾಸನಗಳು ಮಹತ್ತರವಾದ ಪಾತ್ರವಹಿಸಿವೆ. ಇವುಗಳ ಆಧಾರದಿಂದ ಅಂದಿನ ಕಾಲದ ರಾಜಕೀಯ ಸಾಮಾಜಿಕ, ಧಾರ್ಮಿಕ, ಆರ್ಥಿಕ ಮುಂತಾದ ವಿಷಯಗಳ ಮೇಲೆ ಬೆಳಕು ಬೀರಬಹುದಾಗಿದೆ.

ಕಾಲದಿಂದ ಕಾಲಕ್ಕೆ ಮತ್ತು ಪ್ರದೇಶದಿಂದ ಪ್ರದೇಶಕ್ಕೆ ಲಿಪಿಯಲ್ಲಿ ಹಾಗೂ ಭಾಷೆಯಲ್ಲಿ ವ್ಯತ್ಯಾಸ ಕಂಡು ಬರುತ್ತವೆ. ಪ್ರಾಚೀನ ಭಾರದಲ್ಲಿ ಬ್ರಾಹ್ಮಿ ಲಿಪಿಯಿಂದಲೇ ಇಂದಿನ ಭಾರತೀಯ ಭಾಷೆಗಳು ಬಳಸುವ ಲಿಪಿಗಳು ವಿಕಾಸ ಹೊಂದಿವೆ. ಕರ್ನಾಟಕದ ಪ್ರಾಚೀನ ಲಿಪಿ ಕೂಡ ಬ್ರಾಹ್ಮಿಲಿಪಿಯೇ, ಸಾಹಿತ್ಯ, ವ್ಯಾಪಾರ ಶಾಸನಾದಿಗಳಿಗೆ ಹೆಚ್ಚು ಹೆಚ್ಚು ಬಳಕೆಯಾದಂತೆ ಲಿಪಿಯೂ ಕೂಡ ದೇಶಗಳಿಗೆ ಸಂಬಂಧಿಸಿದಂತೆ ರೂಪಾಂತರಗೊಳ್ಳುತ್ತ ಬಂದಿದೆ. ಸ್ಥೂಲವಾಗಿ ಹೇಳುವುದಾದರೆ ಬ್ರಾಹ್ಮಿ, ಪೇಟಿಕಾಶಿರಲಿಪಿ, ಕನ್ನಡ, ತೆಲುಗು, ತಮಿಳು, ಕನ್ನಡಲಿಪಿ ಪರ್ಶಿಯನ್ ಅರೇಬ್ಬಿಕ್, ಹೀಗೆ ಕರ್ನಾಟಕದಲ್ಲಿ ಲಿಪಿ ಬೆಳವಣಿಗೆ ಹೊಂದುತ್ತಾ ಬಂದಿದೆ. ಕರ್ನಾಟಕದಲ್ಲಿ ಅಶೋಕನ ಶಾಸನಗಳು ಬ್ರಾಹ್ಮಿಲಿಪಿ ಮತ್ತು ಪ್ರಾಕೃತ ಭಾಷೆಯಲ್ಲಿರುವ ಅತಿ ಪ್ರಾಚೀನ ಶಾಸನಗಳೆನಿಸಿವೆ. ಶಾತವಾಹನರ ಕಾಲದಲ್ಲಿ ತುಸು ರೂಪಾಂತರಗಳೊಂದಿಗೆ ಬ್ರಾಹ್ಮಿ

ಮುಂದುವರೆಯಿತು. ತರುವಾಯ ಬಂದ ಬನವಾಸಿಯ ಕದಂಬರು ಈ ಲಿಪಿಗೆ ಅಲಂಕಾರಿಕ ಹೊಳಪುಕೊಟ್ಟು ಪೇಟಿಕಾಶಿರ ಬ್ರಾಹ್ಮಿಲಿಪಿಯನ್ನು ಬಳಕೆಯಲ್ಲಿ ಹೆಚ್ಚು ಸರಳ ರೀತಿಯ ಲಿಪಿಯನ್ನು ಉಪಯೋಗಿಸಿದರು. ರಾಷ್ಟ್ರಕೂಟದ ಉತ್ತರಾರ್ಧದಲ್ಲಿ ಕನ್ನಡ ಅಕ್ಷರಗಳು ಕ್ರಮೇಣ ದುಂಡು, ದುಂಡಾದ ರೂಪವನ್ನು ಗಳಿಸಿದವು. ಗಂಗರು ಕಲ್ಯಾಣದ ಚಾಲುಕ್ಯರು ಹೊಯ್ಸಳರು, ಕಲಚೂರಿಗಳು, ಸೇವುಣರ ಕಾಲದಲ್ಲಿ ಇದೇ ಲಿಪಿಯು ಸುಂದರ ದುಂಡಾಕ್ಷರಗಳಾಗಿ ಬೆಳೆಯಿತು. ವಿಜಯನಗರ ಅರಸರ ಕಾಲದಲ್ಲಿ ಅಲ್ಲಲ್ಲಿ ಲಕ್ಷ್ಯ ಪೂರ್ವಕ ಬರೆದ ಕನ್ನಡ ಶಾಸನಗಳಿವೆಯಾದರೂ ಹೆಚ್ಚಿನ ಸಂದರ್ಭಗಳಲ್ಲಿ ಲಿಪಿಯ ಸೌಂದರ್ಯಕ್ಕೆ ಅಷ್ಟಾಗಿ ಗಮನ ಹರಿಸಿದಂತೆ ತೋರುವುದಿಲ್ಲ. ವಿಜಯನಗರೋತ್ತರ ಕಾಲದಲ್ಲಿ ಕೆಲವು ಕನ್ನಡ ಶಾಸನಗಳನ್ನು ದೇವನಾಗರಿ ಲಿಪಿಯಲ್ಲಿ ಬರೆದ ಉದಾಹರಣೆಗಳಿವೆ. ಮೈಸೂರು ಅರಸರ ಕಾಲದಲ್ಲಿ ಕನ್ನಡ ಶಾಸನಗಳು ಕಂಡುಬರುತ್ತವೆ.[1],[2],[3] ಶಾಸನಗಳ ಅಭ್ಯಾಸದ ವ್ಯಾಪ್ತಿಯು ವಿಶಾಲವಾದುದು ಅಷ್ಟೇ ಆಳವಾದುದು ಹೌದು ಹೆಚ್ಚು ಹೆಚ್ಚು ಒಳಹೊಕ್ಕು ನೋಡಿದರೆ ನಮ್ಮ ಸಂಸ್ಕೃತಿಯ ವಿವಿಧ ಮುಖಗಳ ಅಭ್ಯಾಸವನ್ನು ಶ್ರೀಮಂತಗೊಳಿಸುವ ಅಣಿಮುತ್ತುಗಳು ಹೊರಬರುತ್ತಲೇ ಇರುತ್ತವೆ. ಬರೀ ಇತಿಹಾಸವಷ್ಟೇ ಅಲ್ಲ ಭಾಷೆ, ಸಾಹಿತ್ಯ, ಧರ್ಮ ಅರ್ಥವ್ಯವಸ್ಥೆ ವಾಸ್ತು ಮತ್ತು ಶಿಲ್ಪಕಲೆ ಹೀಗೆ ವಿವಿಧ ಜ್ಞಾನ ಶಾಖೆಗಳ ಅರಿವಿಗೆ ಪೂರಕವಾಗುವಂತ ವಿಫುಲ ಮಾಹಿತಿ ಇವುಗಳಿಂದ ದೊರಕುತ್ತದೆ. ಹಾಗೆ ನೋಡಿದರೆ ಈ ಶಾಸನಗಳು ದೊರೆತಿರದಿದ್ದರೆ ನಮ್ಮ ಈ ಜ್ಞಾನ ಶಾಖೆಗಳ ಅಭ್ಯಾಸವು ಅಪೂರ್ಣವಾಗಿಯೇ ಉಳಿಯುತ್ತಿತ್ತು. ಆದ್ದರಿಂದಲೇ ವಿದ್ವಾಂಸರು ಶಾಸನಗಳನ್ನು ನಮ್ಮ ಜ್ಞಾನಭಂಡಾರದ ಮುಚ್ಚಿದ ಬಾಗಿಲು ಎಂದು ಕರೆದರು ಈ ಬಾಗಿಲು ತೆರೆದಾಗ ನಮ್ಮ ಸಂಸ್ಕೃತಿಯ ಭವ್ಯದರ್ಶನ ನಮ್ಮಗೆ ದೊರಕುತ್ತದೆ.[4] ಪ್ರಸ್ತುತ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲೂ ಮೇಲ್ಕಂಡ ರಾಜರುಗಳ ಕಾಲದ ಶಾಸನಗಳು ದೊರಕುತ್ತವೆ. ಅಲ್ಲದೆ ಕೊಳ್ಳೇಗಾಲ ವ್ಯಾಪ್ತಿಗೆ ಪೂರಕವಾಗಿ ಕನ್ನಡ ತಮಿಳು, ತೆಲಗು ಭಾಷೆಯ ಲಿಪಿಗಳು ಕಂಡು ಬರುತ್ತವೆ. ಅಲ್ಲದೆ ಅನೇಕ ಪ್ರಭೇದಗಳಲ್ಲೂ ಸಹ ಶಾಸನಗಳು ಕಂಡುಬರುತ್ತವೆ. ಅವುಗಳು, ಪ್ರಶಸ್ತಿ ಶಾಸನಗಳು ಆಗಿರಬಹುದು, ದಾನಶಾಸನಗಳು ಆಗಿರಬಹುದು, ವೀರಗಲ್ಲೂ ಶಾಸನಗಳು ಆಗಿರಬಹುದು, ನಿಷೀಧಿಕಲ್ಲು ಶಾಸನಗಳು ಆಗಿರಬಹುದು ತಾಮ್ರ ಪಟಶಾಸನಗಳು ಆಗಿರಬಹುದು. ಇವುಗಳು ಈ ಭಾಗದಲ್ಲಿ ಕಂಡು ಬರುತ್ತವೆ.

ಪ್ರಶಸ್ತಿ ಶಾಸನಗಳು: – ಪ್ರಶಸ್ತಿ ಶಾಸನಗಳು ಒಬ್ಬ ವ್ಯಕ್ತಿಯ ಅಥವಾ ರಾಜನ ವ್ಯಕ್ತಿತ್ವದ ಚಿತ್ರಣವನ್ನು ಹಾಗೂ ಅವನ ಸಾಧನೆಗಳನ್ನು ತಿಳಿಸುತ್ತದೆ. ಇಂತಹ ಶಾಸನಗಳು ಒಬ್ಬ ಯಾವುದೇ ವ್ಯಕ್ತಿ ಅಥವಾ ರಾಜ ಮಾಡಿದ ಮಹಾನ್ ಸಾಧನೆಗಳನ್ನು ನಿರೂಪಿಸುವುದರಿಂದ ಅವನ ಗುಣ ವಿಶೇಷಗಳನ್ನು ತಿಳಿಸುವುದರಿಂದ ಚರಿತ್ರೆಯ ಪುನರ್ ರಚನೆಯಲ್ಲಿ ಇವು ಮಹತ್ವದ ಪಾತ್ರವಹಿಸುತ್ತದೆ. ಉದಾಹರಣೆಗೆ ಖಾರವೇಲನ ಹಾದಿ ಗುಂಪಾ ಶಾಸನ, ಕಾಕುತ್ಸವರ್ಮನ ತಾಳಗುಂದ ಶಾಸನ, ಐಹೊಳೆಯ ಇಮ್ಮಡಿಪುಲಿಕೇಶಿಯ ಶಾಸನ, ಬೇಲೂರಿನ ವಿಷ್ಣುವರ್ಧನನ ಶಾಸನ ಮೊದಲಾದವುಗಳನ್ನು ಪ್ರಶಸ್ತಿ ಶಾಸನಗಳ ಗುಂಪಿಗೆ ಸೇರಿಸಬಹುದು. ಮಧ್ಯಯುಗೀನ ಹಲವು ಶಾಸನಗಳು ದಾನಶಾಸನಗಳಾಗಿದ್ದರೂ ಅವುಗಳ ಕೆಲವು ಭಾಗಗಳು ಪ್ರಶಸ್ತಿಯ ರೂಪದಲ್ಲಿರುತ್ತದೆ. ಆದರೆ ಪ್ರಸ್ತುತ ಕೊಳ್ಳೇಗಾಲ ಪ್ರಾಂತ್ಯದಲ್ಲಿ ಇಂತಹ ಪ್ರಶಸ್ತಿಗಳು ಕಂಡುಬರುವುದಿಲ್ಲ ಅದರ ಬದಲಾಗಿ ಬಿರುದುಗಳು ವಿಶೇಷವಾಗಿ ಕಂಡುಬರುತ್ತವೆ.[5],[6]

ದಾನ ಶಾಸನಗಳು: – ದಾನಶಾಸನಗಳನ್ನು ಎರಡು ಗುಂಪುಗಳನ್ನಾಗಿ ವಿಂಗಡಿಸಬಹುದು ವ್ಯಕ್ತಿಗೆ ಕೊಟ್ಟ ದಾನ ಮತ್ತು ಸಂಸ್ಥೆಗೆ ಕೊಟ್ಟ ದಾನ, ವ್ಯಕ್ತಿಗೆ ಕೊಟ್ಟ ದಾನವು ವೀರನ ಪರಾಕ್ರಮವನ್ನು ಮೆಚ್ಚಿಕೊಟ್ಟ ಅಥವಾ ವಿದ್ವಾಂಸರ ವಿದ್ವಾತ್ರನ್ನು ಮೆಚ್ಚಿಕೊಟ್ಟ ದಾನವಾಗಿರಬಹುದು ಸಂಸ್ಥೆಗೆ ಕೊಟ್ಟ ದಾನವು ದೇವಾಲಯಕ್ಕೆ ಮಠಕ್ಕೆ ಮತ್ತು ಮಹಾಜನಗಳಿಗೆ ಬಿಟ್ಟ ದೇವಾಲಯಕ್ಕೆ ಹಾಗೂ ಸಂಬಂಧಪಟ್ಟ ವ್ಯಕ್ತಿಗಳಿಗೆ ಬಿಟ್ಟ ದಾನದ ಗುಂಪಿನಲ್ಲಿ ಸೇರುತ್ತದೆ.[7] ಹೊಯ್ಸಳ ನರಸಿಂಹ ಕಾಲದ ಶಾಸನಗಳಿವೆ ಮೊದಲನೆಯದು ಮಹಾಜನರು ವಂಡುವರ್ರೈ ಪೆರುಮಾಳಿಗೆ ತಿರುವೆಡ್ಯೆಯಾಟ್ಟವಾಗಿ ಭೂಮಿಯನ್ನು ದತ್ತಿ ಕೊಟ್ಟಿರುವುದನ್ನು ತಿಳಿಸುತ್ತದೆ ಮತ್ತು ತ್ರಿಭುವನ ಮಾದೇವಿ ಚತುರ್ವೇದಿಮಂಗಲದ ಹೆಸರಿದೆ. ಸುಮಾರು 11ನೆಯ ಶತಮಾನದ ಶಾಸನವೊಂದರಲ್ಲಿ ಕೊಳ್ಳೇಗಾಲಕ್ಕೆ ಈ ಹೆಸರಿದ್ದುದು ಕಂಡುಬರುತ್ತದೆ. ಈ ತ್ರಿಭುವನ ಮಹಾದೇವಿಯು ರಾಜನಿಗಿಂತ ಮುಂಚೆ ಆಳುತ್ತಿದ್ದ ಉತ್ತಮಚೋಳನ ಒಂದನೇ ಕುಲೋತ್ತುಂಗನ ರಾಣಿಯಾಗಿರಬೇಕು. ಆಕೆ ದೇವರಿಗೆ ದತ್ತಿಯನ್ನು ಕೊಟ್ಟಿರುವುದು ತಿಳಿದುಬರುತ್ತದೆ.[8],[9] ಸತ್ಯಗಾಳ ಶಾಸನವು ಕುಡಕರೆಂಬ ಮಾಧವಮರ ಮಹಾಜನಗಳಿಗೆ ಮಾದಜೀಯನು ಕುರನೂರು ಗ್ರಾಮವನ್ನು ಹಾಗೂ ಅದರ ಉಪಗ್ರಾಮಗಳನ್ನು ದಾನವಾಗಿ ನೀಡಿದ ಬಗ್ಗೆ ತಿಳಿದುಬರುತ್ತದೆ.[10] ಕ್ರಿ.ಶ. 1408ರಲ್ಲಿ ಒಂದನೇ ದೇವರಾಯನ ಸಿಂಗನಲ್ಲೂರ ಶಾಸನವು ಸಂಗೀತ, ವಿದ್ಯಾಸಾಗರ, ಮತ್ತು ಸಾಹಿತ್ಯ ವಿದ್ಯಾ ಕಲಾ ವಿಶಾರದ ತಾರ ಎಂಬುದಾಗಿ ತಿಳಿಸುತ್ತವೆ.[11] ಕ್ರಿ.ಶ. 1522ರಲ್ಲಿ ರಾಜರಾಜನ ಮಗನಾದ ಸಾಳುವ ಗೋವಿಂದರಾಜನಿಗೆ ಉಮ್ಮತ್ತೂರ ನಾಯಕತನವನ್ನು ಒಪ್ಪಿಸಲಾಗಿತ್ತೆಂದು ತಿಳಿದುಬರುತ್ತದೆ.

ಅರಸನ ಮಹಾಪ್ರಧಾನ ತಿಮ್ಮರಸ ಹಾಗೂ ಗೋವಿಂದ ರಾಜರ ತಂದೆಯಾದ ರಾಚಯ್ಯನೇ ಪ್ರಾಯಶ: ಈ ರಾಜನಿರಬಹುದು ಶಾಸನದ ಪ್ರಕಾರ ಈ ಗೋವಿಂದರಾಜನು ತನ್ನ ನಾಯಕತನಕ್ಕೆ ಸಲ್ಲುವ ಹೊಸ ನಾಡಸ್ಥಳದ ಕಲಿಯುಗ ವಾಡಿ ಗ್ರಾಮವನ್ನು ತಿರುಮಕೂಡಲ ಕಾವೇರಿ ಹಾಗೂ ಕಬಿನಿ ನದಿಗಳಿಗೆ ಸೋಪಾನವನ್ನು ಕಟ್ಟುವ ಕೆಲಸಕ್ಕೆ ದಾನ ನೀಡಿದ ವಿಚಾರ ತಿಳಿದುಬರುತ್ತದೆ.[12] ಕ್ರಿ.ಶ. 1539ರಲ್ಲಿ ರಾಮಾಭಟ್ಟಯ್ಯನನ್ನು ಭುಜಬಲ ಪ್ರತಾಪನೆಂಬುದಾಗಿ ವರ್ಣಿಸಿದೆ.[13] ಮತ್ತು 1569ರಲ್ಲಿ ಹದಿನಾಡಸೀಮೆಯ ಶಿವನ ಸಮುದ್ರ ಸ್ಥಳ ಕೊಳ್ಳೇಗಾಲಕ್ಕೆ ಸೇರಿದ ಹಿರಿಯೂರು ಗ್ರಾಮವನ್ನು ಆ ಸೀಮೆಯ ಪ್ರಭುವಾದ ರಾಜರಾಜನಾಯಕನಿಗೆ ಪಲ್ಲಕ್ಕಿಯ ಉಂಬಳಿಯಾಗಿ ಬಿಟ್ಟಿರುವುದು ತಿಳಿದುಬರುತ್ತದೆ.[14]

ವೀರಗಲ್ಲು ಶಾಸನಗಳು: – ವೀರಗಲ್ಲು ಶಾಸನಗಳು ವೀರನೊಬ್ಬನ ಮರಣದ ಪ್ರತೀಕವಾಗಿ ನಿಲ್ಲಿಸಿದ ಶಿಲೆಗಳಾಗಿವೆ. (ಚಿತ್ರ ಸಂಖ್ಯೆ 38) ವೈರಿಯೊಂದಿಗೆ ಕಾದಾಡಿ ಮಡಿದ ವೀರ ಸ್ವರ್ಗವನ್ನೇರುವನೆಂಬ ನಂಬಿಕೆಯನ್ನು ಅರಿತ ಪ್ರಾಚೀನರು ಗೋಗ್ರಹಣ, ಕಳ್ಳತನ, ಯುದ್ದ ಮುಂತಾದ ಪ್ರಸಂಗಗಳಲ್ಲಿ ಧೈರ್ಯ ಶೂರತನ, ಸಾಹಸ, ಹಾಗೂ ವೀರಾವೇಶದಿಂದ ಹೋರಾಡುತ್ತಿದ್ದರು ಇಂಥ ಸಮಯದಲ್ಲಿ ಸಾವನ್ನಪ್ಪಿದ ವೀರರ ಪರಾಕ್ರಮದ ಪ್ರತೀಕಗಳೇ ವೀರಗಲ್ಲು ಮತ್ತು ಶಾಸನಗಳು ಕೊಳ್ಳೇಗಾಲ ಪ್ರಾಂತ್ಯದಲ್ಲಿ ಈ ರೀತಿಯ ವೀರಗಲ್ಲುಗಳು ಮತ್ತು ಹೊಸದಾಗಿ ಶಾಸನದಲ್ಲಿ (ಚಿತ್ರ ಸಂಖ್ಯೆ 39) ಪತ್ತೆ ಮಾಡಲಾಗಿದೆ.[15]

ನಿಷಧಿಕಲ್ಲು ಶಾಸನಗಳು: – ನಿಷಧಿಕಲ್ಲು ಶಾಸನಗಳು ಜೈನ ಸನ್ಯಾಸಿಗಳು ಮತ್ತು ಗೃಹಸ್ಥರು ಸನ್ಯಾಸನ ವಿಧಿಯಿಂದ ಅಥವಾ ಸಲ್ಲೇಖನ ವ್ರತದಿಂದ ಮರಣಹೊಂದಿರುವುದನ್ನು ತಿಳಿಸುತ್ತದೆ. ನಿಷದಿಕಲ್ಲುಗಳಲ್ಲಿ ಸಲ್ಲೇಖನ ವ್ರತವನ್ನು ಆಚರಿಸುವ ವ್ಯಕ್ತಿ ಗುರುವಿನ ಬಳಿ ಕುರಿತು ಧರ್ಮಶ್ರವಣದಲ್ಲಿ ನಿರಂತರಾಗಿರುವ ದೃಶ್ಯವಿರುತ್ತದೆ. ಜೈನರಲ್ಲಿ ವೃದ್ಧಾಪ್ಯವನ್ನು ಹೊಂದಿದಾಗ ಅನ್ನ ಆಹಾರಗಳನ್ನು ತೊರೆದು ಧರ್ಮಶ್ರವಣ ಮಾಡುತ್ತಾ ಪ್ರಾಣಬಿಡುವುದು ಸಾಮಾನ್ಯವಾಗಿವೆ. ಇಂತಹ ಶಾಸನಗಳಿಗೆ ನಿಷದಿಕಲ್ಲು ಶಾಸನ ಎಂದು ಕರೆಯುತ್ತಾರೆ. ಕೊಳ್ಳೇಗಾಲ ಪ್ರಾಂತ್ಯದಲ್ಲಿ ಈ ವರ್ಗಕ್ಕೆ ಸೇರಿದ ಯಾವುದೇ ನಿಷದಿ ಶಾಸನವು ಲಭ್ಯವಾಗಿಲ್ಲ. ಆದರೆ ಈ ಭಾಗದಲ್ಲಿ ಜೈನ ಮುನಿಗಳು ಇರುವ ಬಗ್ಗೆ ತಿಳಿದುಬರುತ್ತದೆ. [16]

ತಾಮ್ರಪಟ ಶಾಸನಗಳು: – ತಾಮ್ರ ಲೋಹದ ಫಲಕಗಳ ಮೇಲೆ ಬರೆದಿರುವ ಶಾಸನಗಳು ತಾಮ್ರ ಪಟ ಶಾಸನಗಳು ತಾಮ್ರಪಟ ಶಾಸನದಲ್ಲಿ ಎರಡು ಅಥವಾ ಹೆಚ್ಚಿನ ಪಟಗಳಿದ್ದರೆ ಆ ಎಲ್ಲ

ಪಟಗಳನ್ನು ಸೇರಿಸುವ ಉಂಗುರವೊಂದು ಇರುತ್ತದೆ. ಉಂಗುರದ ಮೇಲೆ ರಾಜನ ಅಥವಾ ರಾಜನ ಧರ್ಮಕ್ಕೆ ಸಂಬಂಧಿಸಿದ ಪ್ರಾಣಿ ಅಥವಾ ಇನ್ನಿತರ ಲಾಂಛನವಿರುತ್ತದೆ. ತಾಮ್ರಪಟದ ಒಂದು ಮಗ್ಗಲಲ್ಲಿ ಬರಹವಿರುತ್ತದೆ. ಒಂದಕ್ಕಿಂತ ಹೆಚ್ಚಿನ ಪಟಗಳಿದ್ದಾಗ ಅವುಗಳ ಮೇಲೆ ಅಂಕಿಗಳನ್ನು ಹಾಕಲಾಗುತ್ತದೆ. ತಾಮ್ರಪಟ ಶಾಸನಗಳು ಶಿಲಾಶಾಸನಗಳಿಗಿಂತ ಸಂಖ್ಯೆಯಲ್ಲಿ ಕಡಿಮೆ ಇರುತ್ತವೆ. ಉದಾಹರಣೆಗೆ ಕೊಳ್ಳೇಗಾಲ ತಾಲ್ಲೂಕು ಸತ್ತೇಗಾಲದಲ್ಲಿರುವ ಶಾಸನವು ಕುಡಕೂರೆಂಬ ಮಾಧವಪುರದ ಮಹಾಜನಗಳಿಗೆ ಮಾದಜೀಯನು ಕುರುನೂರು ಗ್ರಾಮವನ್ನು ಹಾಗೂ ಅದರ ಉಪಗ್ರಾಮಗಳನ್ನು ದಾನವಾಗಿ ನೀಡಿದ ಎಂದು ತಿಳಿದು ಬರುತ್ತದೆ. ಆದರೆ ಅದೇ ಶಾಸನವು ರಾಜನು ತಾಮ್ರಶಾಸನ ಮುಖಾಂತರ ಅವುಗಳನ್ನು ಮಾಧವ ದಂಡಣ್ಣಾಯಕನಿಗೆ ನೀಡಿದ್ದನೆಂಬುದನ್ನೂ ಸಹ ತಿಳಿಸುತ್ತದೆ.[17]

ಅಡಿ ಟಿಪ್ಪಣಿಗಳು

---

[1] ಆನ್ಯುಯಲ್ ರಿಪೋರ್ಟ್ ಆನ್ ಸೌಥ್ ಇಂಡಿಯನ್ ಎಪಿಗ್ರಾಫಿ. ಸಂಬಂಧ ಪಟ್ಟ ವಾರ್ಷಿಕ ವರದಿಗಳು.

[2] ಸೌತ್ ಇಂಡಿಯನ್ ಇನ್‌ಸ್ಕ್ರಿಪ್ಷನ್ಸ್‌ನ ಕೆಲವು ಸಂಪುಟಗಳು.

[3] ಎಪಿಗ್ರಾಫಿಯ ಇಂಡಿಕಾ ಕೆಲವು ಸಂಪುಟಗಳು.

[4] ಭಾರತೀಯ ಇತಿಹಾಸದ ಶಾಸನ ಆಕರಗಳು ಶ್ರೀನಿವಾಸ್ ಪಾಡಿಗಾರರವರ ಹೇಳಿಕೆಗಳು.

[5] ಎಪಿಗ್ರಾಫಿಯ ಕರ್ನಾಟಕ ಸಂಪುಟ –4, ಶಾಸನ ಸಂಖ್ಯೆ 1 ಕೊಳ್ಳೇಗಾಲ.

[6] ಎಪಿಗ್ರಾಫಿಯ ಕರ್ನಾಟಕ ಸಂಪುಟ –4 ಶಾಸನ ಸಂಖ್ಯೆ 29 ಕೊಳ್ಳೇಗಾಲ.

[7] ಎಪಿಗ್ರಾಫಿಯ ಕರ್ನಾಟಕ ಸಂಪುಟ –4, ಸಾಸನ ಸಂಖ್ಯೆ 4 ಮತ್ತು 100 ಕೊಳ್ಳೇಗಾಲ .

[8] ಎಪಿಗ್ರಾಫಿಯ ಕರ್ನಾಟಕ ಸಂಪುಟ –4, ಸಾಸನ ಸಂಖ್ಯೆ 4 ಮತ್ತು 100 ಕೊಳ್ಳೇಗಾಲ.

[9] ಸೌತ್ ಇಂಡಿಯನ್ ಟೆಂಪಲ್ ಇನ್‌ಸ್ಕ್ರಿಷನ್ಸ್ (LXIVIII).

[10] ಎಪಿಗ್ರಾಫಿಯ ಕರ್ನಾಟಕ ಸಂಪುಟ –4, ಶಾಸನ ಸಂಖ್ಯೆ 30 ಕೊಳ್ಳೇಗಾಲ.

[11] ಎಪಿಗ್ರಾಫಿಯ ಕರ್ನಾಟಕ ಸಂಪುಟ –4, ಶಾಸನ ಸಂಖ್ಯೆ 56 ಕೊಳ್ಳೇಗಾಲ.

[12] ಎಪಿಗ್ರಾಫಿಯ ಕರ್ನಾಟಕ ಸಂಪುಟ –4, ಶಾಸನ ಸಂಖ್ಯೆ 82 ಕೊಳ್ಳೇಗಾಲ.

[13] ಎಪಿಗ್ರಾಫಿಯ ಕರ್ನಾಟಕ ಸಂಪುಟ –4, ಶಾಸನ ಸಂಖ್ಯೆ 8 ಕೊಳ್ಳೇಗಾಲ.

[14] ಎಪಿಗ್ರಾಫಿಯ ಕರ್ನಾಟಕ ಸಂಪುಟ –4, ಶಾಸನ ಸಂಖ್ಯೆ 89 ಕೊಳ್ಳೇಗಾಲ.

[15] ಕನ್ನಡ ದಿನ ಪತ್ರಿಕೆಗಳು 10–4–2007.

[16] ಎಪಿಗ್ರಾಫಿಯ ಕರ್ನಾಟಕ ಸಂಪುಟ –4, ಶಾಸನ ಸಂಖ್ಯೆ 91, 92 ಕೊಳ್ಳೇಗಾಲ.

[17] ಎಪಿಗ್ರಾಫಿಯ ಕರ್ನಾಟಕ ಸಂಪುಟ –4, ಶಾಸನ ಸಂಖ್ಯೆ 30 ಕೊಳ್ಳೇಗಾಲ.

ಅಧ್ಯಾಯ – 5

ಜಾನಪದೀಯ ದೃಷ್ಠಿಯಲ್ಲಿ ಹಬ್ಬ ಹರಿದಿನಗಳು ಮತ್ತು ಜಾತ್ರೆಗಳು

ಕೊಳ್ಳೇಗಾಲ ತಾಲ್ಲೂಕು ಚಾಮರಾಜನಗರ ಜಿಲ್ಲೆಗೆ ಸೇರಿದ್ದು. ಇದು ಪ್ರಾಚೀನ ಕಾಲದಿಂದಲೂ ಜಾನಪದ ಕ್ಷೇತ್ರವಾಗಿ ಇತಿಹಾಸದಲ್ಲಿಯೇ ತನ್ನ ಹೆಸರನ್ನು ಸೃಷ್ಠಿಸಿಕೊಂಡಿರುವ ಈ ತಾಲ್ಲೂಕು ತಮಿಳುನಾಡಿಗೂ ಹತ್ತಿರವಾಗಿ ಹಾಗೂ ಗಡಿನಾಡು ಎಂದೂ ಹೆಸರು ಪಡೆದಿದೆ.[1] ಈ ಕ್ಷೇತ್ರದಲ್ಲಿ ಜಾನಪದೀಯವಾಗಿ ನೋಡುವುದಾದರೆ ಇಲ್ಲಿ ದೇವರ ಗುಡ್ಡರು ಅಪಾರ ಸಂಖ್ಯೆಯಲ್ಲಿ ಹೆಚ್ಚು ಹೆಚ್ಚಾಗಿ ಕಾಣಬರುತ್ತಾರೆ. ಕಾರಣವೇನೆಂದರೆ ಭಾರತ ದೇಶದಲ್ಲಿಯೇ ಹೆಸರು ಪಡೆದಿರುವ ಈ ತಾಲ್ಲೂಕಿನಲ್ಲಿ ಮಲೈಮಹದೇಶ್ವರನ ಬೆಟ್ಟವಿರುವುದರಿಂದ ಹಾಗೂ ಚಿಕ್ಕಲೂರು, ಕುರುಬನಕಟ್ಟೆಯ ಸಿದ್ಧಪ್ಪಾಜಿ ಮಂಟೇಸ್ವಾಮಿಗಳ ಗದ್ದುಗೆ ಇರುವುದರಿಂದ ಈ ಭಾಗದ ಜನರು ಮಹದೇಶ್ವರ ಸಿದ್ಧಪ್ಪಾಜಿ. ಮಂಟೇಲಿಂಗಸ್ವಾಮಿ ಎಂಬೆಲ್ಲಾ ಹೆಸರು ಹೇಳಿಕೊಂಡು ಭಕ್ತಿ ಪೂರಕವಾಗಿ ದೇವರ ಗುಡ್ಡರಾಗಿರುವುದನ್ನು ಕಾಣುತ್ತೇವೆ.[2] ಸಿದ್ಧಪ್ಪಾಜಿ – ಮಂಟೇಸ್ವಾಮಿ ಕ್ಷೇತ್ರಗಳಾದ ಕೊಳ್ಳೇಗಾಲ ತಾಲ್ಲೂಕಿನಲ್ಲಿರುವ ಕುರುಬನ ಕಟ್ಟೆ ಮತ್ತು ಚಿಕ್ಕಲ್ಲೂರು ಎಂಬ ಎರಡು ಪ್ರಾಚೀನ ನೆಲೆಗಳಿಂದಲೂ ಜಾನಪದೀಯ ಹಾಡುಗಳಿಂದ ಹೆಸರು ಪಡೆದಿದೆ. ಹೇಗೆ ಹೇಳುವುದಾದರೆ ಮಹದೇಶ್ವರನ ಬಗ್ಗೆ ಅನೇಕ ವಿದ್ವಾಂಸರು ಹಲವಾರು ದೇವರ ಗುಡ್ಡರು, ವಿವಿಧ ರೀತಿಯ ಜಾನಪದ ಶೈಲಿಯ ಹಾಡುಗಳನ್ನು ಹೇಳಿ ಜನರ ಮನೆಗೆದ್ದಿರುತ್ತಾರೆ.[3] ಪ್ರಸ್ತುತದಲ್ಲಿ ಮಾನಸಗಂಗೋತ್ರಿಯ ಕನ್ನಡ ವಿಭಾಗದಲ್ಲಿ ಹೆಸರಾಂತ ಜಾನಪದ ವಿದ್ವಾಂಸರಾದ ಪಿ.ಕೆ. ರಾಜಶೇಖರವರು ಮಲೇಮಹದೇಶ್ವರನ ಬಗ್ಗೆ ಜಾನಪದೀಯ ಭಕ್ತಿಗೀತೆ ಹಾಡಿರುತ್ತಾರೆ.[4] ದೇವರ ಗುಡ್ಡದಲ್ಲಿ ಮಳವಳ್ಳಿ ಮಹಾದೇವ ಎಂಬುವವರು ಪ್ರಖ್ಯಾತಿ ಪಡೆದಿರುತ್ತಾರೆ. ಹೀಗೆ ಹಲವಾರು ಸ್ಥಳೀಯ ಜನರುಗಳು ಕೂಡ ಇಂದಿಗೂ ಜಾನಪದೀಯ ಹಾಡುಗಳನ್ನು ಹಾಡುವ ಮೂಲಕ ಮತ್ತು ಜಾನಪದೀಯ ಹಬ್ಬಗಳನ್ನು ಆಚರಿಸುವ ಮೂಲಕ ಕೊಳ್ಳೇಗಾಲವು ಜನಪದೀಯವಾಗಿ ಹೆಸರು ಪಡೆದಿದೆ ಎಂದು ಹೇಳಬಹುದು.[5] ಜಾನಪದವು ಬಾಯಿಂದ ಬಾಯಿಗೆ ಹರಿಯುವಂತೆ ಆಗಿರುವುದರಿಂದ ಅದಕ್ಕೆ ಪೂರಕವಾದ ಪ್ರಾಚೀನ ಉಲ್ಲೇಖ ಮತ್ತು ದಾಖಲೆಗಳಿರುವುದಿಲ್ಲ. ಆದರೆ ಕ್ರಿ.ಪೂ. ಕಾಲದಲ್ಲಿಯೇ ಜಾನಪದ ಹಾಗೂ ಜಾನಪದೀಯ ಕುರುಹುಗಳು ಬಂಧೂ ಬಯಲಿನ ನಾಗರೀಕತೆಯ ಜನರಲ್ಲಿಯೂ ಪ್ರೇರಿತವಾಗಿತ್ತೆಂದೂ ಅಲ್ಲಿ ದೊರೆತಿರುವ ಅನೇಕ ಸುಟ್ಟ ಮಣ್ಣಿನ ಗೊಂಬೆಗಳಿಂದ ಚಿತ್ರಲಿಪಿಯಿಂದ ರೇಖಾಚಿತ್ರಗಳ

ಆಧಾರದಿಂದಲೂ ಜಾನಪದೀಯ ಸಂಸ್ಕೃತಿಯು ಇತ್ತೆಂದು ಉಲ್ಲೇಖಿಸಬಹುದಾಗಿದೆ.[6] ಪ್ರಾಚೀನ ಕಾಲದ ಜಾನಪದ ಬದುಕಿನ ವಿವಿಧ ರೂಪಗಳು ವಿನ್ಯಾಸಗಳು, ವಸ್ತುವಿನ ವಾಸ್ತು ರೂಪಗಳು, ವಿನ್ಯಾಸಗಳು, ವಸ್ತುವಿನ ವಾಸ್ತು ಕೃತಿಗಳು ಹೇಗಿದ್ದವು ಎಂಬುದನ್ನು ಗುರುತಿಸುವುದು ಅಸಾಧ್ಯವೆಂಬ ಭಾವನೆ ಕೆಲವು ಜಾನಪದೀಯ ಇತಿಹಾಸಕಾರರಲ್ಲಿ ಮತ್ತು ಇತ್ತೀಚಿನ ಸಂಶೋಧಕರಲ್ಲಿ ಸಾಮಾನ್ಯವಾಗಿದೆ. ಈ ರೀತಿಯ ಹೇಳಿಕೆ ಇಲ್ಲಿ ಸ್ಪಷ್ಟವಿಲ್ಲ. ಜಾನಪದೀಯ ವಿಷಯಕ್ಕೂ ಪ್ರಾಚೀನ ದಾಖಲೆಗಳ ಪುರಾವೆಗಳಿಗೂ ಪೂರಕವಾಗಿ ಅಲ್ಲಲ್ಲಿ ಆಚರಿಸುವ ಗ್ರಾಮ ದೇವತೆಗಳ ಹಬ್ಬಗಳನ್ನು ಜಾನಪದೀಯ ದೃಷ್ಟಿಕೋನದಿಂದ ಆಚರಿಸುವ ಪರಿಪಾಠವು ಇದೆ. ಇದು ವೈಧಿಕ ಸಾಂಸ್ಕೃತಿಕ ಕಾಲಕ್ಕೂ ಇರುವಂತಹ ದಾಖಲೆಗಳ ಹಿನ್ನೆಲೆಯಿಂದ ಆಚರಿಸುತ್ತಾರೆಂಬ ಭಾವನೆಯಿಂದಲೂ ನಿರೂಪಿಸಬಹುದಾಗಿದೆ. ಇಂತಹ ಆಚರಣೆಗಳು ಭಾರತದಲ್ಲಿ ಆಯಾ ಪ್ರದೇಶಗಳಲ್ಲಿ ಈಗಲೂ ಪ್ರಸ್ತುತ ಈ ಹಿನ್ನೆಲೆಯನ್ನು ಆಧಾರವಾಗಿಟ್ಟುಕೊಂಡು ನೋಡುವುದಾದರೆ ಕೊಳ್ಳೇಗಾಲ ತಾಲ್ಲೂಕು ಪುರಾತನ ಕಾಲಕ್ಕೆ ಹೋಗಬೇಕಾಗುತ್ತದೆ. ಮುಖ್ಯವಾಗಿ ಜನಪದದ ಬಗ್ಗೆ ಯೋಚನೆ, ಸಂಶೋಧನೆ ಮಾಡಿದರೆ ಇಂತಹ ಸಂಸ್ಕೃತಿಗಳು ಹೇರಳವಾಗಿ ಹಿಂದುಳಿದವರ ಪಂಗಡಗಳಲ್ಲಿ (ಜನಾಂಗ)ಗಳಲ್ಲಿ ಜಾನಪದ ಪರಂಪರೆಗಳ ಬಗ್ಗೆ ಕಳಕಳಿಯನ್ನು ಜಾನಪದ ಪರಂಪರೆಗಳ ಬಗ್ಗೆ ಕಳಕಳಿಯನ್ನು ಇಟ್ಟುಕೊಂಡು ಹಬ್ಬ–ಹರಿ ದಿನಗಳನ್ನು ಆಚರಿಸುವ ಪರಿಪಾಠ ಇಂದಿಗೂ ಸಹ ಇದೆ. ಈ ಹಬ್ಬವನ್ನು ಆಚರಿಸುವುದು ಮನೋರಂಜನೆಯ ಕಾರ್ಯಗಳಿಗೆ ಪೂರಕವಾಗಿರುತ್ತದೆ. ಉದಾಹರಣೆಗೆ ಗ್ರಾಮಾಂತರ ಪ್ರದೇಶಗಳಲ್ಲಿ ಜನರು ಗ್ರಾಮ ದೇವತೆಯ ಹಬ್ಬವನ್ನು ದವಸ–ಧಾನ್ಯ ಮನೆಗಳಿಗೆ ತಂದ ನಂತರ ಅಂದರೆ ಮಾರ್ಚ್–ಏಪ್ರಿಲ್ ತಿಂಗಳಲ್ಲಿ ನಡೆಸುವ ಪರಿಪಾಠ ಅಲ್ಲಲ್ಲಿ ಕಂಡು ಬರುತ್ತದೆ. ಇಂದಿಗೂ ಕರ್ನಾಟಕ ತಮಿಳುನಾಡು ಕೇರಳ, ಇನ್ನೂ ಮೊದಲಾದ ಭಾಗಗಳಲ್ಲಿ ಗಮನಿಸಿದರೆ ಗ್ರಾಮ ದೇವತೆಗಳನ್ನು ಪೂಜಿಸುವ ವಾಡಿಕೆ ಈ ಭಾಗದಲ್ಲೂ ಇದೆ. ಈ ದೇವತೆಗಳನ್ನು ಹಲವಾರು ಹೆಸರುಗಳಿಂದ ಕೂಡಿರುತ್ತದೆ. ದುರ್ಗಿ, ಕಾಳಿ, ಹೊನ್ನದೇವಿ, ಚೌಡೇಶ್ವರಿ, ರಾಕಸಮ್ಮ, ಚಾಮುಂಡಿ, ಬಣ್ಣಾರಿ ಮಾರಿ, ದಂಡಿನಮಾರಿ, ಬಿಸಿಲುಮಾರಿ, ಬೇವಿನ ಸೊಪ್ಪಿನ ಮಾರಿ, ದಡಾರ ಮಾರಿ, ಸಿಡುಬು ಮಾರಿ, ಬೆಟ್ಟಹಳ್ಳಿ ಮಾರಿ, ಇನ್ನೂ ಮುಂತಾದ ಹಲವಾರು ಹೆಸರುಗಳಿಂದ ಗ್ರಾಮ ದೇವತೆಯ ಹಬ್ಬಗಳನ್ನು ಜಾನಪದೀಯ ದೃಷ್ಟಿಕೋನದಿಂದ ಆಚರಿಸುತ್ತಾರೆ. ಆದರೆ ಈ ಹಬ್ಬವನ್ನು ಯಾರು ಆಚರಿಸುತ್ತಾರೆ ಎಂಬುದು ಸಹ ಅಷ್ಟೇ ಮುಖ್ಯವಾದ ಅಂಶವಾಗಿರುತ್ತದೆ. ನಾವು ಪ್ರಾಚೀನ ಕಾಲದ ಪರಂಪರೆಯನ್ನು ಗಮನಿಸಿದಾಗ ವೇದ–ಉಪನಿಷತ್ತುಗಳ ಕಾಲದಿಂದಲೂ ವೈಧಿಕ ಸಂಸ್ಕೃತಿಗೆ ಪೂರಕವಾಗಿ ಶೈವ–

ವೈಷ್ಣವ ಪಂಥಗಳನ್ನು ಸಹ ಆಧಾರವಾಗಿಟ್ಟುಕೊಂಡು ಬರೆಯಬೇಕಾಗುತ್ತದೆ.[7] ಈ ಹಿನ್ನೆಲೆಯನ್ನು ಗಮನಿಸಿದರೆ ಪ್ರತಿ ಹಳ್ಳಿಯಲ್ಲಿ ಜಾನಪದೀಯ ದೃಷ್ಟಿಕೋನವನ್ನು ಇಟ್ಟುಕೊಂಡು ಇಂದಿಗೂ ಗ್ರಾಮೀಣ ಪ್ರದೇಶಗಳಲ್ಲಿ ಈ ಮಾರಿ ದೇವತೆಗಳನ್ನು ಪೂಜಿಸಿ ಮಾರಿ ಹಬ್ಬಗಳನ್ನು ಮಾಡುವರು ಎಂದು ಹೇಳಬಹುದು.[8] ಕೊಳ್ಳೇಗಾಲ ತಾಲ್ಲೂಕಿನ ಬಹುಸಂಖ್ಯೆಯಲ್ಲಿ ಮಾರಿ ಹಬ್ಬವನ್ನು ಆಚರಿಸುವವರು ಪರಿಶಿಷ್ಟಜಾತಿಯವರು ಕೆಲವು ಗ್ರಾಮಗಳಲ್ಲಿ ಬೆಸ್ತರು, ಪರಿವಾರದವರು (ನಾಯಕರು) ಕುರುಬರು, ಒಕ್ಕಲಿಗರು ಇನ್ನೂ ಮುಂತಾದ ಶೂದ್ರ ಜನಾಂಗದವರು ಮಾರಿಹಬ್ಬವನ್ನು ಜಾನಪದೀಯ ಹಿನ್ನೆಲೆಯಿಂದ ಆಚರಿಸಿ ಪೂಜೆ ಮಾಡುವುದು ಅಲ್ಲಲ್ಲಿ ಕಂಡುಬರುತ್ತದೆ.[9] ಕೊಳ್ಳೇಗಾಲ ತಾಲ್ಲೂಕಿನಲ್ಲಿ ವಿಶೇಷವಾಗಿ ಕೆಲವು ಊರುಗಳಲ್ಲಿ ಜಾನಪದೀಯ ದೃಷ್ಟಿಕೋನವನ್ನಾಧರಿಸಿ ಮಾರಿಹಬ್ಬಗಳನ್ನು ಆಚರಿಸುತ್ತಾರೆ. ಅವುಗಳಲ್ಲಿ ಶಿಲ್ಕಲ್‌ಪುರ, ತಗರಪುರ, ಕುಂತೂರು, ತೇರಂಬಳ್ಳಿ, ಮಧುವನಹಳ್ಳಿ, ಪಾಳ್ಯ, ತಿಮ್ಮರಾಜೀಪುರ, ದೊಡ್ಡಿಂದುವಾಡಿ ಇನ್ನೂ ಮೊದಲಾದ ಗ್ರಾಮಗಳಲ್ಲಿ ವಿಶೇಷವಾಗಿ ಆಚರಿಸುತ್ತಾರೆ. ಈ ಹಿನ್ನೆಲೆಯ ಹಾಗೂ ಅಲ್ಲಿನ ಆಯಾ ಊರಿನ ಹೆಸರುಗಳನ್ನಾಧರಿಸಿ ಅಲ್ಲಿನ ವೈಖರಿ ರೂಢಿ ಸಂಪ್ರದಾಯ ವಿಧಿ–ವಿಧಾನಗಳನ್ನು ಇಲ್ಲಿ ನಿರೂಪಿಸಲಾಗಿದೆ.

ಶಿಲಾಕಲ್ ಪುರದ ಮಾರಿಹಬ್ಬ: – ಈ ಗ್ರಾಮವು ಚಾಮರಾಜನಗರ ಜಿಲ್ಲೆ ಕೊಳ್ಳೇಗಾಲ ತಾಲ್ಲೂಕಿಗೆ ಸೇರಿದ ಒಂದು ಪ್ರಾಚೀನ ಗ್ರಾಮ. ಇದು ಚಾರಿತ್ರಿಕ ದೃಷ್ಟಿಕೋನದಿಂದ ಹೇಳುವುದಾದರೆ ಗಂಗರ, ಚೋಳರ ಕಾಲದಲ್ಲಿ ಒಂದು ಭಯಂಕರ ಸ್ಥಳವಾಗಿತ್ತೆಂದು ಸ್ಥಳೀಯರ ಹೇಳಿಕೆಯೂ ಸಹ ಇದೆ.[10] ಈ ಊರಿಗೆ ಹತ್ತಿರದಲ್ಲಿಯೇ ಚಿಲಕವಾಡಿ ಬೆಟ್ಟ, ಕುಂತೂರು ಬೆಟ್ಟ, ಸಮೀಪದಲ್ಲಿದ್ದು ಕಾವೇರಿ ನದಿಯ ಪಕ್ಕದಲ್ಲಿಯೇ ತಡಿಮಾಲಂಗಿ, ಹೊಸಮಾಲಂಗಿ ಗ್ರಾಮಗಳು ಇವೆ. ಈ ಗ್ರಾಮದಲ್ಲಿ ದಲಿತರು ಮತ್ತು ಲಿಂಗಾಯಿತರು ವಾಸವಾಗಿದ್ದು ಜಾನಪದೀಯ ಹಿನ್ನೆಲೆಯಿಂದ ದಂಡಿನ ಮಾರಿಹಬ್ಬವನ್ನು ದಲಿತರು ಗ್ರಾಮದೇವತೆ ಹಬ್ಬವನ್ನಾಗಿ ಆಚರಿಸುತ್ತಾರೆ. ಈ ಹಬ್ಬ ದಲಿತರಿಗೆ ಮಾತ್ರ ಸೀಮಿತವಾಗಿದ್ದರು ಕೆಲವೊಂದು ಸಂಧರ್ಭದಲ್ಲಿ ಹರಕೆಯ ರೂಪದಲ್ಲಿ ಲಿಂಗಾಯಿತರು ಕೋಣ, ಕುರಿ, ಕೋಳಿಗಳನ್ನು, ಹೂವು, ಹೊಂಬಾಳೆ, ತೆಂಗಿನಕಾಯಿ ಮುಂತಾದವುಗಳನ್ನು ಕೊಡುವ ಪದ್ದತಿಯು ಪ್ರಾಚೀನ ಕಾಲದ ಪರಂಪರೆ ಎಂದೇ ಹೇಳಬಹುದು. ಈ ಒಂದು ಹಬ್ಬ ಹೆಚ್ಚು ಕಡಿಮೆ ಒಂದು ವಾರದ ತನಕ ನಡೆಯುತ್ತದೆ. ಈ ಚಿಕ್ಕಗ್ರಾಮದಲ್ಲಿ ಅನೇಕ ದೇವತೆಯ ಕುಲದವರೆಂದು ಹೇಳಿಕೊಳ್ಳುವ ಪರಿಪಾಠ ಈಗಲೂ ಎತ್ತಿ ತೋರುತ್ತದೆ. ಉದಾಹರಣೆಗೆ ದಂಡಿನ ಮಾರಮ್ಮ, ಪಾರ್ವತಿ, ತಿಬ್ಬಾದೇವಿ, ಬಾನಳ್ಳಿ ಸತ್ಯವತಿ,

ಚೆನ್ನದಮ್ಮ, ಚೌಡಮ್ಮ, ಮಾದಪ್ಪ, ಮಂಟೇಸ್ವಾಮಿ ಕುಲದವರೆಂದು ಕರೆದುಕೊಳ್ಳುತ್ತಾರೆ. ಈ ಜನರುಗಳು ಒಂದು ನಿಗಧಿಯಾದ ಸ್ಥಳದಲ್ಲಿ ಅಂದರೆ ಪ್ರಾಚೀನ ಕಾಲದಲ್ಲಿದ್ದಂತಹ ಸ್ಥಳದಲ್ಲಿ ಪೂಜಿಸುವ ವಾಡಿಕೆ ಇದೆ. ಊರ ಹುಡುಗ ಬೇವಿನ ಮರದ ಕೆಳಗೆ ಕುಳಿತು ಪೂಜೆ ಮಾಡುವ ಪ್ರವೃತ್ತಿ ಇದೆ. (ಲಿ) ಬೇವಿನ ಮರದ ಕಲ್ಲು ಜಗಲಿಯ ಮೇಲೆ ಪೂಜಿಸುವ ಪದ್ಧತಿ ಇದೆ. ಈ ಊರಿನ ವಿಶೇಷವೇನೆಂದರೆ ಹಬ್ಬ ಪ್ರಾರಂಭವಾಗುವುದಕ್ಕೆ ಮಂಚೆ ಬ್ರಾಹ್ಮಣ ಪುರೋಹಿತರು ದಂಡಿನ ಮಾರಿಗುಡಿ ಹೋಮ ಮಾಡಿ ನಂತರ ಹಬ್ಬ ಪ್ರಾರಂಭಿಸುವುದು. ಈ ಹಬ್ಬದ ವೈಶಿಷ್ಠತೆ ಏನೆಂದರೆ ಕುರಿ ಕಡಿಯುವುದು ದೇವರ ಪ್ರತಿರೂಪವೆಂದು ಹೇಳಿ ದೇವರು ಬಂದಿದೆ ಎಂದು ಕುಣಿಯುವುದು ದಂಡಿನ ಮಾರಿಗೆ ಕೋಣಗಳ ಬಲಿ, ಕತ್ತಿ ಪೂಜೆ, ಓಕಳಿ, ನಡೆಸುವ ಮೂಲಕ ಈ ಹಬ್ಬವನವನ್ನು ದಲಿತರು ಆಚರಣೆ, ಮಾಡುತ್ತಾರೆ. ಲಿಂಗಾಯಿತರು ಸಹ ಪೋಷಕರಂತೆ ಹಿಂದೆ ಇರುತ್ತಾರೆ. ಕಡೆಯ ದಿನ ದಲಿತರು ಬೀದಿಯ ಹೆಂಗಸರು ಅಲ್ಲಿಯ ಚಿಕ್ಕ ಚಿಕ್ಕ ಗಂಡು ಮಕ್ಕಳಿಗೆ ಅರಿಸಿನ ಕುಂಕುಮದ ನೀರನ್ನು ಎರಚುವುದು ಹಾಗೇ ಲಿಂಗಾಯಿತರು ಸಹ ಈ ದಲಿತ ಮಕ್ಕಳಿಗೆ ನೀರು ಎರಚುವ ಪದ್ಧತಿ ಇದೆ.

ತಗರಪುರ: – ಇದು ಸಹ ಇದೇ ತಾಲ್ಲೂಕಿಗೆ ಸೇರಿದ ಗ್ರಾಮ ಇಲ್ಲಿ ದಲಿತರು, ಕುರುಬರು, ಕುಂಬಾರರು, ಉಪ್ಪಾರರು, ಪರಿವಾರ ನಾಯಕರು, ಒಕ್ಕಲಿಗ ಗೌಡರು, ಬ್ರಾಹ್ಮಣರು, ಇವೇ ಮೊದಲಾದ ಜಾತಿಗಳು ಇವೆ. ಈ ತಗರಪುರ ಹೆಸರಿನ ಬಗ್ಗೆ ವಿಭಿನ್ನ ಹೇಳಿಕೆಗಳಿವೆ. ತಗರು, ತಗುರು, ತಗೂರು, ಟಗರು, ಎಂಬ ಅರ್ಥವನ್ನು ಸೂಚಿಸುತ್ತದೆ. ಈ ಗ್ರಾಮದಲ್ಲಿರುವ ಶಾಸನದ ಪ್ರಕಾರ ತಗ + ಪುರ್ = ತಗಪೂರ್ ಎಂಬ ಹೆಸರಿದೆ.[11] ತಗರಪುರದಲ್ಲಿ ನಡೆಯುವ ಮಾರಿಹಬ್ಬವನ್ನು ತಗುರಿಮಾರಿ ಹಬ್ಬವೆಂದು ಕರೆಯುತ್ತಾರೆ. ಗ್ರಾಮದ ಪ್ರತಿಯೊಂದು ಜಾತಿ ಜನಾಂಗದವರೂ ಸೇರಿ ಆಚರಿಸುತ್ತಾರೆ. ಆದರೆ ಈ ಹಬ್ಬದಲ್ಲಿ ಪ್ರಮುಖರೆಂದರೆ ದಲಿತರು ಮತ್ತು ಉಪ್ಪಾರರು. ಈ ಹಬ್ಬದ ವೈಶಿಷ್ಠವೇನೆಂದರೆ ಸುಮಾರು 9 ದಿನಗಳ ಹಬ್ಬವಾಗಿ ನಡೆಯುತ್ತಿದ್ದು ಇಲ್ಲಿಗೆ ಸತ್ತಿಗೆ ಸೂರಿಪಾನಿ ಮತ್ತು ಕೀಲುಗಳನ್ನು ಹೊರುವುದು. ಬೇವಿನ ಸೊಪ್ಪಿನ ಉಡುಗೆ, ಕುಣಿತ, ಕೋಲು ಕುಟ್ಟುವುದು, ಧೂಪದಾರತಿ ಸೇವೆ, ಪಾನಕ, ನೀರುಮಜ್ಜಿಗೆ, ಸಪ್ಪೆಹುಳ್ಳಿಸಂತರ್ಪಣೆ, ತಂಬಡಿಗೆ ಅಭೇಸ ಬರುವುದು, ಬಾಯಿಬೀಗದ ಸೇವೆ, ತಲೆಯ ಮೇಲೆ ಕಾಯಿ ಒಡೆದು ಹಕರೆ ಒಪ್ಪಿಸುವುದು, ಚಾವಟಿಯಿಂದ ಒಡೆದುಕೊಳ್ಳುವುದು, ಕೀಲು– ಸೂರಿಪಾನಿಗಳ ಮೆರವಣಿಗೆ, ಮಡೆ ಪೂಜೆ, ಕುರಿಗಳ ಬಲಿ, ತಂಬಿಟ್ಟನಾರತಿ, ಓಕುಳಿ ಅಥವಾ ಗೊರೆ ಮಾಸ್ತಿ ಅಥವಾ ಮಾಸ್ತಮ್ಮ ಉಡುಗೆ ಧರಿಸುವುದು ಮಾಸ್ತಿಧರಿಸಿ ಬೀದಿ ಬೀದಿಯಲ್ಲಿ

ಮೆರವಣಿಗೆಯ ಮೂಲಕ ಪಡಿ ಎತ್ತುವುದು. ಈ ರೀತಿಯಲ್ಲಿ ತಗರಪುರದಲ್ಲಿ 9 ದಿನಗಳ ಕಾಲ ಸಾಂಪ್ರದಾಯಿಕ ರೀತಿಯಲ್ಲಿ ಮಾರ್ಚ್ ತಿಂಗಳು ಈ ಮಾರಿ ಹಬ್ಬ ಜಾನಪದೀಯ ಹಿನ್ನೆಲೆಯನ್ನು ಧರಿಸಿಕೊಂಡು ನಡೆಯುತ್ತದೆ.

ತಿಮ್ಮರಾಜೀಪುರದ ಹೊನ್ನಳ್ಳಿ ಮಾರಿಹಬ್ಬ: – ತಿಮ್ಮರಾಜೀಪುರ ಗ್ರಾಮವು ಕೊಳ್ಳೇಗಾಲ ತಾಲ್ಲೂಕಿಗೆ ಸೇರಿದ ಒಂದು ಪ್ರಾಚೀನ ನೆಲೆ ಎಂದರೆ ತಪ್ಪಾಗದು. ಈ ಗ್ರಾಮವು ಮಂಟೇಸ್ವಾಮಿರವರ ಶಿಷ್ಯರಾದ ಕುರುಬನ ಕಟ್ಟೆನಿಂಗಯ್ಯ, ಚೆನ್ನಯ್ಯರವರ ಕಂಡಾಯಗಳ ಹಾಗೂ ಮಂಟೇಸ್ವಾಮಿಗಳ ಪರಂಪರೆಯ ಸಾಂಸ್ಕೃತಿಕ ಐತಿಹ್ಯವಿರುವ ಗ್ರಾಮವು ಸಹ ಹೌದು. ಈ ಸಾಂಸ್ಕೃತಿಕ ಹಿನ್ನೆಲೆ ಹೊಂದಿರುವ ಈ ಊರಿನಲ್ಲಿ ಹೊನ್ನಳ್ಳಿ ಮಾರಿ ಹಬ್ಬದ ಜೊತೆಗೆ ಮಂಟೇಸ್ವಾಮಿಯವರ ನಿಂಗಯ್ಯ ಚೆನ್ನಯ್ಯನವರ ಕೊಡದ ಹಬ್ಬವೂ ನಡೆಯುತ್ತದೆ. ತಿಮ್ಮರಾಜಿಪುರಕ್ಕೆ ಈ ಹೆಸರು ಬರಲು ಕಾರಣವೇನೆಂದರೆ ಮೈಸೂರು ಒಡೆಯರ ರಾಜಮನೆತನದಿಂದ ತಿಮ್ಮರಾಜ ಮತ್ತು ಕೆಂಪರಾಜ ಎಂಬ ಇಬ್ಬರು ಈ ಭಾಗದಲ್ಲಿ ಆಳ್ವಿಕೆ ನಡೆಸಿರುವುದಾಗಿ ಹಿರಿಯರ ಹೇಳಿಕೆ.[12] ಈ ಹಿನ್ನೆಲೆಯನ್ನು ಆಧಾರವಾಗಿಟ್ಟುಕೊಂಡು ತಿಮ್ಮರಾಜಿಪುರ ಮತ್ತು ಕೆಂಪನಪುರಗಳು ರಾಜರುಗಳ ಹೆಸರಿನಿಂದ ಇಂದಿಗೂ ಪುರ+ಪಾಳ್ಯ ಎಂಬ ಅಂಕಿತದಿಂದ ಉಳಿದುಕೊಂಡಿದೆ.[13] ಈ ಊರಿನಲ್ಲಿ ಮಾರಿ ಹಬ್ಬವನ್ನು ಆಚರಿಸುತ್ತಾರೆ ಇಲ್ಲಿಯ ವೈಶಿಷ್ಟ್ಯವೇನೆಂದರೆ ವಿಶೇಷವಾಗಿ ಮಾದಿಗ ಜನಾಂಗ ಮತ್ತು ಕುರುಬರು ಆಚರಿಸುತ್ತಾರೆ. ಮಾದಿಗರು ರಂಗ ನುಗ್ಗಿದ ತದನಂತರ ಊರ ಗೌಡರನ್ನು ಕರೆತಂದು ದೇವಾಲಯದಲ್ಲಿ ಕೂರಿಸಿದ ನಂತರ ರಂಗ ಸ್ಥಳದಲ್ಲಿಯೇ ತಮಟೆ ಒಡೆದುಕೊಂಡು ಕುಣಿಯುತ್ತಾರೆ. ಇಲ್ಲಿ ಮಂಟೇಸ್ವಾಮಿ ಕೊಂಡ ಸಹ ವಿಶೇಷವಾಗಿ ನಡೆಯುತ್ತದೆ.

ಪಾಳ್ಯದ ಸೀಗೆಮಾರಿ ಹಬ್ಬ: – ಇದು ಸಹ ಕೊಳ್ಳೇಗಾಲ ತಾಲ್ಲೂಕಿಗೆ ಸೇರಿದ ಗ್ರಾಮವಾಗಿದ್ದು ಇದು ಒಂದು ಹೋಬಳಿ ಕೇಂದ್ರವಾಗಿದೆ. ಈ ಪ್ರದೇಶ ಗಂಗರ ಮತ್ತು ವಿಜಯನಗರ ಅರಸರ ಕಾಲದಲ್ಲಿ ಒಂದು ಪ್ರಮುಖ ನೆಲೆಯಾಗಿತ್ತು. ಮೈಸೂರು ಒಡೆಯರ ಕಾಲದಲ್ಲಿಯೂ ಕೂಡ ಒಂದು ಪಾಳೇ ಪಟ್ಟಾಗಿತ್ತು. ಆದುದರಿಂದಲೇ ಪಾಳೇಗಾರನ ಪಾಳೇ ಪಟ್ಟಿನ (ಅಥವಾ) ಪಾಳೇ ಪಟ್ಟದ ಈ ನೆಲೆಗೆ "ಪಾಳ್ಯ" ಎಂಬ ಹೆಸರು ಬಂದಿದೆ.[14] ಈ ಗ್ರಾಮದಲ್ಲಿ ದಲಿತರು, ಪರಿವಾರನಾಯಕ, ಬೆಸ್ತ, ಕುರುಬ, ಕುಂಬಾರ, ಉಪ್ಪಾರ, ಮಡಿವಾಳ, ಅಕ್ಕಸಾಲಿಗ, ಗಾಣಿಗ, ಬಣಜಿಗ, ಲಿಂಗಾಯಿತ, ಒಕ್ಕಲಿಗಗೌಡ, ಬ್ರಾಹ್ಮಣ ಮೊದಲಾದ ಜಾತಿಗೆ ಸೇರಿದ ಜನಾಂಗಗಳು ಇವೆ. ಈ ಊರಿನ ಸೀಗೆಮಾರಿ ಹಬ್ಬ ಒಂದು ತಿಂಗಳ ಕಾಲ ನಡೆಯುವ ಹಬ್ಬವಾಗಿದೆ. ಸೀಗೆಮಾರಿ ಹಬ್ಬವನ್ನು ಈ ಗ್ರಾಮದ ದೇವತೆಯ ಹಬ್ಬವೆಂದು ಕರೆಯುತ್ತಾರೆ.[15] ಈ

ದೇವತೆಯನ್ನು ಗ್ರಾಮದ ಎಲ್ಲಾ ಜಾತಿ ಜನರು ಪೂಜಿಸುತ್ತಾರೆ. ಹಾಗೆಯೇ ಎಲ್ಲಾ ಜಾತಿಯ ಜನಾಂಗದವರು ಈ ದೇವತೆಯ ಹಬ್ಬವನ್ನು ಆಚರಿಸುತ್ತಾರೆ. ಹಿಂದೆ ಈ ಹಬ್ಬ ಪ್ರತೀ ವರ್ಷಕ್ಕೊಮ್ಮೆ ನಡೆಯುತ್ತಿತ್ತು. ಆದರೆ ಈಗ ನಾಲ್ಕು ಅಥವಾ ಐದು ವಷಗಳಿಗೊಮ್ಮೆ ಒಂದು ಬಾರಿ ನಡೆಯುವ ಪದ್ದತಿ ಇದೆ. ಇಲ್ಲಿಯ ವಿಶೇಷತೆ ಎಂದರೆ ಶೈವಧರ್ಮವನ್ನು ಅನುಸರಿಸುವ ಲಿಂಗಾಯಿತರು ಸೀಗೆಮಾರಮ್ಮನನ್ನು ಪೂಜಿಸುತ್ತಾರೆ. ಈ ಲಿಂಗಾಯಿತರ ಪ್ರಕಾರ ನಾವು ಲಿಂಗಾಯಿತರಲ್ಲ ಶುದ್ದ ಶೈವ ಶಿವಾರ್ಚಕರು ಇಡೀ ಕೊಳ್ಳೇಗಾಲ ತಾಲ್ಲೂಕಿನಲ್ಲಿ ಮೂವತ್ತಾರು ಕುಟುಂಬಗಳಿವೆ. ನಾವು ಲಿಂಗಾಯಿತರಿಗೆ ಹೆಣ್ಣು ಕೊಡುವುದಿಲ್ಲ ಮತ್ತೆ ಹಾಗೆಯೇ ಹೆಣ್ಣನ್ನು ಸಹ ತರುವುದಿಲ್ಲ ಎಂದು ಹೇಳುತ್ತಾರೆ. ಇವರ ಪ್ರಕಾರ ಹಬ್ಬದ ಸಮಯದಲ್ಲಿ ಬಲಿ ಬೀಳುವವರು ನಾಯಕರು, ಯಬ್ರೆ ಹೊರುವವರು ದಲಿತರು, ಈ ಗ್ರಾಮದಲ್ಲಿ ಹೆಬ್ಬರೆ ಗುಡಿ, ಬಲಿದೇವರ ಗುಡಿ ಸೀಗೆ ಮಾರಮ್ಮನ ಗುಡಿ, ಸಾಕದೇವಮ್ಮನ ಗುಡಿ, ಬೊಮ್ಮಪ್ಪನ ಗುಡಿ, ಸೀಗೆಮಾರಮ್ಮನ ಗುಡಿ, ಸಾಕದೇವಮ್ಮನ ಗುಡಿ, ಬೊಮ್ಮಪ್ಪನ ಗುಡಿ ಪೀಠಗಳು ಕಂಡುಬರುತ್ತವೆ. ಈ ಹಬ್ಬದಲ್ಲಿ ಸತ್ತಿಗೆ, ಸೂರಿಪಾನಿಗಳು, ಕೇಲುಗಳು, ಬಲಿಕೇಲು, ದೊಡ್ಡಕೇಲು, ಹೊಳಗೆರೆ ಹುಚ್ಚಮ್ಮನ ಕೇಲು, ಸಾಕದೇವಮ್ಮನ ಪಡೆ, ಕೊಂಡ ಬೆಳಗುವುದು ಈ ರೀತಿಯಲ್ಲಿ ಜಾನಪದೀಯ ರೀತಿಯಲ್ಲಿ ಹಬ್ಬವನ್ನು ಆಚರಿಸುತ್ತಾರೆ.

ತೇರಂಬಳ್ಳಿಯ ತರದಗಂಡದ ಮಾರಿ ಹಬ್ಬ: – ತೇರಂಬಳ್ಳಿ ಕೊಳ್ಳೇಗಾಲ ತಾಲ್ಲೂಕಿನ ಒಂದು ಗ್ರಾಮ. ಈ ಗ್ರಾಮದ ಎಲ್ಲಾ ಜಾತಿ ಜನಾಂಗಗಳು ಸೇರಿ ಮಾಡುವ ಗ್ರಾಮದ ಹಬ್ಬವೇ ತರದ ಗೆಂಡದ ಮಾರಿ ಹಬ್ಬ ಈ ಗ್ರಾಮದಲ್ಲಿ ಹೊಲೆಯೂರು, ಮಡಿವಾಳರು, ಕುರುಬರು, ಕಲಸಿಗಳು, ಆಚಾರಿಗಳು, ಲಿಂಗಾಯಿತರು, ಮೊದಲಾದ ಜನಾಂಗದವರು ಇದ್ದಾರೆ. ತರದ ಗಂಡದ ಮಾರಿ ಹಬ್ಬವನ್ನು ಊರಿನ ಎಲ್ಲರೂ ಸೇರಿ ಆಚರಿಸುತ್ತಾರೆ. ಕಲ್ಲಿನಿಂದ ಕೆತ್ತಿದ ಒಂದು ಶಿಲ್ಪವಿದ್ದು ಮಣಿಸರ ಕೋರೆಹಲ್ಲು ಮತ್ತು ವಿವಿಧ ಆಭರಣಗಳನ್ನು ಧರಿಸಿದ್ದಾಳೆ. ಇದು ಹೆಚ್ಚಾಗಿ ದಲಿತರಿಗೆ ಸೀಮಿತವಾದದ್ದು ಮತ್ತೊಂದು ಮದ್ದೂರಮ್ಮನ ಗುಡಿ ಇದೆ ಇಲ್ಲಿ ಹನ್ನೆರಡು ಚಿಕ್ಕ ಚಿಕ್ಕ ಕಲ್ಲುಗಳನ್ನು ಸಾಲಾಗಿ ನೆಡಲಾಗಿದೆ. ಅವುಗಳ ಪೈಕಿ ದೊಡ್ಡದಾಗಿರುವುದು ಮದ್ದೂರಮ್ಮ. ಉಳಿದವು ಅಕ್ಕ-ತಂಗಿಯರ ಸಂಕೇತಗಳೆಂದು ಜನ ಹೇಳುತ್ತಾರೆ. ಈ ಶಿಲ್ಪಗಳಿಗೆ ಅನೇಕ ಪ್ರಾಣಿಗಳನ್ನು ಬಲಿ ಕೊಡುತ್ತಾರೆ. ರಾವಳ ದೇವರ ಗುಡಿ ಮತ್ತು ಈ ಗ್ರಾಮದಲ್ಲಿ ರಾವಳ ದೇವರ ಒಕ್ಕಲಿನ ಜನರಿದ್ದಾರೆ. ಇಲ್ಲಿ ನಡೆಯುವ ತರದ ಗಂಡದ ಮಾರಿ ಹಬ್ಬದ ಸಮಯದಲ್ಲಿ ರಾವಳ ದೇವರಿಗೆ (ಶಿಲ್ಪಕ್ಕೆ) ವಿಶೇಷ ಪೂಜೆ ಸಲ್ಲಿಸುವ ಪರಿಪಾಠವಿದೆ. ಮತ್ತೊಂದು ರಾವಣಾಸುರನ

ಮೂರ್ತಿ ಶಿಲ್ಪವಿದೆ. ಇದರ ಪಕ್ಕದಲ್ಲಿ ಸುಮಾರು ಬಿಡಿ ಶಿಲ್ಪಗಳಿವೆ. ಆದರೆ ಇದನ್ನು ಲಿಂಗಾಯಿತರನ್ನು ಬಿಟ್ಟು ಉಳಿದ ಎಲ್ಲಾ ಕೋಮಿನವರು ಪೂಜಿಸುತ್ತಾರೆ. ಈ ಗ್ರಾಮದಲ್ಲಿ ಮಾರಿಹಬ್ಬ ಎಂಟು ದಿನ ನಡೆಯುತ್ತವೆ. ಇಲ್ಲಿಯೂ ರಂಗ ಕಟ್ಟುವುದು ರಂಗಕ್ಕೆ ಗ್ರಾಮದ ನಾಡಗೌಡರನ್ನು ಆಹ್ವಾನಿಸಿ ದಲಿತರು ರಂಗದಲ್ಲಿ ಕುಣಿಯುವ ಪರಿ ಪಾಠವಿದೆ. ಇಲ್ಲಿ ಮದುವೆಯಾದ ಒಬ್ಬ ಗಂಡಸರನ್ನು ಆಯ್ಕೆ ಮಾಡಿ ಈ ವ್ಯಕ್ತಿಗೆ ಮಾಸ್ತಿ (ಅಥವಾ) ಮಹಾಸತಿಯಾಗಿ ಅಲಂಕರಿಸಲಾಗುತ್ತದೆ. ಈ ವ್ಯಕ್ತಿಗೆ ಕೆಂಪು ಅಥವಾ ಹಸಿರು ಸೀರೆ. ರವಿಕೆ, ಕಿವಿ ಮತ್ತು ಮೂಗಿಗೆ ಮೂಗುತಿ, ಓಲೆ, ತಲೆಗೆ ಹೂವು ಮುಡಿಸುತ್ತಾರೆ. ಇದನ್ನೇ ಮಾಸ್ತಿ ಅಥವಾ ಸತಿ ಮಾರಮ್ಮ ಎಂಬೆಲ್ಲಾ ಹೆಸರುಗಳಿಂದ ಕರೆಯುತ್ತಾರೆ.

ಕುಂತೂರು ಕುಣಿಯಾಟದ ಮಾರಮ್ಮ: – ಕುಂತೂರು ಕೊಳ್ಳೇಗಾಲ ತಾಲ್ಲೂಕಿಗೆ ಸೇರಿದ ಒಂದು ಗ್ರಾಮ ಈ ಊರಿಗೆ ಹತ್ತಿರದಲ್ಲಿಯೇ ಎರಡು ಬೆಟ್ಟಗಳಿದ್ದು ಒಂದು ಶಂಭುಲಿಂಗಬೆಟ್ಟ, ಮತ್ತೊಂದು ಪ್ರಭುಲಿಂಗಸ್ವಾಮಿ ಬೆಟ್ಟವೆಂದು ಹೆಸರು ಪಡೆದಿದೆ. ಶಂಭುಲಿಂಗ ಕ್ಷೇತ್ರವು ವೀರಶೈವ ಧರ್ಮದ ನೆಲೆಯಾಗಿದ್ದು ಇಲ್ಲಿ ದುರ್ಗಿ ದೇವಾಲಯ, ಶಂಭುಲಿಂಗ ದೇವಾಲಯ, ಸಿದ್ಧೇಶ್ವರ ದೇವಾಲಯ ಬೆಟ್ಟದ ಮೇಲೆ ಗವಿಗಳು, ಮಠಗಳು ಇತ್ತೀಚೆಗೆ ನಿಜಗುಣಾನುಭವ ಮಂಟಪವನ್ನು ಕಟ್ಟಲಾಗಿದೆ. ಕ್ರಿ.ಶ. 5ನೇ ಶತಮಾನದಲ್ಲಿ ವೀರ ಶೈವ ದೊರೆ ಈ ಭಾಗದಲ್ಲಿ ಆಳ್ವಿಕೆ ನಡಸುತ್ತಿದ್ದನೆಂಬ ಹೇಳಿಕೆಯೂ ಸಹ ಇದೆ. ಹಾಗೆಯೇ ಪ್ರಭುಲಿಂಗ ಬೆಟ್ಟದಲ್ಲಿ ಪ್ರಭುಲಿಂಗಸ್ವಾಮಿಯ ಶಿವಲಿಂಗ ಇದೆ. ಪ್ರಾಚೀನ ಕಾಲದಲ್ಲಿ ಮಲೈಮಹದೇಶ್ವರಸ್ವಾಮಿ ಸುತ್ತೂರು ಕ್ಷೇತ್ರದಿಂದ ಬಂದು ಈ ಬೆಟ್ಟದಲ್ಲಿ ಸುಮಾರು ಕಾಲ ನೆಲೆಸಿ ನಂತರ ಕೊಳ್ಳೇಗಾಲದ ಮರಡಿಗುಡ್ಡದ ಮೇಲೆ ಮಂಡಿಯೂರಿ ತದ ನಂತರ ಮಲೈಮಹದೇಶ್ವರನ ಬೆಟ್ಟದಲ್ಲಿ ನೆಲೆಸಿದ್ದಾನೆಂದು ಅನೇಕ ಜಾನಪದೀಯ ಪುರಾವೆಗಳ ಐತಿಹ್ಯಗಳು ಅನೇಕ ಜಾನಪದೀಯ ದೇವರ ಗುಡ್ಡರು ಈ ದೇವರ ಮೇಲೆ ಹಲವಾರು ಭಕ್ತಿ ಹಾಡುಗಳ ಮೂಲಕ ಬೆಳಕು ಚೆಲ್ಲಿದ್ದಾರೆ. ಕುಂತೂರು ಗ್ರಾಮದಲ್ಲೂ ಜಾನಪದೀಯ ಮಾರಿಹಬ್ಬದ ಆಚರಣೆಯೂ ರೂಢಿಯಲ್ಲಿದೆ. ಕುಂತೂರು ಮಾರಿಹಬ್ಬದ ಸಮಯದಲ್ಲಿ ಜಾನಪದ ಕಲೆಗಳಾದ ರಂಗದ ಕುಣಿತ, ಕೋಲಾಟ, ಒಗಟು, ಹಾಸ್ಯ, ಹುಲಿಯಾಟ, ಕೋಲೆಬಸವ ಮೊದಲಾದ ಕಲಾ ಪ್ರದರ್ಶನಕ್ಕೆ ಕುಂತೂರು ಮಾರಿಹಬ್ಬ ಹೆಸರುವಾಸಿಯಾಗಿದೆ. ಈ ಗ್ರಾಮದಲ್ಲಿ ಮಾರಿಗುಡಿ, ನಾಯಕರ ಮಾರಿಗುಡಿ, ಕರುಗಲ್ಲ ಮಾರಿಗುಡಿ, ಮುದ್ದಲೆ ದೇವರ ಮನೆ, ಹಟ್ಟಿ ಮಾರಮ್ಮನ ಗುಡಿ, ಈ ದೇವರಗುಡಿ,

ಪ್ರಾಚೀನ ಕಾಲದ ಮಹಾಲಿಂಗೇಶ್ವರ ದೇವಾಲಯಗಳು ಕಂಡುಬರುತ್ತವೆ. ಈ ಗ್ರಾಮದಲ್ಲಿಯೂ ಮೇಲೆ ತಿಳಿಸಿರುವ ಗ್ರಾಮಗಳ ಮಾದರಿಯಲ್ಲಿಯೇ ಹಬ್ಬವನ್ನು ಆಚರಿಸುತ್ತಾರೆ.

ಮಧುವನಹಳ್ಳಿಯ ಮಾರಿಹಬ್ಬ: – ಕೊಳ್ಳೇಗಾಲದಿಂದ ಪೂರ್ವ ದಿಕ್ಕಿಗೆ ಎರಡುವರೆ ಕಿಲೋ ಮೀಟರ್ ದೂರದಲ್ಲಿ ಮಧುವನಹಳ್ಳಿ ಇದೆ. ಈ ಊರಿನಲ್ಲಿ ಬಹುತೇಕ ಎಲ್ಲಾ ಜಾತಿಯವರು ಇದ್ದಾರೆ. ಮಧುವನಹಳ್ಳಿಯಲ್ಲಿ ಮಾರಿಹಬ್ಬವನ್ನೂ ಜಾನಪದೀಯ ದೃಷ್ಟಿಕೋನದಿಂದ ವಿಶೇಷವಾಗಿ ನಾಯಕರು ಮತ್ತು ದಲಿತರು ಆಚರಿಸುತ್ತಾರೆ. ಮಧುವನಹಳ್ಳಿಯಲ್ಲಿ ಒಂದು ವಾರ ಕಾಲ ಹಬ್ಬವನ್ನು ಆಚರಿಸುತ್ತಾರೆ. ಇಲ್ಲಿ ವಿಶೇಷ ಪೂಜೆ ನಡೆಯುತ್ತದೆ. ತಮಟೆ, ಡೋಲು ಬಾರಿಸಿಕೊಂಡು ಕುಣಿಯುವುದು ಪ್ರಾಚೀನ ಪರಂಪರೆ ಎಂಬ ಅಂಥ ಎದ್ದು ಕಾಣುತ್ತದೆ. ಇಲ್ಲಿ ಸತ್ತಿಗೆ, ಸೂರಪಾನಿ ಮುಂತಾದವುಗಳನ್ನು ದೇವರ ಪ್ರತಿರೂಪವೆಂದು ಮಾರಿ ಹಬ್ಬದ ಸಂದರ್ಭದಲ್ಲಿ ಆಚರಿಸುತ್ತಾರೆ.

ದೊಡ್ಡಿಂದೂವಾಡಿಯಮಾರಿಹಬ್ಬ (ಅಥವಾ) ತಂಪು ಮಾರಿಹಬ್ಬ: – ದೊಡ್ಡಿಂದುವಾಡಿಯಲ್ಲಿಯೂ ಮಾರಿಹಬ್ಬವನ್ನು ಆಚರಿಸುತ್ತಾರೆ ಆದರೆ ಈಗ ಪ್ರಾಚೀನ ಪರಂಪರೆಗೆ ಪೂರಕವಾಗಿ ವಿಶೇಷವಾಗಿದೆ ಎಂದು ಹೇಳಬಹುದು. ಕಾರಣವೇನೆಂದರೆ ಪ್ರಾಚೀನ ಕಾಲದಲ್ಲಿ ಊರಿನ ಎಲ್ಲಾ ಜನಾಂಗದವರು ಸೇರಿ ಹಬ್ಬವನ್ನು ಆಚರಿಸುತ್ತಿದ್ದರು ಆದರೆ ಇತ್ತೀಚೆಗೆ ಆಯಾ ಕೋಮಿನ ಜನಾಂಗದವರು ತಮ್ಮ ಅನುಕೂಲತೆಗೆ ತಕ್ಕಂತೆ ಆಚರಿಸುವ ಪ್ರವೃತ್ತಿ ಇದೆ. ಆದರೂ ಸಹ ವರ್ಷಕ್ಕೆ ಒಂದು ಬಾರಿ ಈ ಮಾರಿ ಹಬ್ಬವನ್ನು ಸಡಗರದಿಂದ ಆಚರಿಸುತ್ತಾರೆ. ಇಲ್ಲಿ ಕೇವಲ ಒಂದೇ ದಿನದ ಆಚರಣೆಯಲ್ಲಿರುತ್ತದೆ. ಈ ಹಬ್ಬದ ದಿವಸ ಊರಿನಿಂದ ಹೊರಗೆ ಇರುವ ಕನಕಗಿರಿ ಬೆಟ್ಟದ ಮೇಲಿರುವ ತಾಯಿಗೆ ವಿಶೇಷಪೂಜೆಪುನಸ್ಕಾರ ಮಾಡಿ, ತಂಪು (ತಂಬಿಟ್ಟು) ಪೂಜೆ ವಿಶೇಷವಾಗಿ ನಡೆಯುತ್ತದೆ. ಕೆಲವರು ದೇವಿಗೆ ಕೋಳಿ, ಕುರಿಗಳನ್ನು ಬಲಿಕೊಡುವ ಪ್ರವೃತ್ತಿ ಸಹ ಇದೆ. ಈ ನಿಟ್ಟಿನಲ್ಲಿ ಇಂತಹ ಕೆಲವಾರು ನೀತಿ ನಿಯಮ ಪದ್ಧತಿಗಳನ್ನು ಮಾರಿ ಹಬ್ಬಗಳಲ್ಲಿ ಹಲವು ಗ್ರಾಮಗಳಲ್ಲಿ ಕಾಣುತ್ತೇವೆ. ಇದು ನಮ್ಮ ಕಾಲಕ್ಕೆ ಸೇರಿದ ಒಂದು ಪರಂಪರೆಯಲ್ಲಿ ಇದರ ಪ್ರಾಚೀನತೆಯನ್ನು ಅನುಸರಿಸಿ ನೋಡುವುದಾದರೆ ಸಿಂಧು ಬಯಲಿನ ನಾಗರೀಕತೆಯ ಜನರ ಕೆಲವೊಂದು ಆಚಾರ ವಿಚಾರ–ಸಂಪ್ರಾದಾಯಗಳನ್ನು ಅನೇಕ ಆಧಾರಗಳಿಂದ ಕಾಣಬಹುದಾಗಿದೆ.[16],[17],[18],[19] ಇಂದು ಜನರು ತಮ್ಮ ಜನಾಂಗದ ಪೂರ್ವಿಕ ಪರಂಪರೆಯ ಹಿನ್ನೆಲೆಯಲ್ಲಿ ಬಂದಿರುವ ತಮ್ಮ ಸ್ಥಳೀಯರೇ ಆದ ಸ್ತ್ರೀ,ಪುರುಷ, ದೇವತೆಗಳನ್ನು ತಮ್ಮ ರೀತಿಯೇ ಮನುಷ್ಯರಾಗಿರುವುದುಂಟು ಎಂದು ಭಾವಿಸಿ ಅನೇಕ ರೀತಿಯ ಎಡೆಹಾಕುವ

ಪರಂಪರೆ ಸಹ ಇದೆ. ಇಂದಿಗೂ ಯಾರೂ ಗ್ರಾಮ ದೇವತೆ ಹಬ್ಬವೆಂದು ಹೇಳುವುದಿಲ್ಲ ಅದಕ್ಕೆ ಬದಲಾಗಿ ಮಾರಿ ಹಬ್ಬ, ಮಾರಮ್ಮ ಮನೆದೇವರಮ್ಮ, ಅಮ್ಮ, ಅವ್ವ, ತಾಯಿ, ಎಂದು ಕರೆದು ಬೇಡುತ್ತಾರೆ. ಈ ರೀತಿಯ ಪರಿಪಾಠವನ್ನು ನಾವು ಅನೇಕ ಗ್ರಾಮಾಂತರ ಪ್ರದೇಶಗಳಲ್ಲಿ ಕಾಣುತ್ತೇವೆ. ಈ ಒಂದು ಹಿನ್ನೆಲೆಯನ್ನು ಆಧಾರಿಸಿ ಇಲ್ಲ ಕೆಲವೇ-ಕೆಲವು ಊರುಗಳ ಕೆಲವೊಂದು ಜಾನಪದೀಯ ಹಬ್ಬ ಆಚರಣೆಯ ವಿಷಯಗಳನ್ನು ಇಲ್ಲಿ ನೀಡಲಾಗಿದೆ.

ಜಾತ್ರೆಗಳು: – ಭಾರತದೇಶ ಹಿಂದೂ ಸಂಸ್ಕೃತಿಯನ್ನು ಬಹುತೇಕವಾಗಿ ವ್ಯಾಪಿಸಿದೆ ಅದರ ಜೊತೆಗೆ ಇನ್ನೂ ಹಲವಾರು ಸಂಸ್ಕೃತಿಯ ಜನಾಂಗ ಇದೆ. ಈ ಜನಾಂಗಗಳು ತಮ್ಮದೇ ಆದ ರೀತಿಯಲ್ಲಿ ಹಬ್ಬಗಳನ್ನು ಆಚರಿಸಿ ಕೆಲವೊಂದು ಜಾತ್ರೆಗಳು ಸಹ ನಡೆಯುತ್ತಾ ಬಂದಿದೆ. ಈ ಹಿನ್ನೆಲೆಯಿಂದ ಹಬ್ಬಗಳ ಜೊತೆಗೆ ವರ್ಷಕ್ಕೆ ಒಂದು ಬಾರಿ ಅಥವಾ ಕೆಲವು ವರ್ಷಗಳಿಗೆ ಒಂದು ಬಾರಿ ಜಾತ್ರೆಯು ನಡೆಯುತ್ತದೆ. ಇವುಗಳನ್ನು ಅವಲೋಕಿಸಿ ನೋಡಿದಾಗ ಮೈಸೂರು ಪ್ರಾಂತ್ಯದಲ್ಲಿ ನೂರಾರು ವರ್ಷಗಳಿಂದ ಕಲೆ ಸಂಸ್ಕೃತಿ, ಜಾನಪದೀಯ ಸಂಸ್ಕೃತಿಗಳು ಕಂಡು ಬರುತ್ತವೆ. ಒಂದು ಸಮಾಜದ ಸಂಸ್ಕೃತಿ ಏನೆಂದು ತಿಳಿಯಬೇಕಾದರೆ ಇಲ್ಲಿನ ಜನ ಯಾವ ರೀತಿಯಲ್ಲಿ ಒಟ್ಟಾಗಿ ಸೇರಿ ಹಬ್ಬಗಳನ್ನು ದೇವರ ಕೆಲಸಕಾರ್ಯಗಳನ್ನು ನಡೆಸುತ್ತಾರೆ ಎಂಬುದನ್ನು ನೋಡಬೇಕು. ಅಂತಹ ಹಬ್ಬಗಳಲ್ಲಿ ಭಾಗವಹಿಸಿದಾಗ ಅದರ ಅರ್ಥ ಅದರಿಂದ ಎಲ್ಲರೂ ಸೇರಿ ಪಡೆಯುವ ಆನಂದ ಇವುಗಳ ಅರಿವು ಉಂಟಾಗುತ್ತದೆ. ಕೆಲವು ಹಬ್ಬಗಳು ಅದ ನಂತರ ಕೆಲವೊಂದು ಹಬ್ಬದ ಸಮಯದಲ್ಲಿ ಜಾತ್ರೆಗಳು ನಡೆಯುತ್ತವೆ. ಇವುಗಳನ್ನು ಅವಲೋಕಿಸಿದಾಗ ಕೊಳ್ಳೇಗಾಲ ತಾಲ್ಲೂಕಿನಲ್ಲೂ ಹಬ್ಬಗಳ ಜೊತೆ-ಜೊತೆಯಲ್ಲಿ ಜಾತ್ರೆಗಳು ನಡೆಯುತ್ತವೆ. ಅವುಗಳಲ್ಲಿ ಪ್ರಮುಖವಾಗಿ ಚಿಕ್ಕಲ್ಲೂರು ಜಾತ್ರೆ, ಮಹದೇಶ್ವರ ಬೆಟ್ಟದ ಜಾತ್ರೆ, ಹೊಂಡರಬಾಳು ಜಾತ್ರೆ ಬೂದುಬಾಳು ಜಾತ್ರೆ, ಪ್ರಮುಖವಾಗಿವೆ.

ಚಿಕ್ಕಲ್ಲೂರು ಜಾತ್ರೆ: – ಚಿಕ್ಕಲ್ಲೂರು ಕೊಳ್ಳೇಗಾಲ ತಾಲ್ಲೂಕಿನ ಒಂದು ಪ್ರಮುಖ ಕೇಂದ್ರ ಕೊಳ್ಳೇಗಾಲ ಪಟ್ಟಣದಿಂದ ಸುಮಾರು 26ಕಿಲೋ ಮೀಟರ್ ದೂರದಲ್ಲಿ ಚಿಕ್ಕಲ್ಲೂರು ಕ್ಷೇತ್ರವಿದೆ. ಚಿಕ್ಕಲ್ಲೂರಿನಿಂದ ಹೆಚ್ಚು ಕಡಿಮೆ 6 ಕಿಲೋಮೀಟರ್ ದೂರದಲ್ಲಿ ಕಾವೇರಿ ನದಿ ಹರಿಯುತ್ತದೆ. ಅಲ್ಲದೆ ಪ್ರಸಿದ್ದ ಸ್ಥಳ ಮುತ್ತತ್ತಿಗೂ ಹತ್ತಿರದಲ್ಲಿದೆ. ಈ ಕ್ಷೇತ್ರದ ಮಲೈಮಹದೇಶ್ವರ ಪರಂಪರೆಯಷ್ಟೇ ಪ್ರಮುಖವಾದ ಹಳೇ ಮೈಸೂರು ಪ್ರಾಂತ್ಯದ ಮತ್ತೊಂದು ಪರಂಪರೆ ಎಂದರೆ ಮಂಟೇಸ್ವಾಮಿ ಪರಂಪರೆ. ಈ ಚಿಕ್ಕಲ್ಲೂರು ಜಾತ್ರೆ ಮಂಟೇಸ್ವಾಮಿ ಪರಂಪರೆಗೆ ಸೇರಿದ್ದು ಮಾದೇಶ್ವರ ಸಮಕಾಲೀನರೆಂಬಂತೆ ತಿಳಿದುಬರುವ ಮಂಟೇಸ್ವಾಮಿಗಳೂ ಸಹ ಕ್ರಿ.ಶ. 15-16ನೇ

ಶತಮಾನದಲ್ಲಿದ್ದ ಸಿದ್ಧ ಪುರುಷ ಇವರು ಉತ್ತರ ಕರ್ನಾಟಕದ ಕೊಡೆಕಲ್ಲು ಬಸವಣ್ಣನ ಶಿಷ್ಯರಾಗಿದ್ದು ಕಾಲ ಸಿದ್ಧಿ ಪಡೆದು ಅಲ್ಲಿಂದ ಮೈಸೂರು ಸೀಮೆಗೆ ಬಂದರು, ಮಂಡ್ಯ ಜಿಲ್ಲೆ ಮಳವಳ್ಳಿ ತಾಲ್ಲೂಕು ಬೊಪ್ಪೇಗೌಡನ ಪುರದಲ್ಲಿ ಇವರು ಐಕ್ಯರಾದರು ರಾಚಪ್ಪಾಜಿ, ದೊಡ್ಡಮ್ಮ ತಾಯಿ, ಚೆನ್ನಾಜಮ್ಮ, ಸಿದ್ಧಪ್ಪಾಜಿ, ಪಲಾರದಯ್ಯ, ಲಿಂಗಯ್ಯ, ಚನ್ನಯ್ಯ, ಮೊದಲಾದವರು ಮಂಟೇಸ್ವಾಮಿಗಳ ಶಿಷ್ಯರು, ಗುರುವಿನ ಅಪೇಕ್ಷೆಯಂತೆ ಸಿದ್ಧಪ್ಪಾಜಿ ಹಲಗೂರು ಪಂಚಾಚಾರಿ ರವರಿಂದ ಭಿಕ್ಷೆ ತಂದು ಬೋಪ್ಪೇಗೌಡನ ಪುರದಲ್ಲಿ ಅವರಿಗೆ ಮಠವನ್ನು ಸ್ಥಾಪನೆ ಮಾಡುತ್ತಾರೆ.[20] ನಂತರ ಗುರುಗಳ ಅಪ್ಪಣೆಯಂತೆ ಚಿಕ್ಕಲ್ಲೂರುಗೆ ಬಂದು ನೆಲೆಸುತ್ತಾರೆ. ವರ್ಷಕ್ಕೊಮ್ಮೆ ಜನವರಿ ಅಥವಾ ಫೆಬ್ರವರಿ ತಿಂಗಳಲ್ಲಿ ಚಿಕ್ಕಲ್ಲೂರು ಜಾತ್ರೆ ಐದು ದಿನಗಳ ಕಾಲ ನಡೆಯುತ್ತದೆ. ಬೋಪ್ಪೇಗೌಡನಪುರದ ಶ್ರೀ ಮಂಟೇಸ್ವಾಮಿ ಮಠದ ಗುರುಗಳು ಅಥವಾ ಸ್ವಾಮಿಗಳೂ ಜಾತ್ರೆಯನ್ನು ನಡೆಸುತ್ತಾರೆ ಮೈಸೂರು ಒಡೆಯರ ಮೂಲಕ್ಕೆ ಸೇರಿದ ಇವರು ಈ ಪರಂಪರೆಯ ಗುರುಸ್ಥಾನದಲ್ಲಿದ್ದಾರೆ. ಮೈಸೂರು ಒಡೆಯರು ಮಂಟೇಸ್ವಾಮಿ ಒಕ್ಕಲಾಗಿದ್ದು ಚಿಕ್ಕಲ್ಲೂರು, ಕಪ್ಪಡಿ ಬೋಪ್ಪೇಗೌಡನ ಪುರದ ಜಾತ್ರೆಗಳಿಗೆ ಬಂದು ಹೊಗುತ್ತಿದ್ದರೆಂದೂ ತಿಳಿದು ಬರುತ್ತದೆ. ಇಂದಿಗೂ ಈ ಗುರುಮಠದ ಜೊತೆ ಸಂಬಂಧವಿದೆ. ಸಿದ್ಧಪ್ಪಾಜಿ ಮಂಟೇಸ್ವಾಮಿ ಶಿಷ್ಯರಾದಂತೆ ಒಕ್ಕಲಾಗುವ ಸಮುದಾಯಗಳ ಗಂಡು ಮಕ್ಕಳಿಗೆ ನೀಲಗಾರ ದೀಕ್ಷೆ ಕೊಡಿಸುವ ಪದ್ದತಿ ಇದೆ. ಮಂಟೇಸ್ವಾಮಿ ಸಿದ್ಧಪ್ಪಾಜಿ ಹೆಸರಿನಲ್ಲಿ ಮಣಿಧಾರಣೆ ಮಾಡಿಸಿಕೊಳ್ಳುವ ಇವರನ್ನು ನೀಲಗಾರರು ಎನ್ನಲಾಗುತ್ತದ. ಇವರು ತಂಬೂರಿ ನುಡಿಸುತ್ತಾ ಮಂಟೇಸ್ವಾಮಿ ಮತ್ತವರ ಶಿಷ್ಯರ ಜೀವನ ಸಾಧನೆಗಳನ್ನು ಜನಪದ ಕಾವ್ಯವಾಗಿ ಹಾಡುತ್ತಾರೆ. ಅದೇ ಮಂಟೇಸ್ವಾಮಿ ಕಾವ್ಯ ಧರೆಗೆ ದೊಡ್ಡವರ ಕಥೆ ವಚನ ಎಂದು ಕರೆಯಲ್ಪಡುತ್ತದೆ.[21] ಐದು ದಿನಗಳ ಚಿಕ್ಕಲ್ಲೂರು ಜಾತ್ರೆಯಲ್ಲಿ ಮೊದಲ ದಿನ ದೊಡ್ಡವರ ಸೇವೆ. ಮೂರನೇಯದಿನ ಮುಡಿಸೇವೆ, ನಾಲ್ಕನೇ ದಿನ ಸಿದ್ಧರ ಸೇವೆ ಐದನೇಯ ದಿನ ಮುತ್ತತ್ತಿರಾಯನಸೇವೆಗಳು ನಡೆಯುತ್ತದೆ. ಬೆಂಗಳೂರು ಗ್ರಾಮಾಂತರ ಜಿಲ್ಲೆ ಒಳಗೊಂಡು ಹಳೇ ಮೈಸೂರು ಪ್ರಾಂತ್ಯದ ಎಲ್ಲಾ ಭಾಗದ ಲಕ್ಷಾಂತರ ಜನರು ಈ ಜಾತ್ರೆಗೆ ಸೇರುತ್ತಾರೆ. ಕೊನೆಯದಿನ ಮರಿ, ಕುರಿ, ಕೋಳಿ ಬಲಿಕೊಟ್ಟು ಪೂಜೆ ಪುರಸ್ಕಾರ ಮಾಡಿ ಜಾತ್ರೆಯನ್ನು ಆಚರಿಸುತ್ತಾರೆ.

ಮಲೈಮಹದೇಶ್ವರ ಜಾತ್ರೆ: – ಹಳೇ ಮೈಸೂರು ಪ್ರಾಂತ್ಯದ ಸೀಮೆಯಲ್ಲಿ ಅತ್ಯಂತ ಪ್ರಮುಖ ಜಾತ್ರೆಗಳಲ್ಲಿ ಮಲೈಮಾದೇಶ್ವರ ಜಾತ್ರೆ ಒಂದು ಕೊಳ್ಳೇಗಾಲ ತಾಲ್ಲೂಕಿನಲ್ಲಿ ಮಾದೇಶ್ವರ ಜನ ಪ್ರಿಯ ದೇವ ಈ ಪ್ರಾಂತ್ಯದ ಬಹುತೇಕ ಎಲ್ಲಾ ಜನರು ನಡೆದುಕೊಳ್ಳುವ ನಿರ್ದಿಷ್ಟ ಸಮುದಾಯಗಳನ್ನು ಒಕ್ಕಲು ಪಡೆದಿರುವ ಮಾದೇಶ್ವರನ ದೇವಾಲಯ ಮಾದೇಶ್ವರ ಶಿಶು

ಮಕ್ಕಳಾಗಿ ಮಣಿಧಾರಣೆ ಮಾಡಿಸಿಕೊಳ್ಳುವವರನ್ನು ಮಾದೇಶ್ವರ ದೇವರಗುಡ್ಡರು ಅಥವಾ ಕಂಸಾಳೆಗುಡ್ಡರು ಎಂದು ಕರೆಯುತ್ತಾರೆ. ಇವರು ಮಲೈಮಹದೇಶ್ವರವ ಜೀವನ ಸಾಧನೆಗಳನ್ನು ಒಳಗೊಂಡಿರುವ ಮಲೈ ಮಾದೇಶ್ವರನ ಮೌಖಿಕ ಕಾವ್ಯವನ್ನು ಹಾಡುತ್ತಾರೆ ಬಹುತೇಕ ಇವರು ದಲಿತರು ಹಾಗೂ ಹಿಂದುಳಿದವರು ಎಂದು ಹೇಳಬಹುದು. ಮಲೈಮಾದೇಶ್ವರ ಚಾರಿತ್ರಿಕ ವ್ಯಕ್ತಿಯಾಗಿದ್ದು ಈತ ಶ್ರೀ ಶೈಲದಿಂದ ದಕ್ಷಿಣ ಭಾಗದಲ್ಲಿನ ಮೈಸೂರು ಪ್ರಾಂತ್ಯದ ಕತ್ತಲ ರಾಜ್ಯಕ್ಕೆ ಬಂದು ಜನಕಲ್ಯಾಣ ಮಾಡಿ ಇಲ್ಲೇ ನೆಲೆ ನಿಂತನೆಂದು ಹಲವು ಶಾಸನಗಳು, ಸಾಹಿತ್ಯ, ಕೃತಿಗಳು ಈತನನ್ನು ಕುರಿತು ಉಲ್ಲೇಖಿಸುತ್ತದೆ.[22] ಕ್ರಿ.ಶ. 1838ರಲ್ಲಿದ್ದ ದೇವಚಂದ್ರನ ರಾಜಾವಳಿ ಕಥಾಸಾರದಲ್ಲಿ ಈತನನ್ನು ಮಾದಿಗ ಸಮುದಾಯಕ್ಕೆ ಸೇರಿದವನೆಂದು ಹೇಳಲಾಗುತ್ತದೆ. ಹಾಗೆಯೇ ಈತ ವೀರಶೈವನೆಂಬ ವಾದವೂ ಸಹ ಇದೆ. ಕ್ರಿ.ಶ. 15–16ನೇ ಶತಮಾನಗಳ ನಡುವೆ ದೊಡ್ಡ ಸಾಮಾಜಿಕ ಸಾಂಸ್ಕೃತಿಕ ಆಂದೋಲನ ಮಾಡಿದ ಮಾದೇಶ್ವರ ಈ ಭಾಗದ ಹಲವಾರು ಬುಡಕಟ್ಟು, ದಲಿತ, ಹಿಂದುಳಿದ ಸಮುದಾಯಗಳನ್ನು ಒಕ್ಕಲಾಗಿ ಪಡೆದು ತನ್ನದೇ ಆದ ವಿಶಿಷ್ಠ ಪರ್ಯಾಯ ಪಂಥ ಸೃಷ್ಠಿಸಿದ್ದಾನೆ, ಮಲೈಮಾದೇಶ್ವರನ ಬೆಟ್ಟದ ಜಾತ್ರೆ ಕರ್ನಾಟಕದಾದ್ಯಂತ ಜನಪ್ರಿಯ ಪಡೆದಿದೆ. ಯುಗಾದಿ, ಶಿವರಾತ್ರಿ, ದೀಪಾವಳಿ ಗೌರಿ ಮೊದಲಾದ ತಿಂಗಳು ವಿಶೇಷ ಜಾತ್ರೆ ನಡೆಯುತ್ತದೆ. ಲಕ್ಷಾಂತರ ಜನ ಬಂದು ಹೋಗುತ್ತಾರೆ. ಮಲೈಮಾದೇಶ್ವರ ಕಾವ್ಯ ಕರ್ನಾಟಕದ ಕನ್ನಡದ ಅತ್ಯಂತ ಪ್ರಮುಖ ಜನಪದ ಕಾವ್ಯವಾಗಿದ್ದು ಇದು ಕೊಳ್ಳೇಗಾಲ ತಾಲ್ಲೂಕು ಹಾಗೂ ಚಾಮರಾಜನಗರ ಜಿಲ್ಲೆಯ ಒಂದು ದೊಡ್ಡ ಕೊಡುಗೆಯಾಗಿದೆ. ಫಿನ್‌ಲ್ಯಾಂಡಿನ ಕಲೆವಾಲ ಜನಪದ ಕಾವ್ಯ ವಿಶ್ವದ ಮೊದಲ ಹಾಗೂ ಬಹುದೊಡ್ಡ ಕಾವ್ಯ ಎನಿಸಿದರೆ ಮಲೈಮಹದೇಶ್ವರರ ಕಾವ್ಯ ಎರಡನೆಯ ಮಹಾಕಾವ್ಯ ಎನಿಸಿರುವುದು ಒಂದು ಹೆಮ್ಮೆಯ ಸಂಗತಿ. ಮಲೈಮಹದೇಶ್ವರ ಕ್ರಿ.ಶ. 12ನೇ ಶತಮಾನದ ವಚನ ಚಳುವಳಿಯಂತೆ 15–16ನೇ ಶತಮಾನದಲ್ಲಿ ಸಾಮಾಜಿಕ ಸಾಂಸ್ಕೃತಿಕ ಬದಲಾವಣೆಯನ್ನು ತಂದ ಸಿದ್ಧಪುರುಷ ಈತ ಶೈವ ಸಿದ್ಧನಾದ ಪಂಥಗಳ ಶಂಕರರೂಪಿಯಾಗಿ ಮುಂದುವರಿದ ಸಂತ, ಈತ ದಲಿತರು, ಬುಡಕಟ್ಟು, ಸೋಲಿಗ, ಹಿಂದುಳಿದ ಜನಾಂಗಗಳ ಸುಧಾರಣೆ ಹಾಗೂ ಅಭಿವೃದ್ಧಿ ಮತ್ತು ಬದಲಾವಣೆಗೆ ಶ್ರಮಿಸಿದ್ದಾನೆ. ಈ ಎಲ್ಲಾ ಸಮುದಾಯಗಳು ಈತನನ್ನು ದೈವನಾಗಿ ಪೂಜಿಸುತ್ತಾನೆ, ಬೇಡರು ಮಲೈಮಹದೇಶ್ವರ ದೇವಾಲಯದ ತಬಡಿಗಳಾಗಿ ಪೂಜೆ ಮಾಡುತ್ತಾರೆ. ಹೀಗೆ ಈಗ ವಿಶೇಷವಾಗಿ ಮಲೈಮಹದೇಶ್ವರನ ಬೆಟ್ಟದಲ್ಲಿ ಆಗಾಗ್ಗೆ ಜಾತ್ರೆಗಳು ನಡೆಯುತ್ತಿರುತ್ತವೆ.

ಹೊಂಡರಬಾಳು ಜಾತ್ರೆ (ಸಿದ್ಧೇಶ್ವರನ ಬೆಟ್ಟದ ಜಾತ್ರೆ): – ಕೊಳ್ಳೇಗಾಲ ಪಟ್ಟಣಕ್ಕೆ ಸುಮಾರು ಮೂರುವರೆ ಕಿಲೋಮೀಟರ್ ದೂರದಲ್ಲಿ ಹೊಂಡರಬಾಳು ಶ್ರೀ (**ಸಿದ್ಧೇಶ್ವರ** ತಾಣ (ಬೆಟ್ಟ)ವಿದೆ. ಇಲ್ಲಿ ನಡೆಯುವ ಜಾತ್ರೆಯನ್ನು ಸಿದ್ಧಪ್ಪನಬೆಟ್ಟದ ಜಾತ್ರೆ ಅಥವಾ ಹೊಂಡರಬಾಳು ಜಾತ್ರೆ ಎಂದು ಕರೆಯುತ್ತಾರೆ. ಮೈಸೂರು ದಸರಾ ನವರಾತ್ರಿ ಉತ್ಸವಕ್ಕೆ ಮುನ್ನ ಈ ಜಾತ್ರೆಯಲ್ಲೂ ಚಿಗುರು ಕಡಿಯುವ (ಬನ್ನಿ) ಆಚರಣೆ ಇದ್ದು ಮೈಸೂರು ದಸರಾಕ್ಕೂ ಜಾತ್ರೆಗೂ ನಂಟಿದೆ ಎಂದು ಹೇಳುತ್ತಾರೆ.[23] ಸುಮಾರು ಒಂದು ವಾರಗಳ ಕಾಲ 7 ದಿನ ನಡೆಯುವ ಈ ಜಾತ್ರೆಯಲ್ಲಿ ರಥೋತ್ಸವ ಮತ್ತು ಕೊಂಡೋತ್ಸವಗಳು ಮುಖ್ಯ. ಹೊಂಡರಬಾಳಲ್ಲಿ ಪ್ರಾಚೀನವಾದ ದೇವಾಲಯವಿದ್ದು ಅದು ಮಲೈಮಾದೇಶ್ವರ ಹಾಗೂ ವೀರಶೈವ ಗುರು ಪರಂಪರೆ ಜೊತೆ ಗುರುತಿಸಿಕೊಳ್ಳುತ್ತದೆ. ಹೊಂಡರಬಾಳಿನ ಮಠದ ಗುರುಗಳು ಜಾತ್ರೆಯ ಆಚರಣೆಗಳಲ್ಲಿ ಮುಖ್ಯ ಪಾತ್ರವಹಿಸಿರುತ್ತಾರೆ. ರಥೋತ್ಸವದ ರಾತ್ರಿ ನಡೆಯುವ ಮದ್ದುಗಾರಿಕೆಗೆ (ಪಟಾಕಿ ಸುಡುವುದು) ಹೊಂಡರಬಾಳು ಜಾತ್ರೆಗೆ ಹೆಸರುವಾಸಿ ಸಿದ್ಧೇಶ್ವರ ಬೆಟ್ಟದ ಮೇಲಿನ ಸಿದ್ಧಪನಿಗೆ ಈ ಜಾತ್ರೆ ಆಚರಣೆಗಳು ಅರ್ಪಿತ. ಈ ಸಿದ್ಧಪ್ಪ ಬೇರೆ ಯಾರು ಅಲ್ಲ ಮರಳಸಿದ್ಧ, ಮರುಳ ಶಂಕರ, ದೇವರೇ ಎಂದು ನಂಬಿಕೆ ಇದೆ. ಕೊಳ್ಳೇಗಾಲದ ಸಮೀಪದಲ್ಲಿರುವ ಕಾವೇರಿ ನದಿಯಿಂದ ಹೊಸ ನೀರು ತಂದು ಸಿದ್ಧಪ್ಪನ ಮೂರ್ತಿಯನ್ನು ಶುಚಿಗೊಳಿಸುವ ಪದ್ಧತಿ ಜಾತ್ರೆ ಸಂಧರ್ಭದಲ್ಲಿ ನಡೆಯುತ್ತದೆ. ಹೊಂಡರಬಾಳು ಬೆಟ್ಟದ ಮೇಲೆ ನೂರಾರು ಕಲ್ಲುಗಳು ನೆಟ್ಟ ಸಮಾಧಿಯ ಅವಶೇಷಗಳಂತಹ ಕುರುಹುಗಳಿವೆ. ಇವು ಶಿಲಾಯುಗದ ಕಾಲಕ್ಕೆ ಸಂಬಂಧಿಸಿದಂತೆ ಕಾಣುತ್ತದೆ. ಈ ಹಿನ್ನೆಲೆಯಲ್ಲಿ ಹೊಂಡರಬಾಳು ಬೆಟ್ಟ ಪ್ರದೇಶ ಹಾಗೂ ಪರಿಸರದಲ್ಲೆಲ್ಲವೂ ಹೆಚ್ಚು ಅಧ್ಯಯನವಾಗಬೇಕಿದೆ.

ಬೂದುಬಾಳು ಜಾತ್ರೆ: – ಕೊಳ್ಳೇಗಾಲ ತಾಲ್ಲೂಕಿನ ಬೂದುಬಾಳು ಗ್ರಾಮದಲ್ಲಿ ವೆಂಕಟರಮಣಸ್ವಾಮಿಯ ಪ್ರಸಿದ್ದ ದೇವಾಲಯವಿದೆ. ಇದು ಕೊಳ್ಳೇಗಾಲ ಭಾಗದಲ್ಲಿ ಚಿಕ್ಕ ತಿರುಪತಿ ಎಂದು ಹೆಸುರುವಾಸಿಯಾಗಿದೆ. ವರ್ಷದಲ್ಲಿ ಒಂದು ಬಾರಿ ಇಲ್ಲಿ ಜಾತ್ರೆ ನಡೆಯುತ್ತದೆ. ಇದು ಮೂರು ದಿನಗಳ ಜಾತ್ರೆ. ಮೊದಲ ದಿನ ತೇರು (ರಥೋತ್ಸವ) ನಡೆಯುತ್ತದೆ, ಎರಡನೇಯ ದಿನ ವಧೆ ಅಥವಾ ರಾಕ್ಷಸನ ಸಂಹಾರ, ಮೂರನೇ ದಿನ ವಸಂತೋತ್ಸವ (ತಪೋತ್ಸವ) ನಡೆಯುತ್ತದೆ. ಬೂದುಬಾಳು ಜಾತ್ರೆ ಒಂದು ಗ್ರಾಮದೇವತೆಯ ಜಾತ್ರೆಯಂತೆ ಕಂಡರೂ ಇಡೀ ತಾಲ್ಲೂಕಿನ, ಜಿಲ್ಲೆಯ ಹಾಗು ರಾಜ್ಯದ ವಿವಿಧ ಕಡೆಗಳಿಂದ ಭಕ್ತಾಧಿಗಳು

ಆಗಮಿಸುತ್ತಾರೆ. ಮುಖ್ಯವಾಗಿ ಇದು ವೈಷ್ಣವ ಪಂಥದ (ಅಥವಾ) ನಾರಾಯಣಸ್ವಾಮಿ ಒಕ್ಕಲಿನ ಸಮುದಾಯಗಳು ಸೇರಿ ನಡೆಸುವಂತೆ ಜಾತ್ರೆಯಾಗಿದೆ.

ವಿವಿಧ ಕಡೆಗಳಿಂದ ಬರುವ ಒಕ್ಕಲಿನವರು ಹಾಗೂ ಭಕ್ತಾಧಿಗಳು ಜಾತ್ರೆಯಲ್ಲಿ ಭಾಗವಹಿಸುತ್ತಾರೆ ಸಿಹಿ ಅಡುಗೆ, ಕಾರದ ಅಡುಗೆ, ಎರಡನ್ನು ಮಾಡಿ ಊಟ ಮಾಡುವ ಪದ್ಧತಿ ಈ ಬೂದುಬಾಳ ಜಾತ್ರೆಯಲ್ಲಿದೆ. ಈ ಜಾತ್ರೆಯಲ್ಲಿ ಹರಿಕಥೆ ಮಾಡುವ ಸಂಪ್ರದಾಯ ಬೆಳೆದು ಬಂದಿದೆ. ದೇವಾಸುರರ ಪುರಾಣಗಳನ್ನು ಪ್ರಸ್ತಾಪಿಸಿ ಅವರನ್ನು ಸಂಹರಿಸುವುದು ಒಂದು ದಿನದ ಜಾತ್ರೆಯಾಗಿದೆ. ಅದನ್ನು ರಾಕ್ಷಸಸಂಹಾರ ಎನ್ನುತ್ತಾರೆ ಕೊನೆಯ ದಿನ ನಾರಾಯಣಸ್ವಾಮಿ ತೆಪ್ಪೋತ್ಸವ ನಡೆಯುತ್ತದೆ. ಈ ಜಾತ್ರೆಯ ಮೊದಲ ದಿನದ ರಥೋತ್ಸವ ಅತ್ಯಂತ ವಿಜೃಂಭಣೆಯಿಂದ ನಡೆಯುತ್ತದೆ. ಈ ರಥೋತ್ಸವ ದಿನದ ಅತ್ಯಂತ ಆಕರ್ಷಣೆ ಕಾರ್ಯಕ್ರಮವೆಂದರೆ ತೇರಿಗೆ ಹಣ್ಣು ಮತ್ತು ಜವನ ಎಸೆಯುವುದು, ತಮಟೆ ಮೇಳ ಪ್ರಮುಖವಾಗಿರುತ್ತದೆ. ಹೀಗೆ ಹಲವಾರು ಕಾರ್ಯಕ್ರಮಗಳ ಜೊತೆ-ಜೊತೆಯಲ್ಲಿ ಬೂದುಬಾಳು ಜಾತ್ರೆ ನಡೆಯುತ್ತದೆ.

ಅಡಿ ಟಿಪ್ಪಣಿಗಳು

---

[1] ಮೈಸೂರು ಜಿಲ್ಲೆಯ ಗೆಜಿಟಿಯರ್‌ನಲ್ಲಿರುವ ನಕ್ಷೆಯನ್ನು ಆಧಾರಿಸಿ ಬರೆಯಲಾಗಿದೆ.

[2] ಈ ತಾಲ್ಲೂಕಿನಲ್ಲಿ ಈ ದೇವರುಗಳ ಹೆಸರುಗಳು ಇರುವುದೆ ಸರ್ವೇಸಾಮಾನ್ಯವಾಗಿ ಪ್ರತೀ ಹಳ್ಳಿಯಲ್ಲೂ ಪ್ರಚಲಿತದಲ್ಲಿದ್ದೆ.

[3] ಹೆಸರಾಂತ ಜಾನಪದ ಕಲಾವಿದ ಮಳವಳ್ಳಿ ಮಹಾದೇವರವರ ಜಾನಪದ ಹಾಡುಗಳು.

[4] ಡಾ: ಪಿ.ಕೆ. ರಾಜಶೇಖರ್‌ರವರ ಜಾನಪದೀಯ ಭಕ್ತಿಗೀತೆಗಳು.

[5] ಸೋಮಶೇಖರ ಇದೂಪುರ ರವರ ಕರ್ನಾಟಕದ ಸ್ತ್ರೀ ಗ್ರಾಮದೇವತೆಗಳು ಜಾನಪದ ಸಾಹಿತ್ಯ (ಭಾಗ – 8)

[6] ಎಂ. ಚಿದಾನಂದಮೂರ್ತಿರವರ ಜಾನಪದ ಸಾಹಿತ್ಯ ದರ್ಶನ (ಭಾಗ –11)

[7] ಎನ್. ಆರ್. ನಾಯಕರವರ – ಜಾನಪದ ಸಾಹಿತ್ಯ ದರ್ಶನ

[8] ಮಹದೇವು ಶಂಕನಪುರವರ ಮಾರಿ ಹಬ್ಬಗಳು

[9] ಡಾ: ಸಿದ್ದಲಿಂಗಯ್ಯರವರ ಗ್ರಾಮದೇವತೆಗಳು

[10] ಶಿಲ್ಕಲ್‌ಪುರದ ಹಿರಿಯ ಯಜಮಾನರುಗಳ ಹೇಳಿಕೆಯ ಪ್ರಕಾರ ಬರೆಯಲಾಗಿದೆ.

[11] ಎ.ಕ.ಸಂ. 4 ಶಾಸನ ಸಂಖ್ಯೆ 11 ಕೊಳ್ಳೇಗಾಲ ತಗರಪುರದ ಮಾರಿ ಗುಡಿಯ ಮುಂದೆ ಇರುವ ಶಾಸನ ಪ್ರಕಾರ

[12] ತಿಮ್ಮರಾಜೇಪುರದ ವೀರಶೈವ ಜನಾಂಗರಾದ ಪುಟ್ಟಮಾದಪ್ಪರವರ ಹೇಳಿಕೆ.

[13] ತಿಮ್ಮರಾಜ ಮತ್ತು ಕೆಂಪರಾಜ ಮತ್ತು ಕೆಂಪ ರಾಜಮ್ಮಣ್ಣಿ ಎಂಬ ಹೆಸರುಗಳು ಮೈಸೂರು ಅರಸರ ಕಾಲದಲ್ಲಿ ಕಂಡು ಬರುತ್ತದೆ.

[14] ಐತಿಹ್ಯ ಆಧಾರಿತ ಹೇಳಿಕೆಗಳನ್ನು ಹೋಲಿಕೆ ಮಾಡಿಕೊಂಡು ರಚಿಸಲಾಗಿದೆ.

[15] ಊರಿನವರ ಎಲ್ಲಾ ಜನಾಂಗದವರ ಹೇಳಿಕೆಗಳನ್ನು ಆಧರಿಸಿದೆ.

[16] ಎಂ. ಚಿದಾನಂದಮೂರ್ತಿರವರ ಜಾನಪದ ಸಾಹಿತ್ಯ ದರ್ಶನ (ಭಾಗ–i) ಮತ್ತು (ಭಾಗ–ii)

[17] ಡಾ॥ ಸಿದ್ದಲಿಂಗಯ್ಯರವರ ಗ್ರಾಮ ದೇವತೆಗಳು.

[18] ಹಿ.ಚಿ.ಬೋರಲಿಂಗಯ್ಯರವರ ಕರ್ನಾಟಕ ಜನಪದ ಕಲೆಗಳ ಕೋಶ ಮತ್ತು ಉಜ್ಜಯನಿ ಚೌಡಮ್ಮ ಪುತಕ.

[19] ಸೋಮಶೇಖರ ಇದ್ರೂಪುರ ಕರ್ನಾಟಕ ಸ್ತ್ರೀ ಗ್ರಾಮ ದೇವತೆಗಳು ಜಾನಪದ ಸಾಹಿತ್ಯ.

[20] ಬೊಪ್ಪೇಗೌಡನಪುರದ ಗುರುಗಳ ಹೇಳಿಕೆಗಳು.

[21] ಚಿಕ್ಕಲ್ಲೂರು ಮಠದ ಗುರುಗಳ ಹೇಳಿಕೆಗಳು.

[22] ಡಾ॥ ಪಿ.ಕೆ. ರಾಜಶೇಖರ ರವರ ಜಾನಪದೀಯ ಹಾಡುಗಳು

[23] ಹೊಂಡರಬಾಳು ಮಠದ ಗುರುಗಳ ಹೇಳಿಕೆಗಳು

ಅಧ್ಯಾಯ – 6

ರಾವಳೇಶ್ವರ – ರಾಕಸಮ್ಮ ಸಂಸ್ಕೃತಿ ಈ ಭಾಗದಲ್ಲಿ

ಹಳೇಮೈಸೂರು ಪ್ರಾಂತ್ಯಕ್ಕೆ ಸೇರಿದ ಪ್ರದೇಶಗಳಾದ ಕೊಳ್ಳೇಗಾಲ ಅಥವಾ ತೊರೆಯನಾಡಿನ ಸಂಸ್ಕೃತಿಯಲ್ಲಿ ತಲಕಾಡಿನ ಗಂಗರ ಮತ್ತು ತಂಜಾವೂರಿನ ಚೋಳರ ಕಾಲದಲ್ಲಿ ಚಾಮರಾಜನಗರ ಜಿಲ್ಲೆ, ಮೈಸೂರು ಜಿಲ್ಲೆ, ಮಂಡ್ಯ ಜಿಲ್ಲೆಗಳಲ್ಲಿ ರಾವಳೇಶ್ವರನ ಸಂಸ್ಕೃತಿಗಳು ಕಂಡುಬರುತ್ತದೆ. ಅದರಲ್ಲಿ ಚಾಮರಾಜನಗರ ಜಿಲ್ಲೆಗೆ ಸೇರಿದ ಕೊಳ್ಳೇಗಾಲ ತಾಲ್ಲೂಕಿನ ಪ್ರಾಂತ್ಯದಲ್ಲೂ ಹಲವಾರು ಗ್ರಾಮಗಳಲ್ಲಿ ರಾವಳೇಶ್ವರ ಮತ್ತು ರಾಕಸಮ್ಮನ ಸಂಸ್ಕೃತಿ ಕಂಡು ಬಂದು ಅದಕ್ಕೆ ಪೂರಕವಾಗಿ ಶಿಲ್ಪ ಸಂಸ್ಕೃತಿಯೂ ಕೂಡ ಕಂಡು ಬರುತ್ತದೆ.[1] ರಾವಳೇಶ್ವರನ ನೆಲೆ ಸಾಂಸ್ಕೃತಿಕವಾಗಿ ಕೊಳ್ಳೇಗಾಲ ತಾಲ್ಲೂಕಿನ ಗ್ರಾಮಗಳಾದ ತಗರಪುರ, ಕಜ್ಜಿಹುಂಡಿ, ಕುಂತೂರು, ತೇರಬಳ್ಳಿ, ಉತ್ತಂಬಳ್ಳಿ, ಮುಡಿಗುಂಡ, ಕುಣಗಳ್ಳಿ, ಕೊಳ್ಳೇಗಾಲ (ಚಿತ್ರ ಸಂಖ್ಯೆ 40 ಮತ್ತು 41) ಹಳ್ಳೇಅಣಗಳ್ಳಿ, (ಚಿತ್ರ ಸಂಖ್ಯೆ 42) ಹೊಸಅಣಗಳ್ಳಿ, ಮಧುವನಹಳ್ಳಿ, ಪಾಳ್ಯ, ದೊಡ್ಡಿಂದುವಾಡಿ, ಸತ್ತೇಗಾಲ, ಕಾಮಗೆರೆ, (ಚಿತ್ರ 43) ಹನೂರು, ಅಜ್ಜೀಪುರ, ಮುಳ್ಳೂರು, ಧನಗೆರೆ ಮೊದಲಾದ ಊರುಗಳಲ್ಲಿ ಈ ಸಂಸ್ಕೃತಿಗೆ ಸೇರಿದ ಶಿಲ್ಪಗಳು ಕಂಡುಬರುತ್ತವೆ. ತಲಕಾಡು ಗಂಗರ ರಾಜ್ಯದಲ್ಲಿ ರಾಜಧಾನಿಯಾಗಿ ಮೆರೆದಿತ್ತು. ತಲಕಾಡು ಗಂಗರ ಕಾಲ ಕ್ರಿ.ಶ. 325 ರಿಂದ ಕ್ರಿ.ಶ. 1004ರ ವರೆಗೆ ಜೈನರ ಸಂಸ್ಕೃತಿಗೆ ಧರ್ಮಕ್ಕೆ ರಾಜನಾದ ರಾಚಮಲ್ಲ ಮತ್ತು ಮಂತ್ರಿಯಾಗಿ ಹಾಗೂ ದಂಡನಾಯಕ ಚಾಮುಂಡರಾಯ ಈ ಭಾಗದಲ್ಲಿ ಆಡಳಿತ ನಡೆಸುತ್ತಿದ್ದನು. ಈತನ ತಾಯಿ ಪ್ರೀತಿಯಿಂದ ಚಾಮುಂಡರಾಯನನ್ನು ಗೊಮ್ಮಟೇಶ್ವರನೆಂದು ಕರೆಯುತ್ತಿದ್ದಳು. ಇವನು ಗಂಗೆ ಕುಲದವನಾಗಿದ್ದನು. ಮೈಸೂರು ಜಿಲ್ಲೆಯ ತಿ.ನರಸೀಪುರ ತಾಲ್ಲೂಕಿನ ಆಲುಗೂಡಿನಲ್ಲಿ ಚಾಮುಂಡರಾಯನ ವಂಶಾವಳಿಯ ಬಗ್ಗೆ ಶಾಸನವಿದೆ. [2] [3] ಭಾರತದ ಇತಿಹಾಸದಲ್ಲಿ ತಲಕಾಡು ಮತ್ತು ಶ್ರವಣ ಬೆಳಗೊಳ ಅಜರಾಮರದಂತಿದೆ. ತಾಯಿಯ ಆಸೆಯಂತೆ ಶ್ರವಣಬೆಳಗೊಳದಲ್ಲಿ ಗೊಮ್ಮಟೇಶ್ವರನ ನಿರ್ವಾಣ ಮೂರ್ತಿಯನ್ನು ಚಾಮುಂಡರಾಯನು ಕ್ರಿ.ಶ. 983ರಲ್ಲಿ ಪ್ರತಿಸ್ಥಾಪಿಸಿ ವಿಶ್ವದಲ್ಲಿ ಶಾಂತಿ ಮತ್ತು ಅಹಿಂಸೆಯ ಬೆಳಕನ್ನು ಪ್ರಕಾಶಿಸಿದನು. ಭಾರತದ ಇತಿಹಾಸ ಆಚಂದ್ರಾರ್ಕವಾಗಿ ಈಗ ಉಳಿದಿದೆ.[4] ಕ್ರಿ.ಶ. 1004 ರಿಂದ ಕ್ರಿ.ಶ 1116ರವರೆಗೆ ಕೊಳ್ಳೇಗಾಲ ಭಾಗ ಮತ್ತು ಕರ್ನಾಟಕದ ಆಗ್ನೇಯ ಭಾಗ ಚೋಳರ ಒಂದು ಕಾಲವಾಗಿತ್ತು ಗಂಗರರಾಜ ಮತ್ತು ಚಾಮುಂಡರಾಯನನ್ನು ವಧಿಸಲ್ಪಟ್ಟಿತ್ತು ನಂತರ ಅಧಿಕಾರಕ್ಕೋಸ್ಕರ ವೈಧಿಕ ಧರ್ಮದ

ಪುನರುತಾನ ಸಿದ್ದಪುರುಷ ಪ್ರಚಾರಕ್ಕೆ ಬಂದನು. ರಾಜ ಪ್ರತ್ಯಕ್ಷದೇವತಾ ಎಂಬ ಗಾದೆ ಮಾತಿನಂತೆ "ರಾಮಾಯಸ್ವತಿಃ" ಮತ್ತು "ರಾವಾಣಾನಸ್ವತಿ" ಎಂದು ಅಧಿಕಾರ ಮಾಡಿರುತ್ತಾನೆ. ಈ ಕಾಲದಲ್ಲಿ ರಾವಳೇಶ್ವರ ಶಿಲ್ಪಗಳು ಮತ್ತು ಮುಡಿಕೊಂಡೇಶ್ವರನ ಶಿಲ್ಪಗಳು ಪ್ರಧಾನವಾಗಿ ಕೆತ್ತಲ್ಪಟ್ಟಿದೆ. ಹೀಗೆ ರಾಜನ ವೈಯಕ್ತಿಕ ಜೀವನದ ಬದುಕಿನ ಗುಣಗಳಿಗೆ ಕಥೆಯನ್ನು ಮೂರ್ತಿ ಶಿಲ್ಪಗಳಲ್ಲಿ ಸಂದರ್ಭನುಸಾರವಾಗಿ ಕೆತ್ತಲ್ಪಟ್ಟಿತ್ತು. ಅಂದು ಶಿಲ್ಪಕಲಾವಿದರೂ ಸತ್ಯಸಂಗತಿಯನ್ನು ಸುಂದರವಾಗಿ ಮೂಡಿಸಿದ್ದಾರೆ. ಒಟ್ಟಾರೆಯಾಗಿ ಹೇಳುವುದಾದರೆ ರಾಜನ ಗುಣಗಾನ ಮಾಡುವಾಗ ಪ್ರಾಂತೀಯವಾಗಿ ಪುರಾಣ, ಕಲ್ಪನೆಗಳನ್ನು ಸ್ಥಳೀಯ ಗ್ರಾಮಸ್ಥರು ಹೇಳುತ್ತಾರೆ. ಅದರಂತೆ 1. ತಲೆ ರಾವಣ, 2. ರಾಜ ಪ್ರತ್ಯಕ್ಷ ದೇವತಾ, 3. ತಲೆ (ತ್ರಿಮೂರ್ತಿ ಸ್ವರೂಪ).5, ತಲೆ (ವಿಶ್ವಕರ್ಮ ಮತ್ತು ಮಹೇಶ್ವರ) ಹತ್ತು. ತಲೆ ರಾವಣ ಹಾಗೆಯೇ ಅವನ ಕುಟುಂಬ ಇಬ್ಬರು ಪತ್ನಿಯರು, ಮಗ, ಗಂಗಮಾಳಮ್ಮ ರಾಕಸಮ್ಮ ಮತ್ತು ರಾಜಪುತ್ರ ಮಗುವಿನ ರೂಪದಲ್ಲಿ ಈ ಭಾಗದಲ್ಲಿ ಶಿಲ್ಪಗಳು ಕಂಡು ಬರುತ್ತವೆ. ಶಿಲ್ಪ ಆ ಕಾಲದಲ್ಲಿ ಮೌಖಿಕ ಶಾಸನಗಳೆಂದು ಕರೆಯಲಾಗುತ್ತದೆ. ಪ್ರಾಯಶಃ ಈ ಭಾಗದಲ್ಲಿ ಸೂಕ್ಷ್ಮವಾಗಿ ಅಧ್ಯಯನ ಮಾಡಿದರೆ ಈ ಶಿಲ್ಪಗಳು ಚೋಳರ ಕಾಲದಲ್ಲಿ ಕೆತ್ತಲ್ಪಟ್ಟಿದೆ ಎಂದು ಹೇಳುತ್ತಾರೆ. ಆದ ಕಾರಣ ಚೋಳರ ಕಾಲದ ಶಿಲ್ಪಗಳು ಮತ್ತು ದೇವಾಲಯಗಳು ಹಾಗೂ ಶಾಸನಗಳು ಸಹ ಕೊಳ್ಳೇಗಾಲ ಪ್ರಾಂತ್ಯದಲ್ಲಿ ಕಂಡು ಬರುತ್ತವೆ.[5] ಕೊಳ್ಳೇಗಾಲ ತಾಲ್ಲೂಕಿನಲ್ಲಿ ರಾವಳೇಶ್ವರನ ಸಂಸ್ಕೃತಿ ಅನೇಕ ಊರುಗಳಲ್ಲಿ ಕಂಡುಬರುತ್ತವೆ. ಸಾಂಸ್ಕೃತಿಕವಾಗಿ ಮದುವೆ ಮಾಡುವ ಸಂದರ್ಭದಲ್ಲಿ ಗಂಡು ಮತ್ತು ಹೆಣ್ಣಿನ ಕುಲಗೋತ್ರ ಹೇಳುವಾಗ ಗಂಡು ದೇವರು ರಾವಳೇಶ್ವರ ಮತ್ತು ಹೆಣ್ಣು ದೇವರ ಚೌಡೇಶ್ವರಿ ಮುಂತಾದ ಹೆಸರುಗಳನ್ನು ಹೇಳುತ್ತಾರೆ. ಈ ರೀತಿ ಎಲ್ಲಾ ಜನಾಂಗದಲ್ಲಿ ಸುಮಾರು 16 ಜಾತಿಯಲ್ಲಿ ಕಂಡು ಬರುತ್ತವೆ.

ಆದಿಕರ್ನಾಟಕ, ಆದಿ ಜಾಂಬದ, ನಾಯಕ (ಗಂಗೆಮತ), ಕುರುಬಗೌಡ, ಕುಂಬಾರ, ಲಿಂಗಾಯಿತ, ನಯನ ಕ್ಷತ್ರಿಯ (ಕೆಲಸಿ), ಮಡಿವಾಳ, ಗಾಣಿಗೆಶೆಟ್ಟರು, ಉಪ್ಪರಶೆಟ್ಟರು, ಅಬಾರರು, ಬೆಳ್ಳಾಳಿಗೌಡರು, ಕಣಿಯರು, ಈಡಿಗರು, ಮಂತಾದವರು. ಇವರು ಪೂಜಿಸುವ ಶಿಲ್ಪ ಒಂದೇ ಆಕಾರವಾಗಿದ್ದು ಈ ನೆಲೆಯಲ್ಲಿ ಕಂಡುಬರುತ್ತದೆ. ಅಲ್ಲದೆ ಈ ರಾವಳೇಶ್ವರನನ್ನು ಅನೇಕ ಹೆಸರುಗಳಿಂದ ಕರೆಯುವ ವಾಡಿಕೆ ಸಹ ಇದೆ. ರಾವಳೇಶ್ವರ, ರಾವಣೇಶ್ವರ, ಕಾಳರಾಯ, ಕದಗಾರಪ್ಪ, ಬೆಂಡಗಾಳರಾಯ, ಕಾಮರಾಯ, ರವಳಾಪ್ಪ, ಹೊನ್ನಸಿದ್ಧೇಶ್ವರ, ಮಹಾಲಿಂಗೇಶ್ವರ,

ಬ್ರಹ್ಮೇಶ್ವರ, ವೀರಪ್ಪ (ವೀರಗಲ್ಲು), ವೈಧ್ಯನಾಥೇಶ್ವರ, ಮಲ್ಲಿಗೆಮಾದಮ್ಮ ಕಥಗಾರಯ್ಯ, ಕಥಗಾರಯ್ಯ, ಕೇತೆದೇವರು, ಕಾಳಭಂಟರಾಯ, ಕರುಪ್ಪಸ್ವಾಮಿ. ಹೀಗೆ ಬೇರೆ ಬೇರೆ ಹೆಸರುಗಳಿಂದ ಕರೆಯುತ್ತಾರೆ. ಶಾಸನಗಳಲ್ಲಿ ರಾವಣ, ರಾವಳ, ರಾವಳಮೊದಲಿಯರ್, ರಾವಳನಾಯಕ, ಬೆಂಡ್ಗಾಳರಾವಣ, ದೊಡ್ಡರಾವಳ, ಚಿಕ್ಕರಾವಳ, ದೊಡ್ಡರವಳಯ್ಯ, ಚಿಕ್ಕರವಳಯ್ಯ, ರಾವಳೇಗೌಡ, ಶಮರಾಯ ನಾಯಕರು ಮುಂತಾದ ಹೆಸರುಗಳೀಂದ ದೇವರ ಹೆಸರುಗಳಿಂದ ಕರೆಯುವ ವಾಡಿಕೆ ಕೊಳ್ಳೇಗಾಲ ಪ್ರಾಂತ್ಯದಲ್ಲಿ ಕಂಡುಬರುತ್ತದೆ.

ಇತ್ತೀಚಿನ ಶತಮಾನದಲ್ಲಿ ರಾವಳೇಶ್ವರ ಗುಡಿಗಳನ್ನು ಕಟ್ಟುತ್ತಾ ಬರುತ್ತಿದ್ದಾರೆ. ಇದು ಒಳ್ಳೆಯ ಸಂಸ್ಕೃತಿಯಾಗಿದೆ. ಒಂದು ಕಾಲದಲ್ಲಿ ಈ ಶಿಲ್ಪಗಳಿಗೆ ಒಂದೇ ದಿನದಲ್ಲಿ ದೇವಸ್ಥಾನ ಕಟ್ಟಬೇಕು ಎಂದು ಶಾಸನ ವಿಧಿಸಿದ್ದರು ಆದ್ದರಿಂದ ಹೆಚ್ಚಾಗಿ ಈ ಶಿಲ್ಪಗಳು ಬಿಸಿಲಿನಲ್ಲಿ, ಮಳೆಯಲ್ಲಿ, ಬಾಗಿಲುಗಳು ಇಲ್ಲದ ಗುಡಿಗಳಾಗಿ ಪೂಜಿಸಲ್ಪಡುತ್ತಿವೆ.

ಶಿಲ್ಪಗಳು: –

ರಾವಣ ಶಿಲ್ಪ: ರಾವಣ ಶಿಲ್ಪಗಳು ಅಳತೆಯಲ್ಲಿ 2 ರಿಂದ 2–6 ಅಡಿ ಅಳತೆಯ ತನಕ ದುಂಡಾದ ಒರಟು ಕಲ್ಲಿನಿಂದ ಕೆತ್ತಲ್ಪಟ್ಟಿರುತ್ತದೆ. ರಾವಣನಿಗೆ 10 ತಲೆಗಳು. 20 ಕೈಗಳಿರುತ್ತವೆ. ಆಯುಧಗಳ ಸ್ವರೂಪ ಸ್ಪಷ್ಟವಾಗಿ ಕಾಣುವುದಿಲ್ಲ. ರಾವಣ ವೀರನಂತೆ ನಿಂತು ಹೋರಾಟ ಮಾಡುತ್ತಿರುವಂತಿರುತ್ತದೆ. ಎದುರಾಳಿ ಖಡ್ಗ ಹಿಡಿದು ನಿಂತಿರುತ್ತದೆ. ಬಲಗಡೆ ಮಹಿಳೆಯು ಕೂಡ ಹೋರಾಟಕ್ಕೆ ಸಿದ್ದವಿರುವಂತೆ ಕಂಡುಬರುತ್ತವೆ. ರಾವಣನ ಎಡಭಾಗದಲ್ಲಿ ರಾಕಾಸಮ್ಮ ಮಗು ತತ್ತುಕೊಂಡು ಕೈಯಲ್ಲಿ ಹಿಡಿದಿರುವಂತೆ ಸಹ ಕಂಡುಬರುತ್ತವೆ. ಇಂತಹ ಶಿಲ್ಪಗಳು ಶಿಲ್ಪ ಲಕ್ಷಣ ಕಲಾವಿದನ ಕಲ್ಪನೆಯಾಗಿ ಕಥಾ ಸಂದರ್ಭದ ಶಿಲ್ಪ ರಚನೆಯಾಗಿರುತ್ತದೆ.

ಭೈರವ ಶಿಲ್ಪ: ಭೈರವ ಮತ್ತು ಕಾಲಭೈರವ ಬಿಡಿ ಶಿಲ್ಪಗಳು ಸಹ ಕೊಳ್ಳೇಗಾಲ ಪ್ರಾಂತ್ಯದಲ್ಲಿ ಕಂಡುಬರುತ್ತವೆ. 3x2 ಅಡಿ ಅಳತೆಯಲ್ಲಿ ಕಂಡುಬರುತ್ತವೆ. ಕಾಲಭೈರವನು ಚತುರ್ಭುಜಧಾರಿಯಾಗಿ ಬಲಗೈಯಲ್ಲಿ ಡಮರುಗ, ವೀರಖಡ್ಗ, ಮತ್ತು ಎಡಗಡೆ ತ್ರಿಶೂಲ ಕಪಾಲ ಪಾತ್ರೆ ಮತ್ತು ದುಂಡ ಹಿಡಿದುಕೊಂಡಿರುವಂತೆ ಕಾಣಬರುತ್ತವೆ. ಭೈರವ ಸ್ವರೂಪ ನಿರ್ಮಾಣವಾಗಿ ನಿಂತಂತಿರುತ್ತವೆ. ರುಂಡವನ್ನು ನಾಯಿ ಎರಡು ಕಾಲಲ್ಲಿನಿಂತು ನೋಡುತ್ತಿರುವಂತೆ ಕಂಡು

ಬರುತ್ತವೆ. ಕೆಲವು ಶಿಲ್ಪಗಳಲ್ಲಿ ಆ ವ್ಯಕ್ತಿಯನ್ನು ಸಾಮಾನ್ಯ ಸ್ವರೂಪದಲ್ಲಿ ಕೆತ್ತಿರುವುದು ಕಂಡುಬರುತ್ತದೆ. ಸಾಮಾನ್ಯ ವ್ಯಕ್ತಿಯ ಕಥಾ ಸಂದರ್ಭವನ್ನು ದೈವತ್ವಕ್ಕೆ ಏರಿಸಿ ಭೈರವನ ಕಥೆಯನ್ನು ವರ್ಣಿಸಿರುವಂತೆ ಕಂಡುಬರುತ್ತವೆ.

ಕದಗಾರಪ್ಪ: ಕದಗಾರಪ್ಪನ ಶಿಲ್ಪ ಸಿಂಗಾನಲ್ಲೂರಿನ ಬಸವನಕಟ್ಟೆ ದೇವಸ್ಥಾನದ ಹೊರಭಾಗದಲ್ಲಿ ಕಂಡುಬಂದಿವೆ. ಕದಗಾರಪ್ಪ ವೀರನಂತೆ ನಿಂತಿದ್ದು ನಾಲ್ಕು ಕೈಗಳನ್ನು ಹೊಂದಿರುತ್ತಾನೆ. ವೀರಖಡ್ಗ ಬಿಲ್ಲುಬಾಣ ಮತ್ತೊಂದು ಕೈಯಲ್ಲಿ ಎರಡು ನಾಯಿಗಳನ್ನು ಹಿಡಿದುಕೊಂಡಿರುವಂತೆ ಮತ್ತು ಬಲಭಾಗದಲ್ಲಿ ವೀರನನ್ನು ಕೆತ್ತಿದ್ದಾರೆ. ಈ ವೀರನನ್ನು ವರ್ಣಿಸಿ ಚತುರ್ಭುಜಧಾರಿಯಾಗಿ ಮಾಡಿ ದೇವತಾ ಸ್ವರೂಪವಾಗಿ ಶಿಲ್ಪಕೆತ್ತಿರುವುದು ಕಂಡುಬರುತ್ತದೆ.

ಕುದುರೆ ಮೇಲೆ ಕುಳಿತರಾಜ: ಕುದುರೆ ಮೇಲೆ ಕುಳಿತ ರಾಜನ ಬಿಡಿ ಶಿಲ್ಪಗಳು ಈ ಭಾಗದಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಕಂಡುಬರುತ್ತವೆ. ಉದಾಹರಣೆಗೆ ಟಗರುಪುರ, ಕೊಳ್ಳೇಗಾಲದ ಪೀಸ್‌ಪಾರ್ಕ್, ಸತ್ತೇಗಾಲ ಮೊದಲಾದ ಕಡೆ ಕುದುರೆ ಮೇಲೆ ರಾಜ ಕುಳಿತ್ತಿದ್ದು ಎಡಗೈಯಲ್ಲಿ ಲಗಾಮು ಹಿಡಿದು ಬಲಗೈಯಲ್ಲಿ ಖಡ್ಗ ಮೇಲೆ ಎತ್ತಿರುವುದು ಮತ್ತು ಹಿಂದುಗಡೆ ರಾಕಸಮ್ಮ ಮತ್ತು ಮಗುವನ್ನು ಎತ್ತುಕೊಂಡಿರುವಂತೆ ಕಂಡುಬರುತ್ತವೆ. ಅಲ್ಲದೆ ಗೆಲುವಿನ ಸಂಕೇತದಿಂದ ಸೈನಿಕರು ಡೋಲು ಬಾರಿಸುತ್ತಿರುವಂತಿದೆ. ಈ ರೀತಿಯ ಶಿಲ್ಪಕಲೆಯಿಂದ ರಾಜರುಗಳು ಈ ನಾಡನ್ನು ಗೆದ್ದನಂತರ ವಿಜಯಕ್ಕೆ ಸಂಬಂಧಿಸಿರುವಂತೆ ಶಿಲ್ಪ ಬಿಡಿಸಿರುತ್ತಾನೆ.

ರಾವಳೇಶ್ವರ ಶಿಲ್ಪ: ರಾವಳೇಶ್ವರನ ಶಿಲ್ಪಗಳು ಎರಡುವರೆ ಅಡಿಯಿಂದ ಹಿಡಿದು ನಾಲ್ಕು ಅಡಿ ಎತ್ತರ ಅಲ್ಲದೆ ಒಂದುವರೆಯಿಂದ ಎರಡು ಅಡಿ ಅಗಲವಿರುತ್ತವೆ. ಕೊಳ್ಳೇಗಾಲ ಪ್ರಾಂತ್ಯದಲ್ಲಿ ಮೇಲೆ ತಿಳಿಸಿರುವ ಅನೇಕ ಊರುಗಳಲ್ಲಿ ಈ ರೀತಿಯ ಒಂದು ತಲೆಯಿಂದ ಹತ್ತು ತಲೆಯ ರಾವಳೇಶ್ವರನ ಶಿಲ್ಪಗಳು ಕಂಡುಬರುತ್ತವೆ. ಪ್ರಮುಖ ಶಿಲ್ಪಗಳಲ್ಲಿ ರಾವಳೇಶ್ವರನಿಗೆ ಒಂದು ತಲೆ ಇದ್ದು ನಾಲ್ಕುಕೈಗಳು ಇರುವುದರಿಂದ ಸಮಾನ್ಯವಾಗಿ ದೇವರು ಎಂಬುದಾಗಿ ಚಿತ್ರದ ಹೋಲಿಕೆಯಾಗಿದೆ. ರಾಜನು ಸಹ ಪ್ರತ್ಯಕ್ಷ ದೇವತೆ ಎಂದು ಭಾವಿಸಬಹುದು. ರಾವಳೇಶ್ವರನಿಗೆ ಬಲಗೈಯಲ್ಲಿ ಚಕ್ರ ಮೇಲಿನ ಎಡಗೈಯಲ್ಲಿ ಬಿಲ್ಲು ಕೆಳಗಿನ ಎಡಗೈಯಲ್ಲಿ ಶಂಕ ಮುದ್ರೆಯಿಂದ

ಕೂಡಿದ ಗದೆ ಇದೆ. ಮತ್ತೊಂದು ಕೈಯಲ್ಲಿ ವೀರ ರಾಜ ಗಾಂಭೀರ್ಯದಿಂದ ಇಳಿಬಿಟ್ಟ ಖಡ್ಗ ಕೈಸೊಂಟದ ಮೇಲ್ಭಾಗದಲ್ಲಿ ವೇಷ ಭೂಷಣಗಳಲ್ಲೂ ರಾಜನಂತೆಯೂ ಇರುತ್ತವೆ. ಕಾಲುಗಳಲ್ಲಿ ಪಾದುಕೆ ಧರಿಸಿರುವುದು ಬಲಬಾಗದಲ್ಲಿ ಚಾಮರ ಹಿಡಿದಿರುವುದು ಕಂಡುಬರುತ್ತದೆ. ಪೀಠದಲ್ಲಿ ಹೋರಾಟದ ಟಗರುಗಳಿರುತ್ತವೆ ಆಯುಧ ಹಿಡಿದಿರುವ ಸೈನಿಕರು ಸಹ ಇರುತ್ತಾರೆ. ಈ ರೀತಿಯ ಶಿಲ್ಪಗಳನ್ನು ಸೂಕ್ಷ್ಮವಾಗಿ ಅಭ್ಯಸಿಸಿದರೆ ಶಿಲ್ಪ ಬೇರೆ ಬೇರೆ ಸಂದರ್ಭಕ್ಕೆ ಕಥೆಯನ್ನು ಹೇಳಬಹುದು. ಇದು ರಾವಣನ ಶಿಲ್ಪವೂ ಅಥವಾ ವೀರಭದ್ರನ ಶಿಲ್ಪವೋ ಅಥವಾ ಭೈರವನೋ ಎಂಬುದನ್ನು ವಿದ್ವಾಂಸರು ನಿರ್ಣಯಿಸುವ ಅಂಶವಾಗಿ ಉಳಿದಿದೆ.

ರಾವಣನ ಶಿಲ್ಪ: ರಾವಣನ ಬಿಡಿ ಶಿಲ್ಪಗಳು ಸಹ ಕಂಡುಬರುತ್ತವೆ. ರಾವಳೇಶ್ವರ ಅಥವಾ ರಾವಣನನ ಶಿಲ್ಪಗಳನ್ನು ನೋಡಿದಾಗ ಒಂದೇ ಮಾದರಿಯನ್ನು ಹೊಂದಿರುತ್ತವೆ. ಇಂತಹ ಶಿಲ್ಪಗಳನ್ನು ಗಮನಿಸಿದಾಗ ಇಲ್ಲಿಯ ಸ್ಥಳೀಯ ಕಥೆಗೂ ರಾಮಾಯಣಕ್ಕೂ ಸಂಬಂಧ ಇಲ್ಲ. ರಾಮಾಯಣ ಪುರಾಣದ ಕಥೆಯಾದರೂ ರಾವಳೇಶ್ವರನ ಕಥೆ ಈ ಪ್ರಾಂತ್ಯದಲ್ಲಿ ಕಂಡು ಬರುವುದರಿಂದ ಇತಿಹಾಸವಾಗುತ್ತದೆ ಎಂದು ಹೇಳಬಹುದು.

ರಾವಣನ ಶಿಲ್ಪ ಸ್ವರೂಪ ರಾವಳೇಶ್ವರನ ತಂದೆಯಾಗಿ ಈ ಭಾಗಗಳಲ್ಲಿ ಕಾಣಿಸುತ್ತವೆ. ಕೆಲವು ಶಿಲ್ಪಗಳಲ್ಲಿ. ಹಲವು ಬದಲಾವಣೆಗಳು ಕಂಡುಬರುತ್ತವೆ. ಕೆಲವು ರಾವಣನ ಶಿಲ್ಪಗಳಲ್ಲಿ ಮೂರು ತಲೆ, ಐದುತಲೆ, ಹಾಗೂ ಹತ್ತು ತಲೆ ಶಿಲ್ಪಗಳು ಮಹಿಷಮಂಡಲ ಪ್ರಾಂತ್ಯದಲ್ಲಿ ಕಂಡು ಬರುತ್ತವೆ, ರಾಕಾಸಮ್ಮ (ತಾಯಿ) ಮಗುವನ್ನು ಸೊಂಟದಲ್ಲಿ ಕೂರಿಸಿಕೊಂಡಂತೆ ಇದೆ. ಈ ಬದಲಾವಣೆ ಮುಖ್ಯವಾಗಿದೆ. ಉಳಿದ ಸ್ವರೂಪಗಳು ಸಾಮಾನ್ಯವಾಗಿ ಒಂದೇ ಮಾದರಿಯಲ್ಲಿ ಕಂಡುಬರುತ್ತವೆ. ಒಟ್ಟಾರೆ ಶಿಲ್ಪ ರಚನೆ ಅಂದು ಕಲಾವಿದರ ಭಾವನೆಯಾಗಿರುವುದರಿಂದ ಬೇರೆ ಬೇರೆ ಗ್ರಾಮಗಳಲ್ಲಿ ಶಿಲ್ಪರಚನೆ ಮಾಡಿರುವುದರಿಂದ ಆ ಸಂದರ್ಭಕ್ಕೆ ಅನುಸಾರವಾಗಿ ಶಿಲ್ಪ ರಚನೆ ಮಾಡಿರುವುದುಂಟು. ಈ ಹಿನ್ನೆಲೆಯಿಂದ ಶಿಲ್ಪಿಯ ಕಲ್ಪನೆ ಭಾವನೆಯಲ್ಲಿದ್ದು ಅಂದಿನ ಕಥೆಯನ್ನು ಹೇಳಲು ಚಿತ್ರ ಕಲಾದೃಷ್ಠಿಯಿಂದ ರಾವಳೇಶ್ವರನ ಸಂಸ್ಕೃತಿ ಕಂಡುಬರುತ್ತದೆ. ಅಥವಾ ರಾವಣನ ಕಥೆಯನ್ನು ಬಹುಶಃ ಕ್ರಿ.ಶ. 10ನೇ ಶತಮಾನದಲ್ಲಿ ರಾಜನ ಕಥೆಯಾಗಿದೆಯೆಂದು ಹೇಳಬಹುದು. ಏಕೆಂದರೆ ಮೈಸೂರು ಪ್ರಾಂತ್ಯದ ಮಹಿಷಮಂಡಲದ ಪ್ರಾಂತ್ಯದಲ್ಲಿ ಹೇರಳವಾಗಿ ಈ ರೀತಿಯ ಶಿಲ್ಪಕಲೆಗಳು ಕಂಡುಬರುತ್ತದೆ. ಆದಕಾರಣ ರಾಜನನ್ನು ಅವನ ಶಕ್ತಿ ಸಾಮರ್ಥ ದೃಷ್ಠಿಕೋನದಿಂದ ಶಿಲ್ಪಕಲೆಯನ್ನು ಪ್ರತಿಬಿಂಬಿಸಲಾಗಿದೆ. ಶಿಲ್ಪಗಳಲ್ಲಿ ಸ್ತ್ರೀಯರು ಅಕ್ಕ–ಪಕ್ಕದಲ್ಲಿ

ಪ್ರತಿಬಿಂಬಿತಗೊಂಡಿದ್ದಾರೆ. ಈ ಹಿನ್ನೆಲೆಯಿಂದ ಮೈಸೂರು, ಮಂಡ್ಯ, ಚಾಮರಾಜನಗರ ಜಿಲ್ಲೆಗಳ ಪ್ರಾಂತ್ಯಗಳಲ್ಲಿ ರಾಕಾಸಮ್ಮ ಮತ್ತು ಗಂಗಮಾಳಮ್ಮ ಎಂಬ ದೇವಾಲಯಗಳು ಕಂಡುಬರುವುದುಂಟು. ಈಗಲೂ ಹಲವಾರು ಊರುಗಳಲ್ಲಿ ಇಂತಹ ದೇವಾಲಯಗಳಿವೆ. ಪೂಜೆಪುನಸ್ಕಾರಗಳು ಈ ಭಾಗಗಳಲ್ಲಿ ಕಂಡು ಬರುತ್ತವೆ, ಅದೇ ಮಾದರಿಯಲ್ಲಿ ಕೊಳ್ಳೇಗಾಲ ತಾಲ್ಲೂಕಿನ ತಗರಪುರ, ಉತ್ತಂಬಳ್ಳಿ, ಕೊಳ್ಳೇಗಾಲದಲ್ಲಿ ರಾಕಾಸಮ್ಮನ ದೇವಾಲಯಗಳನ್ನು ಕಾಣಬಹುದು. ಕೆಲವು ಹೇಳಿಕೆಗಳ ಪ್ರಕಾರ ರಾಕಾಸಮ್ಮ ಮಂಡ್ಯ ಜಿಲ್ಲೆಯ ಪಾಂಡವಪುರ ತಾಲ್ಲೂಕಿನ ತೊಣ್ಣೂರು ಗ್ರಾಮದಿಂದ ಮೂಗೂರಿಗೆ ಬಂದು ನೆಲೆಸಿರುತ್ತಾಳೆ ಎಂಬ ನಂಬಿಕೆ ಇದೆ. ಈ ತೊಣ್ಣೂರು ರಾಕಾಸಮ್ಮನ ಪೂಜೆಗೆ ಬೇರೆ ಬೇರೆ ರಾಜ್ಯಗಳಿಂದ ಬಂದು ಪೂಜೆಸಲ್ಲಿಸುತ್ತಾರೆ ಎಂಬ ಹೇಳಿಕೆ ಇದೆ.[6] ಕೊಳ್ಳೇಗಾಲದ ಪರಿವಾರ ನಾಯಕರ ಚಿಕ್ಕಬೀದಿಯ ರಾಕಾಸಮ್ಮನ ದೇವಾಲಯದಲ್ಲಿ ರಾಕಾಸಮ್ಮನ ಶಿಲ್ಪ ಕಲೆಯನ್ನು ಕಾಣಬಹುದಾಗಿದೆ. ಅಲ್ಲದೆ ಸತ್ತೇಗಾಲ, ಸಿಂಗನಲ್ಲೂರು ಮೊದಲಾದ ಊರುಗಳಲ್ಲಿ ರಾಕಾಸಮ್ಮನ ಶಿಲ್ಪ ಕಲೆಯನ್ನು ಕಾಣಬಹುದಾಗಿದೆ.

ಅಡಿ ಟಿಪ್ಪಣಿಗಳು

---

[1] ಮೆಂಕೆಜಿ ಸಂಪುಟ 161, ತೊಣ್ಣೂರು ರಾಕ್ಷಸಿ ಕೈಫಿಯತ್ತು ಪುಟ – 20

[2] ಎಪಿಗ್ರಾಫಿಯ ಕರ್ನಾಟಕ ಸಂಪುಟ 5, ಶಾಸನ ಸಂಖ್ಯೆ 36 ಕೃಷ್ಣಾರಾಜನಗರ.

[3] ಎಪಿಗ್ರಾಫಿಯ ಕರ್ನಾಟಕ ಸಂಪುಟ 5, ತಿ.ನರಸೀಪುರ ಶಾಸನ ಸಂಖ್ಯೆ 312.

[4] ಆರ್. ರಘು ಕೆಸ್ತೂರು ಸರ್ಕಾರಿಶಾಲೆ ಅವರ ಹೇಳಿಕೆಗಳು ಆಧಾರವಾಗಿಟ್ಟುಕೊಂಡು ಬರೆಯಲಾಗಿದೆ.

[5] ಡಾ॥ ಬಿ. ಬಸವರಾಜು ಐತಿಹ್ಯ ದರ್ಶನ ಕೃತಿಯಲ್ಲಿ ಕಂಡುಬರುತ್ತವೆ.

[6] ತೊಣ್ಣರು ಗ್ರಾಮದ ರಾಕಾಸಮ್ಮನ ದೇವಾಲಯದ ಪೂಜಾರಿ ಹೇಳಿಕೆ ಪ್ರಕಾರ.

ಅಧ್ಯಾಯ – 7

ಉಪಸಂಹಾರ

ಕರ್ನಾಟಕದ ಸಾಂಸ್ಕೃತಿಕ ಪರಂಪರೆಯಲ್ಲಿ ವಾಸ್ತುಶಿಲ್ಪ ಧರ್ಮಗಳು ರಾಜಕೀಯ ಬೆಳವಣಿಗೆ, ಹಬ್ಬ ಹರಿದಿನಗಳು, ಜಾತ್ರೆಗಳು ಇನ್ನಿತರ ದೃಷ್ಟಿಯಿಂದ ಬಹಳ ಮಹತ್ತರವಾದ ಸ್ಥಾನವನ್ನು ಪಡೆದುಕೊಂಡಿದೆ. ಅದೇ ರೀತಿಯಲ್ಲಿ ಆಗ್ನೇಯ ಕರ್ನಾಟಕದ ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ ತಾಲ್ಲೂಕು ಕೂಡ ತನ್ನದೆ ಆದ ಉನ್ನತವಾದ ಮಹಿಮೆಯುಳ್ಳ ಸ್ಥಾನವನ್ನು ಪಡೆದುಕೊಂಡಿದೆ. ಇಂತಹ ಮಹತ್ತರವಾದ ಸ್ಥಾನವನ್ನು ಪಡೆಯುವುದಕ್ಕೆ ಕರ್ನಾಟಕದ ವಿವಿಧ ಭಾಗಗಳಲ್ಲಿ ವಿವಿಧ ಕಾಲಗಳಲ್ಲಿ ಆಳ್ವಿಕೆ ನಡೆಸಿದ ವಿವಿಧ ರಾಜ ಸಂತತಿಗಳ ಕಲಾಭಿಜ್ಞನತೆ, ಕಲಾ ಪೋಷಣೆಗಳೆ ಕಾರಣವಾಗಿವೆ ಎಂದು ಹೇಳಿದರೆ ತಪ್ಪಾಗಲಾರದು. ಇಂತಹ ಕಲಾ ಪೋಷಕ ರಾಜವಂಶಗಳಲ್ಲಿ ಆಗ್ನೇಯ ಕರ್ನಾಟಕವನ್ನು ಆಳಿದ ಗಂಗರು, ಚೋಳರು, ಹೊಯ್ಸಳರು, ವಿಜಯನಗರದ ಅರಸರು, ಮೈಸೂರಿನ ಒಡೆಯರು, ಹೈದರ್ ಆಲಿ, ಟಿಪ್ಪುಸುಲ್ತಾನ್ ಇನ್ನೂ ಮುಂತಾದ ಸ್ಥಳೀಯ ಸಾಮಾಂತರು ಕೊಳ್ಳೇಗಾಲ ಭಾಗದಲ್ಲೂ ಆಳ್ವಿಕೆ ನಡೆಸಿರುತ್ತಾರೆ.

ಈ ಹಿನ್ನೆಲೆ ಹಾಗೂ ಕೆಲವೊಂದು ಸಾಕ್ಷ್ಯಾಧಾರಗಳಿಂದ ಈ ಕೊಳ್ಳೇಗಾಲ ಭಾಗದಲ್ಲಿ ರಾಜಕೀಯ ಹತೋಟಿಯನ್ನು ಇಟ್ಟುಕೊಂಡಿದ್ದರೂ ಎಂಬುದು ಸಾಭೀತಾಗುತ್ತದೆ. ಇವರುಗಳ ಆಳ್ವಿಕೆಯ ಫಲವಾಗಿ ಹಲವಾರು ಸಾಂಸ್ಕೃತಿಕ ಈ ಭಾಗದಲ್ಲಿ ಪ್ರಬಲವಾಗಿ ಬೇರೂರಿದೆ. ಅದರ ಫಲವಾಗಿ ನೂರಾರು ದೇವಾಲಯಗಳು ಆಯಾ ಕಾಲಘಟ್ಟದಲ್ಲಿ ನಿರ್ಮಾಣಗೊಂಡಿವೆ. ಹಲವಾರು ಶಾಸನಗಳು ಕಂಡುಬಂದಿವೆ. ಇಲ್ಲಿರುವ ದೇವಾಲಯಗಳ ವಾಸ್ತು ಸಂಪ್ರದಾಯದ ದೃಷ್ಟಿಯಿಂದ ತಮ್ಮದೇ ಆದ ವಿಶೇಷ ಸ್ಥಾನವನ್ನು ಪಡೆದಿವೆ. ಈ ನಿಟ್ಟಿನಲ್ಲಿ ಆಯಾ ಕಾಲದಲ್ಲಿ ನಿರ್ಮಿತವಾದ ದೇವಾಲಯಗಳನ್ನು ಕೂಲಂಕುಶವಾಗಿ ಅಧ್ಯಯನ ಮಾಡಿ ಇವುಗಳ ವಸ್ತುಸ್ಥಿತಿಯನ್ನು ಹಾಗೂ ಅವುಗಳ ವಾಸ್ತುಲಕ್ಷಣಗಳನ್ನು ಮತ್ತು ಈ ದೇವಾಲಯಗಳ ಮಹತ್ವಗಳನ್ನು ಅರಿಯಲು ಕೆಲವೊಂದು ದೇವಾಲಯಗಳ ಉಲ್ಲೇಖವನ್ನು ಮಾತ್ರ ನೀಡಿರುತ್ತದೆ. ಒಟ್ಟಾರೆಯಾಗಿ ಕೊಳ್ಳೇಗಾಲ ತಾಲ್ಲೂಕಿನ ಇತಿಹಾಸದಲ್ಲಿ ಕೆಲವೊಂದು ನನ್ನ ಸಂಶೋಧನಾ ವರದಿ ಫಲಿತಾಂಶವನ್ನು ಈ ಕೆಳಕಂಡ ರೀತಿಯಲ್ಲಿ ವಿವರಿಸಲಾಗಿದೆ.

1.1 ಅಧ್ಯಾಯವು ಸಂಶೋಧನೆಯ ಉದ್ದೇಶ, ವ್ಯಾಪ್ತಿ ಮತ್ತು ವಿಧಾನದ ಬಗ್ಗೆ ತಿಳಿಸಲಾಗಿದೆ. ಈ ಉದ್ದೇಶವೇನೆಂದರೆ ಕೊಳ್ಳೇಗಾಲ ಪ್ರಾಂತ್ಯ ತಮಿಳುನಾಡಿಗೆ ಹೊಂದಿಕೊಂಡಂತಹ ಪ್ರಾಂತ್ಯವಾಗಿದೆ. ಇಲ್ಲಿ ಹಲವಾರು ಹೊಸ ಹೊಸ ವಿಷಯ ದೊರೆಯುತ್ತವೆ ಅಂದು ರಾಜ್ಯ ಸರ್ಕಾರವಾಗಲೀ ಅಲ್ಲದೇ ತಮಿಳುನಾಡು ಸರ್ಕಾರವಾಗಲಿ ಇಲ್ಲಿ ಕೆಲಸ ಮಾಡಿಲ್ಲ. ಈ ಹಿನ್ನೆಲೆಯಿಂದ ನನ್ನ ಉದ್ದೇಶ ಹೊಸ ಹೊಸ ವಿಷಯಗಳನ್ನು ಸೇರಿಸುವುದು ಆಗಿದೆ. ಇದರ ವ್ಯಾಪ್ತಿಯನ್ನು ನೋಡಿದರೆ ಕೊಳ್ಳೇಗಾಲ ತಾಲ್ಲೂಕಿಗೆ ಮಾತ್ರ ಸೀಮಿತವಾಗಿರುತ್ತದೆ. ಆದರೆ ಇಲ್ಲಿ ನನ್ನ ಎಂ.ಫಿಲ್. ದೃಷ್ಟಿಯಿಂದ ಕೆಲವೇ ಕೆಲವು ಸ್ಥಳಗಳನ್ನು ಮಾತ್ರ ನೀಡಿರುತ್ತೇನೆ. ವಿಧಾನದಲ್ಲಿ ದೊರೆತ ವಸ್ತುಗಳನ್ನು ಶಿಲ್ಪಗಳನ್ನು ನೆಲೆಗಳನ್ನು ಸೂಕ್ಷ್ಮವಾಗಿ ನೋಡಿ ಪರಿಚಯಿಸುವ ಕೆಲಸವನ್ನು ಮಾಡಲಾಗಿದೆ.

1.2 ಅಧ್ಯಾಯದಲ್ಲಿ ಚಾರಿತ್ರಿಕ ಹಿನ್ನಲೆಯನ್ನು ಕುರಿತು ಹಿನ್ನೆಲೆಗೆ ಸಂಬಂಧಿಸಿದೆ, ಈ ಅಧ್ಯಯನದಲ್ಲಿ ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ ತಾಲ್ಲೂಕು ಯಾವ ರೀತಿ ಬೆಳೆದಿದೆ ಎಂಬುದನ್ನು ತಿಳಿಸುತ್ತದೆ. ಈ ಭಾಗದಲ್ಲಿ ಆಳಿದ ವಿವಿಧ ರಾಜಕೀಯ ಬಣಗಳ ಜೊತೆಗೆ ಸ್ಥಳೀಯ ಇತಿಹಾಸವನ್ನು ಸಂಕ್ಷಿಪ್ತವಾಗಿ ವಿವರಿಸಿ ಆಯಾ ಪ್ರಾಂತ್ಯದ ಉಲ್ಲೇಖವನ್ನು ನೀಡಲಾಗಿದೆ.

1.3 ಅಧ್ಯಾಯದಲ್ಲಿ ಕೊಳ್ಳೇಗಾಲ ತಾಲ್ಲೂಕಿನ ರಾಜಕೀಯ ಚರಿತ್ರೆಯನ್ನು ತಿಳಿಸಲಾಗಿದೆ. ಅಂದು ಗಂಗವಾಡಿ ಪ್ರಾಂತ್ಯಕ್ಕೆ ಸೇರಿದ ನಂತರ ಮಹಿಷಮಂಡಲ ಪ್ರಾಂತ್ಯಕ್ಕೆ ಸೇರಿದ ಈ ಪ್ರಾಂತ್ಯದಲ್ಲಿ ತಲಕಾಡಿನ ಗಂಗರ ಕಾಲದಿಂದ ಹಿಡಿದು ಮೈಸೂರು ಅರಸರ ಕಾಲಘಟ್ಟದಲ್ಲಿ ಆಗಿರುವ ಚರಿತ್ರೆಯನ್ನು ನೀಡಲಾಗಿದೆ. ಕೆಲವೊಂದು ವಿಷಯಕ್ಕೆ ಶಾಸನಾಧಾರಗಳು ಮತ್ತು ಐತಿಹ್ಯ ಕಥೆಗಳನ್ನು ಸಹ ಸೇರಿಸಲಾಗಿದೆ.

ಎರಡನೆಯ ಅಧ್ಯಾಯದಲ್ಲಿ ಕೊಳ್ಳೇಗಾಲ ತಾಲ್ಲೂಕಿನಲ್ಲಿ ಈಗ ಪ್ರಚಲಿತದಲ್ಲಿರುವ ಮತ್ತು ಅಂದು ಪ್ರಚಲಿತದಲ್ಲಿದ್ದ ಧರ್ಮಗಳ ಬಗ್ಗೆ ತಿಳಿಸಲಾಗಿದೆ. ಆಯಾ ಧರ್ಮಕ್ಕೆ ಪೂರಕವಾಗಿ ಸಂಬಂಧ ನೆಲೆಗಳನ್ನು ಮತ್ತು ದೇವಾಲಯಗಳನ್ನು ಇಲ್ಲಿ ನಿರೂಪಿಸಲಾಗಿದೆ.

ಮೂರನೇ ಅಧ್ಯಾಯದಲ್ಲಿ ಕೊಳ್ಳೇಗಾಲ ತಾಲ್ಲೂಕಿನ ಪ್ರಮುಖ ಊರುಗಳಲ್ಲಿ ಕಂಡುಬರುವ ದೇವಾಲಯಗಳ ವಾಸ್ತುಶಿಲ್ಪವನ್ನು ಸವಿವರವಾಗಿ ನಿಡಲಾಗಿದೆ. ಇದರಲ್ಲಿ ಎಷ್ಟೋ ಎಲ್ಲಿಯೂ ಪ್ರಕಟಗೊಳ್ಳದ ದೇವಾಲಯಗಳನ್ನು ಸೇರಿಸಲಾಗಿದೆ.

ನಾಲ್ಕನೆಯ ಅಧ್ಯಾಯನದಲ್ಲಿ ಶಾಸನಗಳ ಪರಿಚಯವನ್ನು ನೀಡಲಾಗಿದೆ.

ಐದನೆಯ ಅಧ್ಯಾಯದಲ್ಲಿ ಜಾನಪದೀಯ ದೃಷ್ಟಿಯಲ್ಲಿ ಹಬ್ಬ ಹರಿದಿನಗಳನ್ನು ಯಾವ ಯಾವ ಊರಿನಲ್ಲಿ ಯಾವ ರೀತಿಯ ಹಬ್ಬಗಳನ್ನು ಆಚರಿಸುತ್ತಾರೆ ಮತ್ತು ಈ ಭಾಗದಲ್ಲಿ ಪ್ರಮುಖವಾದ ಜಾತ್ರೆ ಯಾವ ರೀತಿ ನಡೆಯುತ್ತಿತ್ತು ಎಂಬ ಉಲ್ಲೇಖವನ್ನು ಸಹ ನೀಡಲಾಗಿದೆ.

ಆರನೆಯ ಅಧ್ಯಾಯದಲ್ಲಿ ರಾವಳೇಶ್ವರ ಮತ್ತು ರಾಕಸಮ್ಮನ ಸಂಸ್ಕೃತಿಗಳು ಈ ಭಾಗದಲ್ಲಿ ಯಾವ ಕಾಲ ಘಟ್ಟದಲ್ಲಿ ಪ್ರಚಲಿತದಲ್ಲಿತ್ತು. ಈ ಒಂದು ಸಂಸ್ಕೃತಿಯ ಶಿಲ್ಪಗಳ ವೈಶಿಷ್ಟ್ಯತೆ ಏನು,ಯಾವ ಯಾವ ಊರಿನಲ್ಲಿ ಈ ಸಂಸ್ಕೃತಿಗೆ ಸೇರಿದ ಶಿಲ್ಪಗಳಿವೆ ಮತ್ತು ಜನರು ಯಾವ ರೀತಿಯಲ್ಲಿ ಆಚರಣೆ ಮಾಡುತ್ತಾರೆ ಎಂಬ ಉಲ್ಲೇಖವನ್ನು ಸಹ ನೀಡಲಾಗಿದೆ.

ಏಳನೆಯ ಅಧ್ಯಾಯನದಲ್ಲಿ ಉಪಸಂಹಾರದಲ್ಲಿ ಎಲ್ಲಾ ಅಧ್ಯಾಯದಲ್ಲಿ ನೀಡಲಾಗಿರುವ ಅಧ್ಯಯನಗಳ ಒಟ್ಟಾರೆಯ ಫಲಿತಾಂಶಗಳನ್ನು ಹಾಗೂ ತಿರ್ಮಾನಗಳನ್ನು ಸಂಕ್ಷಿಪ್ತವಾಗಿ ನೀಡಲಾಗಿದೆ. ಪರಾಮರ್ಶನ ಗ್ರಂಥಗಳ ಪಟ್ಟಿಯನ್ನು ಕೊನೆಯಲ್ಲಿ ಕೊಳ್ಳೇಗಾಲ ತಾಲ್ಲೂಕಿನ ನಕ್ಷೆ ನೀಡಲಾಗಿದೆ. ಹಾಗೂ ಅನುಬಂಧ ದೇವಾಲಯಗಳ ಪಟ್ಟಿ ಮತ್ತು ಛಾಯಾ ಚಿತ್ರಗಳನ್ನು ನೀಡಲಾಗಿದೆ.

ಗ್ರಂಥಋಣ

ಅಪರ್ಣ ಕೂ.ಸ – ದೇವಾಲಯ ವಾಸ್ತುಶಿಲ್ಪ ಪರಿಚಯ, ಪ್ರಸರಂಗ, ಕನ್ನಡ ವಿ.ವಿ.ನಿಲಯ, ಹಂಪಿ, 1999

ಆಲೂರ ವೆಂಕಟರಾಯ – ಕರ್ನಾಟಕದ ಗತವೈಭವ, ಸಮಾಜ ಪುಸ್ತಕಾಲಯ, ಧಾರವಾಡ.

ಕೃಷ್ಣರಾವ್ ಎಂ.ಎಚ್ – ಕನ್ನಡ ನಾಡಿನ ಚರಿತ್ರೆ - ಕರ್ನಾಟಕದ ಕಲೆ, ಬೆಂಗಳೂರು -

ಕೃಷ್ಣರಾಯ ಅ.ನ – (ಸಂ) ಭಾರತೀಯ ಕಲಾದರ್ಶನ, ಬೆಂಗಳೂರು, 1964

ಕೃಷ್ಣರಾವ್ ಎ.ಎನ್ – ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ, ಬೆಂಗಳೂರು,1962 1976

ಕೃಷ್ಣರಾವ್ ಎಂ.ವಿ ಮತ್ತು ಕೇಶವಭಟ್ – ಕರ್ನಾಟಕದ ಇತಿಹಾಸ ದರ್ಶನ, ಬೆಂಗಳೂರು, 1970

ಚಿದಾನಂದ ಮೂರ್ತಿ ಎಂ. – ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಸಂಪುಟ–1, ಬೆಂಗಳೂರು, 2002

ಜವರೇಗೌಡ.ದೇ – ಸ್ಥಳನಾಮ ವ್ಯಾಸಂಗ, ಸಹ್ಯಾದ್ರಿ ಪ್ರಕಾಶನ, 1990

ದೇಸಾಯಿ.ಪಿ.ಬಿ. ಮತ್ತು ಸಾಲತ್ತೋರೆ – ಕನ್ನಡ ನಾಡಿನ ಚರಿತ್ರೆ ಭಾಗ, ಬೆಂಗಳೂರು, 1943

ದೇಸಾಯಿ.ಪಿ.ಬಿ – ಶಾಸನ ಪರಿಚಯ, 1956

ದೇಸಾಯಿ.ಪಿ.ಬಿ ಮತ್ತು ಶ್ರೀನಿವಾಸರಿತ್ತಿ – ಪ್ರಾಚೀನ ಭಾರತದ ಚರಿತ್ರೆ, ಧಾರವಾಡ, 1973

ದಯಾನಂದ ಪಟೇಲ್,ಟಿ. – ಗುಂಡ್ಲುಪೇಟೆ ತಾಲ್ಲೂಕಿನ ವಾಸ್ತುಶಿಲ್ಪ, "ಸೋಮಸಿರಿ", 1999

ಗೋಪಾಲ್ ಬಿ.ಆರ್. – ಕರ್ನಾಟಕದ ಕಲೆ, ವಾಸ್ತು (ನಾಲ್ಕನೆಯ ಸಂಪುಟ) ಬೆಂಗಳೂರು, 1993

ಕಾಕೋಳು ರಾಘವೇಂದ್ರ – ತಿರುಮಕೂಡಲು ನರಸೀಪುರ ತಾಲ್ಲೂಕು ದರ್ಶನ, ಬೆಂಗಳೂರು

ನಾಗೇಗೌಡ ಎಚ್.ಎಲ್ – ಪ್ರವಾಸಿ ಕಂಡ ಇಂಡಿಯಾ, ಸಂಪುಟ 1 ರಿಂದ 7, ಬೆಂಗಳೂರು

ನಂಜುಂಡಸ್ವಾಮಿ, ಎಸ್ – ಚಾಲುಕ್ಯ ಇತಿಹಾಸ, ಧಾರವಾಡ, 1972

– ಕದಂಬ–ಗಂಗರ ಇತಿಹಾಸ, ಧಾರವಾಡ, 1971

ನರಸಿಂಹಮೂರ್ತಿ, ಎ.ವಿ. – ಚಾಲುಕ್ಯ ವಾಸ್ತುಶಿಲ್ಪ ಪರಿಚಯ, ಬೆಂಗಳೂರು, 1984

– ಪ್ರಾಚೀನ ಭಾರತ, ಮೈಸೂರು, 1972

ನಾಗರಾಜರಾವ್, ಎಚ್.ಎಂ – ತಿ.ನರಸೀಪುರ ತಾಲ್ಲೂಕಿನ ಶಾಸನಗಳು ಒಂದು ಪರಿಚಯ, ನರಸೀಪುರ, 1998

– ಬನ್ನೂರು ಸ್ಥಳನಾಮ ವ್ಯಾಸಂಗ, ಮೈಸೂರು, 1980

ಪಂಚಮುಖಿ, ಆರ್.ಎಸ್.(ಸಂ) – ವಿರೂಪಾಕ್ಷ ವಸಂತೋತ್ಸವ ಚಂಪೂ, ಧಾರವಾಡ, 1953

ಬಸವರಾಜು, ಎಲ್. – ಪಂಪನ ಆದಿಪುರಾಣ, ಮೈಸೂರು, 1976

ರಾಮಾನುಜ ಚಕ್ರವರ್ತಿ – ದುರ್ಗಾ ಅಗ್ರಹಾರ ಕೈಪಿಡಿ,

ಮುದ್ದಾಚಾರಿ, ಬಿ. – ಭಾರತದ ಚರಿತ್ರೆ, ಮೈಸೂರು, 1977

ಶ್ರಿ ಮುರಳಿ – ದಕ್ಷಿಣ ಪ್ರಯಾಗ ತಿರುಮಕೂಡಲು ಕ್ಷೇತ್ರ, ಬೆಂಗಳೂರು, 1992

ಸಿಂದಗಿ ರಾಜಶೇಖರ್ – ಕರ್ನಾಟಕದ ವಾಸ್ತುಶಿಲ್ಪ ಮತ್ತು ಚಿತ್ರಕಲೆ, ಧಾರವಾಡ, 1988

ಶುಭಚಂದ್ರ – ಜೈನಸಾಹಿತ್ಯ ಮತ್ತು ಸಂಸ್ಕೃತಿ, ಮೈಸೂರು, 1976

ಶಿವರುದ್ರಪ್ಪ, ಟಿ.ವಿ – ತಲಕಾಡು–ಮಾಲಂಗಿ ಮಡು, ಒಂದು ವೈಜ್ಞಾನಿಕ ಅಧ್ಯಯನ

ಶ್ರೀಕಂಠಶಾಸ್ತ್ರಿ ಎಸ್ – ಹೊಯ್ಸಳ ವಾಸ್ತುಶಿಲ್ಪ, ಮೈಸೂರು, 1965

ಮಹದೇವಪ್ಪ, ಎಂ. – ಸುತ್ತೂರು ಮಠದ ಐತಿಹಾಸಿಕ ಹಿನ್ನೆಲೆ, ಮೈಸ್ರರು 1973

ರಾಮಚಂದ್ರರಾವ್ ಎಸ್.ಕೆ. – ಭಾರತದ ದೇವಾಲಯ ನೆಲೆ–ಹಿನ್ನೆಲೆ, ಬೆಂಗಳೂರು, 1980

– ಮೂರ್ತಿ ಶಿಲ್ಪ ನೆಲೆ–ಹಿನ್ನೆಲೆ, ಬೆಂಗಳೂರು, 1975

ರಘುನಾಥ ಭಟ್ ಎಚ್.ಆರ್ – ಕರ್ನಾಟಕ ಶಾಸನ ಕಲೆ, ಮೈಸೂರು, 1977

ರಂಗಸ್ವಾಮಿ.ಎಸ್ – ಕರ್ನಾಟಕ ದೇವಾಲಯಗಳು, 1994

ವೆಂಕೋಬರಾವ್,ಬಿ. – ಮೈಸೂರು ದೇಶದ ವಾಸ್ತುಶಿಲ್ಪ, ಬೆಂಗಳೂರು, 1959

ಹಂಪ ನಾಗರಾಜಯ್ಯ – ಯಕ್ಷ–ಯಕ್ಷಿಯರು, ಬೆಂಗಳೂರು, 1976

ಕರ್ನಾಟಕ ರಾಜ್ಯ ಗೆಜೆಟಿಯರ್ – ಭಾಗ– 1 (ಸಂ) ಸೂರ್ಯನಾಥ ಕಾಮತ್, 1984

ಕರ್ನಾಟಕ ರಾಜ್ಯ ಗೆಜೆಟಿಯರ್ – ಭಾಗ– 2 (ಸಂ) ಸೂರ್ಯನಾಥ ಕಾಮತ್, 1985

ಕರ್ನಾಟಕ ರಾಜ್ಯ ಗೆಜೆಟಿಯರ್ – ಭಾಗ– 3 (ಸಂ) ಸೂರ್ಯನಾಥ ಕಾಮತ್, 1986

ಮಾನವಿಕ ಕರ್ನಾಟಕ ಸಂಪುಟಗಳು – ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

ಪ್ರಬುದ್ಧ ಕರ್ನಾಟಕ ಸಂಪುಟಗಳು – ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

ಇತಿಹಾಸ ದರ್ಶನ ಸಂ. 1 ರಿಂದ 22 – ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು

BIBLIOGRAPHY

Abhishankar.K. - Gazetter of the Mandya District, Bangalore, 1967.

Acharya.P.K. - A Dictionary of Hindu Architecture, Oxford, 1927.

- An Encyclopaedia of Hindu Architecture, London, 1946.

Altekar.A.S. - Rashtrakutas and their Times, (Second Rev. Edn.), Poona, 1967.

Ayyanagar, S.Krishnaswami - Sources of Vijayanagar History(Rpt.), Delhi, 1986.

Balasubramanyam, S.R. - Four Chola Temples, Bhulabhai Memorial Institute, Bombay, 1963.

- The Later Chola Temples, Mudgala Trust, Madras, 1979.

- The Chola Art, Bombay, 1966.

- Early Chola Art, part-I, Bombay, 1966.

Banarajea,J.N. - The Development of Hindu Iconography, Calcutta-1956.

Barret Douglas - Early Chola Architecture and Sculpture, London, 1974.

Basavaraju, K.R. - History and Culture of Karnataka, Dharwad- 1984.

Bhattacharya, Haridosa - The Cultural Heritage of India, Vol. IV, Calcutta, 1956.

Brown Percy - Indian Architecture, Vol. I, Bombay, 1942.

Coomaraswamy,A.K. - History of Indian and Indonesian Art, London - 1927.

Cousens Henry - The Chalukya Architecture, of the Kanarese Districts, Calcutta, 1926.

Dasgupta.S.N. - Fundamentals of Indian Art, Bombay, 1960.

Derret, J. Duncon.M. - The Hoysalas, Oxford, 1957.

Desai,P.B. - A History of Karnataka, Dharwar, 1970

- Jainism in South India and some Jaina Epigraphs, Sholapur, 1957.

Devakunjari, D - Hampi, New Delhi, 1983, (rpt),.

Diwakar, R.R. - Karnataka through the Ages, Bangalore, 1968.

Dowson, John - A Classical Dictionary of Hindu Mythology (9th ed), London, 1957.

Fergusson James.H. - History of Indian and Eastern Architecture, vol.I (Revised Edition), London, 1970.

Frederic, Louis, - Indian Temples and Sculpture, London, 1959.

Ghosh, A - Jaina Art and Art and Architecture, Vol. II, New Delhi, 1975.

Ramachandran, T.N - The Three main Styles of Architecture, Madras, 1936.

Goswamy.A and Gangly.O.C - Art of the Rashtrakutas, Calcutta, 1958.

Harle, J.C. - The Art and Architecture of the Indian Subcontinent, Middlesex, 1986.

- The Architecture and Iconography of Chidambaram gopuras, Oxford, 1963.

Havell.E.B. - A Hand Book of Indian Art, Varanasi, 1972.

Hayavadana Rao.C. - Mysore Gazetter, Vols. I to V,

Kalghatgi. T.S. - Jainism in Karnataka, A study, Mysore, 1976.

Kramriseh,S - Indian Sculpture, Calcutta, 1933.

- The Hindu Temple, 2 vols. Calcutta, 1946.

Krishna Rao, M.V. - The Gangas of Talakad, Madras,1936.

Louis Frederic - Indian Temple and Sculpture, London, 1959.

Narasimhachar, L - A Guide to Talkad, Mysore, 1950.

Narasimha Murthy. A.V. (Ed.) - Archaeology of Karnataka, University of Mysore, 1978.

Nilakanta Shastri.K.A - A History of South India, Oxford, 1966.

- A History of South India, III Edn. Madras, 1970.

Percy Brown - Indian Architecture, part-I, Taraporewala, Bombay, 1942.

Ramesh.K.V. - A History of South Kanara, Dharwad, 1970.

Rajashekara, S. - Karnataka Architecture, Dharwar, 1985.

- Masterpieces of Vijayanagara Art, Bombay, 1983.

Rajendraprasad,B. - Art of South India (Andhra pradesh), Delhi-1980.

- Temple Sculpture of Andhra Pradesh, Hyderabad, 1978.

Raman, K.V. - Sri Varadarajaswami Temple – Kanchi, New Delhi, 1975.

Rama Rao, M - The Temple of Srisailam, Hyderabad, 1969.

Ramaswami, N.S. - Temple of Tadapatri, Hyderabad, 1976.

Ramasharama,M.H. - The History of the Vijayanagara Empire, Bombay, 1985.

Randhawa,M.S. and Randhava ,D.S. - Indian Sculpture, Bombay, 1985.

Ritti, Srinivas and Gopal ,B.R. - Studies in Indian History and Culture, Dharwar, 1971.

Rea Alexander - Pallava Architecture, Archaeological Survey of India, New Delhi, Imperial Series, Vol. XXXIV, Madras, 1909.

Rice.B.L. - Mysore and Coorg from the Inscriptions, London, 1909

- Mysore Gazetter, Vols. I and II, Westrinstur, 1897.

- History of Kanarese Literature, London, 1921.

Rowland, Benjamin - The Art and Architecture of India,

Buddhist, Hindi, Jaina (rpt), 1959.

Saletore, B.A. - Vijayanagara Art, Delhi, 1982.

- Social and Political life in the Vijayanagara Empire, Madras - 1934.

Sarkar,H. - An Architectural Survey of Temples of Kerala, New Delhi, 1978.

Sethuraman.N. - The Cholas, published by the Author, Kumbhakonam, 1977.

- Early Cholas - History, Art and Culture, New Delhi, 1998.

Sewel, Robert - The Historical Inscriptions of Southern India, 1932.

Shanmugan.P. - The Revenue System of the Cholas; 850-1279, New Era Publications, Madras, 1987.

Sharma,I.K. - Temples of the Gangas of Karnataka, New Delhi, 1993.

Sheik Ali.B. - History of the Western Gangas, 1976 (Vol. I)

- The Hoysala Dynasty, Mysore, 1972.

Shettar.S. - The Hoysala Temple, Vol. I-II, Karnataka University, Dharwad, 1992.

- Hoysala Sculpture in the Coupenhagen Museum, Copenhagen,1975.

Sivaramamurthi.C. - The Art of India, New york, 1977.

- Mahabalipuram, Archaeological Survey of India, New Delhi., 1972.

- The Chola Temple, Archaeological Survey of India, New Delhi, 1975.

Soundar Rajan.K.V. - Indian Temple Styles, New Delhi, 1972.

- The Art of South India, Tamil Nadu and Kerala, Delhi, 1978.

Srikantasastry .S. - Sources of Karnataka History, Vol.I, Mysore, 1940.

Srinivasan, K.R. - Temple of South India (rpt), New Delhi, 1985.

Swaminathan, S. - The Early Cholas History, Art and Culture, New Delhi, 1998.

Vasantha.R. - The Chola Art in Karnataka

Narasimha Murthy.A.V. - Archaeology of Karnataka, Ed.; Mysore, 1978.

Venkoba Rao,B - Maisura Desada Vastusilpa (Kannada), Bangalore, 1959.

Venkataraman .B. - Rajarajeshwaram the Pinnacle of Chola Art, Mudgala Trust, Madras, 1985.

ORIGINAL SOURCES


Annual Reports of the Archaeological Survey of India, 1887 onwards.

Annual Reports on Indian Epigraphy, 1887 onwards.

Annual Reports of the Mysore Archaeological Department.

Epigraphia Carnatica.

Epigraphia Indica (Relevant Volumes)



ಕೊಳ್ಳೇಗಾಲ ತಾಲ್ಲೂಕಿನ ಭೂಪಟ

ಅನುಬಂಧ

ದೇವಾಲಯಗಳ ಪಟ್ಟಿ

1. ಲಕ್ಷ್ಮಿನಾರಾಯಣಸ್ವಾಮಿ ದೇವಾಲಯ

2. ದೇವಾಲಯದ ಗೋಡೆ ಮತ್ತು ವಿಮಾನ

3. ದೇವಾಲಯದ ದ್ವಾರ ಮತ್ತು ಗೋಪುರ

4. ಮರಳೇಶ್ವರ ದೇವಾಲಯದ ಮುನ್ನೋಟ

5. ಲಿಂಗದ ಚಪ್ಪಡಿ

6 ಮತ್ತು 7. ವರ್ಣಚಿತ್ರಗಳು

8. ಮಾರಮ್ಮ ದೇವಾಲಯದ ಮುನ್ನೋಟ

9. ಮಾರಮ್ಮನ ಶಿಲ್ಪ (ಕಂಚು)

10. ಮುಡಿಗುಂಡೇಶ್ವರ ದೇವಾಲಯ

11. ಮುಡಿಗುಂಡೇಶ್ವರ ಭಿತ್ತಿಶಿಲ್ಪ ಕುಂತೂರು

12. ಮಹಾಲಿಂಗೇಶ್ವರ ದೇವಾಲಯ

13. ವರದರಾಜಸ್ವಾಮಿ ದೇವಾಲಯ ಸತ್ತೇಗಾಲ

14. ಜನಾರ್ಧನ ದೇವಾಲಯದ ಮುನ್ನೋಟ, ಸಿಂಗಾನಲ್ಲೂರು

15. ರೇವಣ್ಣಸಿದ್ಧೇಶ್ವರ ದೇವಾಲಯದ ಮುನ್ನೋಟ, ದಾಸನಪುರ ಮತ್ತು ಹರಳೆ

16. ಬೀರೇಶ್ವರ ದೇವಾಲಯ ಮೋಡಳ್ಳಿ

17. ಬೀರೇಶ್ವರ ಶಿಲ್ಪ ಮೂಡಳ್ಳಿ

18. ಹಳೇಮಾರಮ್ಮ ದೇವಾಲಯ, ತಗರಪುರ

19. ಮಾರಮ್ಮ ದೇವಾಲಯ (ಜೀರ್ಣೋದ್ಧಾರವಾಗಿದೆ)

20. ವೆಂಕಟರಮಣಸ್ವಾಮಿ ದೇವಾಲಯ, ಶಿವನಸಮುದ್ರ

21. ಅನಂತಶಾಯಿ ವಿಷ್ಣು, ಶಿವನಸಮುದ್ರ

22. ಸೋಮೇಶ್ವರ ದೇವಾಲಯ,ಶಿವನಸಮುದ್ರ

23. ಮಾರಮ್ಮನ ಶಿಲ್ಪ

24. ಮಹದೇಶ್ವರ ದೇವಾಲಯ, ಕಾಮಗೆರೆ

25. ಮಹದೇಶ್ವರ ದೇವಾಲಯದ ಮುಖಮಂಟಪ

26. ಸೂರ್ಯಶಿಲ್ಪ

27. ದೊಡ್ಡಪಾದಪ್ಪ ದೇವಾಲಯ, ಕಾಮಗೆರೆ

28. ದೊಡ್ಡಪಾದಪ್ಪ ದೇವಾಲಯದ ಭಿತ್ತಿಶಿಲ್ಪ

29. ವೆಂಕಟರಮಣಸ್ವಾಮಿ, ಬೂದಬಾಳು

30. ಲಕ್ಷ್ಮಿನರಸಿಂಹಸ್ವಾಮಿ ದೊಡ್ಡಿಂದುವಾಡಿ

31. ಮಹಿಷಮರ್ಧಿನಿ ದೊಡ್ಡಿಂದುವಾಡಿ

32. ಗಣಪತಿ

33. ವೀರಗಲ್ಲು

34. ರಾವಳೇಶ್ವರ

35. ಈಶ್ವರ ದೇವಾಲಯ, ಕನಕಗಿರಿ

36. ಮಾರಮ್ಮನ ದೇವಾಲಯ, ಕನಕಗಿರಿ

37. ಮಲೈಮಹದೇಶ್ವರ ದೇವಾಲಯದ ಮುನ್ನೋಟ

38. ಮಹಾಸತಿಕಲ್ಲು

39. ವೀರಗಲ್ಲು, ಚಿಲಕವಾಡಿ

40. ರಾವಳೇಶ್ವರ ಶಿಲ್ಪ

41. ರಾವಳೇಶ್ವರ ಶಿಲ್ಪ, ಕೊಳ್ಳೇಗಾಲ

42. ರಾವಳೇಶ್ವರ ಹಳೆಅಣಗಳ್ಳಿ

43. ರಾವಳೇಶ್ವರ ಶಿಲ್ಪ, ಕಾಮಗೆರೆ



1.ಲಕ್ಷ್ಮಿನಾರಾಯಣಸ್ವಾಮಿ ದೇವಾಲಯ



2. ದೇವಾಲಯದ ಗೋಡೆ ಮತ್ತು ವಿಮಾನ




3.ದೇವಾಲಯದ ದ್ವಾರ ಮತ್ತು ಗೋಪುರ



4.ಮರಳೇಶ್ವರ ದೇವಾಲಯದ ಮುನ್ನೋಟ



5. ಲಿಂಗದ ಚಪ್ಪಡಿ






6 ಮತ್ತು 7. ವರ್ಣಚಿತ್ರಗಳು



8.ಮಾರಮ್ಮ ದೇವಾಲಯದ ಮುನ್ನೋಟ



9.ಮಾರಮ್ಮನ ಶಿಲ್ಪ (ಕಂಚು)



10. ಮುಡಿಗುಂಡೇಶ್ವರ ದೇವಾಲಯ







11. ಮುಡಿಗುಂಡೇಶ್ವರ ಭಿತ್ತಿಶಿಲ್ಪ 12. ಮಹಾಲಿಂಗೇಶ್ವರ ದೇವಾಲಯ ಕುಂತೂರು 13. ವರದರಾಜಸ್ವಾಮಿ ದೇವಾಲಯ ಸತ್ತೇಗಾಲ



14.ಜನಾರ್ಧನ ದೇವಾಲಯದ ಮುನ್ನೋಟ, ಸಿಂಗಾನಲ್ಲೂರು




15. ರೇವಣ್ಣಸಿದ್ಧೇಶ್ವರ ದೇವಾಲಯದ ಮುನ್ನೋಟ ದಾಸನಪುರ ಮತ್ತು ಹರಳೆ



16.ಬೀರೇಶ್ವರ ದೇವಾಲಯ ಮೋಡಳ್ಳಿ



17. ಬೀರೇಶ್ವರ ಶಿಲ್ಪ ಮೂಡಳ್ಳಿ



18.ಹಳೇಮಾರಮ್ಮ ದೇವಾಲಯ, ತಗರಪುರ



19.ಮಾರಮ್ಮ ದೇವಾಲಯ (ಜೀರ್ಣೋದ್ಧಾರವಾಗಿದೆ)















20.ವೆಂಕಟರಮಣಸ್ವಾಮಿ ದೇವಾಲಯ, ಶಿವನಸಮುದ್ರ 21.ಅನಂತಶಾಯಿ ವಿಷ್ಣು, ಶಿವನಸಮುದ್ರ








22.ಸೋಮೇಶ್ವರ ದೇವಾಲಯ,ಶಿವನಸಮುದ್ರ 23.ಮಾರಮ್ಮನ ಶಿಲ್ಪ 24. ಮಹದೇಶ್ವರ ದೇವಾಲಯ, ಕಾಮಗೆರೆ






25.ಮಹದೇಶ್ವರ ದೇವಾಲಯದ ಮುಖಮಂಟಪ 26. ಸೂರ್ಯಶಿಲ್ಪ





27. ದೊಡ್ಡಪಾದಪ್ಪ ದೇವಾಲಯ, ಕಾಮಗೆರೆ 28. ದೊಡ್ಡಪಾದಪ್ಪ ದೇವಾಲಯದ ಭಿತ್ತಿಶಿಲ್ಪ







29.ವೆಂಕಟರಮಣಸ್ವಾಮಿ ಬೂದಬಾಳು

30.ಲಕ್ಷ್ಮಿನರಸಿಂಹಸ್ವಾಮಿ ದೊಡ್ಡಿಂದುವಾಡಿ

31.ಮಹಿಷಮರ್ಧಿನಿ ದೊಡ್ಡಿಂದುವಾಡಿ







32.ಗಣಪತಿ

33. ವೀರಗಲ್ಲು

34.ರಾವಳೇಶ್ವರ






35.ಈಶ್ವರ ದೇವಾಲಯ, ಕನಕಗಿರಿ

36. ಮಾರಮ್ಮನ ದೇವಾಲಯ, ಕನಕಗಿರಿ





37.ಮಲ್ಯೆಮಹದೇಶ್ವರ ದೇವಾಲಯದ ಮುನ್ನೋಟ

38. ಮಹಾಸತಿಕಲ್ಲು















39.ವೀರಗಲ್ಲು, ಚಿಲಕವಾಡಿ



40.ರಾವಳೇಶ್ವರ ಶಿಲ್ಪ



41. ರಾವಳೇಶ್ವರ ಶಿಲ್ಪ, ಕೊಳ್ಳೇಗಾಲ



42. ರಾವಳೇಶ್ವರ ಶಿಲ್ಪ ಹಳೆಅಣಗಳ್ಳಿ



43. ರಾವಳೇಶ್ವರ ಶಿಲ್ಪ, ಕಾಮಗೆರೆ